ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಬುಧವಾರ 16 ಏಪ್ರಿಲ್ 2025

ಸಂಪುಟ: 46 | ಸಂಚಿಕೆ: 1 | ಪುಟಗಳು: 12 + XXXVI

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

11.04.2025 ಶುಕ್ರವಾರ, ಮಳೆ ನಕ್ಷತ್ರ: ಅಶ್ವಿನಿ
13.04.2025 ರಿಂದ 26.04.2025 ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ, ತಿಥಿ: ತದಿಗೆ, ನಕ್ಷತ್ರ: ಅನುರಾಧ, ರಾಹುಕಾಲ: ಮಧ್ಯಾಹ್ನ 12ರಿಂದ 1.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಯಕೃತ್ತಿನ ಸಮಸ್ಯೆಗಳು, ಕುತ್ತಿಗೆ ಹಾಗೂ ಬೆನ್ನುನೋವಿಗೆ ಆಕ್ಯೂಪಂಕ್ಚರ್ ಮತ್ತು ಯೋಗ ಶಿಬಿರ, ಅಧಿಕ ರಕ್ತದೊತ್ತಡ ಮತ್ತು ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9ರಿಂದ.

■ **ರಾಮ್‌ಸನ್ಸ್ ಪ್ರತಿಷ್ಠಾನ:** ಬೊಂಬೆ ಮನೆ, ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ಕ್ಕೆ

■ **ನಟನಾ ರಂಗ ಶಾಲೆ:** ಬೇಸಿಗೆ ಶಿಬಿರ ಉದ್ಘಾಟನಾ ಸಮಾರಂಭ, ಉಪಸ್ಥಿತರು: ಚಲನಚಿತ್ರ ನಿರ್ದೇಶಕ ಯೋಗರಾಜ್ ಭಟ್, ಉದ್ಯಮಿ ರಾಘವೇಂದ್ರರಾವ್, ಕಿರುತೆರೆ ನಟಿ ಭೂಮಿಕಾ ರಮೇಶ್, ಶಿಕ್ಷಣ ತಜ್ಞ ರವೀಂದ್ರಸ್ವಾಮಿ, ನಟನಾ ಅಧ್ಯಕ್ಷ ಕೆ.ಎಸ್.ಆನಂದಬಾಬು, ನಟನ ಸಂಸ್ಥಾಪಕ ಕಾರ್ಯದರ್ಶಿ ಮಂಡ್ಯ ರಮೇಶ್, ನಟನ ಪ್ರಶಸ್ತಿ ಪುರಸ್ಕೃತರು: ವೃತ್ತಿ ರಂಗಭೂಮಿ ಹಿರಿಯ ಕಲಾವಿದೆಯರಾದ ರಾಧಾ–ರುಕ್ಮಿಣಿ, ಸ್ಥಳ: ಸುಪ್ರೀಮ್ ಪಬ್ಲಿಕ್ ಶಾಲೆ, ದಟ್ಟಗಳ್ಳಿ, ಬೆಳಗ್ಗೆ 10ಕ್ಕೆ

■ **ಕಾಲೇಜು ಶಿಕ್ಷಣ ಇಲಾಖೆ, ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ವಿಜಯನಗರ:** ಕಾಲೇಜಿನ ಎರಡನೇ ದಶಮಾನೋತ್ಸವ ಹಾಗೂ ಜಾನಪದೋತ್ಸವ, ಉದ್ಘಾಟನೆ: ಶಾಸಕ ಜಿ.ಟಿ.ದೇವೇಗೌಡ, ಮುಖ್ಯ ಅತಿಥಿಗಳು : ಸಂಸ್ಕೃತಿ ಚಿಂತಕ ಪ್ರೊ.ಎಂ.ಕೃಷ್ಣೇಗೌಡ, ಅಧ್ಯಕ್ಷತೆ: ಕಾಲೇಜು ಪ್ರಿನ್ಸಿಪಾಲ್ ಜಿ.ಆರ್.ನಟರಾಜ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 10.30ಕ್ಕೆ

■ **ವಿದ್ಯಾವರ್ಧಕ ಪಾಲಿಟೆಕ್ನಿಕ್ :** ವಿಶಿಷ್ಟ–2025 ಉದ್ಘಾಟನಾ ಸಮಾರಂಭ, ಮುಖ್ಯ ಅತಿಥಿಗಳು : ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು ಪ್ರಿನ್ಸಿಪಾಲ್ ಡಾ. ಸದಾಶಿವೇಗೌಡ, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಗೌರವ ಅತಿಥಿಗಳು : ಕಾರ್ಯದರ್ಶಿ ಪಿ. ವಿಶ್ವನಾಥ್, ಸ್ಥಳ: ಸಾಹುಕಾರ್ ಚನ್ನಯ್ಯ ಸಭಾಂಗಣ, ಬೆಳಗ್ಗೆ 11ಕ್ಕೆ.

■ **ಶ್ರೀ ಸೀತಾರಾಮ ದೇವಾಲಯ:** ಶ್ರೀ ರಾಮನವಮಿ, ಶ್ರೀಮತಿ ಎಂ.ಎಸ್.ರಮ್ಯಶ್ರೀ ಮೇಲುಕೋಟೆ ಅವರಿಂದ ಸ್ಯಾಕ್ಸೋಫೋನ್ ವಾದನ, ಪಕ್ಕವಾದ್ಯ: ಶ್ರೀನಿವಾಸ್ ಅರಮನೆ ಆಸ್ಥಾನ ವಿದ್ವಾಂಸರು, ಸ್ಥಳ: ಶ್ರೀ ಸೀತಾರಾಮ ದೇವಾಲಯ, ಸಿದ್ಧಾರ್ಥನಗರ, ಸಂಜೆ 6 ರಿಂದ.

■ **ಅರಳಿಕಟ್ಟೆ ಶ್ರೀ ರಾಮ ದೇವಸ್ಥಾನ ಧಾರ್ಮಿಕ ಮತ್ತು ದಾನದತ್ತಿ :** ಶ್ರೀರಾಮನವಮಿ, ಸಂಜೆ 6.30 ರಿಂದ ಲಕ್ಷ್ಮೀಪುರಂನ ಶ್ರೀ ಶಾರದಾಂಭ ಭಜನಾ ಮಂಡಳಿಯಿಂದ ಭಜನೆ, ಸ್ಥಳ: ದೇವಸ್ಥಾನದ ಆವರಣ, ಚಾಮರಾಜಪುರಂ.

■ **ಶ್ರೀ ರಾಮಾಭ್ಯುದಯ ಮಹಾಸಭಾ:** ಶ್ರೀ ರಾಮೋತ್ಸವ, ವಿದ್ವಾನ್ ಹರೀಶ್ ಶಿವರಾಮಕೃಷ್ಣನ್ ಅವರಿಂದ ಶಾಸ್ತ್ರೀಯ ಸಂಗೀತ, ವಿದ್ವಾನ್ ಕಾರ್ತಿಕ್ ನಾಗರಾಜ್–ಪಿಟೀಲು, ವಿದ್ವಾನ್ ಅರ್ಜುನ್ ಕುಮಾರ್–ಮೃದಂಗ, ವಿದ್ವಾನ್ ಜಿ.ಎಸ್. ರಾಮಾನುಜಂ–ಘಟಂ, ಸ್ಥಳ: ಶ್ರೀಮತಿ ಆಲಮ್ಮನವರ ಛತ್ರ ಕುಂಚಿಟಿಗರ ಸಂಘ, ಶ್ರೀರಾಮಪೇಟೆ, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಾಧನ – ಶೋಧನ– ಗ್ರಾಮೀಣ ಪರಿಸರದ ಉಪಕರಣಗಳು, ಪ್ರಸ್ತುತಿ: ಡಾ.ಎಂ.ಎನ್. ಚಿಕ್ಕಮಾದು, 6.40 ಅರಿವಿನ ಶಿಖರ– ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಯೋಗ ಕುರಿತ ವಿಶೇಷ ಸರಣಿ– ಮಹಾಯೋಗ, 8.35 ಕನ್ನಡ ಚಿತ್ರಗೀತೆಗಳು, 9.00 ನಮ್ಮ ಆರೋಗ್ಯ, 9.30 ಗಾಂಧಿ ಸ್ಮೃತಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಎಸ್.ವಿ.ಸಹನಾ– ವೀಣಾವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ– ಸಂಗೀತ ಸಂಭ್ರಮ ನಾದಲಯ ಸಂಗಮ, ಪ್ರಸ್ತುತಿ: ಹೆಚ್.ಎಲ್.ಶಿವಶಂಕರಸ್ವಾಮಿ **ಮಧ್ಯಾಹ್ನ:** 12.35 ದೇವರನಾಮ, 12.45 ಕಾದಂಬರಿ ವಿಹಾರ–ಎಂ.ಆರ್. ಶ್ರೀನಿವಾಸಮೂರ್ತಿಯವರ ರಂಗಣ್ಣನ ಕನಸಿನ ದಿನಗಳು ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ: ಉಮೇಶ್ ಎಸ್.ಎಸ್., 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು–ಇಂದ್ರಾಣಿ ಅನಂತರಾಮ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿ ದೀಪ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಕರ್ನಾಟಕ ಪೊಲೀಸ್ ಬ್ಯಾಂಡ್, 4.00 ಮಹಿಳಾರಂಗ, 4.30 ವೃತ್ತಿ ಮಾರ್ಗದರ್ಶನ–ಪ್ರಾಚ್ಯವಿದ್ಯಾ ಸಂಶೋಧನೆಯ ಮಹತ್ವ ಕುರಿತು ಮೈಸೂರು ವಿವಿ ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಅಂದರೆ ಪ್ರಾಚ್ಯವಿದ್ಯಾ ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ.ಡಿ.ಪಿ.ಮಧುಸೂದನಾಚಾರ್ಯ ಅವರೊಂದಿಗೆ ಮಾತುಕತೆ. (ಭಾಗ–2) ಇವರೊಂದಿಗೆ ಭಾಗವಹಿಸುತ್ತಾರೆ– ಬೇದ್ರೆ ಮಂಜುನಾಥ್, 6.50 ಕೃಷಿರಂಗ : ಲಾಭದಾಯಕ ಕುರಿ ಸಾಕಾಣಿಕೆ ಉದ್ಯಮಿಗೆ ಅನುಸರಿಸಬೇಕಾದ ಕ್ರಮಗಳು. ಈ ಕುರಿತು ಪಶುಪಾಲನಾ ಇಲಾಖೆ ನಿವೃತ್ತ ಉಪ ನಿರ್ದೇಶಕ ಡಾ.ಬಿ.ಎನ್.ಷಡಕ್ಷರಮೂರ್ತಿ ಅವರೊಂದಿಗೆ ಸಂದರ್ಶನ. ಸಂದರ್ಶಕರು: ಎನ್.ಕೇಶವಮೂರ್ತಿ, 7.45 ಕನ್ನಡದಲ್ಲಿ ಭಾಷಣ ಇದು ಪತ್ರದ ಕಥೆ–ದೀಪಾ ಫಡ್ಕೆ ಅವರಿಂದ ಪ್ರಬಂಧ, 8.00 ಕನ್ನಡ ಭಾರತೀ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ: ಪದ್ಮಶಂಕರ್– ವೈಯೋಲಿನ್ ವಾದನ, 10.00 ಜನಪದ ಸಂಗೀತ, 10.30 ಸವಿನೆನಪು –ಹಳೆಯ ಕನ್ನಡ ಚಿತ್ರಗೀತೆಗಳು

■ **ಶ್ರೀರಾಮ ಸೇವಾ ಮಂಡಲಿ:** ಶ್ರೀ ರಾಮೋತ್ಸವ, ವಿದುಷಿ ಶ್ರೀಮತಿ ಅರ್ಚನಾ ಎಲ್. ರಾವ್ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ಸ್ಥಳ: ಶ್ರೀರಾಮ ಸೇವಾ ಮಂಡಲಿ, ವಿದ್ಯಾರಣ್ಯಪುರಂ, ಸಂಜೆ 6.30ಕ್ಕೆ.

■ **ಶ್ರೀರಾಮ ಮಂದಿರ :** ಶ್ರೀ ರಾಮೋತ್ಸವ, ಬೆಳಗ್ಗೆ 9ಕ್ಕೆ ಶುಕ್ರ ಗ್ರಹ ಮತ್ತು ಚಂಡಿಕಾ ಹೋಮ, ಸಂಜೆ 6.30ಕ್ಕೆ ಡಾ. ಮಾಲಿನಿ, ನೃತ್ಯ ಸಂಗೀತ, ಹರಿಕಥಾ ವಿದುಷಿ ಅವರಿಂದ ಹರಿಕಥೆ, ಸ್ಥಳ: ಶ್ರೀ ರಾಮಮಂದಿರ, ಜಯನಗರ.

ಕೆ.ಆರ್.ನಗರದಲ್ಲಿಂದು

■ **ಶ್ರೀರಾಮ ಸೇವಾ ಸಮಿತಿ ಕೆ.ಆರ್.ನಗರ:** ಶ್ರೀ ರಾಮೋತ್ಸವ, ವಿದ್ವಾನ್ ಎಂ.ಎಸ್. ಕೇಶವಪ್ರಸಾದ್ ಮತ್ತು ವಿದ್ವಾನ್ ಎಂ.ಎಸ್. ರಾಮಪ್ರಸಾದ್ ಅವರಿಂದ ಹಾಡುಗಾರಿಕೆ, ವಿದ್ವಾನ್ ಜಗದೀಶ್– ಮೃದಂಗ, ವಿದ್ವಾನ್ ಚಂದನ್‌ಕುಮಾರ್–ಪಿಟೀಲು, ಸ್ಥಳ: ಶ್ರೀರಾಮ ಸೇವಾ ಸಮಿತಿ, ಕೆ.ಆರ್.ನಗರ, ಸಂಜೆ 6.30 ರಿಂದ.




ಮೈಸೂರಿನ ನಗರ ಸಾರಿಗೆ ವಿಭಾಗದ ವಿಜಯನಗರ ಘಟಕದಲ್ಲಿ ಹಮ್ಮಿಕೊಂಡಿದ್ದ ಡಾ.ಬಿ.ಆರ್. ಅಂಬೇಡ್ಕರ್ ಅವರ ಜಯಂತಿ ಕಾರ್ಯಕ್ರಮದಲ್ಲಿ ಜಾನಪದ ಕಲಾವಿದ ಅಮ್ಮ ರಾಮಚಂದ್ರ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ವಿಭಾಗದ ನಿಯಂತ್ರಣ ಅಧಿಕಾರಿ ವೀರೇಶ್, ಪ್ರಾಧ್ಯಾಪಕ ಜ್ಞಾನಪ್ರಕಾಶ್, ನಿರೀಕ್ಷಕ ಮಹೇಶ್, ಘಟಕದ ವ್ಯವಸ್ಥಾಪಕಿ ಸುಮಲತಾ, ಮುಖಂಡರಾದ ಮಾದೇಶ್, ಮಾದೇಸ್ವಾಮಿ, ಮಡಳಿ ರಾಜೇಶ್, ಶಂಕರ್, ಶ್ರೀಧರ್, ಸುರೇಶ, ಮಂಜುನಾಥ್, ಶ್ರೀನಿವಾಸ್ ಉಪಸ್ಥಿತರಿದ್ದರು.

ಏ.19, ಬಿವಿಬಿಯಲ್ಲಿ ನೃತ್ಯೋಲ್ಲಾಸ




ಮೈಸೂರು, ಏ.15– ಮೈಸೂರಿನ ಭಾರತೀಯ ವಿದ್ಯಾಭವನದ ವತಿಯಿಂದ ಏಪ್ರಿಲ್ 19ರಂದು ಸಂಜೆ 6 ಗಂಟೆಗೆ ಬೆಂಗಳೂರಿನ ಪಿ.ಪ್ರವೀಣ್ ಕುಮಾರ್ ಮತ್ತು ಚಿತ್ಕಲಾ ಮೇಳ ತಂಡದಿಂದ ನೃತ್ಯೋಲ್ಲಾಸ ಕಾರ್ಯಕ್ರಮವನ್ನು ಮೈಸೂರಿನ ಭಾರತೀಯ ವಿದ್ಯಾಭವನದ ತಾತಾಚಾರಿ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.


ಕಿರು ಪರಿಚಯ: ಪ್ರವೀಣ್‌ಕುಮಾರ್, ಕಲಾವಿದರ ಕುಟುಂಬದಿಂದ ಬಂದವರಾಗಿದ್ದು, ಸ್ವಾಭಾವಿಕವಾಗಿ ಕಲೆ ಮತ್ತು ನೃತ್ಯದ ಕಡೆ ತಮ್ಮ ಒಲವನ್ನು ತೋರಿಸಿದರು. ಬಾಲ್ಯದಲ್ಲಿ ಗುರುಗಳಾದ ಶ್ರೀಮತಿ ನರ್ಮದಾ ಮತ್ತು ಪ್ರೊ.ಸಿ.ವಿ. ಚಂದ್ರಶೇಖರ್ ಅವರಲ್ಲಿ ಸಾಂಪ್ರದಾಯಿಕ ಭರತನಾಟ್ಯ ಕಲಿತರು.











ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಏಪ್ರಿಲ್ 16 ಬುಧವಾರ 2025

ಸಂಪುಟ: 46 | ಸಂಚಿಕೆ: 1 | ಪುಟಗಳು: 12+XXXVI

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಶುಭ ಸಂದೇಶ



ಮೈಸೂರು ಭಾಗದ ಜನಪ್ರಿಯ ಪ್ರಾದೇಶಿಕ ದಿನಪತ್ರಿಕೆಯಾದ 'ಮೈಸೂರು ಮಿತ್ರ' 45 ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿ ಮುನ್ನಡೆಯುತ್ತಿರುವುದು ನಿಜಕ್ಕೂ ಸಂತೋಷದ ಸಂಗತಿ.

ಪತ್ರಿಕಾರಂಗವನ್ನು ಪ್ರಜಾಪ್ರಭುತ್ವದ ನಾಲ್ಕನೇ ಸ್ತಂಭ, ಪ್ರಜಾಸತ್ತೆಗೆ ಕಾವಲು ಎನ್ನಲಾಗುತ್ತದೆ. ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳಂತೆ ಪ್ರಜಾಪ್ರಭುತ್ವದಲ್ಲಿ ಪತ್ರಿಕಾ ರಂಗವೂ ಅಷ್ಟೇ ಮುಖ್ಯ. ಪ್ರಜಾಪ್ರಭುತ್ವದ ಮೂರು ಅಂಗಗಳ ಅಂಕು–ಡೊಂಕುಗಳನ್ನು ತಿದ್ದಿ ಹೇಳುವ ಮಹತ್ತರ ಜವಾಬ್ದಾರಿ ಪತ್ರಿಕಾರಂಗದ್ದಾಗಿರುತ್ತದೆ. 'ಮೈಸೂರು ಮಿತ್ರ' ಕಳೆದ ನಾಲ್ಕೂವರೆ ದಶಕಗಳಿಂದಲೂ ಶ್ರದ್ಧಾ ಪೂರ್ವಕವಾಗಿ ಕಾರ್ಯನಿರ್ವಹಿಸುತ್ತಿದೆ.

ಪತ್ರಿಕೆಯ ಸಂಸ್ಥಾಪಕ ಸಂಪಾದಕರಾದ ಶ್ರೀ ಕೆ.ಬಿ.ಗಣಪತಿಯವರು ಮೂಲತಃ ನ್ಯಾಯವಾದಿಗಳು, ಮುಂಬೈನ 'ಫ್ರೀ ಪ್ರೆಸ್ ಜರ್ನಲ್' ಮತ್ತು 'ದ ಇಂಡಿಯನ್ ಎಕ್ಸ್‌ಪ್ರೆಸ್' ದಿನಪತ್ರಿಕೆಗಳಲ್ಲಿ ಕಾರ್ಯನಿರ್ವಹಿಸಿದ ಅನುಭವವುಳ್ಳವರು. ಪತ್ರಿಕೋದ್ಯಮದಲ್ಲಿನ ಆಸಕ್ತಿಯ ಫಲವಾಗಿ ಅವರ ಸಂಪಾದಕತ್ವದಲ್ಲಿ 'ಸ್ಟಾರ್ ಆಫ್ ಮೈಸೂರ್' (1978) ಮತ್ತು 'ಮೈಸೂರು ಮಿತ್ರ' (1980) ಪತ್ರಿಕೆಗಳು ಆರಂಭಗೊಂಡವು. ಎರಡೂ ಪತ್ರಿಕೆಗಳಲ್ಲಿ ಅಂಕಣ ಬರಹಗಳ ಮೂಲಕ ಸಮಾಜದ ಒಳಿತು–ಕೆಡಕುಗಳನ್ನು ಅವರು ಪ್ರಕಟಿಸುತ್ತಲೇ ಇರುತ್ತಾರೆ. ರಾಜ್ಯೋತ್ಸವ ಪ್ರಶಸ್ತಿಯನ್ನೊಳಗೊಂಡಂತೆ ಹಲವಾರು ಪ್ರಶಸ್ತಿಗಳಿಗೆ ಭಾಜನರಾಗಿರುವ ಶ್ರೀ ಕೆ.ಬಿ. ಗಣಪತಿಯವರು ಮೈಸೂರು ನಗರದ ಸಾಂಸ್ಕೃತಿಕ ವಲಯದಲ್ಲಿ ಚಿರಪರಿಚಿತರಾಗಿದ್ದಾರೆ. ಅವರ ಸುಪುತ್ರರಾದ ಶ್ರೀ ವಿಕ್ರಂ ಮುತ್ತಣ್ಣನವರು ಸಹ ಪತ್ರಿಕೋದ್ಯಮದಲ್ಲಿ ಅಪಾರ ಆಸಕ್ತಿ ಹೊಂದಿರುವವರು. ಪ್ರಸ್ತುತ ಅವರು ಈ ಎರಡೂ ಪತ್ರಿಕೆಗಳ ವ್ಯವಸ್ಥಾಪಕ ಸಂಪಾದಕರಾಗಿ ಸಮರ್ಥವಾಗಿ ಕಾರ್ಯನಿರ್ವಹಿಸುತ್ತಿರುವುದಲ್ಲದೆ, ಸೃಜನಶೀಲ ಬರಹಗಳ ಅಂಕಣಕಾರರಾಗಿಯೂ ಖ್ಯಾತಿ ಗಳಿಸಿರುತ್ತಾರೆ.

ರಾಷ್ಟ್ರೀಯ ಮೌಲ್ಯಗಳ ಪ್ರಬಲ ಪ್ರತಿಪಾದಕರಾಗಿರುವ ಶ್ರೀ ಕೆ.ಬಿ. ಗಣಪತಿಯವರ ಪ್ರಭಾವಲಯದಲ್ಲಿ ಪತ್ರಿಕೆಯು ಅರ್ಥಪೂರ್ಣವಾಗಿ ಜನಸೇವೆ ಮಾಡುತ್ತಿದೆ. ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು ಮತ್ತು ಹಾಸನ ಜಿಲ್ಲೆಗಳಲ್ಲಿ 'ಮೈಸೂರು ಮಿತ್ರ' ಪತ್ರಿಕೆಯು ಜನಪ್ರಿಯತೆ ಪಡೆದಿದೆ. ಈ ಜಿಲ್ಲೆಗಳ ಜನರ ಆಶೋತ್ತರಗಳಿಗೆ ಸ್ಪಂದಿಸುತ್ತಾ, ಜನತೆಯ ನಿಜದನಿಯಾಗಿರುವುದು ಅಭಿನಂದನೀಯ. ನಿಜಾರ್ಥದಲ್ಲಿ ಈ ಪತ್ರಿಕೆಯು ಮೈಸೂರಿಗರ ಮಿತ್ರನಾಗಿ, ಮೈಸೂರಿನ ಸಾಂಸ್ಕೃತಿಕ ಮುಖವಾಣಿಯಾಗಿ ಕೆಲಸ ಮಾಡುತ್ತಿದೆ.

"ಮೈಸೂರು ಮಿತ್ರ" ಪತ್ರಿಕೆಯು 45 ವರ್ಷಗಳನ್ನು ಪೂರೈಸಿ 46ನೇ ವರ್ಷಕ್ಕೆ ಮುನ್ನಡೆಯುತ್ತಿರುವ ಈ ಶುಭ ಸಂದರ್ಭದಲ್ಲಿ ಪತ್ರಿಕೆಗೆ ಸರ್ವಶುಭ ಆಶಿಸುತ್ತಾ, ಎಂದಿನಂತೆ ಸಹೃದಯ ಓದುಗರ ಅಭಿಮಾನದ ಪತ್ರಿಕೆಯಾಗಿ ಮುಂದುವರಿಯಲೆಂದು ಹಾರೈಸುತ್ತೇವೆ.

ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು

ಜಾತಿ ಗಣತಿ ವರದಿ ಜಾರಿಯಾದ್ರೆ

ಸರ್ಕಾರ ಉಳಿಯಲ್ಲ

ಬೆಂಗಳೂರು, ಏ.15– ರಾಜ್ಯ ಸರ್ಕಾರ ಇತ್ತೀಚೆಗೆ ಸಂಪುಟ ಸಭೆಯಲ್ಲಿ ಮಂಡಿಸಿದ ವಿವಾದಾತ್ಮಕ ಜಾತಿ ಗಣತಿ(ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆ) ವರದಿಗೆ ತೀವ್ರ ವಿರೋಧ ವ್ಯಕ್ತವಾಗುತ್ತಿದ್ದು, ಇದೀಗ ರಾಜ್ಯ ಒಕ್ಕಲಿಗರ ಸಂಘ ಈ ವರದಿ ಜಾರಿಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿದೆ.

ಇಂದು ನಗರದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಒಕ್ಕಲಿಗರ ಸಂಘದ ಅಧ್ಯಕ್ಷ ಕೆಂಚಪ್ಪಗೌಡ, ಜಾತಿ ಗಣತಿ ವರದಿಯನ್ನು ಹಿಂಪಡೆಯಬೇಕು. ಒಂದು ವೇಳೆ ವರದಿ ಜಾರಿಗೊಳಿಸಿದರೆ ಸರ್ಕಾರ ಉಳಿಯುವುದಿಲ್ಲ ಮತ್ತು ಕರ್ನಾಟಕ ಬಂದ್ ರೀತಿಯ ಹೋರಾಟ ಮಾಡುತ್ತೇವೆ ಎಂದು ಎಚ್ಚರಿಕೆ ನೀಡಿದರು.

ರಾಜ್ಯ ಸರ್ಕಾರ ಕಾಂತರಾಜು ಆಯೋಗದ

ಒಕ್ಕಲಿಗರ ಸಂಘ ಎಚ್ಚರಿಕೆ

ವರದಿ ಜಾರಿ ಮಾಡಲು ಹೊರಟಿದೆ. ಆದರೆ ಅದರ ವಿರುದ್ಧ ಹೋರಾಟ ಮಾಡಲು ಒಕ್ಕಲಿಗ ಸಂಘದ



ಕೆಂಚಪ್ಪಗೌಡ

ಕಾರ್ಯಕಾರಿ ಸಮಿತಿ ನಿರ್ಧರಿಸಿದೆ. ಮುಂದಿನ ಹಂತದಲ್ಲಿ ಯಾವ ರೀತಿ ಹೋರಾಟ ಮಾಡಬೇಕು ಎಂಬುದರ ಬಗ್ಗೆ ಇಂದು ಚರ್ಚಿಸಲಾಗಿದೆ ಎಂದರು. ಕಾಂತರಾಜು ಅವರ ವರದಿ ಆರೋಗ್ಯಕರವಾಗಿಲ್ಲ. 10 ವರ್ಷಗಳ ಹಿಂದೆ ಸಮೀಕ್ಷೆ ಮಾಡಿದ ವರದಿಯನ್ನ ಈಗ ಜಾರಿಗೊಳಿಸಲು ಮುಂದಾಗಿದೆ. ■5ನೇ ಪುಟಕ್ಕೆ

▶ ಜಾತಿ ಗಣತಿ ವರದಿ ಪ್ರಕಟಿಸುವುದಾಗಿ ಸುಮ್ಮನೆ ಹೇಳುತ್ತಿದ್ದಾರೆ. ವೀರಶೈವ ಲಿಂಗಾಯಿತ ಸಮುದಾಯ ಹಾಗೂ ಒಕ್ಕಲಿಗರನ್ನು ಎದುರಾಕಿಕೊಂಡು ರಾಜ್ಯಭಾರ ಮಾಡೋಕಾಗುತ್ತಾ. ರಾಜ್ಯದಲ್ಲಿ ವೀರಶೈವ ಲಿಂಗಾಯಿತ ಫಸ್ಟ್, ಒಕ್ಕಲಿಗರು ಸೆಕೆಂಡ್. ಒಂದು ವೇಳೆ ವರದಿ ಜಾರಿಗೆ ಮುಂದಾದರೆ ಇಬ್ಬರೂ ಸೇರಿ ಹೋರಾಟ ಮಾಡುತ್ತೇವೆ.



- ಶಾಮನೂರು ಶಿವಶಂಕರಪ್ಪ,
ವೀರಶೈವ ಲಿಂಗಾಯಿತ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರೂ ಹಾಗೂ ಹಿರಿಯ ಕಾಂಗ್ರೆಸ್ ಶಾಸಕ.

ಇಂದಿನಿಂದ 2 ದಿನ CET



ಬೆಂಗಳೂರು, ಏ.15– ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಏ.16 ಮತ್ತು 17ರಂದು ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ನಡೆಯುತ್ತಿದ್ದು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಬಿಗಿ ಕ್ರಮಗಳನ್ನು ಕೈಗೊಂಡಿದೆ.

ಏ.16ರಂದು ಭೌತಶಾಸ್ತ್ರ ವಿಜ್ಞಾನ (ಬೆಳಿಗ್ಗೆ 10.30ರಿಂದ 11.50) ಮತ್ತು ರಸಾಯನಶಾಸ್ತ್ರ (ಮಧ್ಯಾಹ್ನ 12.30ರಿಂದ 3.50) ಹಾಗೂ ಏ.17ರಂದು ಗಣಿತಶಾಸ್ತ್ರ (ಬೆಳಿಗ್ಗೆ 10.30ರಿಂದ 11.50) ಮತ್ತು ಜೀವಶಾಸ್ತ್ರ (ಮಧ್ಯಾಹ್ನ 12.30ರಿಂದ 3.50) ವಿಷಯಗಳ ಪರೀಕ್ಷೆಗಳು ನಡೆಯಲಿವೆ.

ಪರೀಕ್ಷಾ ಅಕ್ರಮಗಳನ್ನು ತಡೆಯಲು ನೇಮಕಾತಿ ಪರೀಕ್ಷೆಗಳ ರೀತಿ ಸಿಇಟಿಗೂ ಕ್ಯಾಮೆರಾ ಕಣ್ಗಾವಲಿನಲ್ಲಿರುತ್ತದೆ. ವೆಬ್‌ಕಾಸ್ಟಿಂಗ್ ಮೂಲಕ ಎಲ್ಲ 775 ಪರೀಕ್ಷಾ ಕೇಂದ್ರಗಳ ಮೇಲೆ ನಿಗಾ ಇಡುವ ವ್ಯವಸ್ಥೆ ಮಾಡಲಾಗಿದೆ. ಜಿಲ್ಲಾಮಟ್ಟದಲ್ಲಿ ಜಿಲ್ಲಾಧಿಕಾರಿ ಹಾಗೂ ಜಿಪಂ ಸಿಇಓ ಮೇಲುಸ್ತುವಾರಿ ನಡೆಸಲಿದ್ದಾರೆ ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ■5ನೇ ಪುಟಕ್ಕೆ

ಮುಖ್ಯಮಂತ್ರಿ ಮಾತುಕತೆ ವಿಫಲ

ಲಾರಿ ಮುಷ್ಕರ ಮುಂದುವರಿಕೆ



ಮೈಸೂರು ರೈಲ್ವೇ ಗೂಡ್ಸ್ ಶೆಡ್‌ನಲ್ಲಿ ಲಾರಿಗಳ ನಿಲ್ಲಿಸಿ ಪ್ರತಿಭಟನೆ ನಡೆಸಿದರು.

ಬೆಂಗಳೂರು, ಏ.15– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಲಾರಿ ಮಾಲೀಕರ ಸಂಘ ನಡೆಸಿದ ಸಭೆ ವಿಫಲವಾಗಿದ್ದು, ರಾಜ್ಯಾದ್ಯಂತ ಅನಿರ್ದಿಷ್ಟಾವಧಿ ಕಾಲ ಲಾರಿ ಮುಷ್ಕರ ಮುಂದುವರೆದಿದೆ.

ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಮತ್ತು ಲಾರಿ ಮಾಲೀಕರ ಸಂಘದ ಪ್ರತಿನಿಧಿಗಳೊಂದಿಗೆ ನಡೆದ ಮಾತುಕತೆ ವಿಫಲವಾದ ಬೆನ್ನಲ್ಲೇ ಮುಖ್ಯ ಮಂತ್ರಿ ಸಿದ್ದರಾಮಯ್ಯ ಕಾವೇರಿ ನಿವಾಸ ದಲ್ಲಿ ಲಾರಿ ಮಾಲೀಕರ ಸಂಘದ ಮುಖಂಡರೊಂದಿಗೆ ನಡೆಸಿದ ಎರಡು ಸುತ್ತಿನ ಮಾತುಕತೆ ವಿಫಲವಾಗಿದೆ. ಮಾತುಕತೆ ವೇಳೆ ಲಾರಿ ಚಾಲಕರ ಹಾಗೂ ಮಾಲೀಕರ ಸಂಕಷ್ಟದ ಬಗ್ಗೆ ಸರ್ಕಾರಕ್ಕೆ ಅರಿವಿದೆ. ತಮ್ಮ ಮನವಿ ಬಗ್ಗೆ ಚರ್ಚಿಸಿ ನಿರ್ಧರಿಸಲಾಗುವುದು. ಅಲ್ಲಿಯವರೆಗೂ ಮುಷ್ಕರ ಕೈಬಿಡುವಂತೆ ■5ನೇ ಪುಟಕ್ಕೆ

ವಿಶೇಷಾಂಕದಲ್ಲಿ...

ಕೆಬಿಜಿಯವರ ಭೂಮಂತ್ರ...



ಪರ ಭಾಷೆಗಿಂತ ನಮ್ಮದೇ ದೇಶ ಭಾಷೆ ಸಂಪರ್ಕ ಭಾಷೆಯಾಗಲಿ

ಹೊಸ ಶಿಕ್ಷಣ ನೀತಿಯಲ್ಲಿ ಹಿಂದಿ ಹೇರಲ್ಲ; ಆದರೂ ■ಪುಟ–4

ಬಿಚ್ಚು ನುಡಿ
ವಿಕ್ರಂ ಮುತ್ತಣ್ಣ

ನ್ಯಾಯಾಧೀಶರುಗಳ ನಿರ್ಣಯಿಸುವವರ್ಯಾರು? ■ಪುಟ–5





ನಕ್ಕರೆ ಅದೇ ಸ್ವರ್ಗ

ನರ್ಸ್ : ಯಾಕೆ ಡಾಕ್ಟರ್ ಡಲ್ಲಾಗಿ ಕೂತಿದ್ದೀರಿ?
ಡಾಕ್ಟರ್ : ಮಧ್ಯಾಹ್ನ ಆಪರೇಷನ್ ಮಾಡಿದ್ನಲ್ಲ ಆ ರೋಗಿ ಸತ್ತು ಹೋದ.
ನರ್ಸ್ : ಸರ್. ಅದು ನೀವು ಮಾಡಿದ್ದು ಪೋಸ್ಟ್ ಮಾರ್ಟಮ್ ಅಲ್ವ?
ಡಾಕ್ಟರ್ : ಹಾಗಾದ್ರೆ ನಾನು ಆಪರೇಷನ್ ಮಾಡಿದ್ದು ಯಾರಿಗೆ?

ಮೈಸೂರು ಮಿತ್ರ
ಬುಧವಾರ, 16 ಏಪ್ರಿಲ್ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ಜೀವನ ಪೂರ್ತಿ ಪುಸ್ತಕಗಳನ್ನು ಓದಿದೆ, ಕಲಿಯಲಿಕ್ಕೆ ಏನೂ ಆಗಲಿಲ್ಲ. ಅದೇ, ಹತ್ತಿರದಿಂದ ಕೆಲವು ಮುಖಗಳ ಓದಿದೆ, ನೂರಾರು ಪಾಠ ಕಲಿತೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಸುಮ್ನೆ ಯಾಕೆ ನಿಂತಿದ್ದೀಯಾ ಕಂಬನಾದ್ರೂ ಸುತ್ತು...

ಧನ್ಯೋಸ್ಮಿ

ನಲ್ಮೆಯ ಓದುಗರೆ,

ನಿಮ್ಮ ಅಚ್ಚುಮೆಚ್ಚಿನ **'ಮೈಸೂರು ಮಿತ್ರ'** ಇಂದಿಗೆ 45 ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿ 46ನೇ ವಸಂತಕ್ಕೆ ಸಂತಸದಿಂದ ಕಾಲಿಡುತ್ತಿದ್ದಾನೆ. ಈ ಒಂದು ಸಂತೋಷದ ಸಂದರ್ಭದಲ್ಲಿ ಓದುಗ ದೇವರುಗಳಾದ ನಿಮಗೆ ಹೃದಯಪೂರ್ವಕ ವಂದನೆ-ಅಭಿನಂದನೆ.

ಏಪ್ರಿಲ್ 16, 1980ರಲ್ಲಿ ಜನ್ಮ ತಳೆದ **'ಮೈಸೂರು ಮಿತ್ರ'** ಆರಂಭದಲ್ಲಿ ಮೈಸೂರು ಜಿಲ್ಲೆಗೆ ಸೀಮಿತವಾಗಿತ್ತು. ನಂತರ ಓದುಗರ ಪ್ರೀತಿಪೂರ್ವಕ ಪ್ರೋತ್ಸಾಹದ ಫಲವಾಗಿ ಹಳೇ ಮೈಸೂರು ಭಾಗದ ಮೈಸೂರು ಜೊತೆಗೆ ಚಾಮರಾಜನಗರ, ಮಂಡ್ಯ, ಕೊಡಗು ಹಾಗೂ ಹಾಸನ ಜಿಲ್ಲೆಗಳಲ್ಲಿ ಹಂತ ಹಂತವಾಗಿ ಪ್ರಸರಣ ವಿಸ್ತರಿಸಿಕೊಂಡಿತು. ಈಗ ಕರ್ನಾಟಕದ ಪ್ರತಿಷ್ಠಿತ ಪ್ರಾದೇಶಿಕ ಪತ್ರಿಕೆಯಾಗಿ ವರ್ಷದಿಂದ ವರ್ಷಕ್ಕೆ ಯಶಸ್ಸಿನ ಮೆಟ್ಟಿಲೇರುತ್ತಾ ಸಾಗಿದೆ. **'ಮಿತ್ರ'**ನ ಈ ಅಭ್ಯುದಯದಲ್ಲಿ ನಿಮ್ಮ ಪಾತ್ರ ಅವಿಸ್ಮರಣೀಯ.

ವಿಶ್ವಾಸಾರ್ಹತೆಯಿಂದ ಬಹುಬೇಗ ಮೈಸೂರು ಜಿಲ್ಲೆಯ ಮನೆ-ಮನಗಳನ್ನು ತಲುಪಿದ **'ಮಿತ್ರ'**, ಕೊಡಗು, ಚಾಮರಾಜನಗರ, ಮಂಡ್ಯ ಹಾಗೂ ಹಾಸನದಲ್ಲೂ ಈಗ ಮನೆ ಮಾತಾಗಿದ್ದಾನೆ ಎನ್ನಲು ಹೆಮ್ಮೆ ಎನ್ನಿಸುತ್ತದೆ. ಈ ಅಭೂತಪೂರ್ವ ಯಶಸ್ಸಿಗೆ ವಿಶ್ವಾಸಾರ್ಹತೆ-ಜನಪರತೆ ಪ್ರಮುಖ ಕಾರಣ. ವೃತ್ತಿಪರತೆ, ನಿರಂತರ ಪರಿಶ್ರಮದ ಜೊತೆಗೆ ಸಹೃದಯಿಗಳಾದ ತಮ್ಮ ಸಹಕಾರದಿಂದಲೇ ಈ ಹಂತಕ್ಕೆ ಬೆಳೆಯಲು ಸಾಧ್ಯವಾಗಿದೆ.

'ಮೈಸೂರು ಮಿತ್ರ' ವಿಶ್ವಾಸಾರ್ಹ ಎಂಬುದು ಓದುಗರ ಅಚಲ ವಿಶ್ವಾಸ. ಅದೇ ರೀತಿ **'ಮಿತ್ರ'**ನಿಗೆ ಜಾಹೀರಾತು ನೀಡಿದರೆ ಹೆಚ್ಚು ಜನರನ್ನು ತಲುಪಬಹುದು ಎಂಬುದು ಕೂಡ ನಮ್ಮ ಜಾಹೀರಾತುದಾರರಿಗಿರುವ ಅತೀವ ವಿಶ್ವಾಸ. ಈ ಪರಿಯ ವಿಶ್ವಾಸದ ಸಂಪತ್ತನ್ನು ಗಳಿಸಿರುವುದು ನಮ್ಮ ಭಾಗ್ಯ. ಸುದ್ದಿ ವಿಚಾರದಲ್ಲಿ ಯಾವುದೇ ಪತ್ರಿಕೆಯಲ್ಲಿ ಬಂದಿದ್ದರೂ **'ಮೈಸೂರು ಮಿತ್ರ'**ನಲ್ಲಿ ಬಂದಿದೆಯಾ ನೋಡಿ ಎಂದು ಖಾತರಿಪಡಿಸಿಕೊಳ್ಳುವಷ್ಟರ ಮಟ್ಟಿಗೆ ನಮ್ಮ ಓದುಗ ದೇವರುಗಳು ವಿಶ್ವಾಸ ಹೊಂದಿರುವುದು ನಮ್ಮ ಹೆಮ್ಮೆ.

ಈ ಸಂದರ್ಭದಲ್ಲಿ ಅತ್ಯಂತ ನೋವಿನ ಸಂಗತಿಯನ್ನು ನಿಮ್ಮೊಂದಿಗೆ ಹಂಚಿಕೊಳ್ಳಲು ಬಯಸುತ್ತೇವೆ. ರಾಜ್ಯ ಸರ್ಕಾರದಿಂದ ಕಳೆದ ಎರಡು ವರ್ಷದಿಂದ ನಿಮ್ಮ **'ಮೈಸೂರು ಮಿತ್ರ'**ನಿಗೆ ಸರ್ಕಾರಿ ಜಾಹೀರಾತು ಬಿಡುಗಡೆ ಆಗುತ್ತಿಲ್ಲ. ಇದರ ಬಗ್ಗೆ ಆಡಳಿತ ಪಕ್ಷದ ನಾಯಕರು, ಸಂಬಂಧಿಸಿದ ಇಲಾಖೆ ಮುಖ್ಯಸ್ಥರ ಗಮನ ಸೆಳೆದರೂ, ಮನವಿ ಮಾಡಿದರೂ ಏನೂ ಪ್ರಯೋಜನವಾಗಿಲ್ಲ. ಇದೊಂದು ವಿಧದಲ್ಲಿ ಮಾಧ್ಯಮದಲ್ಲಿನ ಮಲತಾಯಿ ಧೋರಣೆ ಅಲ್ಲದೆ ಮತ್ತೇನೂ ಅಲ್ಲ. ಈ ವಿಷಾದನೀಯ ಸಂಗತಿ ನಡುವೆ ನಮ್ಮ ಪ್ರೀತಿಯ ಜಾಹೀರಾತುದಾರರು, **'ಮೈಸೂರು ಮಿತ್ರ'**, ಸೋದರ ಪತ್ರಿಕೆ **'ಸ್ಟಾರ್ ಆಫ್ ಮೈಸೂರ್'** ಜನಪ್ರಿಯತೆ, ವೃತ್ತಿಶ್ರೇಷ್ಠತೆ ಅರಿತು ಜಾಹೀರಾತು ನೀಡುವ ಮೂಲಕ ನಿರಂತರವಾಗಿ ನಮ್ಮನ್ನು ಕೈ ಹಿಡಿಯುತ್ತಿದ್ದೀರಿ. ನಿಮಗೆ ನಾವು ಆಭಾರಿಯಾಗಿದ್ದೇವೆ.

ನಿಮ್ಮಂತಹ ಅಮೂಲ್ಯ ಓದುಗರ ಒಲವು ಹಾಗೂ ಜಾಹೀರಾತುದಾರರ ಬೆಂಬಲ ಇರುವವರೆಗೂ ನಾವು ನಿಮ್ಮ ಸೇವೆಗೆ ಸದಾ ಬದ್ಧರಾಗಿರುತ್ತೇವೆ ಎಂಬುದು ನಾವು ನಿಮಗೆ ಕೊಡುವ ಭರವಸೆ.

ಕೊನೆಯದಾಗಿ, **'ಮಿತ್ರ'**ನ 46ನೇ ವಾರ್ಷಿಕೋತ್ಸವ ಸಂದರ್ಭದಲ್ಲಿ ನಮ್ಮೆಲ್ಲಾ ಓದುಗರು, ಜಾಹೀರಾತುದಾರರು, ಅಭಿಮಾನಿಗಳು, ಹಿತೈಷಿಗಳು ಹಾಗೂ ಪತ್ರಿಕೆ ವಿತರಿಸುವವರಿಗೆ ನಮ್ಮ ಅನಂತಾನಂತ ವಂದನೆಗಳು. ನಿಮ್ಮ ಮಮಕಾರ-ಸಹಕಾರ ಸದಾ ನಮ್ಮ ಮೇಲಿರಲಿ.

ಧನ್ಯವಾದಗಳು


-ಸಂಪಾದಕ

ನಿಮ್ಮ ಪತ್ರಗಳು

■ ಸಾರಿಗೆ ಬಸ್ಸುಗಳು ನಿಲ್ಲಿಸದೆ ಪರದಾಟ...

ಮಾನ್ಯರೆ,

ಹೆಚ್.ಡಿ.ಕೋಟೆ ತಾಲೂಕಿನಿಂದ ಮೈಸೂರು ಕಡೆಗೆ ಹಾಗೆ ಮೈಸೂರಿನಿಂದ ಹೆಚ್.ಡಿ.ಕೋಟೆ ಕಡೆಗೆ ಬರುವ ಕೆಎಸ್‌ಆರ್‌ಟಿಸಿ ಬಸ್ಸುಗಳು ಹೈರಿಗೆ, ಮಾದಾಪುರ ಗ್ರಾಮಗಳಲ್ಲಿ ನಿಲ್ಲಿಸುವುದಿಲ್ಲ. ಈ ಎರಡು ಗ್ರಾಮಗಳು ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ಗ್ರಾಮಗಳಾಗಿವೆ. ಸಾರ್ವಜನಿಕರು ಹಾಗೆ ವಿದ್ಯಾರ್ಥಿಗಳು ಬಸ್ಸಿನ ಚಾಲಕರು ಹಾಗೂ ಕಂಡಕ್ಟರ್‌ಗಳನ್ನು ಕೇಳಿದರೆ ಇದು "ನಾನ್ ಸ್ಟಾಪ್" ಬಸ್ಸು ಎಂದು ಹೇಳುತ್ತಾರೆ. ಹಾಗೆಯೇ ಗಡಸು ಧ್ವನಿಯಿಂದ ಗದರಿಸುತ್ತಾರೆ. ಮಾದಾಪುರ, ಹೈರಿಗೆ ಗ್ರಾಮಕ್ಕೆ ಅಕ್ಕಪಕ್ಕದ ಊರುಗಳಿಂದ ಸಾರ್ವಜನಿಕರು, ವಿದ್ಯಾರ್ಥಿಗಳು, ಸರ್ಕಾರಿ ನೌಕರರು ಮೈಸೂರಿನಿಂದ ಹೆಚ್.ಡಿ.ಕೋಟೆ ಕಡೆಗೆ ದಿನನಿತ್ಯ ಪ್ರಯಾಣ ಮಾಡುತ್ತಾರೆ. ಇದರಿಂದ ಶಿಕ್ಷಕರಿಗೆ ದಿನನಿತ್ಯ ಸಂಚಾರ ಮಾಡಲು ತುಂಬಾ ತೊಂದರೆಯಾಗಿದೆ. ಶಾಲಾ-ಕಾಲೇಜು ಮಕ್ಕಳ ಯಾತನೆ ಹೇಳತೀರದು. ಇದರಿಂದಾಗಿ ಎಷ್ಟೋ ವಿದ್ಯಾರ್ಥಿಗಳು ಶಾಲೆ ಕಾಲೇಜಿಗೆ ಹೋಗುವುದನ್ನೇ ನಿಲ್ಲಿಸಿದ್ದಾರೆ. ಹಾಗೆಯೇ ಎಷ್ಟೋ ರೋಗಿಗಳು ತಕ್ಷಣ ಮೈಸೂರು ಅಸ್ಪತ್ರೆ, ಹೆಚ್.ಡಿ. ಕೋಟೆ ಅಸ್ಪತ್ರೆಗೆ ಹೋಗಲಾಗದೆ ಸಾವನ್ನಪ್ಪಿದ್ದಾರೆ. ಅದುದರಿಂದ ಈ ವಿಚಾರಕ್ಕೆ ಸಂಬಂಧಪಟ್ಟಂತೆ ಕೆಎಸ್‌ಆರ್‌ಟಿಸಿ ಅಧಿಕಾರಿಗಳು, ಜನಪ್ರತಿನಿಧಿಗಳು ಹೈರಿಗೆ, ಮಾದಾಪುರ ಗ್ರಾಮಗಳಿಗೆ ಎಲ್ಲಾ ರೀತಿಯ ಕೆಎಸ್‌ಆರ್‌ಟಿಸಿ ಬಸ್ಸುಗಳು ನಿಲುಗಡೆಗೊಳ್ಳಲಿ. ಹಾಗೆಯೇ ರಾತ್ರಿ ಸಮಯದಲ್ಲಿಯೂ ಬಸ್ಸುಗಳು ನಿಲುಗಡೆಯಾಗಲಿ. **-ಸಿದ್ದಲಿಂಗೇಗೌಡ, ಹೈರಿಗೆ, ಹೆಚ್.ಡಿ.ಕೋಟೆ ತಾಲೂಕು**



ಕೆಬಿಜೆಯವರ


ಘೂಮಂತ್ರ... ಘೂಮಂತ್ರ... ಘೂಮಂತ್ರ...

ಪರ ಭಾಷೆಗಿಂತ ನಮ್ಮದೇ ದೇಶ ಭಾಷೆ ಸಂಪರ್ಕ ಭಾಷೆಯಾಗಲಿ

ಹೊಸ ಶಿಕ್ಷಣ ನೀತಿಯಲ್ಲಿ ಹಿಂದಿ ಹೇರಿಲ್ಲ; ಆದರೂ...

ಕೇಂದ್ರದ ಬಿಜೆಪಿ ಸರ್ಕಾರ 2020ರಲ್ಲಿ ತನ್ನ ರಾಷ್ಟ್ರೀಯ ಶಿಕ್ಷಣ ನೀತಿಯನ್ನು (National Education Policy-NEP) ಘೋಷಿಸಿದ ನಂತರ ಅದರ ವಿರುದ್ಧ ಮೊದಲು ಸೊಲ್ಲೆತ್ತಿದ್ದು ಮುಖ್ಯವಾಗಿ ತಮಿಳುನಾಡು ಮಾತ್ರ. ಅದರಲ್ಲೂ ಸ್ಥಳೀಯ ದ್ರಾವಿಡ ರಾಜಕೀಯ ಪಕ್ಷಗಳು-ಡಿಎಂಕೆ ಎಐಎಡಿಎಂಕೆ, ಎಂಡಿಎಂಕೆ. ಮತ್ತೀಗ ತಮಿಳು ಸಿನಿಮಾ ನಟ ವಿಜಯ್ ಅವರ ತಮಿಳಿಗ ವೆಟ್ರಿ ಕಜಗಂ (ಟಿವಿಕೆ).

1968ರ ಅಧಿಕೃತ ಭಾಷಾ ನಿರ್ಣಯವು ದೇಶಾದ್ಯಂತ **ತ್ರಿಭಾಷಾ ಸೂತ್ರವನ್ನು**-ಸ್ಥಳೀಯ ಭಾಷೆ, ಹಿಂದಿ ಅಥವಾ ಯಾವುದೇ ಭಾರತೀಯ ಭಾಷೆ ಹಾಗೂ ಇಂಗ್ಲೀಷ್ ಭಾಷೆ-ಜಾರಿಗೆ ತರಲು ದಾರಿ ಮಾಡಿತು. **ಆದರೆ ಇಲ್ಲಿ ಹಿಂದಿ ಹೇರಿಕೆ ಇಲ್ಲದಿದ್ದರೂ ತಮಿಳುನಾಡು ಇದನ್ನು ವಿರೋಧಿಸಿ ತನ್ನ ದ್ವಿಭಾಷಾ ಸೂತ್ರವಾದ ಕೇವಲ ತಮಿಳು ಮತ್ತು ಇಂಗ್ಲೀಷನ್ನು ಪ್ರತಿಪಾದಿಸತೊಡಗಿತು.**



ನರೇಂದ್ರ ಮೋದಿ, ಪ್ರಧಾನಮಂತ್ರಿ

आ इ ई उ ऊ अ



ಸ್ಟಾಲಿನ್, ತಮಿಳುನಾಡು ಸಿಎಂ

> **"ಅದೇನೇ ಇರಲಿ, ಸದ್ಯಕ್ಕೆ ತಮಿಳುನಾಡಿನ ಸರ್ಕಾರವನ್ನು ಶಿಕ್ಷಣ ಭಾಷೆಯ ವಿಚಾರದಲ್ಲಿ ಅವರ ದ್ವಿಭಾಷಾ ನೀತಿಯನ್ನು ಅನುಸರಿಸಲು ಬಿಟ್ಟು ಬಿಡಬೇಕು. ಮುಂದಿನ ದಿನಗಳಲ್ಲಿ ಬೇರೆ ಸರ್ಕಾರ ಅಧಿಕಾರಕ್ಕೆ ಬಂದಾಗ ಶಿಕ್ಷಣ ನೀತಿಯನ್ನು ತ್ರಿಭಾಷಾ ನೀತಿಯಾಗಿ ಪರಿವರ್ತಿಸಬಹುದಲ್ಲವೆ? ಭಾಷೆಯ ಕಾರಣಕ್ಕಾಗಿ ದೇಶದಲ್ಲಿ ಅಶಾಂತಿ ಉಂಟಾಗಬಾರದು, ವಿಭಜನೆ ಕೂಗು ಕೇಳಬಾರದು, ದೇಶದ ಒಗ್ಗಟ್ಟಿಗೆ ಧಕ್ಕೆ ಆಗಲೇಬಾರದು.**

ಈಗ ಹೊಸ 2020ರ ಶಿಕ್ಷಣ ನೀತಿಯಲ್ಲೂ ಒಂದು ರಾಜ್ಯ ಹಾಗೂ ಪ್ರದೇಶದ ವಿದ್ಯಾರ್ಥಿಗಳು **ಮೂರು ಭಾಷೆಗಳನ್ನು** ಆಯ್ಕೆ ಮಾಡಿಕೊಳ್ಳಬಹುದು. ಆದರೆ ಅದರಲ್ಲಿ ಎರಡು ಭಾಷೆಗಳು ಭಾರತ ದೇಶದ ಯಾವುದೇ ಭಾಷೆಗಳಾಗಿರಬೇಕು. **ಮೂರನೇ ಭಾಷೆ ಸಂವಿಧಾನದಲ್ಲಿ ಹೇಳಲ್ಪಟ್ಟ ಇಂಗ್ಲೀಷ್. ಇದರಲ್ಲಿ ಹಿಂದಿ ಹೇರಿಕೆ ಎಲ್ಲಿದೆ? ಎಲ್ಲೂ ಹಿಂದಿಯನ್ನು ಕಡ್ಡಾಯ ಮಾಡಿಲ್ಲವಲ್ಲ!**

ಇಂಗ್ಲೀಷ್ ಬೇಕಾಗಿದೆ ಏಕೆಂದರೆ ಬಹುಭಾಷೆಗಳಿರುವ ನಮ್ಮ ದೇಶದಲ್ಲಿ ಆಡಳಿತ ನಡೆಸಲು, ಕೇಂದ್ರ ಮತ್ತು ಇತರ ರಾಜ್ಯಗಳೊಡನೆ ವ್ಯವಹರಿಸಲು ಕೊಂಡಿಯಾಗಿ ಒಂದು ಸಂಪರ್ಕ, ಭಾಷೆ ಬೇಕು (Link Language). ಆ ಕಾರಣಕ್ಕೆ ಇಂಗ್ಲೀಷ್ ಅನ್ನು ಒಪ್ಪಿಕೊಳ್ಳಬೇಕಾಯಿತು. **ಆದರೆ ಸ್ವಾಭಿಮಾನದ ದೃಷ್ಟಿಯಿಂದ ಹಾಗೂ ಸುಲಭವಾಗಿ ಕಲಿಯಲು ಸಾಧ್ಯವಾಗಿರುವ ಒಂದು ಭಾರತೀಯ ಭಾಷೆ ಸಂಪರ್ಕ ಭಾಷೆಯಾದರೆ ದೇಶಕ್ಕೆ ಗೌರವವಲ್ಲವೇ?**

ಅಷ್ಟೇ ಅಲ್ಲ, ಅದು ದೇಶದ ಏಕತೆ ಹಾಗೂ ಭದ್ರತೆಗೆ ಸಹಕಾರವಾಗುತ್ತದೆ. ಆ ಕಾರಣಕ್ಕಾಗಿಯೇ ಮತ್ತೀಗ ಅಧಿಕಾರಕ್ಕೆ ಬಂದ ಅಮೇರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಅಮೇರಿಕದ ರಾಷ್ಟ್ರ ಭಾಷೆ ಇಂಗ್ಲೀಷ್ ಮಾತ್ರ ಎಂದು ಘೋಷಣೆ ಮಾಡಿದರು. ಈ ಮೊದಲು ಬೇರೆ ಭಾಷಿಗರಿಗೆ ವಿಶೇಷ ಸೌಲಭ್ಯ ಕೊಟ್ಟು ಈ ಸಮುದಾಯದವರು ಅದರ ದುರುಪಯೋಗ ಮಾಡಿಕೊಳ್ಳುತ್ತಿದ್ದರು. ದೂರದೃಷ್ಟಿಯಿಂದ ಡೊನಾಲ್ಡ್ ಟ್ರಂಪ್ ಅವರು ಒಳ್ಳೆಯ ನಿರ್ಣಯ ತೆಗೆದುಕೊಂಡಿದ್ದಾರೆ.

ನಮ್ಮಲ್ಲಿ ಅಂತಹ, ಸಂಪರ್ಕ ಭಾಷೆಯಾಗಲು ಅರ್ಹತೆ ಇರುವಂತಹ ಭಾಷೆ ಯಾವುದು? ಅರ್ಥಾತ್ ಬಹುಸಂಖ್ಯಾತರು ಆಡುವಂತಹ ಭಾರತೀಯ ಭಾಷೆ ಯಾವುದು? ಅದು ಹಿಂದಿಯೇ ಆಗಿದೆ. ಏಕೆಂದರೆ ದೇಶದ ಶೇ.70ರಷ್ಟು ಜನರು ಈ ಭಾಷೆಯನ್ನು ಮಾತನಾಡುತ್ತಾರೆ ಇಲ್ಲವೆ ಸುಲಭವಾಗಿ ಅರ್ಥ ಮಾಡಿಕೊಳ್ಳುತ್ತಾರೆ ಹಾಗೂ ಕಲಿಯುತ್ತಾರೆ. ಭಾರತದ ಬೇರು ಭಾಷೆ (Root language) ಸಂಸ್ಕೃತ. ಅದರ ಸೊಗಡು ದೇಶದ ಎಲ್ಲಾ ಭಾಷೆಗಳಲ್ಲೂ ಕಂಡು ಬರುತ್ತದೆ. ದಕ್ಷಿಣ ಭಾರತದಲ್ಲಿ ನೀವು ಮಲಯಾಳಂ ತೆಗೆದುಕೊಂಡರೆ ಅದರಲ್ಲಿ ಅನೇಕ ಸಂಸ್ಕೃತ ಶಬ್ದಗಳಿವೆ. ಹಾಗೆಯೇ ತೆಲುಗು, ಕನ್ನಡ. ಅಗಸ್ತ್ಯ ಋಷಿಗಳು ದಕ್ಷಿಣಕ್ಕೆ ಬಂದಾಗ ಅವರು ಸಂಸ್ಕೃತ ತಂದರು ಹಾಗೂ ತಮಿಳು ಭಾಷೆಗೆ ವ್ಯಾಕರಣ ಬರೆದರು ಎಂಬ ಪ್ರತೀತಿ ಇದೆ.

ಸ್ವಾತಂತ್ರ್ಯ ನಂತರದ ದಿನಗಳಲ್ಲಿ ಹಿಂದಿ ಭಾಷೆ ಮಾತನಾಡುವವರ ಸಂಖ್ಯೆ ಹೆಚ್ಚಾಗಿದೆ. ಅಲ್ಲದೆ ಹಿಂದಿ ಭಾಷೆಯ ಸಾಹಿತ್ಯ, ಸಿನಿಮಾ, ನಾಟಕಗಳು ಕೂಡ ದೇಶದ ಎಲ್ಲೆಡೆ ತುಂಬಾ ಜನಪ್ರಿಯವಾಗಿರಬೇಕಾದರೆ ಆ ಭಾಷೆಯನ್ನು ಕಲಿಯುವುದಕ್ಕೆ ವಿರೋಧವೇಕೆ?

ಪ್ರಸ್ತುತ, ಭಾರತದಲ್ಲಿ ಒಬ್ಬ ವ್ಯಕ್ತಿಗೆ ಇಂಗ್ಲೀಷ್ ಬರದಿದ್ದರೂ ಹಿಂದಿ ಗೊತ್ತಿದ್ದರೆ ಸಾಕು. ಅವನಿಗೆ ದೇಶದಲ್ಲಿ ಎಲ್ಲಿ ಹೋದರೂ ನಿಭಾಯಿಸಬಹುದು. ಜೊತೆಗೆ ಕೆಲಸವೂ ಸಿಗುತ್ತದೆ. ಆದರೆ, ಅರ್ಹತೆ ಇದ್ದವರಿಗೂ ಕೇವಲ ಮಾತೃ ಭಾಷೆ ಹಾಗೂ ಇಂಗ್ಲೀಷ್ ಗೊತ್ತಿದ್ದರೆ ಈ ಸಾಧ್ಯತೆ ಕಡಿಮೆ. ಅದೇನೇ ಇರಲಿ ಅಗತ್ಯ ಬಿದ್ದಾಗ ಯಾರೇ ಆಗಲೀ ಹೊಸ ಭಾಷೆಯನ್ನು ಕಲಿಯಲೇಬೇಕಾಗುತ್ತದೆ. ಉದಾಹರಣೆಗೆ ನಮ್ಮ ಐಎಎಸ್, ಐಪಿಎಸ್ ಸೇರಿದಂತೆ ಅಖಿಲ ಭಾರತೀಯ ಸೇವೆಗಳಲ್ಲಿ ಕಾರ್ಯನಿರ್ವಹಿಸುವಂತಹ ಅಧಿಕಾರಿಗಳು ಬೇರೆ ರಾಜ್ಯದಿಂದ ಬಂದಿದ್ದರೂ ತಾವು ಕೆಲಸ ಮಾಡುವ ರಾಜ್ಯದ ಸ್ಥಳೀಯ ಭಾಷೆಯನ್ನು ಕಲಿಯುವುದಿಲ್ಲವೆ? ಅದೇ ರೀತಿ ಸಿನಿಮಾ ಕ್ಷೇತ್ರದಲ್ಲಿ ಕೆಲಸ ಮಾಡುವ ನಟ-ನಟಿಯರು ಕೂಡ ತಮ್ಮ ವೃತ್ತಿಯಲ್ಲಿ ಉಳಿದು-ಬೆಳೆಯಲು ಹೊಸ ಭಾಷೆಯನ್ನು ಕಲಿಯುವುದಿಲ್ಲವೆ? ಅನೇಕ ತಮಿಳು ನಟ-ನಟಿಯರು ಹಿಂದಿ ಸಿನಿಮಾದಲ್ಲಿ ಹೆಸರು ಮಾಡಿದ್ದಾರೆ. ವೈಜಯಂತಿ ಮಾಲಾ, ಪದ್ಮಿನಿ, ಶ್ರೀದೇವಿ, ಹೇಮಮಾಲಿನಿ, ಮತ್ತೀಗ ರಶ್ಮಿಕಾ ಮಂದಣ್ಣ ಮೊದಲಾಗಿ, ಅದೇ ರೀತಿ ಕನ್ನಡದ ಸಿನಿಮಾದಲ್ಲಿ ಪರ ಭಾಷಿಯರು ಹೆಸರು ಮಾಡಿದ್ದಾರೆ. ಉದಾಹರಣೆಗೆ ಪೂಜಾ ಗಾಂಧಿ.

ಆದುದರಿಂದ **ಕೇವಲ ತಮಿಳು, ಇಂಗ್ಲೀಷ್ ಕಲಿತ** ಒಬ್ಬ ತಮಿಳುನಾಡಿನ ವ್ಯಕ್ತಿ ಬೇರೆ ರಾಜ್ಯದಲ್ಲಿ ಬದುಕಿನ ದಾರಿ ಕಂಡುಕೊಳ್ಳುತ್ತೇನೆ, ತನ್ನ ಸೃಜನಶೀಲತೆಯನ್ನು ವರ್ಧಿಸಿಕೊಂಡು, ವೃತ್ತಿ ಜೀವನದಲ್ಲಿ ಎತ್ತರಕ್ಕೆ ಬೆಳೆದು ಹೆಸರು, ಹಣ ಸಂಪಾದಿಸುತ್ತೇನೆ ಎಂದರೆ ಅದು ಮೂರ್ಖತನ.

ಒಬ್ಬ ಭಾರತೀಯನ ಜೀವನದ ಈ ನೈಜಸ್ಥಿತಿ ತಮಿಳುನಾಡಿನ ಎಲ್ಲಾ ದ್ರಾವಿಡ ಪಕ್ಷಗಳಿಗೆ ಗೊತ್ತಿದೆ. **ಆದರೆ ಬರೀ ರಾಜಕಾರಣದ ಕಾರಣಕ್ಕಾಗಿ ಅವರು ಈ ವಿರೋಧಿ ನಿಲುವನ್ನು ತೆಗೆದುಕೊಳ್ಳುವ ಅನಿವಾರ್ಯತೆ** ಇದೆ. ಅಂದು ಹಿಂದಿಯನ್ನು ಮತದಾರರ ಮುಂದಿಟ್ಟು, ತಮಿಳರಿಗೆ ಪ್ರಪಂಚದೊಂದಿಗೆ ಸಂವಹನ ನಡೆಸಲು ಇಂಗ್ಲೀಷ್ ಮಾತ್ರ ಸಾಕು, ಹಿಂದಿ ಕಲಿಯುವ ಅನಿವಾರ್ಯತೆ ಅಗತ್ಯವಿಲ್ಲ ಎಂದು ಹೇಳಿ 1967ರಲ್ಲಿ ಡಿಎಂಕೆ ಅಧಿಕಾರಕ್ಕೆ ಬಂದು ಇಂದಿನವರೆಗೂ ಅದೇ ರಾಜಕೀಯ ಗಿಮಿಕ್ ಮುಂದುವರಿಸುತ್ತಿದೆ. **ನೀರು, ಭಾಷೆ ವಿಷಯವನ್ನು ರಾಜಕೀಯವಾಗಿ ಉಪಯೋಗಿಸಿಕೊಂಡು ಅಧಿಕಾರ ಹಿಡಿಯುವ ತಂತ್ರಗಾರಿಕೆ ತಮಿಳ್ನಾಡಿನ ದ್ರಾವಿಡ ಪಕ್ಷಗಳಿಗೆ ಅನಿವಾರ್ಯ.**

ಆದರೆ, ಕೇಂದ್ರ ಸರ್ಕಾರವು ಈ ರೀತಿಯ ದ್ರಾವಿಡ ಪಕ್ಷಗಳ ನಡೆಯನ್ನು ಸೂಕ್ಷ್ಮವಾಗಿ ನಿಭಾಯಿಸಬೇಕು. **ಏಕೆಂದರೆ ತಮಿಳುನಾಡಿನ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಹೇಳುವುದೆಂದರೆ : 'ತಮಿಳುನಾಡು ಹಿಂದಿ ಕಲಿಯುವುದನ್ನು ವಿರೋಧಿಸುವುದಿಲ್ಲ. ಬದಲಿಗೆ ಅದರ ಹೇರಿಕೆ ವಿರುದ್ಧ ಹೋರಾಡುತ್ತೇವೆ'** ಅವರ ಮಾತಿನ ಅರ್ಥ ಹಿಂದಿ ಕಡ್ಡಾಯ (compulsory) ಮಾಡಬೇಡಿ. **ಆದರೆ ಎನ್‌ಇಪಿಯ ತ್ರಿಭಾಷಾ ಸೂತ್ರದಲ್ಲಿ ಹಿಂದಿ ಹೇರಿಕೆ ಎಲ್ಲಿದೆ? ಆದರೂ ಏಕೆ ವಿರೋಧ? ಮೂರನೇ ಭಾಷೆಯನ್ನು ಆಯ್ಕೆ ಮಾಡಬೇಕು ಎಂದಿರುವುದಕ್ಕೋಸ್ಕರವೇ? ಆದರೆ ಅದು ಹಿಂದಿಯೇ ಆಗಿರಬೇಕೆಂದೇನಿಲ್ಲವಲ್ಲ. ಅದೇಕೆ ತಮಿಳುನಾಡು ದ್ವಿಭಾಷಾ ನೀತಿಯನ್ನು-ತಮಿಳು ಮತ್ತು ಇಂಗ್ಲೀಷ್-ಮಾತ್ರ ಅನುಸರಿಸುವುದಾಗಿ ಹಟ ಹಿಡಿಯಬೇಕು?** ಇದು ಅರ್ಥವಾಗದ ಒಗಟು, ಸಮಸ್ಯೆ!

ವಿಪರ್ಯಾಸವೆಂದರೆ, ತಮಿಳುನಾಡಿನಲ್ಲಿರುವಷ್ಟು ಹಿಂದಿ ಕಲಿಸುವ ಖಾಸಗಿ ಶಾಲೆಗಳು, ಹಿಂದಿ ಪ್ರಚಾರಕ್ ಸಭಾ, ಬೇರೆ ಯಾವ ರಾಜ್ಯದಲ್ಲೂ ಇಲ್ಲವಂತೆ. ಆ ಕಾರಣಕ್ಕಾಗಿಯೇ ನಾವು ಇಂದು ಅನೇಕ ತಮಿಳು ಭಾಷಿಗರು ದೇಶದ ಬೇರೆ ಬೇರೆ ಭಾಗಗಳಲ್ಲಿ ಉನ್ನತ ಹುದ್ದೆಯಲ್ಲಿರುವುದನ್ನು ಕಾಣುತ್ತೇವೆ. ಅದೇ ರೀತಿ ಬೇರೆ ಸರ್ಕಾರಿ ಹಾಗೂ ಖಾಸಗಿ ಕ್ಷೇತ್ರದ ಕೆಲಸಗಳಲ್ಲೂ ಕಾಣುತ್ತೇವೆ.

ಇನ್ನು ಕೇಂದ್ರದ ರಾಜಕೀಯವನ್ನು ತೆಗೆದುಕೊಂಡರೆ ಹಿಂದಿ ಗೊತ್ತಿದ್ದರೆ ಅದೊಂದು ಶಕ್ತಿ. ಪ್ರಧಾನ ಮಂತ್ರಿಯಾಗಲು ಹಿಂದಿ ಭಾಷೆಯ ತಿಳುವಳಿಕೆ, ಮಾತನಾಡಬಲ್ಲವರಾದರೆ ತುಂಬಾ ಅನುಕೂಲ. ಪಿ.ವಿ. ನರಸಿಂಹರಾಯರು ತೆಲುಗು ಮಾತನಾಡುವ ಆಂಧ್ರದವರು. ಆದರೆ ಅವರಿಗೆ ಹಿಂದಿಯಲ್ಲಿ ಪರಿಣತಿ ಇತ್ತು. ಹಾಗಾಗಿ ಅವರು ಅಲ್ಪಬಹುಮತವುಳ್ಳ ಸರಕಾರವನ್ನು ಐದು ವರ್ಷ ಯಶಸ್ವಿಯಾಗಿ ನಡೆಸಿಯೇಬಿಟ್ಟರು. ಸದನಗಳಲ್ಲಿ ಮಾತನಾಡಲು ಕೂಡ ಹಿಂದಿ ಭಾಷೆ ತುಂಬಾ ಮುಖ್ಯ ಹಾಗೂ ಪರಿಣಾಮಕಾರಿ.

ಅದೇನೇ ಇರಲಿ, ಸದ್ಯಕ್ಕೆ ಹಾಲಿ ತಮಿಳುನಾಡು ಸರ್ಕಾರವನ್ನು ಶಿಕ್ಷಣ ಭಾಷೆಯ ವಿಚಾರದಲ್ಲಿ ಅವರ ದ್ವಿಭಾಷಾ ನೀತಿಯನ್ನು ಅನುಸರಿಸಲು ಬಿಟ್ಟು ಬಿಡಬೇಕು. ಮುಂದಿನ ದಿನಗಳಲ್ಲಿ ಬೇರೆ ಸರ್ಕಾರ ಅಧಿಕಾರಕ್ಕೆ ಬಂದಾಗ ಶಿಕ್ಷಣ ನೀತಿಯನ್ನು ತ್ರಿಭಾಷಾ ನೀತಿಯಾಗಿ ಪರಿವರ್ತಿಸಬಹುದಲ್ಲವೆ? ಭಾಷೆಯ ಕಾರಣಕ್ಕಾಗಿ ದೇಶದಲ್ಲಿ ಅಶಾಂತಿ ಉಂಟಾಗಬಾರದು, ವಿಭಜನೆ ಕೂಗು ಕೇಳಬಾರದು, ದೇಶದ ಒಗ್ಗಟ್ಟಿಗೆ ಧಕ್ಕೆ ಆಗಲೇಬಾರದು.

ಭಾರತ ದೇಶದ ಎಲ್ಲಾ ಭಾಷೆಗಳನ್ನು ರಕ್ಷಿಸಿ, ಉಳಿಸಿ ಬೆಳೆಸಲು ಭಾರತೀಯ ಜನತಾ ಪಕ್ಷ (ಬಿಜೆಪಿ) ಕಟಿಬದ್ಧವಾಗಿದೆ ಎಂದು ರಾಷ್ಟ್ರದ ರಕ್ಷಣಾ ಮಂತ್ರಿ ರಾಜನಾಥ್ ಸಿಂಗ್ ಅವರು ಪುನರುಚ್ಚರಿಸಿರುವುದು ಸಮಯೋಚಿತವಾಗಿದೆ. ಭಾಷಾವಾರು ರಾಜ್ಯಗಳನ್ನು ಮಾಡಿದ್ದು ಅದೇ ಕಾರಣಕ್ಕಾಗಿ ಅಲ್ಲವೇ? ಆದರೆ, ಅದು ದೇಶದ ಏಕತೆಗೆ ಕಂಟಕವಾಗಬಾರದು ಅಷ್ಟೆ.

Email:
voice@starmysore.com


ಜಾತಿ ಗಣತಿ ಹೆಸರಲ್ಲಿ ಹಿಂದೂ ಧರ್ಮದಲ್ಲಿ ಒಡಕು ಮೂಡಿಸುವ ಹುನ್ನಾರ!

● ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಮಾಜಿ ಸಂಸದ ಪ್ರತಾಪ್ ಸಿಂಹ ಸಿಡಿಮಿಡಿ ● ಕುರ್ಚಿ ಉಳಿಸಿಕೊಳ್ಳಲು ಜಾತಿ ಗಣತಿ ಅಸ್ತ್ರ

- ■ ಮುಸ್ಲಿಂ, ಕ್ರಿಶ್ಚಿಯನ್ ಉಪಜಾತಿಗಳನ್ನು ಲೆಕ್ಕ ಹಾಕಿಲ್ಲ
- ■ ಕಾಂಗ್ರೆಸ್ ಪಕ್ಷದಲ್ಲಿ ಭಿನ್ನಮತ ಸ್ಫೋಟ
- ■ ವಿರೋಧಿಗಳನ್ನು ಕುರಿ ಮಾಡುವ ಷಡ್ಯಂತ್ರ

ಮೈಸೂರು, ಏ.15(ಬಿಎಲ್‌ಯು)- ಮುಖ್ಯಮಂತ್ರಿ ಸಿದ್ದರಾಮಯ್ಯ ಅಂದು ಅಹಿಂದ ಹೆಸರಿನಲ್ಲಿ ಒಂದು ವರ್ಗವನ್ನು ಒಡೆದರೆ, ಇಂದು ಜಾತಿ ಗಣತಿ ಹೆಸರಿನಲ್ಲಿ ಇಡೀ ಹಿಂದೂ ಧರ್ಮವನ್ನೆ ಒಡೆದು ಆಳುವ ತಂತ್ರಗಾರಿಕೆ ರೂಪಿಸಿದ್ದಾರೆ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಆಕ್ರೋಶ ವ್ಯಕ್ತಪಡಿಸಿದರು.

ಮೈಸೂರಲ್ಲಿ ಪತ್ರಕರ್ತರ ಜೊತೆ ಮಾತನಾಡಿದ ಅವರು, ಜಾತಿಗಣತಿಯಿಂದ ಸಿದ್ದರಾಮಯ್ಯ ಅವರು ತಮ್ಮ ಕಾಂಗ್ರೆಸ್ ಪಕ್ಷ ಹಾಗೂ ವಿರೋಧ ಪಕ್ಷಗಳನ್ನು ಕುರಿ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.



ಜಾತಿಗಣತಿ ವರದಿಯಲ್ಲಿ ಲಿಂಗಾಯತರು, ಒಕ್ಕಲಿಗರು, ಹಿಂದುಳಿದವರ ಸಂಖ್ಯೆ ಕಡಿಮೆ ಆಗಿದೆ ಎಂದು ನೋಡುವುದರ ಬದಲು ಹಿಂದೂಗಳ ಸ್ಥಿತಿ ಏನಾಗಿದೆ ಎಂದು ಎಲ್ಲರೂ ಪರಾಮರ್ಶೆ ಮಾಡಬೇಕು ಎಂದರು.

ಗ್ಯಾರಂಟಿ ಯೋಜನೆಗಳು ಹಳ್ಳ ಹಿಡಿದಿದೆ. ವಾಲ್ಮೀಕಿ ಹಗರಣ ಬಹಿರಂಗವಾಗಿದೆ. ತಮ್ಮ ವಿರುದ್ಧದ ಆಪಾದನೆಗಳನ್ನು ಮರೆಮಾಚಲು ಸಿದ್ದರಾಮಯ್ಯ ಅವರು ಈಗ ಜಾತಿಗಣತಿ ವಿವಾದ ಮುನ್ನಲೆಗೆ ತಂದು ನಾಟಕವಾಡುತ್ತಿದ್ದಾರೆ ಎಂದು ದೂರಿದರು.

ತಮ್ಮ ಕುರ್ಚಿ ಉಳಿಸಿಕೊಳ್ಳುವ ಏಕಮೇವ ಉದ್ದೇಶದಿಂದ ಸಿದ್ದರಾಮಯ್ಯ ಜಾತಿಗಣತಿ ವಿಚಾರವನ್ನು ಪ್ರಸ್ತಾಪಿಸಿದ್ದಾರೆ. ಕಾಂಗ್ರೆಸ್‌ನಲ್ಲಿ 37 ವೀರಶೈವ ಶಾಸಕರಿದ್ದಾರೆ. ಹಾಗಾದರೆ ವೀರಶೈವರಿಗೆ ಮುಖ್ಯಮಂತ್ರಿ ಕುರ್ಚಿ ಬಿಟ್ಟು ಕೊಡುತ್ತಾರೆಯೇ ಎಂದು ಪ್ರತಾಪ್ ಸಿಂಹ ಪ್ರಶ್ನಿಸಿದರು.

ಮಂಗ್ಯಾಗಳಂತೆ ಕಿತ್ತಾಡದೆ ಹಿಂದೂಗಳ ಸ್ಥಿತಿಗತಿ ತಿಳಿಯಿರಿ

> "ಜಾತಿಗಣತಿ ವರದಿಯಲ್ಲಿ ತಮ್ಮ ಜಾತಿ ಸಂಖ್ಯೆ ಕಡಿಮೆ ಆಗಿದೆ ಎಂದು ಮಂಗ್ಯಾಗಳಂತೆ ಪರಸ್ಪರ ಕಿತ್ತಾಡುವುದರ ಬದಲು ಹಿಂದೂಗಳ ಸಂಖ್ಯೆ ಎಷ್ಟಿದೆ ಎಂಬ ಸೂಕ್ಷ್ಮ ವಿಚಾರವನ್ನು ಅವಲೋಕನ ಮಾಡಿ. ಯಾರ ಮನೆಗೂ ಭೇಟಿ ನೀಡದೆ, ಅದು ಹೇಗೆ ಜಾತಿಗಣತಿ ಮಾಡಲು ಸಾಧ್ಯ ಸಿದ್ದರಾಮಯ್ಯ ಅವರು ವಿರೋಧ ಪಕ್ಷ ಮಾತ್ರವಲ್ಲದೆ ತಮ್ಮ ಕಾಂಗ್ರೆಸ್ ಪಕ್ಷವನ್ನು ಕೂಡ ಕುರಿ ಮಾಡುತ್ತಿದ್ದಾರೆ.ಜಾತಿ ಗಣತಿ ವೈಜ್ಞಾನಿಕವಾಗಿಲ್ಲ. ಯಾರ ಮನೆಗೂ ಭೇಟಿ ನೀಡದೆ ತಯಾರಿಸಿರುವ ಅವೈಜ್ಞಾನಿಕ ವರದಿ ಇದು. ಲಿಂಗಾಯತರು, ಒಕ್ಕಲಿಗರು ಹಾಗೂ ಹಿಂದುಳಿದವರ ಉಪ ಜಾತಿಗಳ ಬಗ್ಗೆ ಲೆಕ್ಕ ಹಾಕಿದವರು ಮುಸ್ಲಿಂ, ಕ್ರಿಶ್ಚಿಯನ್‌ನಲ್ಲಿರುವ ಉಪ ಜಾತಿಗಳ ಬಗ್ಗೆ ಏಕೆ ಲೆಕ್ಕ ಮಾಡಿಲ್ಲ.
>
> **-ಪ್ರತಾಪ್ ಸಿಂಹ, ಮಾಜಿ ಸಂಸದ**

ಜಾತಿಗಣತಿ ವಿಚಾರವನ್ನು ಮುನ್ನಲೆಗೆ ತಂದಿದ್ದೆ ತಡ ಕಾಂಗ್ರೆಸ್ ಪಕ್ಷದಲ್ಲೆ ಅಪಸ್ವರ ಹಾಗೂ ಗೊಂದಲಗಳು ಏರ್ಪಟ್ಟಿದೆ. ಈ ಹಿನ್ನೆಲೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಒಂದೆಡೆ ಒಕ್ಕಲಿಗ ಶಾಸಕರ ಸಭೆ ಕರೆದರೆ, ಮತ್ತೊಂದೆಡೆ ಶಾಮನೂರು ಶಿವಶಂಕರಪ್ಪ, ಲಿಂಗಾಯಿತ ಶಾಸಕರ ಸಭೆ ಕರೆದಿದ್ದಾರೆ. ಈ ಮೂಲಕ ಜಾತಿಗಣತಿ ವಿಚಾರವಾಗಿ ಕಾಂಗ್ರೆಸ್ ಪಕ್ಷದಲ್ಲೇ ಭಿನ್ನಮತ ಸ್ಫೋಟವಾಗಿದೆ ಎಂದು ಆಪಾದಿಸಿದರು. ದಲಿತ ಸಮುದಾಯದವರ ಸಂಖ್ಯೆ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸ್ಥಾನದ ಮೇಲೆ ದಲಿತರು ಕಣ್ಣಿಟ್ಟಿದ್ದಾರೆ. ಜಾತಿಗಣತಿ ವಿಚಾರ ಪ್ರಸ್ತಾಪಿಸಿ ಎಲ್ಲೆಡೆ ಒಡಕು ಮೂಡಿಸಿದ್ದಾರೆ ಎಂದು ಪ್ರತಾಪ್ ಸಿಂಹ ಕಿಡಿಕಾರಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581/1980 E-mail address: mysoorumithra@gmail.com For advertisements: mysoorumithra@gmail.com

ಮುಡಾ ಹಗರಣ: ಮೇ 7ಕ್ಕೆ ವಿಚಾರಣೆ ಮುಂದೂಡಿಕೆ

ಸಿದ್ದರಾಮಯ್ಯಗೆ ಕೊಂಚ ರಿಲೀಫ್



ಬೆಂಗಳೂರು: ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಸಿಎಂ ಸಿದ್ದರಾಮಯ್ಯ ಸದ್ಯಕ್ಕೆ ಬೀಸುವ ದೊಣ್ಣೆಯಿಂದ ತಪ್ಪಿಸಿಕೊಂಡಿದ್ದಾರೆ ಲೋಕಾಯುಕ್ತ ಸಲ್ಲಿಸಿರುವ ಬಿ ರಿಪೋರ್ಟ್ ಕುರಿತಂತೆ ಯಾವುದೇ ಅಂತಿಮ ನಿರ್ಧಾರವನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಪ್ರಕಟಿಸಿಲ್ಲ. ಇನ್ನು ಹಗರಣದ ಕುರಿತಂತೆ ತನಿಖೆ ಮುಂದುವರೆಸಲು ಲೋಕಾಯುಕ್ತಕ್ಕೆ ಸೂಚನೆ ನೀಡಿದ್ದು ಮುಂದಿನ ವಿಚಾರಣೆಯನ್ನು ಮೇ 7ಕ್ಕೆ ಮುಂದೂಡಿದೆ.

ಮುಡಾ ನಿವೇಶನ ಹಂಚಿಕೆ ಪ್ರಕರಣದ ತನಿಖೆ ನಡೆಸಿದ ಲೋಕಾಯುಕ್ತ ಪೊಲೀಸರು ಬಿ ರಿಪೋರ್ಟ್ ಸಲ್ಲಿಸಿದ್ದು ಆರೋಪಿಗಳಿಗೆ ಕ್ಲೀನ್‌ಚಿಟ್ ನೀಡಿದ್ದರು. ಇದರ ವಿರುದ್ಧ ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಅವರು ಜನಪ್ರತಿನಿಧಿಗಳ ವಿಶೇಷ ಕೋರ್ಟ್‌ಗೆ ತಕಾರಾರು ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯ ವಿಚಾರಣೆ ನಡೆಸಿದ ಜನಪ್ರತಿನಿಧಿಗಳ ವಿಶೇಷ ಕೋರ್ಟ್ ನ್ಯಾಯಾಧೀಶ ಸಂತೋಷ್ ಗಜಾನನ ಭಟ್, ಪ್ರಕರಣ ಸಂಬಂಧ ಯಾವುದೇ ತೀರ್ಪು ನೀಡಿಲ್ಲ. ಬದಲಿಗೆ ಲೋಕಾಯುಕ್ತ ಪೊಲೀಸರಿಗೆ ತನಿಖೆ ಮುಂದುವರೆಸಲು ಸೂಚಿಸಿದ್ದು ಸಂಪೂರ್ಣ ವರದಿ ಸಲ್ಲಿಸಿದ ಬಳಿಕ ಮುಂದಿನ ಆದೇಶ ನೀಡಲಿದೆ. ಇನ್ನು ಇದೇ ಪ್ರಕರಣ ಸಂಬಂಧ ಇಡಿ ಸಹ ತಕರಾರು ಅರ್ಜಿ ಸಲ್ಲಿಸಲು ಕೋರ್ಟ್ ಅನುಮತಿ ನೀಡಿದೆ

ಇದಕ್ಕೂ ಮೊದಲು, ಸಿದ್ದರಾಮಯ್ಯ ಮತ್ತು ಇತರ ಮೂವರ ವಿರುದ್ಧದ ಆರೋಪಗಳ ವಿಚಾರಣೆಯ ಆಧಾರದ ಮೇಲೆ ಲೋಕಾಯುಕ್ತ ಪೊಲೀಸರು ಬಿ ರಿಪೋರ್ಟ್ ಸಲ್ಲಿಸಿದ್ದರು. ಆದಾಗ್ಯೂ, ತನಿಖೆಯನ್ನು ಕೇವಲ ನಾಲ್ವರು ವ್ಯಕ್ತಿಗಳಿಗೆ ಸೀಮಿತಗೊಳಿಸಬಾರದು ಎಂದು ನ್ಯಾಯಾಲಯವು ಅಭಿಪ್ರಾಯಪಟ್ಟಿದ್ದು, ಭಾಗಿಯಾಗಿರುವ ಎಲ್ಲರನ್ನೂ ತನಿಖೆ ಮಾಡಿ ಸಮಗ್ರ ವರದಿ ಸಲ್ಲಿಸುವಂತೆ ಪೊಲೀಸರಿಗೆ ನಿರ್ದೇಶಿಸಿದೆ. ಈ ಪ್ರಕರಣವು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದಿಂದ ನಿವೇಶನ ಹಂಚಿಕೆಯಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳಿಗೆ ಸಂಬಂಧಿಸಿದೆ. ಇದರಲ್ಲಿ ಸಿಎಂ ಸಿದ್ದರಾಮಯ್ಯ ತಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಂಡಿದ್ದಾರೆ ಎಂದು ಆರೋಪಿಸಲಾಗಿದೆ. ಈ ಆರೋಪಗಳು ನಿಯಮಗಳು ಮತ್ತು ಕಾರ್ಯವಿಧಾನಗಳನ್ನು ಉಲ್ಲಂಘಿಸಿ ವಸತಿ ನಿವೇಶನಗಳನ್ನು ಹಂಚಿಕೆ ಮಾಡಲಾಗಿದ್ದು, ಇದರಿಂದ ಸಿದ್ದರಾಮಯ್ಯ ಅವರ ಕುಟುಂಬ ಸದಸ್ಯರು ಸೇರಿದಂತೆ ಕೆಲವು ವ್ಯಕ್ತಿಗಳಿಗೆ ಹೆಚ್ಚಿನ ಲಾಭವಾಗಿದೆ ಎಂಬ ಆರೋಪ ಕೇಳಿಬಂದಿದೆ. ಕಾರ್ಯ ಕರ್ತೆ ಸ್ನೇಹಮಯಿ ಕೃಷ್ಣ ಸಲ್ಲಿಸಿದ ದೂರಿನ ಮೇರೆಗೆ ಲೋಕಾಯುಕ್ತರು ತನಿಖೆ ಆರಂಭಿಸಿತ್ತು.

ಮೂರನೇ ಪುಟದಿಂದ

ಸರ್ಕಾರ ಉಳಿಯಲ್ಲ

ಈ ವರದಿಯಲ್ಲಿ ಒಕ್ಕಲಿಗ ಜನಾಂಗವನ್ನ ಕೇವಲ 61ಲಕ್ಷ ತೋರಿಸಲಾಗಿದೆ ಎಂದರು. ರಾಜ್ಯದ 224 ಕ್ಷೇತ್ರದಲ್ಲಿ ಒಕ್ಕಲಿಗರು ಕೇವಲ 61ಲಕ್ಷ ಮಾತ್ರ ಇರಲು ಸಾಧ್ಯವೇ ಇಲ್ಲ. ಒಂದೊಂದು ತಾಲೂಕಲ್ಲೂ 60 ಸಾವಿರದಿಂದ 1ಲಕ್ಷಕ್ಕೂ ಹೆಚ್ಚು ಒಕ್ಕಲಿಗ ಸಮುದಾಯದ ಜನರಿದ್ದಾರೆ. ಆದರೆ ಈ ವರದಿಯಲ್ಲಿ ನಮ್ಮ ಜನಾಂಗವನ್ನ 6ನೇ ಸ್ಥಾನದಲ್ಲಿ ಇರಿಸಲಾಗಿದೆ. ಇದು ಬೇರೆ ಜನಾಂಗಕ್ಕೆ ಮೀಸಲಾತಿ ನೀಡುವ ಉದ್ದೇಶದಿಂದ ಮಾಡುವ ಹುನ್ನಾರ. ಹೀಗಾಗಿ ನಾವು ಕರ್ನಾಟಕ ಬಂದ್ ಮಾಡುವುದರ ಮೂಲಕ ಹೋರಾಟ ಮಾಡಬೇಕಾಗುತ್ತದೆ. ಜಾತಿ ಗಣತಿ ವರದಿಯಲ್ಲಿ ಸಾಕಷ್ಟು ಜನಾಂಗಕ್ಕೆ ಅನ್ಯಾಯ ವಾಗಿದೆ. ಹೀಗಾಗಿ ಇದನ್ನು ಹಿಂಪಡೆಯಬೇಕು ಮತ್ತು ಮರು ಪರಿಶೀಲನೆ ಮಾಡಬೇಕು ಎಂದರು.

> **ಜಾತಿಗಣತಿ ವರದಿ ವಿರೋಧಿ ಶಾಸಕರೂ, ಸಚಿವರಿಗೆ ತಕ್ಕ ಪಾಠ ಕಲಿಸುತ್ತೇವೆ. ಈ ವರದಿಯನ್ನು ವಿರೋಧಿಸುವವರು ಈ ಹಿಂದೆ ರಚನೆಯಾಗಿ ವರದಿ ಸಲ್ಲಿಸಿದ ಆಯೋಗಗಳ ಯಾವ ವರದಿಯನ್ನು ಒಪ್ಪಿಕೊಂಡಿದ್ದಾರೆ. ಹಾಗಾಗಿ ಇವರು ಒಪ್ಪಿಕೊಳ್ಳಲಿ, ಬಿಡಲಿ ನಾವಂತೂ ದೃಢವಾಗಿದ್ದೇವೆ. ಈ ವರದಿ ಜಾರಿಯಾಗಲೇಬೇಕು.**
>
> -ರಾಮಚಂದ್ರಪ್ಪ,
> *ಶೋಷಿತ ಸಮಾಜಗಳ ಒಕ್ಕೂಟ.*

ಇಂದಿನಿಂದ 2 ದಿನ CET

ಎಚ್. ಪ್ರಸನ್ನ ಹೇಳಿದ್ದಾರೆ. ಅಭ್ಯರ್ಥಿಯ ಮುಖಚಹರೆ ಮತ್ತು ಪ್ರವೇಶ ಪತ್ರದಲ್ಲಿನ ಕ್ಯೂಆರ್ ಕೋಡ್ ಮೂಲಕ ಅಭ್ಯರ್ಥಿಯ ನೈಜತೆ ಪರಿಶೀಲನೆ ಮಾಡಲಾಗುತ್ತದೆ. ಸೀಟು ಹಂಚಿಕೆಯಾಗಿ ಕಾಲೇಜುಗಳಿಗೆ ಪ್ರವೇಶ ಪಡೆಯುವಾಗಲೂ ಅಭ್ಯರ್ಥಿಯ ಭಾವಚಿತ್ರವನ್ನು ಹೋಲಿಕೆ ಮಾಡಲಾಗುತ್ತದೆ. ನಕಲಿ ಅಭ್ಯರ್ಥಿಗಳಿಗೆ ಕಡಿವಾಣ ಹಾಕಲಾಗಿದೆ ಎಂದು ಪ್ರಸನ್ನ ಹೇಳಿದ್ದಾರೆ.

ಒಂದೂವರೆ ಗಂಟೆ ಮೊದಲು ಹಾಜರ್: ಅಭ್ಯರ್ಥಿಗಳನ್ನು ಪೊಲೀಸರು ತಪಾಸಣೆ ನಡೆಸಿದ ನಂತರವೇ ಪರೀಕ್ಷಾ ಕೇಂದ್ರದ ಒಳಗೆ ಬಿಡಲಾಗುತ್ತದೆ. ಹಾಗಾಗಿ, ಕನಿಷ್ಠ ಒಂದೂವರೆ ಗಂಟೆ ಮುಂಚಿತವಾಗಿ ಪರೀಕ್ಷಾ ಕೇಂದ್ರಕ್ಕೆ ಅಭ್ಯರ್ಥಿಗಳು ಬರಬೇಕು ಎಂದು ಸಲಹೆ ನೀಡಿದ್ದಾರೆ.

ಮೈಸೂರಲ್ಲಿ 38 ಪರೀಕ್ಷಾ ಕೇಂದ್ರ : ಮೈಸೂರು ನಗರದ 38 ಕೇಂದ್ರಗಳಲ್ಲಿ 17,313 ಮಂದಿ ಸಿಇಟಿಗೆ ನೋಂದಣಿ ಮಾಡಿಕೊಂಡಿದ್ದಾರೆ. ಪರೀಕ್ಷೆಗೆ ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆ ತಲುಪಿಸಲು ಜಿಲ್ಲಾಡಳಿತವು ಸರ್ವ ಸಿದ್ಧತೆ ನಡೆಸಿದೆ.

ಪರೀಕ್ಷಾ ಕೇಂದ್ರಗಳಿಗೆ ಅಧಿಕಾರಿಗಳು, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳನ್ನು ಹೊರತುಪಡಿಸಿ ಬೇರೆಯವರು ತೆರಳದಂತೆ ಎಚ್ಚರ ವಹಿಸಿದ್ದು, ಪ್ರತೀ ಕೇಂದ್ರದ ಬಳಿ ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಿ ಭಾರಿ ಭದ್ರತೆ ಒದಗಿಸಲಾಗಿದೆ. ಪರೀಕ್ಷೆಗೆ ವಸ್ತ್ರಸಂಹಿತೆ ಜಾರಿ ಮಾಡಲಾಗಿದ್ದು, ಅಭ್ಯರ್ಥಿಗಳು ಅರ್ಧ ತೋಳಿನ ಶರ್ಟ್ ಗಳನ್ನು ಧರಿಸಬೇಕು. ಕುರ್ತಾ, ಪೈಜಾಮ, ಜೀನ್ಸ್‌ಪ್ಯಾಂಟ್ ಅನ್ನು ನಿಷೇಧಿಸಲಾಗಿದೆ. ಜಿಪ್ ಪ್ಯಾಕೆಟ್, ದೊಡ್ಡ ಬಟನ್‌ಗಳು, ವಿಸ್ತಾರವಾದ ಕಸೂತಿ ಬಟ್ಟೆ ಧರಿಸಬಾರದು. ಷೂ, ಲೋಹದ ಆಭರಣ, ಕಿವಿ ಓಲೆಗಳು, ಉಂಗುರ, ಕಡಗಗಳನ್ನು ಧರಿಸು ವಂತಿಲ್ಲ. ಮಹಿಳಾ ಅಭ್ಯರ್ಥಿಗಳು ಕಸೂತಿ, ಹೂಗಳು, ಬ್ರೂಚ್‌ಗಳು, ಬಟನ್ ಹೊಂದಿರುವ ಬಟ್ಟೆಗಳನ್ನು ಧರಿಸಿ ಬರಬಾರದು. ತೆಳುವಾದ ಅಡಿ ಭಾಗ ಹೊಂದಿರುವ ಚಪ್ಪಲಿಗಳನ್ನು ಮಾತ್ರ ಧರಿಸಬೇಕು. ಮಂಗಳಸೂತ್ರ, ಕಾಲುಂಗುರ ಹೊರತುಪಡಿಸಿ ಬೇರೆ ಆಭರಣ ಧರಿಸುವಂತಿಲ್ಲ.

ಲಾರಿ ಮುಷ್ಕರ ಮುಂದುವರಿಕೆ

ಸಿಎಂ ಸೂಚಿಸಿದ್ದಾರೆ. ಆದರೆ ಲಾರಿ ಮಾಲೀಕರ ಸಂಘ ಮುಷ್ಕರ ಹಿಂಪಡೆಯಲು ಒಪ್ಪದೆ ಮುಷ್ಕರ ಮುಂದುವರೆಸಲು ನಿರ್ಧರಿಸಲಾಗಿದೆ.

ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಲಾರಿ ಮಾಲೀಕರ ಸಂಘದ ಅಧ್ಯಕ್ಷ ಷಣ್ಮುಗಪ್ಪ, ಯಾವುದೇ ಕಾರಣಕ್ಕೂ ಲಾರಿ ಮುಷ್ಕರ ನಿಲ್ಲುವುದಿಲ್ಲ. ನಾವು ತೀರ್ಮಾನ ಮಾಡಿಯಾಗಿದೆ. ಮುಖ್ಯಮಂತ್ರಿಗಳು ಮುಷ್ಕರ ನಿಲ್ಲಿಸುವಂತೆ ಹೇಳಿದರು. ಆದರೆ ನಮ್ಮ ಬೇಡಿಕೆ ಈಡೇರಿಕೆವರೆಗೂ ಮುಷ್ಕರ ಹಿಂಪಡೆಯುವ ಪ್ರಶ್ನೆಯೇ ಇಲ್ಲ ಎಂದು ತಿಳಿಸಿದ್ದಾರೆ.

ಮೈಸೂರಲ್ಲಿ ನಿಂತಲ್ಲೇ ನಿಂತ ಲಾರಿಗಳು: ಮೈಸೂರಿನ 5,000 ಹಾಗೂ ಚಾಮರಾಜನಗರ ಜಿಲ್ಲೆಯ 4,000 ಲಾರಿಗಳು ಇಂದು ರಸ್ತೆಗಿಳಿಯಲಿಲ್ಲ. ಮೈಸೂರು ಜಿಲ್ಲಾ ಲಾರಿ ಮಾಲೀಕರ ಸಂಘದ ಅಧ್ಯಕ್ಷ ಬಿ.ಕೋದಂಡರಾಮು, ಅಬ್ದುಲ್ ಖಾದರ್ ಶಾಹಿದ್ ನೇತೃತ್ವದಲ್ಲಿ ಇಂದು ಬೆಳಗ್ಗೆ ಚಾಮುಂಡಿಬೆಟ್ಟದ ತಪ್ಪಲಿನ ಸಂಘದ ಕಚೇರಿ ಬಳಿ ಲಾರಿಗಳನ್ನು ನಿಲ್ಲಿಸಿ ರಾಜ್ಯ ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸಿದರು.

ಮೈಸೂರಿನ ಮೇಟಗಳ್ಳಿಯಲ್ಲಿರುವ ಮೈಸೂರು ನ್ಯೂ ಗೂಡ್ಸ್ ಟರ್ಮಿನಲ್ (ಎಂಎನ್‌ಜಿಟಿ)ನಲ್ಲಿ 400 ಲಾರಿಗಳನ್ನು ನಿಲುಗಡೆ ಮಾಡಲಾಗಿದ್ದು, ಪರಿಣಾಮ, ರೈಲು ಬೋಗಿಗಳಲ್ಲಿ ಬಂದ ರಸಗೊಬ್ಬರ, ಆಹಾರ ಧಾನ್ಯ, ಸಿಮೆಂಟ್, ಸ್ಟೀಲ್, ಮದ್ಯ ಇತ್ಯಾದಿ ಸಾಮಗ್ರಿಗಳನ್ನು ಅನ್‌ಲೋಡ್ ಮಾಡದೇ ಲಾರಿ ಮಾಲೀಕರು ಪ್ರತಿರೋಧ ವ್ಯಕ್ತಪಡಿಸಿದರು.

ಲಾರಿ ಮುಷ್ಕರದಿಂದಾಗಿ ಹಣ್ಣು, ತರಕಾರಿ, ಮರಳು, ಕಬ್ಬಿಣ, ಸಿಮೆಂಟ್, ಜೆಲ್ಲಿ, ಕಲ್ಲು ಮುಂತಾದ ಕಟ್ಟಡ ಸಾಮಗ್ರಿ ಸಾಗಣೆಗೂ ತೊಂದರೆ ಉಂಟಾಗುವ ಸಾಧ್ಯತೆ ಇದೆ. ಉಳಿದಂತೆ ಕುಡಿಯುವ ನೀರು, ಹಾಲು, ಔಷಧಗಳಂತಹ ಅತ್ಯಗತ್ಯ ವಸ್ತುಗಳ ಸಾಗಣೆಗೆ ಅಡ್ಡಿಯುಂಟಾಗಿಲ್ಲ.

ನಿಧನ



ಮಂಜುಳಾ ಬಿ.ಸಿ.

ಮೈಸೂರು, ಏ. 15– ಮೈಸೂರಿನ ಬಾಸುದೇವ ಸೋಮಾನಿ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕಿಯಾಗಿ ನಿವೃತ್ತರಾಗಿದ್ದ ಮಂಜುಳಾ ಬಿ.ಸಿ. (65) ಬಹು ಅಂಗಾಂಗ ವೈಫಲ್ಯದಿಂದ ಸೋಮವಾರ ರಾತ್ರಿ ಬೆಂಗಳೂರಿನಲ್ಲಿ ನಿಧನರಾದರು. ಮಹಿಳಾ ಸಂಘಟನೆಯಲ್ಲಿ ಕ್ರಿಯಾಶೀಲರಾಗಿದ್ದ ಅವರು ಪತಿ ಬೆಂಗಳೂರು ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ, ಲೇಖಕ ಪ್ರೊ.ರಾಜಪ್ಪ ದಳವಾಯಿ ಹಾಗೂ ಮಗ ಮೇಜರ್ ಭಾರತಿ ನಂದ ಅವರನ್ನು ಅಗಲಿದ್ದಾರೆ. ಇವರು ಮೂಲತಃ ಹಾಸನ ಸಮೀಪದ ಬುಸ್ತೇನಹಳ್ಳಿಯವರು. ಅನೇಕ ವಿಚಾರ ಸಂಕಿರಣಗಳಲ್ಲಿ ಪ್ರಬಂಧಗಳನ್ನು ಮಂಡಿಸಿದ್ದ ಇವರು, ಅನೇಕ ಲೇಖನಗಳನ್ನು ಕೂಡ ಬರೆದಿದ್ದಾರೆ. ಬುಧವಾರ (ಏಪ್ರಿಲ್ 16) ಬೆಳಿಗ್ಗೆ 11 ಗಂಟೆಗೆ ಮೈಸೂರಿನ ಅವರ ಸ್ವಗೃಹದಲ್ಲಿ (ಬೋಗಾದಿ ದಕ್ಷಿಣ ಎರಡನೇ ಹಂತ, ವಾಗ್ದೇವಿನಗರ, ಎಸ್.ಜೆ.ಸಿ.ಇ. ಮುಖ್ಯರಸ್ತೆ) ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ಮಧ್ಯಾಹ್ನ 2 ಗಂಟೆಗೆ ಚಾಮುಂಡಿಬೆಟ್ಟದ ತಪ್ಪಲಿನ ಚಿತಾಗಾರದಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಬಿಚ್ಚು ನುಡಿ

ವಿಕ್ರಂ ಮುತ್ತಣ್ಣ

ನ್ಯಾಯಾಧೀಶರುಗಳ ನಿರ್ಣಯಿಸುವವರ್‍ಯಾರು?



ಇತ್ತೀಚೆಗೆ ದೆಹಲಿ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಯಶ್ವಂತ್ ವರ್ಮ ಅವರ ಮನೆಯ ಔಟ್‌ಹೌಸ್‌ನಲ್ಲಿ ಉಂಟಾದ ಬೆಂಕಿ ಅವಘಡ ಹಾಗೂ ಅದೇ ವೇಳೆ ಅಲ್ಲಿ ಕಂಡು ಬಂದ ಸುಟ್ಟಂತಹ ನೋಟಿನ ಕಂತೆಗಳ ಚಿತ್ರಗಳು ಮತ್ತೊಮ್ಮೆ ನ್ಯಾಯಾಂಗ ಸುಧಾರಣೆ ಅನಿವಾರ್ಯತೆಯೊಂದಿಗೆ, ನಮ್ಮಲ್ಲಿ 2016ರ ಏಪ್ರಿಲ್ 25ರ ಪ್ರಸಂಗವೊಂದನ್ನು ನೆನಪಿಗೆ ತರುತ್ತದೆ.

ಅಂದು, ಭಾರತದ 43ನೇ ಮುಖ್ಯ ನ್ಯಾಯಮೂರ್ತಿಗಳಾಗಿದ್ದ ತಿರತ್ ಸಿಂಗ್ ಠಾಕೂರ್ ಪೊಗಲಿ ಅವರು (ಟಿ.ಎಸ್. ಠಾಕೂರ್) ತಾವು ಕಣ್ಣಾರೆ ಕಂಡಂತಹ ಸಾಂಸ್ಥಿಕ ಅವನತಿ, ಅದರಲ್ಲೂ ನ್ಯಾಯಾಧೀಶರ ನೇಮಕದಲ್ಲಿ ಆಗುತ್ತಿದ್ದ ವಿಳಂಬ ಧೋರಣೆಯನ್ನ ಉಲ್ಲೇಖಿಸಿ ಪ್ರಧಾನಿ ನರೇಂದ್ರ ಮೋದಿ ಅವರ ಮುಂದೆ ಕಣ್ಣೀರಾಕಿದ್ದರು.

ಪಾರದರ್ಶಕವಲ್ಲದ ಕೊಲಿಜಿಯಂ ಪದ್ಧತಿಯ ಬದಲು ರಾಷ್ಟ್ರೀಯ ನ್ಯಾಯಿಕ ನೇಮಕಾತಿ ಆಯೋಗ (National Judicial Appointments Commission-NJAC)ವನ್ನು ಸ್ಥಾಪಿಸುವ ಕೇಂದ್ರ ಸರ್ಕಾರದ ಪ್ರಸ್ತಾವವನ್ನು ಸರ್ವೋಚ್ಚ ನ್ಯಾಯಾಲಯವು ತಿರಸ್ಕರಿಸಿದ ದಿನದಿಂದಲೂ, ಕಾರ್ಯಾಂಗ ಮತ್ತು ನ್ಯಾಯಾಂಗದ ನಡುವಿನ ಸಂಬಂಧಗಳು ಪ್ರಕ್ಷುಬ್ಧವಾಗಿವೆ.

ನ್ಯಾ. ಠಾಕೂರ್ ಅವರ ಭಾವನಾತ್ಮಕ ಕಳಕಳಿ ಮತ್ತು ಮನವಿ ಸ್ಪಷ್ಟವಾಗಿತ್ತು. ಪ್ರಸ್ತಾವಿತ ನ್ಯಾಯಾಧೀಶರ ಬಗ್ಗೆ ವರದಿಯನ್ನು 15 ದಿನಗಳ ಒಳಗಾಗಿ ಸಿದ್ಧಪಡಿಸುವಂತೆ ಗುಪ್ತಚರ ಇಲಾಖೆಗೆ ಪ್ರಧಾನಮಂತ್ರಿ ಕಚೇರಿಯು ನಿರ್ದೇಶಿಸಲು ಸಾಧ್ಯವಿಲ್ಲವೆ ಎಂದು ಅವರು ಪ್ರಶ್ನಿಸಿದ್ದರು.

ನ್ಯಾಯಾಂಗವು, ಬರೀ ಅಪಾರ ಪ್ರಮಾಣದ ಮೊಕದ್ದಮೆಗಳ ಹೊರೆಯಿಂದ ಮಾತ್ರವೇ ಅಲ್ಲದೆ, ನ್ಯಾಯಾಧೀಶರ ಕೊರತೆ ಮತ್ತು ಇನ್ನೂ ದುರವಸ್ಥೆ ಎಂದರೆ ನ್ಯಾಯಾಧೀಶರ ನೇಮಕಾತಿಯಲ್ಲಿನ ವಿಳಂಬದಿಂದ ಜಡಗಟ್ಟಿದಂತಾಗಿದೆ ಎನ್ನಿಸುತ್ತದೆ.

ಆದರೆ ಸಂಖ್ಯೆಗಳು ಮುಖ್ಯವಾಗುವುದಾದರೂ, ಪ್ರಾಮಾಣಿಕತೆ, ಬದ್ಧತೆಯೂ ಅಷ್ಟೇ ಮುಖ್ಯವಾಗುತ್ತದೆ. ಇಲ್ಲಿ ನಾವು ಆಳವಾದ ವ್ಯಾಧಿಯನ್ನು ಗುರುತಿಸಬಹುದು– ಅದು ನ್ಯಾಯಾಂಗದಲ್ಲಿನ ಭ್ರಷ್ಟಾಚಾರ.

ನ್ಯಾ. ಠಾಕೂರ್, ಪ್ರಕರಣಗಳು ಇತ್ಯರ್ಥವಾಗದೇ ಬಾಕಿ ಉಳಿದಿರುವ ಬಗ್ಗೆ ಕಣ್ಣೀರು ಹಾಕಿರಬಹುದು. ಆದರೆ ಅವರು ಇನ್ನೂ ಹೆಚ್ಚಿನದಾಗಿ ಪ್ರಾಮಾಣಿಕತೆ ಮತ್ತು ಬದ್ಧತೆಯ ಬಗ್ಗೆ ದುಃಖಿತರಾಗಬೇಕಿತ್ತು.

ಹಿಂದೊಮ್ಮೆ ಪ್ರಧಾನಮಂತ್ರಿಗಳು, ನ್ಯಾಯಾಂಗವು ಹೆಚ್ಚು ಬಲಿಷ್ಠವಾಗುತ್ತಿದೆ. ಹಾಗಾಗಿ ಅದು ಸಾರ್ವಜನಿಕರ ನಿರೀಕ್ಷೆಗಳಿಗೆ ತಕ್ಕಂತೆ ಕಾರ್ಯನಿರ್ವಹಿಸಬೇಕು ಎಂದು ಹೇಳುವ ಮೂಲಕ, ಸ್ಪಷ್ಟ ಸಂದೇಶವೊಂದನ್ನು ನೀಡಿದ್ದರು.

ಇಂದು ಅನೇಕರಲ್ಲಿ, ನ್ಯಾಯಾಲಯಗಳು ಸಾಕ್ಷಾತ್ ನ್ಯಾಯ ದೇಗುಲಗಳಾಗಿ ಉಳಿದಿಲ್ಲ. ಬದಲಾಗಿ ನಾನಾ ಕಾರ್ಯತಂತ್ರದ ಅಂಗಳಗಳಾಗಿ ಕಾಣುತ್ತಿವೆ. ಭೂ ವಿವಾದಗಳಿಂದ ಹಿಡಿದು ಸುಳ್ಳು ವರದಕ್ಷಿಣೆ ಪ್ರಕರಣಗಳವರೆಗೆ ನ್ಯಾಯಾಲಯಗಳ ಕಲಾಪಗಳನ್ನು ಕಿರುಕುಳ ನೀಡಲು, ವಿಳಂಬಿಸಲು ಹಾಗೂ ಬ್ಲ್ಯಾಕ್‌ಮೇಲ್ ಮಾಡುವ ಸಲುವಾಗಿ ಬಳಸಲಾಗುತ್ತಿದೆ. ನ್ಯಾಯ ನಿರ್ಣಯ ಬರೀ ವಿಳಂಬವಾಗುತ್ತಿಲ್ಲ. ಬಹಳಷ್ಟು ಸಂದರ್ಭಗಳಲ್ಲಿ ಹಿಂಸೆಗೂ ನಾಂದಿಯಾಗುತ್ತಿದೆ.

> **ಇಂದು ಅನೇಕರಲ್ಲಿ, ನ್ಯಾಯಾಲಯಗಳು ಸಾಕ್ಷಾತ್ ನ್ಯಾಯ ದೇಗುಲಗಳಾಗಿ ಉಳಿದಿಲ್ಲ. ಬದಲಾಗಿ ನಾನಾ ಕಾರ್ಯತಂತ್ರದ ಅಂಗಳಗಳಾಗಿ ಕಾಣುತ್ತಿವೆ. ಭೂ ವಿವಾದಗಳಿಂದ ಹಿಡಿದು ಸುಳ್ಳು ವರದಕ್ಷಿಣೆ ಪ್ರಕರಣಗಳವರೆಗೆ ನ್ಯಾಯಾಲಯಗಳ ಕಲಾಪಗಳನ್ನು ಕಿರುಕುಳ ನೀಡಲು, ವಿಳಂಬಿಸಲು ಹಾಗೂ ಬ್ಲ್ಯಾಕ್‌ಮೇಲ್ ಮಾಡುವ ಸಲುವಾಗಿ ಬಳಸಲಾಗುತ್ತಿದೆ. ನ್ಯಾಯ ನಿರ್ಣಯ ಬರೀ ವಿಳಂಬವಾಗುತ್ತಿಲ್ಲ. ಬಹಳಷ್ಟು ಸಂದರ್ಭಗಳಲ್ಲಿ ಹಿಂಸೆಗೂ ನಾಂದಿಯಾಗುತ್ತಿದೆ.**

ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳ ಹೊರತಾಗಿಯೂ ಉಚ್ಚ ನ್ಯಾಯಾಲಯಗಳು ಸುಳ್ಳು ಹಾಗೂ ಕ್ಷುಲ್ಲಕ ಪ್ರಕರಣಗಳನ್ನು ತಿರಸ್ಕರಿಸುವಲ್ಲಿ ವಿಫಲವಾಗುತ್ತಿವೆ. ಬಹುಶಃ ನ್ಯಾಯಾಲಯದ ಸಮರ್ಪಕವಲ್ಲದ ತೀರ್ಪುಗಳ ಪರಿಣಾಮಗಳ ಬಗ್ಗೆ ಪರಿವೆಯೇ ಇಲ್ಲವಾಗಿದೆ. ಅಷ್ಟಕ್ಕೂ, ನ್ಯಾಯಾಧೀಶರ ಬಗ್ಗೆ ನಿರ್ಣಯಿಸುವವರು ಯಾರು?

ನ್ಯಾಯಾಧೀಶರೂ ಇತರರಂತೆಯೇ ಸಾಮಾನ್ಯ ಮನುಷ್ಯರೇ ಆಗಿದ್ದು, ಅವರೂ ಆಮಿಷಗಳಿಗೆ ಒಳಗಾಗಬಹುದು. ಆದರೆ, ಅವರೂ ಅಂತಿಮ ಪರಿಣಾಮವಾಗಿ ಶಿಕ್ಷೆಗೆ ಸ್ಪಂದಿಸುತ್ತಾರೆ. ದುರದೃಷ್ಟವಶಾತ್, ನ್ಯಾಯಾಂಗವು ಒಂದು ಭದ್ರಕೋಟೆಯಾಗಿದ್ದು, ಇಲ್ಲಿ ನ್ಯಾಯಾಧೀಶರ ಗಂಭೀರ ಪ್ರಮಾದವೂ, ಯಾರಿಗೂ ಅರಿವಿರದಂತಹ ಪ್ರಕ್ರಿಯೆಗಳಡಿ, ಒಳಗೊಳಗೆ ಮೌನವಾಗಿ ಎಲ್ಲವೂ ಮುಗಿದು ಹೋಗುತ್ತದೆ.

ಕೊಲ್ಕತ್ತಾ ಉಚ್ಚನ್ಯಾಯಾಲಯದ ನ್ಯಾ. ಸೌಮಿತ್ರ ಸೇನ್ ಅವರ ಪ್ರಕರಣವನ್ನೇ ತೆಗೆದುಕೊಳ್ಳಿ. ನ್ಯಾಯಾಲಯವು ನೇಮಿಸಿದ ವ್ಯಕ್ತಿಗೆ ಸೇರಬೇಕಾದ 33 ಲಕ್ಷ ರೂ.ಹಣವನ್ನು ಬೇರೆಡೆಗೆ ವರ್ಗಾಯಿಸಿದ್ದರು. ಆದರೆ ಅವರ ಮೇಲೆ ಈ ಆರೋಪಗಳು ಇದ್ದಾಗಿಯೂ ಅವರನ್ನು ನ್ಯಾಯಮೂರ್ತಿಯಾಗಿ ಬಡ್ತಿ ನೀಡಲಾಗಿತ್ತು.

ಮತ್ತೆ ಪಂಜಾಬ್ ಮತ್ತು ಹರಿಯಾಣ ಉಚ್ಚ ನ್ಯಾಯಾಲಯ ನ್ಯಾಯಮೂರ್ತಿ ನಿರ್ಮಲ್ ಯಾದವ್ ಅವರಿಗೆ ಸಂಬಂಧಿಸಿದ ಪ್ರಕರಣವನ್ನು ತೆಗೆದುಕೊಳ್ಳಿ. 2008ರಲ್ಲಿ ಕೊರಿಯರ್ ಮೂಲಕ 15 ಲಕ್ಷ ರೂ. ನಗದು ಹಣ ಮತ್ತೊಬ್ಬ ನ್ಯಾಯಾಧೀಶರಿಗೆ ತಲುಪಿತ್ತು. ಇದು ನಿರ್ಮಲ್ ಯಾದವ್ ಅವರಿಗೆ ತಲುಪಬೇಕಿದ್ದ ಹಣ ಎಂದು ನಂತರ ಆರೋಪಿಸಲಾಗಿತ್ತು. ಆದರೆ ಇದಕ್ಕೆ ಆದ ಶಿಕ್ಷೆಯಾದರೂ ಏನು ಗೊತ್ತೆ? ಉತ್ತರಖಂಡ ಹೈಕೋರ್ಟ್‌ಗೆ ಅವರ ವರ್ಗಾವಣೆ. ವಿಚಾರಣೆಗೆ ಅನುಮತಿ ನೀಡುವ ವೇಳೆಗೆ ಅವರ ನಿವೃತ್ತಿಯ ದಿನವೇ ಬಂತು. ಆ ವೇಳೆಗಾಗಲೇ ಪ್ರಕರಣವು ಗಂಭೀರತೆಯನ್ನು ಕಳೆದುಕೊಂಡಿತ್ತು.

ಕುತೂಹಲಕಾರಿ ಸಂಗತಿ ಎಂದರೆ, 17 ವರ್ಷಗಳ ನಂತರ ಈ ಪ್ರಕರಣದ ಅಂತಿಮ ತೀರ್ಪು 2025ರ ಮಾರ್ಚ್ 29ರಂದು ಪ್ರಕಟಗೊಂಡು, ಅವರನ್ನು ದೋಷಮುಕ್ತಗೊಳಿಸಲಾಗಿದೆ!

ಉಚ್ಚ ನ್ಯಾಯಾಲಯ ಮತ್ತು ಸುಪ್ರೀಂ ಕೋರ್ಟ್‌ನ ವಿವಿಧ ನ್ಯಾಯಮೂರ್ತಿಗಳ ವಿರುದ್ಧ ನಾಲ್ಕು ಬಾರಿ ಮಹಾಭಿಯೋಗ ವಿಧಿಸುವುದಕ್ಕೆ (Impeachment) ಪ್ರಸ್ತಾಪಿಸಲಾಗಿತ್ತಾದರೂ, ಸ್ವಾತಂತ್ರ್ಯಾನಂತರದಲ್ಲಿ ಯಾವ ನ್ಯಾಯಾಧೀಶರೂ ಈ ಒಂದು ಪ್ರಕ್ರಿಯೆಗೆ ಒಳಗಾಗಿಲ್ಲ.

ಈಗಲೂ ಆಪಾದನೆಗಳನ್ನು ಎದುರಿಸುತ್ತಿರುವ ನ್ಯಾ.ವರ್ಮಾ ಅವರನ್ನು ಸದ್ದಿಲ್ಲದೆ ಅವರ ಮೂಲ ಸ್ಥಾನ, ಅಲಹಾಬಾದ್ ಉಚ್ಚ ನ್ಯಾಯಾಲಯಕ್ಕೆ ವರ್ಗಾವಣೆ ಮಾಡಲಾಗಿದೆ. ಆರೋಪಕ್ಕೆ ಸಂಬಂಧಿಸಿದಂತೆ ಒಂದು ತನಿಖಾ ಸಮಿತಿಯನ್ನು ರಚಿಸಲಾಗಿದೆ. ಅದು ತನ್ನದೇ ಕಾಲಮಿತಿಯನ್ನು ಹಾಕಿಕೊಂಡಿರಬಹುದು.

ನ್ಯಾಯಾಧೀಶರೊಬ್ಬರ ಬಗ್ಗೆ ನ್ಯಾಯ ನಿರ್ಣಯ ಮಾಡುವುದು ಒಂದು ಸುದೀರ್ಘ ಹಾಗೂ ಸಂಕೀರ್ಣ ಪ್ರಕ್ರಿಯೆಯಾಗಿದ್ದು, ಈ ವಿಚಾರವಾಗಿ ಎರಡು ಮಾರ್ಗಗಳಲ್ಲಿ ಮುಂದುವರೆಯಲು ಸಾಧ್ಯವಾದೀತು.

ಮೊದಲನೆಯದು ನ್ಯಾಯಾಂಗವೇ ಆಂತರಿಕ ತನಿಖೆಯನ್ನು ಮಾಡುವುದು. ಇಂತಹ ತನಿಖಾ ದಾಖಲೆಗಳನ್ನು ಮುಚ್ಚಿದ ಲಕೋಟೆಯಲ್ಲಿ ಇರಿಸಲಾಗುತ್ತದೆ.

ಈ ರೀತಿಯ ತನಿಖೆಯಲ್ಲಿ ನ್ಯಾಯಾಧೀಶರನ್ನು ಸುದೀರ್ಘ ಕಾಲ ರಜೆಯ ಮೇಲೆ ವಿಶ್ರಾಂತಿ ನೀಡಬಹುದು ಇಲ್ಲವೇ ರಾಜೀನಾಮೆ ನೀಡುವಂತೆ ಒತ್ತಾಯಿಸಬಹುದು. ಇದು ವಾಸ್ತವವಾಗಿ ಶಿಕ್ಷೆಯಾಗಲಾರದು ಅಲ್ಲವೇ?

ಎರಡನೆಯ ಮಾರ್ಗ ಎಂದರೆ, ಸಂಸತ್ತಿನಲ್ಲಿ ಮಹಾಭಿಯೋಗಕ್ಕೆ ಗುರಿಪಡಿಸುವುದು. ಇದಕ್ಕೆ ಸಂಸತ್‌ನ ಉಭಯ ಸದನಗಳಲ್ಲಿ ಮೂರನೆ ಎರಡರಷ್ಟು ಬಹುಮತದ ಅವಶ್ಯಕತೆ ಇರುತ್ತದೆ. ಇಷ್ಟೇ ಸಂಖ್ಯೆ ಸಂವಿಧಾನ ತಿದ್ದುಪಡಿಗೂ ಅವಶ್ಯವಿದೆ!

ಇದರ ಬಗ್ಗೆ ನೀವು ಸುಮ್ಮನೆ ಯೋಚಿಸಿದರೆ, ಭ್ರಷ್ಟ ನ್ಯಾಯಾಧೀಶರನ್ನು ತೆಗೆದು ಹಾಕುವುದು ಸಂವಿಧಾನ ತಿದ್ದುಪಡಿ ಮಾಡಿದಷ್ಟೇ ತ್ರಾಸದಾಯಕವಾದದ್ದು. ಅಬ್ಬಾ!

ಇತರ ಪ್ರಜೆಗಳಿಗಿಂತಲೂ ಭಿನ್ನವಾಗಿ, ನ್ಯಾಯಾಧೀಶರು ನ್ಯಾಯಾಂಗ ವಿಚಾರಣೆಯಿಂದ ವಿನಾಯಿತಿ ಪಡೆದಿರುತ್ತಾರೆ. ಭಾರತದ ಮುಖ್ಯ ನ್ಯಾಯಮೂರ್ತಿಯವರ ಅನುಮತಿ ಇಲ್ಲದೆ ಹಾಲಿ ನ್ಯಾಯಾಧೀಶರ ವಿರುದ್ಧ ಒಂದು ಎಫ್‌ಐಆರ್ ಸಹ ದಾಖಲಿಸಲಾಗುವುದಿಲ್ಲ.

ಈ ಗೌಪ್ಯತೆಯ ಹೊದಿಕೆ ನ್ಯಾಯಾಧೀಶರನ್ನು ಮಹಾ ನಾಗರಿಕರನ್ನಾಗಿ ಮಾಡಿಬಿಟ್ಟಿದೆ. ಉತ್ತರದಾಯಿತ್ವವೇ ಇಲ್ಲವಾದಾಗ ಸಾರ್ವಜನಿಕರ ವಿಶ್ವಾಸವೂ ಕ್ಷೀಣಿಸುತ್ತದೆ.

ಟಿಎಂಸಿ ಸಂಸದೆ ಮಹುವಾ ಮೊಯಿತ್ರಾ ಅವರಂತಹ ಕೆಲವು ಸಂಸದರು, ಈಗ ಬಹಿರಂಗವಾಗಿರುವ ನ್ಯಾ.ವರ್ಮಾ ಅವರ ಹಗರಣವು, ಎನ್‌ಜೆಎಸಿ ಪದ್ಧತಿಯನ್ನು ಜಾರಿಗೊಳಿಸುವ ಹುನ್ನಾರದ ಒಂದು ಭಾಗ ಎಂದು ಹೇಳುತ್ತಾರೆ.

ಇಲ್ಲಿ ಪಿತೂರಿ ಇದೆಯೋ ಇಲ್ಲವೋ ಬೇರೆ ಮಾತು. ಆದರೆ, ಕೊಲಿಜಿಯಂ ಪದ್ಧತಿಯು ನ್ಯಾಯಾಂಗವನ್ನು ಪರಿಶುದ್ಧವಾಗಿರಿಸುವುದರಲ್ಲಿ ವಿಫಲವಾಗಿದೆ ಎಂಬ ವಾಸ್ತವವನ್ನು ಅಲ್ಲಗಳೆಯಲಾಗದು.

ಎನ್‌ಜೆಎಸಿ ಪ್ರಸ್ತಾಪವು ತನ್ನೆಲ್ಲಾ ಕೊರತೆಗಳ ಹೊರತಾಗಿಯೂ, ಕನಿಷ್ಠ ಪಕ್ಷ ಎಲ್ಲರನ್ನೂ ಒಳಗೊಳ್ಳುವ ಆಯ್ಕೆ ಸಮಿತಿಯನ್ನು ಹೊಂದಿರುವಂತಿದೆ. ಈ ಸಮಿತಿಯಲ್ಲಿ ಮುಖ್ಯ ನ್ಯಾಯಾಧೀಶರು, ಪ್ರಧಾನ ಮಂತ್ರಿ, ಕೇಂದ್ರ ಗೃಹ ಸಚಿವರು ಮತ್ತು ವಿರೋಧ ಪಕ್ಷದ ನಾಯಕರು ಪ್ರಮುಖ ಪಾತ್ರ ವಹಿಸುತ್ತಾರೆ. ಇದನ್ನೇಕೆ ಪ್ರಾಯೋಗಿಕವಾಗಿ ಜಾರಿಗೊಳಿಸಿ, ಚರ್ಚೆ ನಡೆಸಬಾರದು. ನಮ್ಮ ಸಂಸತ್ತು ಇರುವುದು ಇನ್ನೇತಕ್ಕೆ?

ನ್ಯಾ.ಟಿ.ಎಸ್.ಠಾಕೂರ್ ಹಿಂದೊಮ್ಮೆ "ನ್ಯಾಯಾಂಗ ಇರುವವರೆಗೂ ಜನರಿಗೆ ಯಾವುದೇ ಭಯಬೇಕಿಲ್ಲ" ಎಂದು ಹೇಳಿದ್ದರು. ಆದರೆ, ಇದು ಸತ್ಯ ಎನಿಸಬೇಕಾದರೆ ನ್ಯಾಯಾಂಗವೂ ಭಯಮುಕ್ತವಾಗಿರಬೇಕು. ಜೊತೆಗೆ ಯಾವುದೇ ಪಕ್ಷಪಾತಗಳಿಲ್ಲದೆ, ಎಲ್ಲ ಪೂರ್ವಾಗ್ರಹ ಪೀಡನೆಯಿಂದ ಹೊರತಾಗಿರಬೇಕು.

ಮತ್ತೆ, ನ್ಯಾಯಾಂಗವು ಸಾರ್ವಜನಿಕರ ವಿಶ್ವಾಸವನ್ನು ಉಳಿಸಿಕೊಳ್ಳಬೇಕಾದರೆ, ಅದು ಕೇವಲ ನ್ಯಾಯ ವಿಲೇವಾರಿ ಮಾಡುವುದಷ್ಟೇ ಅಲ್ಲ, ಅದನ್ನು ತನ್ನೊಳಗೆ ಆವಾಹಿಸಿಕೊಂಡಂತಿರಬೇಕು.

ಯಾರು ತೀರ್ಪನ್ನು ಘೋಷಿಸುವರೋ ಅವರೂ ಒಳಗೊಂಡಂತೆ ಯಾರೊಬ್ಬರು ಕಾನೂನಿನಿಗಿಂತ ಮೇಲ್ಪಟ್ಟವರಲ್ಲ.

e-mail:
vikram@starofmysore.com

ಹೈದರಾಲಿ ರಸ್ತೆಯಲ್ಲಿ ಮರಗಳ ಮಾರಣಹೋಮ ಪ್ರಕರಣ

ಮರ ಕಡಿಯಲು ಅನುಮತಿ ನೀಡಿದ ಅರಣ್ಯ ಇಲಾಖೆ ವಿರುದ್ಧ ಗಂಧದಗುಡಿ ಫೌಂಡೇಶನ್ ಕಾರ್ಯಕರ್ತರ ಆಕ್ರೋಶ



ರಸ್ತೆ ಅಗಲೀಕರಣಕ್ಕೆ ಮರ ಕಡಿದಿರುವುದನ್ನು ಖಂಡಿಸಿ ಗಂಧದಗುಡಿ ಫೌಂಡೇಶನ್ ಕಾರ್ಯಕರ್ತರು ಹೈದರಾಲಿ ರಸ್ತೆಯಲ್ಲಿ ಪ್ರತಿಭಟನೆ ನಡೆಸಿದರು.

> ಹೈದರಾಲಿ ರಸ್ತೆ ಅಗಲೀಕರಣಕ್ಕಾಗಿ 40ಕ್ಕೂ ಹೆಚ್ಚು ಮರ ಕಡಿದಿರುವುದು ಖಂಡನೀಯ. ಮರ ಉಳಿಸಿಕೊಂಡು ರಸ್ತೆ ಅಭಿವೃದ್ಧಿ ಮಾಡಬಹುದಾಗಿತ್ತು. ಅವೈಜ್ಞಾನಿಕ ಕ್ರಮದಿಂದ ಮರ ಕಡಿಯಲಾಗಿದೆ. ಇದರಿಂದ ಮುಂದಿನ ದಿನಗಳಲ್ಲಿ ಪರಿಸರದ ಮೇಲೆ ದುಷ್ಪರಿಣಾಮ ಬೀರುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ಗಿಡ–ಮರಗಳ ಸಂರಕ್ಷಣೆಗೆ ಆದ್ಯತೆ ನೀಡಬೇಕು.
>
> –ಸಂದೇಶ್‌ಸ್ವಾಮಿ, ಮಾಜಿ ಮೇಯರ್

ಮೈಸೂರು, ಏ.15(ಎಂಟಿವೈ)– ರಸ್ತೆ ಅಗಲೀಕರಣದ ನೆಪದಲ್ಲಿ 40ಕ್ಕೂ ಹೆಚ್ಚು ಮರಗಳ ಹನನ ಖಂಡಿಸಿ, ಗಂಧದಗುಡಿ ಫೌಂಡೇಶನ್ ಕಾರ್ಯಕರ್ತರು ಪ್ರತಿಭಟನಾ ಮೆರವಣಿಗೆ ನಡೆಸಿದರು.

ಮೈಸೂರಿನ ಹೈದರಾಲಿ ರಸ್ತೆಯಲ್ಲಿ ಎಸ್ಪಿ ಕಚೇರಿ ವೃತ್ತದಿಂದ ಕಾಳಿಕಾಂಭ ದೇವಾಲಯದವರೆಗೂ ಮೆರವಣಿಗೆ ನಡೆಸಿ, ರಸ್ತೆಯ ಎರಡೂ ಬದಿಯಲ್ಲಿದ್ದ 40ಕ್ಕೂ ಹೆಚ್ಚು ಮರ ಕಡಿದಿರುವ ಕ್ರಮವನ್ನು ತೀವ್ರವಾಗಿ ಖಂಡಿಸಿದರು.

ಹೈದರಾಲಿ ರಸ್ತೆಯಲ್ಲಿ ಹೆಚ್ಚಿನ ವಾಹನಗಳ ಸಂಚಾರಕ್ಕೆ ವ್ಯವಸ್ಥೆ ಮಾಡಲು ಅಗತ್ಯವಾದ ಜಾಗ ಲಭ್ಯವಿತ್ತು. ಅಗಲೀಕರಣದ ಅವಶ್ಯಕತೆ ಇರಲಿಲ್ಲ. ಆದರೂ ಮೈಸೂರು ಮಹಾನಗರ ಪಾಲಿಕೆಯ ಅವೈಜ್ಞಾನಿಕ ನಿರ್ಧಾರಕ್ಕೆ ಅರಣ್ಯ ಇಲಾಖೆ ಮರ ಕಡಿಯಲು ಅನುಮತಿ ನೀಡಿದೆ. ಇದರಿಂದ ರಸ್ತೆಯ ಎರಡೂ ಬದಿಯಲ್ಲಿರುವ ಮರಗಳನ್ನು ಕಡಿಯಲಾಗಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ರಸ್ತೆ ಅಗಲೀಕರಣಕ್ಕಾಗಿ ಕಡಿದಿರುವ ಮರಗಳು 40–50 ವರ್ಷ ಹಳೆಯ ಮರಗಳಾಗಿದ್ದು, ಮೈಸೂರಿನ ವಾತಾವರಣ ತಂಪಾಗಿಸಲು ಅತ್ಯಮೂಲ್ಯ ಕೊಡುಗೆ ನೀಡುತ್ತಿದ್ದವು. ಅಲ್ಲದೆ, ಅಪಾರ ಸಂಖ್ಯೆಯ ಪಕ್ಷಿಗಳಿಗೂ ನೆಲೆ ಒದಗಿಸಿದ್ದವು. ಇವುಗಳ ಪರಿವೇ ಇಲ್ಲದೇ ರಾತ್ರೋರಾತ್ರಿ ಮರ ಕಡಿದಿರುವುದು ಅಕ್ಷಮ್ಯ ಅಪರಾಧ. ಅರಣ್ಯ ಇಲಾಖೆ ಇಂತಹ ದೊಡ್ಡ ಮರಗಳ ಹನನಕ್ಕೆ ಅನುಮತಿ ನೀಡಿರುವುದು ಸರಿಯಲ್ಲ ಎಂದು ಕಿಡಿಕಾರಿದರು.

ಪರಿಸರದಲ್ಲಿ ಸಮತೋಲನ ಕಾಪಾಡಿಕೊಳ್ಳಲು ಹಾಗೂ ಪರಿಸರ ಮಾಲಿನ್ಯ ತಡೆಗೆ ಮರಗಳ ಸಂರಕ್ಷಣೆಗೆ ಮಹತ್ವ ಪಡೆದಿರುವುದು ಎಲ್ಲರಿಗೂ ಗೊತ್ತಿದ್ದರೂ, ಸರ್ಕಾರದ ಇಲಾಖೆಗಳೇ ಮರಗಳ ಸಾಮೂಹಿಕ ಮಾರಣಹೋಮ ನಡೆಸಿರುವುದು ತಲೆತಗ್ಗಿಸುವ ವಿಚಾರ. ಈ ಹಿನ್ನೆಲೆಯಲ್ಲಿ ಮರಗಳ ಹನನ ಪ್ರಕರಣ ಮರುಕಳಿಸದಂತೆ ಕಟ್ಟೆಚ್ಚರ ವಹಿಸಬೇಕು. ಅರಣ್ಯ ಇಲಾಖೆ ಯಾವುದೇ ಕಾರಣಕ್ಕೂ ಮರಗಳ ಹನನಕ್ಕೆ ಅನುಮತಿ ನೀಡಬಾರದು. ಕಡಿದಿರುವ ಮರಕ್ಕೆ ಪ್ರತಿಯಾಗಿ ಹೈದರಾಲಿ ರಸ್ತೆಯಲ್ಲಿ ಗಿಡ ನೆಟ್ಟು ಪೋಷಿಸಲು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಮಾಜಿ ಮೇಯರ್ ಸಂದೇಶ್ ಸ್ವಾಮಿ, ಗಂಧದಗುಡಿ ಫೌಂಡೇಶನ್ ರಾಜ್ಯಾಧ್ಯಕ್ಷ ಆರ್ಯನ್ ಗಂಧದಗುಡಿ, ಉಪಾಧ್ಯಕ್ಷ ಮನೋಹರ್‌ಗೌಡ, ಯಶೋಧ, ಧನಂಜಯ, ವಿಲಿಯಂ ಸೇರಿದಂತೆ ಹಲವು ಮಂದಿ ಪಾಲ್ಗೊಂಡಿದ್ದರು.

ಪಿಎಚ್.ಡಿ ಪಡೆದ ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜ್‌ಗೆ ಸನ್ಮಾನ...



ಇತ್ತೀಚೆಗೆ ಪಿಎಚ್‌ಡಿ ಪಡೆದ ಮೈಸೂರು ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜ್ ಅವರನ್ನು ಲಾಗೈಡ್ ಬಳಗದ ವತಿಯಿಂದ ಆತ್ಮೀಯವಾಗಿ ಗೌರವಿಸಲಾಯಿತು. ಲಾಗೈಡ್ ಕನ್ನಡ ಕಾನೂನು ಮಾಸಪತ್ರಿಕೆ ಗೌರವ ಸಂಪಾದಕರೂ ಆದ ಹಿರಿಯ ವಕೀಲ ಎಚ್.ಎನ್.ವೆಂಕಟೇಶ್ ಅವರು ನೆನಪಿನ ಕಾಣಿಕೆ ನೀಡಿ, ಶಾಲು, ಮೈಸೂರು ಪೇಟ ತೊಡಿಸಿ ಗೌರವಿಸಿದರು. ಈ ವೇಳೆ ಹಿರಿಯ ವಕೀಲರಾದ ಎಂ.ಡಿ.ಹರೀಶ್‌ಕುಮಾರ್ ಹೆಗ್ಡೆ, ಕೆಎಎಸ್ ಅಧಿಕಾರಿ ವಿ.ಆರ್.ಶೈಲಜಾ, ಉದ್ಯಮಿ ಅಭಿಷೇಕ್ ಹೆಗ್ಡೆ, ವಕೀಲರಾದ ಜೈ ಶಂಕರ್, ಬಿಜೆಪಿ ಮುಖಂಡರಾದ ಶಂಭು, ಮನು ಶೈವ ಉಪಸ್ಥಿತರಿದ್ದರು.

ಕೃಷಿ ಅಧಿಕಾರಿಗಳ ದಾಳಿ; ಅನಧಿಕೃತ ಸಾಮಗ್ರಿಗಳ ವಶ



ಮೈಸೂರಿನ ರಾಮಕೃಷ್ಣನಗರದ ನಿವಾಸವೊಂದರಲ್ಲಿ ಅನಧಿಕೃತವಾಗಿ ದಾಸ್ತಾನಿಟ್ಟಿದ್ದ ಸುಮಾರು 267 ಲೀಟರ್ ಪ್ರಮಾಣದ ಜೈವಿಕ ಪೀಡೆನಾಶಕ, ಜೈವಿಕ ಗೊಬ್ಬರಗಳನ್ನು ಸಹಾಯಕ ಕೃಷಿ ನಿರ್ದೇಶಕ ಬಿ.ಡಿ.ಜಯರಾಮು, ಕೃಷಿ ಅಧಿಕಾರಿಗಳಾದ ವಿರೂಪಾಕ್ಷ, ಜೀವನ್, ರವಿಕುಮಾರ್ ದಾಳಿ ನಡೆಸಿ ವಶಪಡಿಸಿಕೊಂಡರು.

ಕಾಲೇಜುಗಳಲ್ಲಿ ಹೊರಗುತ್ತಿಗೆ ನೇಮಕಾತಿ ವಿರೋಧಿಸಿ ಪ್ರತಿಭಟನೆ




ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಇಲಾಖೆ ಕಾಲೇಜುಗಳ ಕಾರ್ಮಿಕರ ಸಂಘದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರು,ಏ.15(ಎಂಟಿವೈ)– ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸಿಡಿಸಿ ಹೆಸರಿನಲ್ಲಿ ಕೆಲಸ ಮಾಡುವ ಕಾರ್ಮಿಕರನ್ನು ಸೇವಾ ಹಿರಿತನದ ಮೇಲೆ ಹೊರಗುತ್ತಿಗೆ ಮೂಲಕ ನೇಮಕ ಮಾಡಿಕೊಂಡು, ಕೆಲಸ ಮಾಡದೆ ಇರುವ ಹೊರಗಿನ ವ್ಯಕ್ತಿಗಳ ನೇಮಕ ತಿರಸ್ಕರಿಸಬೇಕೆಂದು ಒತ್ತಾಯಿಸಿ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಇಲಾಖೆ ಕಾಲೇಜುಗಳ ಕಾರ್ಮಿಕರ ಸಂಘದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರಿನ ವಿನೋಬಾ ರಸ್ತೆಯಲ್ಲಿರುವ ಕಾಲೇಜು ಶಿಕ್ಷಣ ಇಲಾಖೆ ಕಚೇರಿ ಬಳಿ ಪ್ರತಿಭಟನೆ ನಡೆಸಿ, ಸರ್ಕಾರ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ಹೊರಗುತ್ತಿಗೆ ಮೂಲಕ ನೇಮಕ ಮಾಡಿಕೊಳ್ಳಲು ಜಮಿನಿ ಸೆಕ್ಯೂರಿಟಿ ಸರ್ವಿಸಸ್‌ಗೆ ಗುತ್ತಿಗೆ ನೀಡಿದೆ. ಗುತ್ತಿಗೆದಾರರು ರಾಜ್ಯದ ಎಲ್ಲಾ ಪ್ರಾಂಶುಪಾಲರುಗಳಿಗೆ ಇ–ಮೇಲ್ ಮೂಲಕ ಕಾಲೇಜಿಗೆ ಮಂಜೂರಾಗಿರುವ ಹುದ್ದೆಗಳ ಸಂಖ್ಯೆಗಳ ವಿವರದೊಂದಿಗೆ ಪತ್ರ ಕಳುಹಿಸಿ, ಕಾಲೇಜುಗಳಲ್ಲಿ ಈಗಾಗಲೇ ಕೆಲಸ ಮಾಡುತ್ತಿರುವ ಎಸ್‌ಎಸ್‌ಎಲ್‌ಸಿ ಪಾಸ್ ಆಗಿರುವ ಸಿಡಿಸಿ ಕಾರ್ಮಿಕರ ಪಟ್ಟಿ ನೀಡುವಂತೆ ಕೇಳಿದೆ. ಪ್ರಾಂಶುಪಾಲರು ಗುತ್ತಿಗೆದಾರನ ಇಚ್ಛಾನುಸಾರ ನೇಮಕ ಮಾಡಲು ಅನುಮತಿ ನೀಡಿದ್ದಾರೆ. ಇದರ ಲಾಭ ಪಡೆದು ಗುತ್ತಿಗೆದಾರರು ಎಸ್‌ಎಸ್‌ಎಲ್‌ಸಿ ಪಾಸಾದ ಕಾರ್ಮಿಕರು ಲಭ್ಯವಿಲ್ಲದ ಕಾಲೇಜುಗಳಿಗೆ ಹೊರಗಿನ ವ್ಯಕ್ತಿಗಳನ್ನು ನೇಮಕ ಮಾಡಿಕೊಳ್ಳುತ್ತಿದ್ದಾರೆ. ಕೆಲವು ಸಿಡಿಸಿ ಕಾರ್ಮಿಕರು ಗುತ್ತಿಗೆದಾರರ ಮೇಲ್ವಿಚಾರಕರೊಂದಿಗೆ ಸೇರಿಕೊಂಡು ಕಾರ್ಮಿಕರಿಂದ ಹಣ ವಸೂಲಿ ಮಾಡಿ ನೇಮಕಾತಿ ಪತ್ರ ಪಡೆದುಕೊಂಡಿದ್ದಾರೆ. ಇದರಿಂದ ಕಳೆದ ಹತ್ತು ಹದಿನೈದು ವರ್ಷಗಳಿಂದ ಕನಿಷ್ಠ ವೇತನವೂ ಇಲ್ಲದೆ ಇಲಾಖೆಗೆ ಪ್ರಾಮಾಣಿಕವಾಗಿ ಸೇವೆ ಸಲ್ಲಿಸಿದ ಕಾರ್ಮಿಕರಿಗೆ ಅನ್ಯಾಯ ಮಾಡಿದಂತಾಗುತ್ತದೆ ಎಂದು ಕಿಡಿಕಾರಿದರು. ಪ್ರತಿಭಟನೆಯಲ್ಲಿ ರಾಜ್ಯಾಧ್ಯಕ್ಷ ಚಂದ್ರಶೇಖರ ಮೇಟಿ, ಸಂಧ್ಯಾ ಸೇರಿದಂತೆ ಹಲವರು ಭಾಗವಹಿಸಿದ್ದರು.

ನ್ಯಾಷನಲ್ ಹೆರಾಲ್ಡ್ ಪ್ರಕರಣ
ಸೋನಿಯಾ, ರಾಹುಲ್, ಸ್ಯಾಮ್ ಪಿತ್ರೋಡಾ ವಿರುದ್ಧ ಚಾರ್ಜ್‌ಶೀಟ್

ನವದೆಹಲಿ: ನ್ಯಾಷನಲ್ ಹೆರಾಲ್ಡ್ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಲೋಕಸಭೆ ಪ್ರತಿಪಕ್ಷದ ನಾಯಕ ರಾಹುಲ್ ಗಾಂಧಿ ಹಾಗೂ ಅವರ ತಾಯಿ, ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಮತ್ತು ಕಾಂಗ್ರೆಸ್ ಸಾಗರೋತ್ತರ ಮುಖ್ಯಸ್ಥ ಸ್ಯಾಮ್ ಪಿತ್ರೋಡಾ ವಿರುದ್ಧ ಜಾರಿ ನಿರ್ದೇಶನಾಲಯ ಮಂಗಳವಾರ ಕೋರ್ಟ್‌ಗೆ ಚಾರ್ಜ್‌ಶೀಟ್ ಸಲ್ಲಿಸಿದೆ.



ಸೋನಿಯಾ ರಾಹುಲ್ ಸ್ಯಾಮ್

ಇಡಿ ಅಧಿಕಾರಿಗಳು ಇಂದು ದೆಹಲಿಯ ರೋಸ್ ಅವೆನ್ಯೂ ಕೋರ್ಟ್‌ಗೆ ಚಾರ್ಜ್‌ಶೀಟ್ ಸಲ್ಲಿಸಿದ್ದು, ಆರೋಪಪಟ್ಟಿಯಲ್ಲಿ ಸುಮನ್ ದುಬೆ ಮತ್ತು ಇತರರ ಹೆಸರುಗಳಿವೆ. ನ್ಯಾಯಾಲಯವು ಇದೇ ಏಪ್ರಿಲ್ 25 ರಂದು ವಿಚಾರಣೆ ನಿಗದಿಪಡಿಸಿದೆ. ಬಿಜೆಪಿ ನಾಯಕ ಸುಬ್ರಮಣಿಯನ್ ಸ್ವಾಮಿ ಸಲ್ಲಿಸಿದ ಖಾಸಗಿ ದೂರಿನ ಆಧಾರದ ಮೇಲೆ ನ್ಯಾಷನಲ್ ಹೆರಾಲ್ಡ್ ಪ್ರಕರಣ ದಾಖಲಾಗಿದ್ದು, ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಸೇರಿದಂತೆ ಹಲವು ಕಾಂಗ್ರೆಸ್ ನಾಯಕರು ಯಂಗ್ ಇಂಡಿಯನ್ ಪ್ರೈವೇಟ್ ಲಿಮಿಟೆಡ್ ಮೂಲಕ 2000 ಕೋಟಿ ರೂ. ಮೌಲ್ಯದ ಎಜೆಎಲ್ ಆಸ್ತಿಗಳನ್ನು ಕೇವಲ 50 ಲಕ್ಷ ರೂ.ಗಳಿಗೆ ಸ್ವಾಧೀನಪಡಿಸಿಕೊಂಡಿದ್ದಾರೆ ಎಂದು ಇಡಿ ಆರೋಪಿಸಿದೆ.

ಬಿಜೆಪಿಯ ಜನ ವಿರೋಧಿ ಕಾಯ್ದೆ ರದ್ದಾಗಲಿ!
ಸಂಯುಕ್ತ ಹೋರಾಟ ಕರ್ನಾಟಕ ಸಂಘಟನೆ ಪ್ರತಿಭಟನೆ; ಆಗ್ರಹ



ಕೇಂದ್ರದ ಬಿಜೆಪಿ ಸರ್ಕಾರ ಈ ಹಿಂದೆ ಜಾರಿಗೆ ತಂದಿದ್ದ ಜನ ವಿರೋಧಿ ಕಾಯ್ದೆ ಹಿಂಪಡೆಯುವಂತೆ ಆಗ್ರಹಿಸಿ ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಬಳಿ ಸಂಯುಕ್ತ ಹೋರಾಟ ಕರ್ನಾಟಕ ಸಂಘಟನೆಯ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರು, ಏ.15(ಎಂಟಿವೈ)– ಕಳೆದ ವಿಧಾನಸಭಾ ಚುನಾವಣೆ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ನೀಡಿದ ಭರವಸೆಯಂತೆ ಬಿಜೆಪಿ ಸರ್ಕಾರ ಜಾರಿಗೆ ತಂದಿದ್ದ ಜನವಿರೋಧಿ ಕಾಯ್ದೆಗಳನ್ನು ರದ್ದು ಮಾಡುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಸಂಯುಕ್ತ ಹೋರಾಟ ಕರ್ನಾಟಕ ಸಂಘಟನೆಯ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರಿನ ಸಿದ್ಧಾರ್ಥನಗರದಲ್ಲಿನ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿ, ಚುನಾವಣೆ ಸಂದರ್ಭದಲ್ಲಿ ಸಿಎಂ ಸಿದ್ದರಾಮಯ್ಯ ಅಧಿಕಾರಕ್ಕೆ ಬಂದ ನಂತರ ರೈತರು, ಕಾರ್ಮಿಕರು, ದಲಿತರು, ಯುವಜನರು, ಮಹಿಳಾ ಸಮುದಾಯಗಳ ಸಮಸ್ಯೆಗಳನ್ನು ಬಗೆಹರಿಸಿ, ಬಿಜೆಪಿ ಸರ್ಕಾರ ಜಾರಿಗೆ ತಂದಿದ್ದ ಜನವಿರೋಧಿ ಕಾಯ್ದೆಗಳನ್ನು ರದ್ದುಗೊಳಿಸುವುದಾಗಿ ಹೇಳಿದ್ದರು. ಆದರೆ, ಅಧಿಕಾರಕ್ಕೆ ಬಂದು ಎರಡು ವರ್ಷವಾಗುತ್ತಿದ್ದರೂ ಬಿಜೆಪಿ ಸರ್ಕಾರ ಜಾರಿಗೆ ತಂದಿದ್ದ ಜನ ವಿರೋಧಿ ಕಾಯ್ದೆ ರದ್ದು ಮಾಡಿಲ್ಲ. ಇದರಿಂದ ರೈತರಿಗೆ ಸಮಸ್ಯೆಯಾಗುತ್ತಿದೆ ಎಂದು ಪ್ರತಿಭಟನಾಕಾರರು ದೂರಿದರು.

ಪ್ರತಿಭಟನೆಯಲ್ಲಿ ಅಖಿಲ ಭಾರತ ಕೃಷಿ ಮತ್ತು ಗ್ರಾಮೀಣ ಕಾರ್ಮಿಕರ ಸಂಘದ ಅಧ್ಯಕ್ಷ ಚೌಡಹಳ್ಳಿ ಜವರಯ್ಯ, ಉಗ್ರನರಸಿಂಹೇಗೌಡ, ಪಿ.ಮರಂಕಯ್ಯ, ನಾಗನಹಳ್ಳಿ ವಿಜಯೇಂದ್ರ, ಕಂದೇಗಾಲ ಶ್ರೀನಿವಾಸ್, ಹೆಜ್ಜಿಗೆ ಪ್ರಕಾಶ್, ಮಹದೇವ ನಾಯ್ಕ, ಬಸವರಾಜು.ಹೆಚ್.ಎಂ ಸೇರಿದಂತೆ ಹಲವರು ಭಾಗವಹಿಸಿದ್ದರು.

ಬೆಲೆ ಏರಿಕೆ ಖಂಡಿಸಿ ಭಾರತೀಯ ಕಿಸಾನ್ ಸಂಘ ಪ್ರತಿಭಟನೆ

ಮೈಸೂರು,ಏ.15(ಎಂಟಿವೈ)– ಹಾಲು, ಮೊಸರು, ಗ್ಯಾಸ್, ಡೀಸೆಲ್ ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಏರಿಕೆ ಖಂಡಿಸಿ ಭಾರತೀಯ ಕಿಸಾನ್ ಸಂಘ ಕರ್ನಾಟಕ ಪ್ರದೇಶ ಸಂಘದ ಕಾರ್ಯಕರ್ತರು ಭಿಕ್ಷಾಟನೆ ಮಾಡುವ ಮೂಲಕ ವಿನೂತನವಾಗಿ ಪ್ರತಿಭಟನೆ ನಡೆಸಿದರು.



ಭಾರತೀಯ ಕಿಸಾನ್ ಸಂಘ ಕರ್ನಾಟಕ ಪ್ರದೇಶ ಸಂಘದ ಕಾರ್ಯಕರ್ತರು ಭಿಕ್ಷಾಟನೆ ಮಾಡುವ ಮೂಲಕ ಪ್ರತಿಭಟನೆ ನಡೆಸಿದರು.

ಮೈಸೂರಿನ ರಾಮಸ್ವಾಮಿ ವೃತ್ತದಲ್ಲಿ ಭಿಕ್ಷಾಟನೆ ಮಾಡುವ ಮೂಲಕ ಸರ್ಕಾರ ಅಗತ್ಯ ವಸ್ತುಗಳ ಬೆಲೆ ಏರಿಕೆ ಮಾಡುತ್ತಿರುವುದನ್ನು ಲೇವಡಿ ಮಾಡಿದರು. ರಾಜ್ಯ ಸರ್ಕಾರ ದಿನೇ ದಿನೆ ರೈತ, ಗ್ರಾಹಕರ ಮೇಲೆ ಹೆಚ್ಚಿನ ತೆರಿಗೆ ವಿಧಿಸುತ್ತಿದ್ದು, ಜನಸಾಮಾನ್ಯರ ಮೇಲೆ ಹೊರೆಯಾಗುತ್ತಿದೆ. ಭಾರೀ ಬೆಲೆ ಏರಿಕೆ ಮಾಡಿರುವುದರಿಂದ ಸಾರ್ವಜನಿಕರು, ರೈತರು ಸಂಕಷ್ಟಪಡುವಂತಾಗಿದೆ. ವಿದ್ಯುತ್, ಹಾಲು, ಡೀಸೆಲ್ ದರ ಹೆಚ್ಚಾಗಿರುವುದರಿಂದ ಗಾಯದ ಮೇಲೆ ಬರೆ ಎಳೆದಂತಾಗಿದೆ. ಲೀಟರ್ ಹಾಲಿಗೆ ಗ್ರಾಹಕರಿಂದ 52 ರೂ ಪಡೆಯುತ್ತಿದ್ದು, ರೈತರಿಗೆ 32–34 ರೂ ನೀಡುತ್ತಿದ್ದಾರೆ. ಇದರಿಂದ ರೈತರ ಕೂಲಿ, ಹುಲ್ಲು ಕೈತಿಂಡಿಗೆ ಸಾಕಾಗುವುದಿಲ್ಲ ಹೀಗಾಗಿ ಲೀಟರ್ ಹಾಲಿಗೆ 45 ರೂ ನೀಡಬೇಕು ಎಂದು ಆಗ್ರಹಿಸಿದರು. ಪ್ರಧಾನ ಮಂತ್ರಿಗಳ ಪಿಎಂಕೆವಿಯ 6000 ರೂ ಜತೆಗೆ ರಾಜ್ಯ ಸರ್ಕಾರ 4000 ರೂ ಹಣ ರೈತರಿಗೆ ನೀಡಬೇಕು. ಅಕಾಲಿಕ ಮಳೆಗೆ ಹಾನಿಯಾದ ಬೆಳೆಗಳಿಗೆ ಸೂಕ್ತ ಪರಿಹಾರ ನೀಡಬೇಕು. ಬಿತ್ತನೆ ಬೀಜ, ರಸಗೊಬ್ಬರವನ್ನು ಮುಂಗಾರು ಪೂರ್ವದಲ್ಲೇ ಸಂಗ್ರಹಿಸಿಡಬೇಕು. ರೈತರ ಬೆಳೆಗೆ ಸೂಕ್ತ ಬೆಲೆ ನಿಗದಿ ಮಾಡಬೇಕು. ಪೂರ್ವ ಮುಂಗಾರಿನ ವೇಳೆ ಗುಡುಗು, ಸಿಡಿಲಿಗೆ ಸಾಕುಪ್ರಾಣಿಗಳು ಬಲಿಯಾದಲ್ಲಿ ತಕ್ಷಣ ಪರಿಹಾರ ನೀಡಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಅಧ್ಯಕ್ಷ ರಮೇಶ್ ರಾಜು, ಜಿಲಾಧ್ಯಕ್ಷ ಪ್ರಭುಸ್ವಾಮಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ರವಿ ಗಂಡತ್ತೂರು, ಕೋಶಾಧ್ಯಕ್ಷ ಚಂದ್ರೇಗೌಡ.ಪಿ.ಸಿ, ತಾಲೂಕು ಅಧ್ಯಕ್ಷರುಗಳಾದ ಶಿವಕುಮಾರ್, ನಗರಗೆರೆ ಪ್ರಭುಸ್ವಾಮಿ, ಹೊಸಕೋಟೆ ಕುಮಾರ ನಾಯಕ, ಕಾರ್ಯದರ್ಶಿಗಳಾದ ಮಹೇಶ, ಪ್ರದೀಪ್, ಪರಮೇಶ, ಅಶೋಕ ಸೇರಿದಂತೆ ಹಲವರು ಭಾಗವಹಿಸಿದ್ದರು.

ವಿದ್ಯುತ್ ತಂತಿ ತಗುಲಿ ಕಾರ್ಮಿಕ ಸಾವು

ಮೈಸೂರು, ಏ.15(ಎಸ್‌ಬಿಡಿ)– ವಿದ್ಯುತ್ ತಂತಿ ತಗುಲಿ ನಿರ್ಮಾಣ ಹಂತದ ಕಟ್ಟಡದಿಂದ ಕೆಳಗೆ ಬಿದ್ದು ಕಾರ್ಮಿಕನೋರ್ವ ಮೃತಪಟ್ಟಿರುವ ಘಟನೆ ಮೈಸೂರಿನ ಕೆ.ಆರ್.ಮಿಲ್ ಕಾಲೋನಿಯಲ್ಲಿ ನಡೆದಿದೆ. ಬಾರ್ ಬೆಂಡಿಂಗ್ ಕೆಲಸಗಾರ ತಿ.ನರಸೀಪುರದ ವಿನಾಯಕ ಕಾಲೋನಿ ರವಿ(35) ಸಾವನ್ನಪ್ಪಿದವರು. ಇವರು ಕೆಲಸಕ್ಕೆ ಮೈಸೂರಿಗೆ ಬಂದು ಹೋಗುತ್ತಿದ್ದರು. ಹಾಗೆಯೇ ಮೊನ್ನೆ ಮೈಸೂರು–ಬೆಂಗಳೂರು ಹೆದ್ದಾರಿ ಕೆಆರ್.ಮಿಲ್ ಕಾಲೋನಿಯ ಎ ಬ್ಲಾಕ್‌ನಲ್ಲಿ ಕಟ್ಟಡದ ಮೊದಲ ಮಹಡಿಯ ತಾರಸಿಗಾಗಿ ಬಾರ್ ಬೆಂಡಿಂಗ್ ಮಾಡುವಾಗ ರವಿಗೆ ವಿದ್ಯುತ್ ತಂತಿ ತಗುಲಿದೆ. ಈ ವೇಳೆ ಅವರು ಮಹಡಿಯಿಂದ ನೆಲಕ್ಕೆ ಬಿದ್ದಿದ್ದರಿಂದ ಅವರ ತಲೆಗೆ ತೀವ್ರ ಪೆಟ್ಟು ಬಿದ್ದಿದೆ. ಕೂಡಲೇ ಅವರನ್ನು ರಿಂಗ್ ರಸ್ತೆಯಲ್ಲಿರುವ ಖಾಸಗಿ ಆಸ್ಪತ್ರೆಗೆ ಕರೆದೊಯ್ಯಲಾಯಿತಾದರೂ ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

ಐದು ತಿಂಗಳ ಗರ್ಭಿಣಿಯಾಗಿರುವ ರವಿಯ ಪತ್ನಿ ಲಕ್ಷ್ಮೀ ಈ ಘಟನೆಯಿಂದ ಆಘಾತಕ್ಕೊಳಗಾಗಿದ್ದು, ಈ ಘಟನೆಗೆ ಕಟ್ಟಡ ಮಾಲೀಕರು, ಇಂಜಿನಿಯರ್ ಹಾಗೂ ಮೇಸ್ತ್ರಿಯ ನಿರ್ಲಕ್ಷ್ಯ ಕಾರಣ ಎಂದು ನರಸಿಂಹರಾಜ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಕ್ಷುಲ್ಲಕ ವಿಚಾರಕ್ಕೆ ಮಲತಂದೆ ಹತ್ಯೆ

ಮೈಸೂರು, ಏ.15(ಎಸ್‌ಬಿಡಿ)– ಕ್ಷುಲ್ಲಕ ಕಾರಣಕ್ಕೆ ದ್ವೇಷ ಬೆಳೆಸಿಕೊಂಡು ಮಲತಂದೆಯನ್ನು ಹತ್ಯೆ ಮಾಡಿರುವ ಘಟನೆ ಮೈಸೂರಿನ ಸಾತಗಳ್ಳಿ ರಿಂಗ್‌ರಸ್ತೆಯಲ್ಲಿ ನಡೆದಿದೆ. ಅಜೀಜ್‌ಸೇಠ್‌ನಗರದಲ್ಲಿ ಟೀ ಅಂಗಡಿ ಇಟ್ಟುಕೊಂಡಿದ್ದ ಸೈಯದ್ ಮುತೀಬ್ ಹತ್ಯೆಯಾದವರು. ಇವರ ಎರಡನೇ ಪತ್ನಿಯ ಮಗ ಮತೀನ್ ಕೊಲೆ ಆರೋಪಿ.

ಮೊದಲ ಪತ್ನಿಯಿಂದ ದೂರವಾಗಿದ್ದ ಸೈಯದ್ ನಾಲ್ಕು ವರ್ಷಗಳ ಹಿಂದೆ ಮತ್ತೊಬ್ಬರನ್ನು ವಿವಾಹವಾಗಿದ್ದರು. ಎರಡನೇ ಹೆಂಡತಿಯ ಮೊದಲ ಗಂಡನ ಮಕ್ಕಳಿಗೂ ಈ ವಿಚಾರ ಗೊತ್ತಿತ್ತು. ಆದರೆ ವಾರದ ಹಿಂದೆ ಪಾರ್ಕ್ ಬಳಿ ಸೈಯದ್ ಜೊತೆ ಎರಡನೇ ಪತ್ನಿ ಮಗ ಮತೀನ್ ಮೊಬೈಲ್ ವಿಚಾರಕ್ಕೆ ಜಗಳವಾಡಿದ್ದ. ಅಲ್ಲಿದ್ದವರು ಗಲಾಟೆ ಬಿಡಿಸಿ, ಬುದ್ಧಿವಾದ ಹೇಳಿ ಕಳುಹಿಸಿದ್ದರು. ಇದನ್ನೇ ಮನಸ್ಸಿನಲ್ಲಿಟ್ಟುಕೊಂಡು ದ್ವೇಷ ಬೆಳೆಸಿಕೊಂಡಿದ್ದ ಮತೀನ್, ಏ.13ರಂದು ರಾತ್ರಿ 10 ಗಂಟೆ ಸಮಯದಲ್ಲಿ ವಿವಿಯು ಕಾಲೇಜಿನ ಬಳಿ ರಿಂಗ್‌ರಸ್ತೆ ಪಕ್ಕದ ಪೆಟ್ಟಿಗೆ ಅಂಗಡಿ ಬಳಿ ಸೈಯದ್ ಪರಿಚಿತರೊಂದಿಗೆ ಮಾತನಾಡುತ್ತಾ ನಿಂತಿದ್ದಾಗ ಕಾರಿನಲ್ಲಿ ಬಂದು ಏಕಾಏಕಿ ಚಾಕುವಿನಲ್ಲಿ ಎದೆಗೆ ಚುಚ್ಚಿದ್ದಾನೆ. ಇದರಿಂದ ತೀವ್ರವಾಗಿ ಗಾಯಗೊಂಡ ಸೈಯದ್ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗಮಧ್ಯೆ ಮೃತಪಟ್ಟಿದ್ದಾರೆ.

ಈ ಸಂಬಂಧ ಉದಯಗಿರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಎಸ್‌ಎಸ್‌ಎಲ್‌ಸಿ ಉತ್ತರ ಪತ್ರಿಕೆ ಮೌಲ್ಯಮಾಪನ ಕೇಂದ್ರಕ್ಕೆ ಎಂಎಲ್ಸಿ ವಿವೇಕಾನಂದ ಭೇಟಿ

ಮೈಸೂರು, ಏ.15(ಎಸ್‌ಪಿಎನ್)– ಮೈಸೂರಿನ ವಿವಿಧೆಡೆ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಉತ್ತರ ಪತ್ರಿಕೆ ಮೌಲ್ಯಮಾಪನ ಕಾರ್ಯ ಆರಂಭವಾಗಿದ್ದು, ಇಲ್ಲಿಗೆ ವಿಧಾನ ಪರಿಷತ್ ಸದಸ್ಯ ಕೆ.ವಿವೇಕಾನಂದ ಅವರು ಮಂಗಳವಾರ ಭೇಟಿ ನೀಡಿ, ಶಿಕ್ಷಕರ ಬೇಡಿಕೆಗಳನ್ನು ಆಲಿಸಿದರು.

2025ರ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಮೌಲ್ಯಮಾಪನ ಕಾರ್ಯ ಆರಂಭವಾಗಿದ್ದು, ಗೋಪಾಲಸ್ವಾಮಿ ಶಿಶುವಿಹಾರ ಕನ್ನಡ, ಕಾವೇರಿ ವಿದ್ಯಾಸಂಸ್ಥೆ ಇಂಗ್ಲಿಷ್, ಜ್ಞಾನಗಂಗಾ ವಿದ್ಯಾಸಂಸ್ಥೆಯಲ್ಲಿ ಗಣಿತ, ನಿರ್ಮಲ ಕಾನ್ವೆಂಟ್‌ನಲ್ಲಿ ಸಮಾಜ ವಿಜ್ಞಾನ ವಿಷಯಗಳ ಮೌಲ್ಯಮಾಪನ ಆರಂಭವಾಗಿದ್ದು, ಮೌಲ್ಯಮಾಪಕರಿಗೆ ಶಾಲಾ ಶಿಕ್ಷಣ ಇಲಾಖೆಯಿಂದ ನೀಡಿರುವ ಸೌಲಭ್ಯಗಳ ಬಗ್ಗೆ ಶಾಸಕ ಕೆ.ವಿವೇಕಾನಂದ ವಿಚಾರಿಸಿದರು.

ಗುಡ್‌ಶೆಫರ್ಡ್ ಶಾಲೆಯಲ್ಲಿ ಹಿಂದಿ, ಸೆಂಟ್ ಫಿಲೋಮಿನಾ ಶಾಲೆಯಲ್ಲಿ ವಿಜ್ಞಾನ ವಿಷಯಗಳ ಕುರಿತು ಮೌಲ್ಯಮಾಪನ ನಡೆಯುತ್ತಿದ್ದು, ಈ ಶಾಲೆಗಳಿಗೆ ಬುಧವಾರ ಭೇಟಿ ನೀಡಿ, ಮೌಲ್ಯಮಾಪಕರ ಮನವಿಗಳನ್ನು ಶಾಸಕರು, ಆಲಿಸಲಿದ್ದಾರೆ.



ಎಸ್‌ಎಸ್‌ಎಲ್‌ಸಿ ಪರೀಕ್ಷಾ ಉತ್ತರ ಪತ್ರಿಕೆ ಮೌಲ್ಯಮಾಪನ ಕಾರ್ಯ ಆರಂಭವಾಗಿದ್ದು, ಇಲ್ಲಿಗೆ ಎಂಎಲ್ಸಿ ಕೆ.ವಿವೇಕಾನಂದ ಭೇಟಿ ನೀಡಿದರು.

ಅಗತ್ಯ ವಸ್ತುಗಳ ಬೆಲೆ ಏರಿಕೆ ಖಂಡಿಸಿ ಪ್ರತಿಭಟನೆ

ನಂಜನಗೂಡು, ಏ.15– ಎಲ್‌ಪಿಜಿ ಗ್ಯಾಸ್, ಪೆಟ್ರೋಲ್, ಡೀಸೆಲ್ ಹಾಗೂ ಅಗತ್ಯ ವಸ್ತುಗಳ ಬೆಲೆ ಏರಿಕೆ ಖಂಡಿಸಿ ಕಾಂಗ್ರೆಸ್ ಪಕ್ಷದ ವತಿಯಿಂದ ನಗರದಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಯಿತು.

ನಗರದ ಹುಲ್ಲಹಳ್ಳಿ ವೃತ್ತದ ಬಳಿ ಜಮಾಯಿಸಿದ ಕಾಂಗ್ರೆಸ್ ಕಾರ್ಯಕರ್ತರು, ನಂಜನಗೂಡು–ಮೈಸೂರು ರಾಷ್ಟ್ರೀಯ ಹೆದ್ದಾರಿ ತಡೆದು ಮಾನವ ಸರಪಳಿ ನಿರ್ಮಿಸಿ ಸ್ಥಳದಲ್ಲೇ ಪಕೋಡ ತಯಾರಿಸಿ ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಶಾಸಕ ದರ್ಶನ್ ಮಾತನಾಡಿ, ದೇಶದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರುವ ಮುನ್ನಾ ಪ್ರತಿ ವರ್ಷ 2 ಲಕ್ಷ ಉದ್ಯೋಗ ಸೃಷ್ಟಿಸುತ್ತೇವೆ. ಸ್ವಿಸ್ ಬ್ಯಾಂಕ್‌ನಲ್ಲಿರುವ ಕಪ್ಪು ಹಣ ತಂದು ದೇಶದ ಎಲ್ಲಾ ನಾಗರಿಕರ ಖಾತೆಗಳಿಗೆ 15 ಲಕ್ಷ ಹಾಕುತ್ತೇವೆ. ಮುಂದಿನ ದಿನಗಳಲ್ಲಿ ಅಚ್ಛೆ ದಿನ್ ಬರಲಿದೆ ಎಂದು ಭರವಸೆ ನೀಡಿ ಅಧಿಕಾರಕ್ಕೆ ಬಂದರು. ಆದರೆ ಪ್ರಧಾನಿ ಮೋದಿ ಸರ್ಕಾರದ ಜನವಿರೋಧಿ ನಿಲುವುಗಳಿಂದ ಹಲವು ಸಣ್ಣಪುಟ್ಟ ಕಾರ್ಖಾನೆಗಳು ಮುಚ್ಚಿ ಹೋದವು. ದಿನ ಬಳಕೆಯ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಜನರು ಜೀವನ ನಡೆಸಲು ತತ್ತರಿಸುತ್ತಿದ್ದಾರೆ. ಹೀಗಾಗಿ ಇನ್ನೆಲ್ಲಿ ಅಚ್ಛೆ ದಿನ ಬರಲಿದೆ ಎಂದು ಪ್ರಶ್ನಿಸಿದ ಅವರು ನಮ್ಮ ರಾಜ್ಯದ ಜಿಎಸ್‌ಟಿ ಅನುದಾನ ಕೊಡದೆ ವಂಚಿಸಿ, ಜನರನ್ನು ಮಾತಿನಲ್ಲೇ ನಂಬಿಸಿ ದ್ರೋಹ ಬಗೆಯುತ್ತಿರುವ ಕೇಂದ್ರ ಸರ್ಕಾರದ ವಿರುದ್ಧ ರಾಜ್ಯ ಬಿಜೆಪಿ ನಾಯಕರು ಪ್ರತಿಭಟನೆ ನಡೆಸುವುದು ಬಿಟ್ಟು, ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಜನಾಕ್ರೋಶ ಯಾತ್ರೆ ನಡೆಸುತ್ತಿರುವುದು ಹಾಸ್ಯಸ್ಪದ. ಈ ಕೂಡಲೇ ಕೇಂದ್ರ ಸರ್ಕಾರ ರಾಜ್ಯಕ್ಕೆ ಕೊಡಬೇಕಾಗಿರುವ ಜಿಎಸ್‌ಟಿ ಅನುದಾನ ನೀಡಬೇಕು. ಪೆಟ್ರೋಲ್, ಡೀಸೆಲ್, ಗ್ಯಾಸ್ ದರದ ಜೊತೆಗೆ ಅಗತ್ಯ ವಸ್ತುಗಳ ಬೆಲೆ ಇಳಿಕೆ ಮಾಡಿ ಬಡವರು ಜೀವನ ನಡೆಸಲು ಅನುಕೂಲ ಮಾಡಿಕೊಡಬೇಕು. ಇಲ್ಲದಿದ್ದರೆ ಉಗ್ರ ಪ್ರತಿಭಟನೆ ರೂಪಿಸಲಾಗುವುದು ಎಂದು ಎಚ್ಚರಿಸಿದರು.



ಅಗತ್ಯ ವಸ್ತುಗಳ ಬೆಲೆ ಏರಿಕೆ ಖಂಡಿಸಿ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಈ ವೇಳೆ ತಹಸೀಲ್ದಾರ್ ಶಿವಕುಮಾರ್ ಕಾಸನೂರು ಅವರಿಗೆ ಮನವಿ ಸಲ್ಲಿಸಲಾಯಿತು. ಪ್ರತಿಭಟನೆಯಲ್ಲಿ ಮಾಜಿ ಶಾಸಕ ಕೇಶವಮೂರ್ತಿ, ಕಾಂಗ್ರೆಸ್ ವಿಧಾನಸಭಾ ಉಸ್ತುವಾರಿ ಸೋಮೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಮಹೇಶ್, ಸಿ.ಎಂ.ಶಂಕರ್, ಶ್ರೀಕಂಠನಾಯಕ, ರಂಗಸ್ವಾಮಿ, ಮುಖಂಡರಾದ ಇಂಧನ್‌ಬಾಬು, ನಗರಸಭಾ ಅಧ್ಯಕ್ಷ ಶ್ರೀಕಂಠಸ್ವಾಮಿ, ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಕೆ.ಮಾರುತಿ, ತಾಪಂ ಮಾಜಿ ಅಧ್ಯಕ್ಷ ನಾಗೇಶ್ ರಾಜ್, ಅಕ್ರಮ ಸಕ್ರಮ ಸಮಿತಿ ಸದಸ್ಯ ಜಯರಾಮ, ತಾಪಂ ಮಾಜಿ ಸದಸ್ಯರಾದ ಹೆಚ್.ಎಸ್.ಮೂಗಶೆಟ್ಟಿ, ಕಾಂಗ್ರೆಸ್ ಎಸ್ಸಿ, ಬ್ಲಾಕ್ ಅಧ್ಯಕ್ಷ ಶಿವಣ್ಣ, ನಗರಸಭಾ ಸದಸ್ಯರಾದ ಕೆ.ಎಂ.ಬಸವರಾಜು, ಎಸ್.ಪಿ.ಮಹೇಶ್, ಗಾಯತ್ರಿ, ರವಿ, ನಗರಸಭಾ ಮಾಜಿ ಉಪಾಧ್ಯಕ್ಷ ದೊರೆಸ್ವಾಮಿ, ಜಿಪಂ ಮಾಜಿ ಸದಸ್ಯೆ ಲತಾ, ಮುಖಂಡರಾದ ಎನ್.ಟಿ.ಗಿರೀಶ್, ರಾಜೇಶ್ ಹಲವರಿದ್ದರು.

ಅರಣ್ಯ ಭೂಮಿ ಸರ್ವೇಗೆ ಗ್ರಾಮಸ್ಥರ ವಿರೋಧ

ಹಂಗರಹಳ್ಳಿಯಲ್ಲಿ ಸರ್ವೇ, ಅರಣ್ಯ ಅಧಿಕಾರಿಗಳು, ಗ್ರಾಮಸ್ಥರ ನಡುವೆ ಮಾತಿನ ಚಕಮಕಿ, ಸರ್ವೇಗೆ ತಡೆ

ಶ್ರೀರಂಗಪಟ್ಟಣ: ಅರಣ್ಯ ಪ್ರದೇಶ ಅರಣ್ಯ ಇಲಾಖೆಗೆ ಸೇರಿದೆ ಎಂದು ಸರ್ವೇ ಮಾಡಲು ಬಂದಿದ್ದ ಅರಣ್ಯ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ಗ್ರಾಮಸ್ಥರು ತಡೆದು ವಾಪಸ್ಸು ಕಳಿಸಿದ ಘಟನೆ ತಾಲೂಕಿನ ಹಂಗರಹಳ್ಳಿಯಲ್ಲಿ ನಡೆದಿದೆ.



ಹಂಗರಹಳ್ಳಿ ಗ್ರಾಮದ ಸರ್ವೆ ನಂ185 ಜಮೀನು ಅರಣ್ಯ ಇಲಾಖೆಗೆ ಸೇರಿದ್ದಾಗಿದೆ, ಇದು ಡೀಮ್ಡ್ ಅರಣ್ಯಕ್ಕೆ ಸೇರಬೇಕೆಂದು ಅರಣ್ಯ ಇಲಾಖೆ ಅಧಿ ಕಾರಿಗಳು ಮತ್ತು ಸಿಬ್ಬಂದಿ ಸರ್ವೆ ಮಾಡಲು ಬಂದಿದ್ದರು. ಈ ವಿಷಯ ತಿಳಿದ ಹಂಗರಹಳ್ಳಿ ಸೇರಿದಂತೆ ಸುತ್ತಮುತ್ತಲ ಗ್ರಾಮಸ್ಥರು ಸ್ಥಳದಲ್ಲಿ ಜಮಾಯಿಸಿ, ಮೊದಲು ಗೋಮಾಳದ ಜಾಗದ ಸರ್ವೆ ಮಾಡಿ ಜಾಗ ಗುರುತಿಸಿ ಕೊಡಿ. ಈಗಾಗಲೇ ಎರಡು ಬಾರಿ ಸರ್ವೆ ಕಾರ್ಯ ಮಾಡಿ ಅದನ್ನು ಅಂಗೀಕರಿಸಿಲ್ಲ. ಆದರೂ ಮೇಲಿಂದ ಮೇಲೆ ಸರ್ವೆ ಕಾರ್ಯ ನಡೆಯುತ್ತಿದೆ. ಜೊತೆಗೆ ಈಗಾಗಲೇ ಸರ್ಕಾರಿ ಮಂಜೂರಾತಿ ಮಾಡಿರುವ ಸ್ಥಳವನ್ನು ಮೊದಲು ಗುರುತು ಮಾಡಿಕೊಡುವಂತೆ ಆಗ್ರಹಿಸಿದೆ.

ಈ ವೇಳೆ ಸರ್ವೆ ಮತ್ತು ಅರಣ್ಯ ಇಲಾಖೆ ಅಧಿಕಾರಿಗಳು ಹಾಗೂ ಗ್ರಾಮಸ್ಥರ ನಡುವೆ ಮಾತಿನ ಚಕಮಕಿ ನಡೆಯಿತು. ಅಲ್ಲದೆ ತಮ್ಮನ್ನು ಈ ಜಾಗದಿಂದ ಒಕ್ಕಲೆಬ್ಬಿಸಲು ಸ್ಥಳೀಯ ಶಾಸಕರು ಹುನ್ನಾರ ನಡೆಸುತ್ತಿದ್ದಾರೆ. ಜೊತೆಗೆ ಈ ಸರ್ವೆ ನಂಬರ್ ಜಾಗದಲ್ಲಿ ಅಕ್ರಮವಾಗಿ ಕಲ್ಲು ಗಣಿಗಾರಿಕೆ ನಡೆಸಲು ಅಧಿಕಾರಿಗಳ ಮೂಲಕ ಶಾಸಕರು ನಮಗೆ ಕಿರುಕುಳ ನೀಡುತ್ತಿದ್ದಾರೆ ಎಂದು ಆರೋಪಿಸಿದರು. ಈ ವಿಷಯವಾಗಿ ಕೇಂದ್ರ ಸಚಿವ ಎಚ್.ಡಿ.ಕುಮಾರ ಸ್ವಾಮಿ ಅವರು ಗ್ರಾಮಸ್ಥರಿಗೆ ಅಭಯ ನೀಡಿದ್ದಾರೆ, ಹಾಗಾಗಿ ಏ.22 ರವರೆಗೆ ನಮಗೆ ಕಾಲಾವಕಾಶ ನೀಡುವಂತೆ ಮನವಿ ಮಾಡಿದರು. ಮೊದಲು ಅಧಿಕಾರಿಗಳು ಕಾಲಾವಕಾಶ ಕೊಡಲು ನಿರಾಕರಿಸಿದರು.

ಬಳಿಕ ಸ್ಥಳದಲ್ಲಿದ್ದ ಅಧಿಕಾರಿಗಳು ತಹಸೀಲ್ದಾರ್ ಅವರಿಗೆ ಮಾಹಿತಿ ನೀಡಿ, ಅವರ ಮೌಖಿಕ ಆದೇಶದ ಮೇರೆಗೆ ಏ.25 ರವರೆಗೆ ಕಾಲಾವಕಾಶ ನೀಡಿ ಅಧಿಕಾರಿಗಳು ವಾಪಸ್ಸು ತೆರಳಿದ್ದಾರೆ.

ಲಂಚಕ್ಕೆ ಆಗ್ರಹಿಸಿದ ಪೇದೆ ವಿರುದ್ಧ ದೂರು

ಕೊಳ್ಳೇಗಾಲ, ಏ.15–ಅಪಘಾತವೆಸಗಿದ್ದ ಕಾರನ್ನು ಬಿಡುಗಡೆ ಮಾಡಲು ಪೇದೆಯೊಬ್ಬರು ಲಂಚಕ್ಕಾಗಿ ಆಗ್ರಹಿಸಿರುವ ಪ್ರಕರಣ ಬೆಳಕಿಗೆ ಬಂದಿದೆ.

ಮಾ.24 ರಂದು ತಾಲೂಕಿನ ಮಧುವನಹಳ್ಳಿ ಬಳಿ ರಸ್ತೆ ಅಪಘಾತ ನಡೆದಿದ್ದು, ಕಾರನ್ನು ವಶಕ್ಕೆ ಪಡೆದಿದ್ದ ಗ್ರಾಮಾಂತರ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದರು. ಬಳಿಕ ಜಖಂಗೊಂಡಿದ್ದ ಕಾರು ಬಿಡುಗಡೆ ಮಾಡುವಂತೆ 27ರಂದು ಮಾಲೀಕ ಮನೋಹರ್ ಪೊಲೀಸ್ ಠಾಣೆಗೆ ತೆರಳಿದ್ದಾಗ ಪೇದೆ ವಿಜಯ್ ಕುಮಾರ್ ತಮ್ಮ ಮೊಬೈಲ್‌ನಲ್ಲಿ ಟೈಪ್ ಮಾಡಿ 10 ಸಾವಿರ ನೀಡಬೇಕು. ಇದರಲ್ಲಿ ಸಬ್ ಇನ್ಸ್‌ಪೆಕ್ಟರ್ ಅವರಿಗೂ ನೀಡಬೇಕು. ನೀವು ಕಡಿಮೆ ಕೊಟ್ಟರೆ ಅವರು ಒಪ್ಪಲ್ಲ ಎಂದು ಕ್ಯಾತೆ ತೆಗೆದಿದ್ದಾರೆ ಎನ್ನಲಾಗಿದೆ. ಕೊನೆಗೆ 6 ಸಾವಿರ ನೀಡುವುದಾಗಿ ಮನೋಹರ್ ಒಪ್ಪಿಕೊಂಡರೆನ್ನಲಾಗಿದ್ದು, ಪೇದೆ ವರ್ತನೆಗೆ ಬೇಸತ್ತಿದ್ದ ಕಾರು ಮಾಲೀಕರು ಹಣ ನೀಡುವಾಗ ಅದನ್ನು ಚಿತ್ರೀಕರಿಸಿಕೊಂಡಿದ್ದರು. ನಿನ್ನೆ ಎಸ್ಪಿ ಕವಿತಾ ಅವರಿಗೆ ದಾಖಲೆ ಸಮೇತ ಲಿಖಿತ ದೂರು ನೀಡಿದ್ದಾರೆ.

ಪ್ರತಿದಿನ ಬೆಳಗಿನ ಕಾಫಿಯೊಂದಿಗೆ "ಮೈಸೂರು ಮಿತ್ರ"
ಬೆಳಗಿನ ಜನಪ್ರಿಯ ಪತ್ರಿಕೆ ಓದುವುದೇ ಸಂತೋಷದ ವಿಷಯ.
ಈ ಪತ್ರಿಕೆ ಇಲ್ಲದೆ ದಿನದಾರಂಭದ ಕಾಫಿ ರುಚಿಸದು !

46ನೇ ವರ್ಷಕ್ಕೆ ಕಾಲಿಡುತ್ತಿರುವ
ಮೈಸೂರಿಗರ ಮೈಸೂರು ಮಿತ್ರ
ದಿನಪತ್ರಿಕೆಗೆ ಶುಭಾಷಯಗಳು



ಸಿ. ನಾರಾಯಣಗೌಡ

ಅಧ್ಯಕ್ಷರು, ಹೋಟೆಲ್ ಮಾಲೀಕರ ಸಂಘ, ಮೈಸೂರು
ಉಪಾಧ್ಯಕ್ಷರು, ಸಂಘ ಸಂಸ್ಥೆಗಳ ಒಕ್ಕೂಟ ಮೈಸೂರು
ನಿರ್ದೇಶಕರು ಮೈಸೂರು ಕೈಗಾರಿಕಾ ಮತ್ತು ವಾಣಿಜ್ಯ ಸಂಸ್ಥೆ

20 Years ANNIVERSARY

ವಿಷ್ಣು ಭವನ್ ®
ಸಸ್ಯಾಹಾರಿ ಫ್ಯಾಮಿಲಿ ರೆಸ್ಟೋರೆಂಟ್

Vishnu Bhavan ®
Pure Veg Deluxe Restaurant

OPP. KSRTC BUS STAND, BELOW BHIMA JEWELLERS & GIRIYAS, B.N. ROAD, MYSORE



Memories of the inauguration 20 years ago...

Savour the Taste of Mysore's Traditional Delicious Embark on a sensory journey through **Vishnu Bhavan's** traditional and culinary wonders as you partake in the territory's most delicious South/North Indian, Chinese, continental delicious served remained worthwhile for decades and is cherished culinary haven where tradition meets innovation



ಮೈಸೂರು ಮಿತ್ರ
46
ವಾರ್ಷಿಕ ವಿಶೇಷಾಂಕ 2025
16.4.2025
ಬುಧವಾರ

ನಾವೇಳಿದಂಗೆ ಕೇಳು ಮಿಕ್ಕಿದ್ದೆಲ್ಲಾ ನಾವ್ ನೋಡ್ಕೋತಿವಿ...



ಪೊಲೀಸರ 'ನೀತಿ' ಮಾತಿಗೆ ಮಾರುಹೋಗಿ ಚಿತ್ರಹಿಂಸೆಗೆ ಗುರಿಯಾದ 'ಪಾಪ'ದ ಸುರೇಶ!


ಸುರೇಶ್

ಕೊಲೆಯಾಗಿದ್ದಾಳೆ ಎಂದು ಪೊಲೀಸರೇ ನಿರ್ಧರಿಸಿ, ತನಿಖೆ ನಡೆಸಿ ಆಕೆಯ ಗಂಡನೇ ಕೊಲೆಗಾರನೆಂದು ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿ, ಆತನಗಿಗೆ ಜೈಲು ಶಿಕ್ಷೆಯಾಗುವಂತೆ ಮಾಡಿದ ಬಳಿಕ ಅದೇ ಮಹಿಳೆ ಐದು ವರ್ಷದ ಬಳಿಕ ಜೀವಂತವಾಗಿ ಬಂದಿದ್ದು ಆಯಿತು. ಪೊಲೀಸರು ಏನೆಲ್ಲಾ ಚಮತ್ಕಾರಗಳ ಮಾಡಬಹುದು ಎಂಬುದನ್ನು ಬಯಲು ಮಾಡಿದ್ದೂ ಆಯಿತು. ಬೆಟ್ಟದಪುರ ಪೊಲೀಸ್ ಠಾಣೆ ವ್ಯಾಪ್ತಿಯ ಶಾನುಭೋಗನಹಳ್ಳಿಯಲ್ಲಿ 2020ರ ನವೆಂಬರ್ 12 ರಂದು ಮಹಿಳೆಯ ಅಸ್ಥಿಪಂಜರ ಪತ್ತೆಯಾದ ಬಳಿಕ ನಡೆದ ಸಿನಿಮೀಯ ಘಟನೆಗಳು ನಾಗರಿಕ ಸಮಾಜವನ್ನು ದಂಗುಬಡಿಸುವಂತಿವೆ. ಅಸ್ತಿ ಪಂಜರ ದೊರೆತ ಮರುದಿನ ಕುಶಾಲನಗರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪತ್ನಿ ಕಾಣೆಯಾಗಿರುವ ಬಗ್ಗೆ ದೂರು ನೀಡಿದ್ದ ಬಸವನಹಳ್ಳಿ, ದಿಡ್ಡಳ್ಳಿಯ ಆದಿವಾಸಿ ಜನಾಂಗದ ಸುರೇಶ್ ಕೊಲೆ ಆರೋಪಿಯಾಗಿ ಎರಡು ವರ್ಷ ಜೈಲಿನಲ್ಲಿದ್ದು ಬೇಲ್ ಮೇಲೆ ಹೊರಬಂದಿದ್ದಾರೆ. ಇವರು ಕೊಲೆ ಮಾಡಿದ್ದಾರೆ ಎಂದಿರುವ ಪತ್ನಿ ಮಲ್ಲಿಗೆಯೂ ಪತ್ತೆಯಾಗಿದ್ದಾಳೆ. ಈ ಪ್ರಕರಣದಲ್ಲಿ ಸುರೇಶ ಹಾಗೂ ಅವರ ಮನೆಯವರು ಅನುಭವಿಸಿದ ನೋವು–ಸಂಕಟವನ್ನು ಅವರ ಮಾತುಗಳಲ್ಲೇ ಕೇಳಿ...

ನನ್ನ ಜೀವನವನ್ನು ಏನೇನೋ ಮಾಡಿಬಿಟ್ಟರು ಸ್ವಾಮಿ... ನನಗೆ ಓದು–ಬರಹ ಬರಲ್ಲ. ಕೂಲಿ ಮಾಡಿ ಕೊಂಡು ಜೀವನ ಮಾಡಿಕೊಂಡಿದ್ದೆ. ಮನೆಯವರೇ ನೋಡಿ ಮಲ್ಲಿಗೆಯೊಟ್ಟಿಗೆ ಮದುವೆ ಮಾಡಿದ್ದು. ಮದುವೆ ಆಗಿ 17 ವರ್ಷದವರೆಗೆ ಚೆನ್ನಾಗಿಯೇ ಇದ್ದವಳು ಇದ್ದಕ್ಕಿದ್ದಂತೆ ನಾಪತ್ತೆ.

ಮದುವೆ ಆದಾಗಿನಿಂದ ತುಂಬಾ ಚೆನ್ನಾಗಿ ದ್ದೆವು. ಮೂರ್ನಾಡಿನಲ್ಲಿದ್ದ ಗಣೇಶ ಈ ಹಾಡಿಯಲ್ಲಿ ಮನೆ ಕಟ್ಟಿಕೊಂಡ ಮೇಲೆ ನಮ್ಮ ಮನೆಗೆ ಬಂದು ಹೋಗುತ್ತಿದ್ದ. ಆತ ಹೆಂಡತಿಗೆ ಸಂಬಂಧಿಕನಾಗಬೇಕು. ಜೊತೆಗೆ ನನಗೆ ಬಾವ ಆಗಬೇಕು. ಇವರಿಗೂ ಮದುವೆಯಾಗಿ ಮಕ್ಕಳಿವೆ ಎಂದು ಮಲ್ಲಿಗೆ ಹೇಳಿದ್ದಳು. ಆಕೆಗೆ ನಾಲ್ಕೈದು ತಿಂಗಳು ಹುಷಾರಿರಲಿಲ್ಲ. ಆಸ್ಪತ್ರೆಗೆ ತೋರಿಸಿ, ಆರೈಕೆ ಮಾಡಿದೆ. ಆದರೆ ಮಲ್ಲಿಗೆ ಹಾಗೂ ಗಣೇಶನ ನಡುವೆ ಸಂಬಂಧ ಇರುವುದು ನನಗೆ ಗೊತ್ತಾಗಲೇ ಇಲ್ಲ. ಒಂದು ದಿನ ಸಂಘದ ದುಡ್ಡು ಕಟ್ಟಿ ಬರುತ್ತೀನಿ ಎಂದು ಮಕ್ಕಳಿಗೆ ಹೇಳಿ ಹೋದವಳು ವಾಪಸ್ ಬರಲೇ ಇಲ್ಲ. ಗಾಬರಿಯಿಂದ ಎಲ್ಲಾ ಕಡೆ ಹುಡುಕಿದರೂ ಸುಳಿವೇ ಸಿಗಲಿಲ್ಲ.

ಕಾಣೆಯಾಗಿ ವಾರದ ನಂತರ ನನಗೆ ಮಲ್ಲಿಗೆ ಫೋನ್ ಮಾಡಿ, ಗಣೇಶ ನೊಂದಿಗೆ ಹೋಗಿದ್ದೇನೆ, ನೀನು ನೋವು ಅನುಭವಿಸಬೇಕು ಎಂದೇ ನಾನು ಹೀಗೆ ಮಾಡಿದ್ದು ಎಂದಳು. ನನ್ಮೇಲೆ ಅವಳಿಗೇನು ದ್ವೇಷ ಎನ್ನೋದು ಗೊತ್ತಿಲ್ಲ. ನಾನು ಎಷ್ಟು ಚೆನ್ನಾಗಿ ನೋಡಿಕೊಂಡಿದ್ದೆ. ನಂಬಿಸಿ ಕುತ್ತಿಗೆ ಕೊಯ್ದಳು.

ಹೆಂಡತಿ ನಾಪತ್ತೆಯಾಗಿದ್ದಾಳೆಂದು ಕುಶಾಲನಗರದ ಗ್ರಾಮಾಂತರ ಪೊಲೀಸ್ ಠಾಣೆಗೆ ದೂರು ನೀಡಿದೆ. 2021ರಲ್ಲಿ ಪೊಲೀಸರು ಬಂದು ನನ್ನನ್ನು ಪಿರಿಯಾ ಪಟ್ಟಣದ ಸರ್ಕಲ್ ಇನ್ಸ್‌ಪೆಕ್ಟರ್ ಆಫೀಸ್‌ಗೆ ಕರೆದುಕೊಂಡು ಹೋದರು. ಮೂಳೆಗಳ ಫೋಟೋ ತೋರಿಸಿ, ಗುರುತಿಸು ಎಂದರು. ಇದನ್ನು ನಾನಲ್ಲ ಯಾರಿಂದಲೂ ಗುರುತಿಸಲಾಗೋದಿಲ್ಲ ಎಂದೆ. ಹೆಂಡತಿ ಕಾಣೆಯಾಗಿರೋದು, ನಾನು ಕಂಪ್ಲೇಂಟ್ ಕೊಟ್ಟಿರೋದು ಸತ್ಯ. ಆಕೆ ಫೋನ್ ಮಾಡಿ ಗಣೇಶನ ಜೊತೆ ಬಂದಿದ್ದೇನೆ ಎಂದು ಹೇಳಿ ನನಗೆ ಬೆದರಿಕೆ ಹಾಕಿದ್ದನ್ನೂ ತಿಳಿಸಿದ್ದೇನೆ. ಆದರೂ ಗಣೇಶನ ಯಾಕೆ ಹಿಡಿದಿಲ್ಲ ಎಂದು ಕೇಳಿದೆ. ನನ್ನನ್ನೂ ಜೊತೆಯಲ್ಲಿ ಕರೆದುಕೊಂಡು ಗಣೇಶ ಇದ್ದ ಜಾಗ, ಆತನ ತಂದೆ ತಾಯಿ ಇದ್ದ ಜಾಗ, ಕೆಲಸ ಮಾಡುತ್ತಿದ್ದ ಜಾಗ ಎಲ್ಲಾ ಕಡೆ ಸುತ್ತಾಡಿ ಸಿದರು. ಆದರೆ ಎಲ್ಲಿಯೂ ಸಿಗಲಿಲ್ಲ. ಆತ ಕೆಲಸಕ್ಕೆ ಹೋಗುತ್ತಿದ್ದ ಮಾಲೀಕರ ಬಳಿ ಅವನ ಫೋಟೋ ಪಡೆದುಕೊಂಡರು.

ಪೊಲೀಸರು ನನ್ನ ಅವರ ವಶಕ್ಕೆ ಪಡೆದ ನಂತರ ನನ್ನನ್ನು ಬೆಟ್ಟದಪುರ ಗೋಡೌನ್‌ನಲ್ಲಿ ಕೂಡಿಟ್ಟಿದ್ದರು. ಊಟ ಕೋಡೋರು, ಆದರೆ ಒಂದೇ ಜಾಗದಲ್ಲಿ ಕುಳಿತು ಮಲಗೋದಕ್ಕೆ ಕಷ್ಟವಾಗುತ್ತಿತ್ತು. ನಾಲ್ಕೈದು ಜನ ಪೊಲೀಸರು ಕಾವಲಿದ್ದರು. ಆಗ ಹೊಡೆಯಲಿಲ್ಲ. ಸುಮ್ಮನ್ನೆ ಗಾಡಿ ಯಲ್ಲಿ ಯಾವುದೋ ಜಾಗಕ್ಕೆ ಕರೆದುಕೊಂಡು ಹೋದರು. ನನಗೆ ಊರು ಗೊತ್ತಿಲ್ಲ, ನೀವು ಹೇಳೋ ಜಾಗವೂ ಗೊತ್ತಿಲ್ಲ ಎಂದು ಮೊದಲೇ ಹೇಳಿದ್ದೆ. ಎರಡು ಗಾಡಿಯಲ್ಲಿ 17–18 ಜನ ನನ್ನನ್ನು ಯಾವುದೋ ಖಾಲಿ ಜಾಗಕ್ಕೆ ಕರೆದುಕೊಂಡು ಹೋಗಿ, ಕೊಲೆ ಮಾಡಿ ದೇಹ ಬಿಸಾಡಿದ ಜಾಗವನ್ನು ಗುರುತಿಸು ಎಂದರು. ನನಗೇನು ಗೊತ್ತಿಲ್ಲ, ನಾನು ಯಾರನ್ನೂ ಕೊಂದಿಲ್ಲ ಅಂದ ಮೇಲೆ ಯಾವ ಜಾಗ ಗುರುತಿಸೋದು ಎಂದೆ. ಆಗ ಅವರೇ ಇದೇ ಜಾಗದಲ್ಲಿ ನೀನು ಮಲ್ಲಿಗೆಗೆ ಹೊಡೆದು ಸಾಯಿಸಿ, ಮುಳ್ಳಿನ ಪೊದೆಗೆ ಬಿಸಾಡಿದ್ದು. ನಾವು ಏನು ಹೇಳುತ್ತಿದ್ದೇವೋ ನೀನು ಹೀಗೆ ಮಾಡಿದೆ ಎಂದು ಹೇಳಬೇಕು ಎಂದು ಹೇಳಿದರು.

ಎಂಟು ದಿನ ಆದ ಮೇಲೆ ನನ್ನ ಮಕ್ಕ ಳನ್ನು ಬೆಟ್ಟದಪುರ ಠಾಣೆಗೆ ಕರೆಸಿಕೊಂಡರು. ಪ್ರಿಂಟರ್ ಇಂಕ್ ಖಾಲಿಯಾಗಿದೆ ಟೈಪ್ ಮಾಡೋಕ್ಕಾಗಲ್ಲ ನಾವು ಹೇಳಿದಂತೆ ಬರೆದುಕೊಡು ಎಂದು ನನ್ನ ಮಗನಿಗೆ ಪೆನ್ನು–ಪೇಪರ್ ಕೊಟ್ಟು, ಹೇಳಿ ಬರೆಸಿದ್ದಾರೆ. ನಿಮ್ಮಪ್ಪನಿಗೆ ಏನಾಗಿಲ್ಲ, ನಾವು ಅರೆಸ್ಟು ಮಾಡಿಲ್ಲ, ಎಲ್ಲೋ ಕೆಲಸಕ್ಕೆ ಹೋಗಿರಬಹುದು ಬರ್ತಾರೆ ಎಂದು ಆತನಿಗೂ ಹೇಳಿದರಂತೆ. ಆಗ ನನ್ನ ಮಗ ನೀವೇ ಕರೆದುಕೊಂಡು ಬಂದಿದ್ದೀರಿ, ಅವರನ್ನು ಬಿಟ್ಟುಬಿಡಿ. ನಮ್ಮ ತಂದೆ ಹೀಗೆ ಮಾಡಲು ಸಾಧ್ಯವೇ ಇಲ್ಲ, ಅವರು ಕುಡಿಯೋದೂ ಇಲ್ಲ. ನೀವುಬೇಕೆಂದೇ ಬಚ್ಚಿಟ್ಟಿದ್ದೀರಿ ಅವರನ್ನು ಬಿಟ್ಟುಬಿಡಿ ಎಂದು ಗೋಗರೆದಿದ್ದಾನೆ. ಆದರೆ ಪೊಲೀಸರು ಗೋಡೌನ್‌ನಲ್ಲಿ ನನ್ನನ್ನು ಇಟ್ಟಿರುವುದನ್ನು ಹೇಳದೆ, ನಿಮ್ಮಪ್ಪ ಮನೆಗೆ ಬರ್ತಾರೆ, ಬಂದ ಮೇಲೆ ಇಲ್ಲಿಗೆ ಕರೆದುಕೊಂಡು ಬನ್ನಿ ಎಂದು ಹೇಳಿ ಊರಿಗೆ ಕಳುಹಿಸಿ ದ್ದಾರೆ. ಆ ಮೇಲೆ ನನ್ನನ್ನು ಕರೆದು ಕೊಂಡು ಹೋಗಿ ನಮ್ಮೂರಿನ ಮುಖಂಡ ರೊಬ್ಬರನ್ನು ಮೇನ್ ರೋಡ್‌ಗೆ ಕರೆಸಿ ಸುರೇಶ್ ತಪ್ಪಿಸಿಕೊಂಡರೆ ನೀವೇ ಹೊಣೆ ಎಂದು ಸಹಿ ಹಾಕಿಸಿಕೊಂಡು ಬಿಟ್ಟರು.


ಸುರೇಶ್ ಮತ್ತು ಮಲ್ಲಿಗೆ

> ಈ ಐದು ವರ್ಷ ನಾನು ಮತ್ತು ನಮ್ಮ ಮನೆಯವರು ಅನುಭವಿಸಿದ ನರಕಯಾತನೆ ಯಾರಿಗೂ ಬೇಡ. ನಿಜಕ್ಕೂ ನರಕದ ಅನುಭವವಾಗಿದೆ. ಬದುಕೋಕೂ ಆಗದೆ, ಸಾಯೋಕು ಆಗದೆ ದಿನ ಕಳೆದಿದ್ದೇವೆ. ಪೊಲೀಸರು ಹೀಗೆಲ್ಲಾ ಮಾಡ್ತಾರಾ ಅಂತ ಭಯವಾಗುತ್ತದೆ. ನಮ್ಮ ಕುಟುಂಬಕ್ಕೆ ಅನ್ಯಾಯವಾಗಿದೆ. ಜೊತೆಗೆ ನ್ಯಾಯಾಲಯಕ್ಕೂ ವಂಚಿಸಿದ್ದಾರೆ. ಏಪ್ರಿಲ್ 17ಕ್ಕೆ ವಿಚಾರಣೆ ಇದೆ. ನ್ಯಾಯ ಸಿಗಬೇಕು. ಮತ್ತೆ ಈ ರೀತಿಯ ಘಟನೆಗಳು ನಡೆಯಬಾರದು. ಪಾಪದವರು ಪೊಲೀಸರಿಗೆ ಬಲಿಯಾಗಬಾರದು.

ಪೊಲೀಸರು ಹೋದ ಮೇಲೆ ನಮ್ಮ ಗ್ರಾಮದ ಮುಖಂಡರು ಎಲ್ಲಿ ಹೋಗಿದ್ದೆ ಎಂದು ನನ್ನನ್ನು ಕೇಳಿದರು. ಅದಾಗಲೇ, ಪೊಲೀಸರು ಕರೆದುಕೊಂಡು ಹೋಗಿದ್ದರು ಎನ್ನಬೇಡ, ಕೆಲಸಕ್ಕೆ ಹೋಗುವಾಗ ದಾರಿಯಲ್ಲಿ ಸಿಕ್ಕಿದೆ ಎಂದು ಹೇಳ ಬೇಕೆಂದು ಪೊಲೀಸರು ಹೇಳಿಕೊಟ್ಟಿದ್ದರು. ನಾನು ಭಯಕ್ಕೆ ಹಾಗೆಯೇ ಹೇಳಿದೆ. ಆದರೆ ಮನೆಯವರಿಗೆಲ್ಲಾ ಏನಾಯಿತು ಎಂದು ಹೇಳಿದೆ. ಏನೆ ಸತ್ಯ ಹೇಳಿದರೂ ಪೊಲೀಸರು ಒಪ್ಪುತ್ತಿಲ್ಲ. ಮುಂದೆ ಏನಾಗುತ್ತೋ ನೋಡೋಣ ಎಂದು ನಾನೇ ಸಮಾಧಾನ ಹೇಳಿದ್ದೆ.

ಇದು ನಿನ್ನ ಹೆಂಡತಿ ಬಟ್ಟೇನೆ...: ಪೊಲೀಸರು ಹೇಳಿದಂತೆ ಮರುದಿನವೇ ಮಕ್ಕಳನ್ನು ಕರೆದುಕೊಂಡು ಬೆಟ್ಟದಪುರ ಠಾಣೆಗೆ ಹೋದೆ. ಕಳೇಬರದ ಬಳಿ ಸಿಕ್ಕಿದ್ದ ಬಟ್ಟೆಯನ್ನು ನನ್ನ ಕೈಯ್ಯಲ್ಲೇ ತೊಳೆಸಿದರು. ಗಣೇಶನ ನೀನೇ ಹುಡುಕಿ ಕೊಡಬೇಕು. ಅವನು ಸಿಗದಿದ್ದರೆ, ಅದಕ್ಕೆ ನಿನ್ನನ್ನೇ ಫಿಟ್ ಮಾಡ್ತೀವಿ ಎಂದರು. ಇದು ನನ್ನ ಹೆಂಡತಿ ಬಟ್ಟೆ ಅಲ್ಲ, ಇದಕ್ಕೂ ನನಗೂ ಸಂಬಂಧ ಇಲ್ಲ ಎಂದಿದ್ದಕ್ಕೆ, ಏಯ್... ಇದು ನಿನ್ನ ಹೆಂಡತಿ ಬಟ್ಟೆಯೇ, ಅಷ್ಟು ಗೊತ್ತಾಗಲ್ವ ಎಂದು ಬೆದರಿಸಿದರು. ನನ್ನ ಹೊರಗೆ ಕಳುಹಿಸಿದರು. ಅತ್ತೆ ಮತ್ತು ಮಕ್ಕಳು ಒಳಗಿದ್ದರು. ಬೇರೆ ಕಚೇರಿ ಯಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್ ನಮ್ಮ ಅತ್ತೆಯ ವಿಚಾ ರಣೆ ನಡೆಸಿದ್ದರು. ಆಗ ನೀವು ಯಾರು ಏನೇ ಹೇಳಿದರೂ ನಮ್ಮ ಅಳಿಯ ಇಂತಹ ಕೆಲಸ ಮಾಡೋಕೆ ಸಾಧ್ಯವೇ ಇಲ್ಲ. ಅವರು ದೇವರಂತ ಹವರು, ಜೀವಮಾನಕ್ಕೂ ಹೀಗೆ ಮಾಡೋ ದಿಲ್ಲ. ನಮ್ಮನ್ನೆಲ್ಲಾ ಸಾಕುತ್ತಿರುವುದು ಅವರೇ ಎಂದು ಹೇಳಿದ್ದರು. ಕೊನೆಗೆ ಪೊಲೀಸರೇ ಬಸ್ಸಿಗೆ ದುಡ್ಡು ಕೊಟ್ಟು ನಮ್ಮನ್ನು ಕಳುಹಿಸಿದರು. ಒಂದು ವರ್ಷ ಸುಮ್ಮನಿದ್ದರು. ಆ ವೇಳೆ ಪೊಲೀಸರು ಹೇಳಿದ್ದರಿಂದ ಗಣೇಶನಿಗಾಗಿ ಎಲ್ಲಾ ಕಡೆ ಹುಡುಕಾ ಡಿಸಿದೆ. ಎಲ್ಲೆಡೆ ಹೋಗಿ ವಿಚಾರಿಸಿದ್ದೆ, ಆದರೆ ಎಲ್ಲೂ ಮಾಹಿತಿ ಸಿಗಲಿಲ್ಲ.

2022ರಲ್ಲಿ ಪೊಲೀಸ್ ಫೋನ್ ಮಾಡಿದರು. ಮೇನ್ ರೋಡ್ ಹತ್ತಿರ ಬಾ ಸ್ವಲ್ಪ ಮಾತಾಡಬೇಕು ಎಂದರು. ಯಾಕೆ ಅಂದಿದ್ದಕ್ಕೆ ಏನಿಲ್ಲಾ ಸಾಹೇಬ್ರು ಕರೀತಿದ್ದಾರೆ, ಒಂದೆರಡು ಮಾತಾಡಿ ವಾಪಸ್ ಕರ್ಕೊಂಡು ಬಂದ್ ಬಿಡ್ತೀವಿ ಅಂದ್ರು. ಸರಿ ಎಂದು, ನಾನು ಅಂಗಡಿ ಹತ್ತಿರ ನಿಂತಿದ್ದೆ. ಟ್ಯಾಕ್ಸಿಯಲ್ಲಿ ಬಂದಿದ್ದ ಪೊಲೀಸ್, ಪಿರಿಯಾಪಟ್ಟಣ ಗೆಸ್ಟ್ ಹೌಸ್‌ಗೆ ಕರೆದುಕೊಂಡು ಹೋದರು. ಆಗ ವಿಚಾರಣೆಗೆ ಮೈಸೂರಿಂದ ದೊಡ್ಡ ಅಧಿಕಾರಿಯೊಬ್ಬರು ಬಂದಿದ್ದರು. ಅವರು ಕುರ್ಚಿಯಲ್ಲಿ ಕುಳಿತರು, ನಾನು ನೆಲದ ಮೇಲೆ ಕುಳಿತು ಕೊಂಡೆ. ವಿಚಾರಣೆ ಆರಂಭಿಸಿದ ಅವರು, ನನ್ನ ಫ್ರೆಂಡ್ಸ್ ಫೋಟೋಗಳನ್ನು ತೋರಿಸಿ, ಇವರೆಲ್ಲಾ ಗೊತ್ತಾ ಎಂದು ಕೇಳಿದರು. ನಾನು ಹೌದು, ಇವರೆಲ್ಲಾ ಪರಿಚಯದವರೇ ಎಂದು ಹೇಳಿದೆ. ಗಣೇಶ್‌ನ


ವಕೀಲ ಪಾಂಡು ಪೂಜಾರಿ

ಮುಂದುವರೆದ ಭಾಗ ಪುಟ 11ರಲ್ಲಿ

REMEMBRANCE



C.P. Chinnappa
Executive Director
& one of the promoters of
Academy Newspapers Pvt. Ltd.,
Born : 27-5-1931 Died : 16-4-2010


Your sense of discipline and punctuality will continue to guide us.

— Board of Directors &
Staff of Academy Newspapers Pvt. Ltd.,
Publishers of Star of Mysore & Mysuru Mithra



ಗೀತಾ ಅವರು ಸಾಗಿ ಬಂದ ರಂಗಭೂಮಿಯ ಹಾದಿ...


ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯದ ಸಾಂಪ್ರದಾಯಿಕ ಕುಟುಂಬದಿಂದ ಬಂದ ಗೀತಾ ಮೊಂಟಡ್ಕ ವಿಭಿನ್ನ ಮಾರ್ಗವನ್ನು ಆಯ್ಕೆ ಮಾಡಿಕೊಂಡು ಆ ಮಾರ್ಗದಲ್ಲಿ ಸಾಗಲು ದೃಢನಿಶ್ಚಯ ಮಾಡಿದರು. ಮೊಂಟಡ್ಕ ಶೇಷಪ್ಪಗೌಡ ಮತ್ತು ವೆಂಕಮ್ಮ ದಂಪತಿಯ ಪುತ್ರಿಯಾದ ಇವರು ತಮ್ಮ ಸ್ವಗ್ರಾಮದಲ್ಲೇ ಶಿಕ್ಷಣವನ್ನು ಪೂರ್ಣಗೊಳಿಸಿದರು. ರಂಗಭೂಮಿಯ ಮೇಲಿನ ಅವರ ಉತ್ಸಾಹ ಎಷ್ಟು ಪ್ರಬಲವಾಗಿತ್ತೆಂದರೆ, 1986 ರಲ್ಲಿ ತಮ್ಮ ಸರ್ಕಾರಿ ಉದ್ಯೋಗವನ್ನು ತ್ಯಜಿಸಿ ರಂಗಾಯಣ ಮೈಸೂರು ಸೇರುವ ದಿಟ್ಟ ನಿರ್ಧಾರವನ್ನು ತೆಗೆದುಕೊಂಡರು. ಇವರು ಒಬ್ಬ ಪ್ರತಿಭಾನ್ವಿತ ಗಾಯಕಿ ಮತ್ತು ಮಿಮಿಕ್ರಿ ಕಲಾವಿದೆಯೂ ಆಗಿದ್ದು, ಅವರ ಕಲಾ ಸಂಗ್ರಹಕ್ಕೆ ಬಹುಮುಖತೆಯನ್ನು ಸೇರಿಸಿದ್ದಾರೆ. ದಂತಕಥೆ ರಂಗಭೀಷ್ಮ ಬಿ.ವಿ. ಕಾರಂತ್ ಅವರ ವಿದ್ಯಾರ್ಥಿನಿಯಾಗಿ, ಗೀತಾ ತಮ್ಮ ಪ್ರದರ್ಶನಗಳ ಮೂಲಕ ಮಾತ್ರವಲ್ಲದೆ ನಾಟಕಕಾರ ಮತ್ತು ನಿರ್ದೇಶಕಿಯಾಗಿಯೂ ಪ್ರೇಕ್ಷಕರ ಮನಗೆದ್ದಿದ್ದಾರೆ. ಮೂರು ದಶಕಗಳಿಗೂ ಹೆಚ್ಚು ಕಾಲದ ವೃತ್ತಿಜೀವನದ ನಂತರ, ಅವರು ಇದೇ ಮೇ ತಿಂಗಳಲ್ಲಿ ನಿವೃತ್ತರಾಗಲಿದ್ದಾರೆ. ಇದು ವೃತ್ತಿಪರ ರಂಗಭೂಮಿಯಲ್ಲಿ ಒಂದು ಗಮನಾರ್ಹ ಅಧ್ಯಾಯದ ಅಂತ್ಯವನ್ನು ಸೂಚಿಸುತ್ತದೆ.



ರಂಗಭೂಮಿಯೇ ಜೀವನ

-ಗೀತಾ ಮೊಂಟಡ್ಕ

■ ಎಸ್.ಎನ್. ವೆಂಕಟನಾಗ್ ಸೋಬರ್ಸ್





ಸ್ನೇಹಿತರು ಮತ್ತು ಸ್ವಂತ ಕುಟುಂಬದವರ ಟೀಕೆಗೆ ಗುರಿಯಾದರೂ ಎದೆಗುಂದದೇ ಅಡುಗೆಮನೆಯಿಂದ ಹೊರಬಂದು, ಮಡಿವಂತಿಕೆಯನ್ನು ಬದಿಗೆ ಸರಿಸಿ, ರಂಗಭೂಮಿ ವೇದಿಕೆ ಏರಿ ಸಾಧನೆ ಮಾಡಿದ ದಿಟ್ಟ ಮಹಿಳೆ ಗೀತಾ ಮೊಂಟಡ್ಕ.

ಸುಮಾರು ನಾಲ್ಕು ದಶಕಗಳ ಕಾಲ ರಂಗಭೂಮಿಗೆ ತಮ್ಮನ್ನು ಸಮರ್ಪಿಸಿಕೊಂಡ ಗೀತಾ ಮೊಂಟಡ್ಕ ಒಬ್ಬ ಮಾರ್ಗದರ್ಶಕ ಕಲಾವಿದೆ ಮತ್ತು ಮೈಸೂರು ರಂಗಾಯಣದಲ್ಲಿ ಉಳಿದಿರುವ ಮೂವರು ಮೂಲ ಹಿರಿಯ ಕಲಾವಿದರಲ್ಲಿ ಇವರೂ ಒಬ್ಬರು. ಈ ಹಿರಿಯ ರಂಗಾಯಣ ಕಲಾವಿದೆ 'ಮೈಸೂರು ಮಿತ್ರ'ನಲ್ಲಿ ತಮ್ಮ ಸ್ಫೂರ್ತಿದಾಯಕ ಪ್ರಯಾಣ, ಜೀವನದ ಅನುಭವಗಳು ಮತ್ತು ಯೋಜನೆಗಳ ಮುಕ್ತವಾಗಿ ಹಂಚಿಕೊಂಡಿದ್ದಾರೆ.

ಮೈಸೂರು ಮಿತ್ರ: ***ಗೃಹಸ್ಥಾಶ್ರಮಕ್ಕೆ ಮಹಿಳೆಯರು ಸೀಮಿತವಾಗಿ ಸಹಜ ಜೀವನವನ್ನು ಮೀರಿದ ಅವಕಾಶಗಳನ್ನು ಪಡೆಯುವುದು ಕಷ್ಟಕರವಾಗಿದ್ದ ಕಾಲದಲ್ಲಿ ನೀವು ರಂಗಭೂಮಿಯಲ್ಲಿ ಮುಂದುವರಿಸಲು ನಿಮಗೆ ಸ್ಫೂರ್ತಿ ಏನು?***

ಗೀತಾ ಮೊಂಟಡ್ಕ: ನಾನು ಯಾವಾಗಲೂ ನನ್ನ ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳಲು ದೃಢ ಸಂಕಲ್ಪ ಹೊಂದಿದ್ದೇನೆ. ಶೈಕ್ಷಣಿಕ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಸಕ್ರಿಯವಾಗಿದ್ದ ನಾನು ಅಂತಿಮವಾಗಿ 1986 ರಲ್ಲಿ ರಂಗಾಯಣವನ್ನು ಸೇರಿದೆ. ರಂಗಭೂಮಿಯಲ್ಲಿ ತೊಡಗಿಸಿಕೊಂಡರೆ ನನ್ನ ಸರ್ಕಾರಿ ಕೆಲಸವನ್ನು ತ್ಯಜಿಸಬೇಕಾಗಿತ್ತು. ಹೀಗಾಗಿ ನನ್ನ ಕುಟುಂಬದಿಂದ, ವಿಶೇಷವಾಗಿ ನನ್ನ ತಂದೆಯಿಂದ ಅದಕ್ಕೆ ವಿರೋಧವನ್ನು ಎದುರಿಸಬೇಕಾಯಿತು. ಆದರೆ ನನ್ನ ತಾಯಿ ನನ್ನ ಬೆಂಬಲಕ್ಕೆ ನಿಂತು, ನನ್ನನ್ನು ಪ್ರೋತ್ಸಾಹಿಸಿದರು. ಅವರ ಬೆಂಬಲ ಮತ್ತು ನನ್ನನ್ನು ಟೀಕಿಸುವವರಿಗೆ ಅದು ತಪ್ಪು ಎಂಬುದನ್ನು ಮನವರಿಕೆ ಮಾಡಿಕೊಡಬೇಕೆಂಬ ಛಲವು ನಾನು ಆಯ್ಕೆ ಮಾಡಿಕೊಂಡ ಗುರಿ ತಲುಪುವ ನನ್ನ ಸಂಕಲ್ಪಕ್ಕೆ ಶಕ್ತಿ ನೀಡಿತು.

ಮಿತ್ರ: ***ನಿಮ್ಮ ಹುಟ್ಟೂರನ್ನು ತೊರೆದು ಸಾಂಸ್ಕೃತಿಕವಾಗಿ ವಿಭಿನ್ನವಾಗಿರುವ ಮೈಸೂರಿನಂತಹ ನಗರಕ್ಕೆ ಹೊಂದಿಕೊಳ್ಳುವುದು ನಿಮಗೆ ಸವಾಲಾಗಲಿಲ್ಲವೇ?***

ಗೀತಾ ಮೊಂಟಡ್ಕ: ಅದು ಅಷ್ಟೇನೂ ಸುಲಭವಾಗಿರಲಿಲ್ಲ. ನನಗೆ ಮೊದಲ ಆರು ವರ್ಷಗಳು ಸ್ಪಷ್ಟವಾಗಿ ನೆನಪಿದೆ. ಇಲ್ಲಿನ ಜನರಿಗೆ ನನ್ನ ಭಾಷೆಯನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ನಾನು ಕೂಡ ಇಲ್ಲಿನ ಭಾಷಾ ಶೈಲಿಯನ್ನು ಅರ್ಥಮಾಡಿಕೊಳ್ಳಲು ಹೆಣಗಾಡಬೇಕಾಯಿತು. ಕೆಲವೊಮ್ಮೆ ಭಾಷೆಯ ತೊಡಕಿನಿಂದಾಗಿ ಒಂಟಿತನ ಕಾಡಿದ್ದೂ ಉಂಟು. ಹಲವು ಬಾರಿ ಇಲ್ಲಿನ ಭಾಷೆಯನ್ನು ತಪ್ಪಾಗಿ ಅರ್ಥೈಸಿಕೊಳ್ಳುತ್ತಿದ್ದೆ. ನನ್ನತನವನ್ನು ವ್ಯಕ್ತಪಡಿಸುವಲ್ಲಿ ಅಸಮರ್ಥಳಾಗುತ್ತಿದ್ದೇನೆ ಎಂಬ ಭಾವನೆ ನನ್ನನ್ನು ಕಾಡುತ್ತಿತ್ತು ನನ್ನ ಹುಟ್ಟೂರಿನಲ್ಲಿ ನನಗೆ ಆರೋಗ್ಯ ಸಮಸ್ಯೆ ಇರಲಿಲ್ಲ. ಇಲ್ಲಿನ ಹೊಸ ವಾತಾವರಣವು ನನ್ನ ತೀವ್ರವಾಗಿ ಕಾಡಿದ್ದಲ್ಲದೇ, ಆರೋಗ್ಯ ಸಮಸ್ಯೆಯನ್ನೂ ಎದುರಿಸಬೇಕಾಯಿತು. ನಾನು ಮೈಸೂರು ಶೈಲಿಯ ಆಹಾರಕ್ಕೆ ಒಗ್ಗಿಕೊಂಡಿರಲಿಲ್ಲವಾದ್ದರಿಂದ ಆರೋಗ್ಯವೂ ಮತ್ತೊಂದು ಸವಾಲಾಗಿತ್ತು. ನನ್ನ ಆಹಾರವನ್ನು ನಾನೇ ಸಿದ್ಧಪಡಿಸಿಕೊಳ್ಳಬೇಕಾಯಿತು.



ಮಿತ್ರ: ***ನೀವು ಭಾಷಾ ತೊಡಕನ್ನು ಹೇಗೆ ನಿಭಾಯಿಸಿದಿರಿ?***

ಗೀತಾ ಮೊಂಟಡ್ಕ: ಅದು ಅಷ್ಟು ಸುಲಭವಾಗಿರಲಿಲ್ಲ. ಇಂದಿಗೂ ನಾನು ಸಂಭಾಷಣೆಗಳ ನಡುವೇ ನನ್ನ ಹುಟ್ಟೂರಿನ ಭಾಷೆಯನ್ನು ಸ್ವಾಭಾವಿಕವಾಗಿ ವ್ಯಕ್ತಪಡಿಸುತ್ತೇನೆ. ಆದಾಗ್ಯೂ, ವೇದಿಕೆಯಲ್ಲಿ, ಭಾಷೆ ಎಂದಿಗೂ ಸಮಸ್ಯೆಯಾಗಿಲ್ಲ. ಪತ್ರಿಕೆಗಳು ಮತ್ತು ನಿಯತಕಾಲಿಕೆಗಳನ್ನು ನಿಯಮಿತವಾಗಿ ಓದುವ ಮೂಲಕ ನನ್ನ ಕನ್ನಡವನ್ನು ಸುಧಾರಿಸಲು ನಾನು ಸಾಕಷ್ಟು ಪ್ರಯತ್ನ ಮಾಡಿದ್ದೇನೆ. ಇಂದಿಗೂ ಕೂಡ ಈ ಅಭ್ಯಾಸವನ್ನು ಮುಂದುವರಿಸುತ್ತಿದ್ದೇನೆ. ಈ ಸಮರ್ಪಣೆ ನನಗೆ ಇಲ್ಲಿಗೆ ಒಗ್ಗಿಕೊಳ್ಳಲು ಸಹಾಯ ಮಾಡಿತು ಮತ್ತು ರಂಗಾಯಣದ ನಿರ್ಮಾಣಗಳಲ್ಲಿ ವಿವಿಧ ಪಾತ್ರಗಳನ್ನು ವಹಿಸಿಕೊಳ್ಳಲು ನನಗೆ ಅವಕಾಶ ಮಾಡಿಕೊಟ್ಟಿತು.

ಮಿತ್ರ: ***ರಂಗಾಯಣ ಮತ್ತು ಬಿ.ವಿ. ಕಾರಂತರ ಬಗ್ಗೆ ನಿಮ್ಮ ಮೊದಲ ಅನಿಸಿಕೆಗಳೇನು?***

ಗೀತಾ ಮೊಂಟಡ್ಕ: ಮೂರು ಕಠಿಣ ಸುತ್ತಿನ ಸಂದರ್ಶನಗಳ ನಂತರ 800 ಅಭ್ಯರ್ಥಿಗಳ ಪೈಕಿ ಆಯ್ಕೆಯಾದ 25 ಕಲಾವಿದರಲ್ಲಿ ನಾನೂ ಒಬ್ಬಳಾಗಿದ್ದೆ. ನನ್ನ ಭಾಷಾ ತೊಡಕಿನಿಂದಾಗಿ ಈ ಪ್ರಕ್ರಿಯೆಯು ನನಗೆ ಅತ್ಯಂತ ಸವಾಲಿನದ್ದಾಗಿತ್ತು. ನಾನು ಆಯ್ಕೆಯಾಗುವಲ್ಲಿ ಯಶಸ್ವಿಯಾದರೂ, ನಿಜವಾದ ಪರೀಕ್ಷೆ ನಂತರ ಪ್ರಾರಂಭವಾಯಿತು.

ಆರಂಭದಲ್ಲಿ ನನಗೆ ಪ್ರಮುಖ ಪಾತ್ರಗಳನ್ನು ನೀಡುತ್ತಿರಲಿಲ್ಲ. ಉತ್ತಮ ಪಾತ್ರಗಳನ್ನು ಕಳೆದುಕೊಳ್ಳುವ ಬಗ್ಗೆ ನಾನು ಆಗಾಗ್ಗೆ ನಿರಾಶೆಗೊಳ್ಳುತ್ತಿದ್ದೆ. ಆದಾಗ್ಯೂ, ಬಿ.ವಿ. ಕಾರಂತರು ನನ್ನ ಮಾರ್ಗದರ್ಶಕ ಬೆಳಕಾದರು. ಅವರು ನನ್ನನ್ನು ಹೆಚ್ಚು ಹೆಚ್ಚು ನಾಟಕ ಕೃತಿಗಳ ಓದಲು ಪ್ರೋತ್ಸಾಹಿಸಿದರು ಮತ್ತು ಸಾಹಿತ್ಯ ತರಗತಿಗಳನ್ನು ಏರ್ಪಡಿಸಿದರು. ಇದು ನಮ್ಮ ಭಾಷಾ ಮತ್ತು ಕಲಾತ್ಮಕ ಕೌಶಲಗಳನ್ನು ಬಹಳವಾಗಿ ಹೆಚ್ಚಿಸಿತು. ಅವರ ಮಾರ್ಗದರ್ಶನ ಅಮೂಲ್ಯವಾಗಿತ್ತು. ಅವರು ನನಗೆ ಸಿಕ್ಕ ಅತ್ಯುತ್ತಮ ಶಿಕ್ಷಕರಾಗಿದ್ದರು.

ಮಿತ್ರ: ***ಸಹಕಲಾವಿದರು, ವಿಭಿನ್ನ ನಿರ್ದೇಶಕರಿಗೆ ಹೊಂದಿಕೊಳ್ಳುವುದು ಅತ್ಯಂತ ಕ್ಲಿಷ್ಟಕರವಾಗಿರಬೇಕಲ್ಲವೇ?***

ಗೀತಾ ಮೊಂಟಡ್ಕ: ಬಂದಂತಹ ನಿರ್ದೇಶಕರು ತಮ್ಮದೇ ಆದ ವಿಶಿಷ್ಟ ದೃಷ್ಟಿಕೋನ ಮತ್ತು ಶೈಲಿಯನ್ನು ಹೊಂದಿರುತ್ತಾರೆ. ಕಲಾವಿದರಾಗಿ, ನಾವು ಅದಕ್ಕೆ ತಕ್ಕಂತೆ ಹೊಂದಿಕೊಳ್ಳಬೇಕಾಗಿತ್ತು. ಸರ್ಕಾರದಲ್ಲಿನ ಪ್ರತಿಯೊಂದು ಬದಲಾವಣೆಯೊಂದಿಗೆ, ರಂಗಾಯಣವು ಹೊಸ ನಿರ್ದೇಶಕರನ್ನು ಕಂಡಿತು. ಅಂದರೆ ಆಗಾಗ್ಗೆ ಹೊಂದಾಣಿಕೆಗಳನ್ನು ಮಾಡಬೇಕಾಗಿತ್ತು.

ಕೆಲವು ನಿರ್ದೇಶಕರು ನಮಗೆ ಸೃಜನಶೀಲ ಸ್ವಾತಂತ್ರ್ಯವನ್ನು ನೀಡಿದರು. ಸಹಯೋಗದೊಂದಿಗೆ ನಾಟಕವನ್ನು ರೂಪಿಸಲು ನಮಗೆ ಅವಕಾಶ ಮಾಡಿಕೊಟ್ಟರು. ಆದರೆ, ಕೆಲವರು ಮಾತ್ರ ಅವರದ್ದೇ ದೃಷ್ಟಿಕೋನವನ್ನು ಹೊಂದಿದ್ದರು. ಅವರದೇ ನಿರ್ದೇಶನವನ್ನು ಕಟ್ಟುನಿಟ್ಟಾಗಿ ಅನುಸರಿಸುವಂತೆ ಒತ್ತಾಯಿಸುತ್ತಿದ್ದರು. ಎರಡೂ ಅನುಭವಗಳು ನಮ್ಮನ್ನು ವೈವಿಧ್ಯಮಯ ದೃಷ್ಟಿಕೋನಗಳಿಗೆ ಒಡ್ಡಿಕೊಂಡು, ವಿವಿಧ ಹಿನ್ನೆಲೆಯ ಜನರೊಂದಿಗೆ ಕೆಲಸ ಮಾಡಲು ಅವಕಾಶ ಮಾಡಿಕೊಟ್ಟವು. ಇದು ನಿರಂತರ ಕಲಿಕೆಯ ರೇಖೆಯಾಗಿತ್ತು.

ಮಿತ್ರ: ***ರಂಗಾಯಣ ಮೂರು ದಶಕಕ್ಕೂ ಹೆಚ್ಚು ಕಾಲ ಪೂರ್ಣಗೊಳಿಸಿದೆ. ಅದರ ಬೆಳವಣಿಗೆಯನ್ನು ನೀವು ಹೇಗೆ ನೋಡುತ್ತೀರಿ?***

ಗೀತಾ ಮೊಂಟಡ್ಕ: ಬಿ.ವಿ. ಕಾರಂತರ ಆಡಳಿತದ ಅವಧಿಯು ವಿಜಯನಗರ ಸಾಮ್ರಾಜ್ಯದ ಸುವರ್ಣಯುಗದಂತಿತ್ತು. ಕಾರಂತರೊಂದಿಗಿನ ನಮ್ಮ ಸಮಯ ನಂಬಲಾಗದಷ್ಟು ಶ್ರೀಮಂತವಾಗಿತ್ತು. ನಾವು ಭಾಷೆ, ಸಾಹಿತ್ಯ ಮತ್ತು ರಂಗ ಭೂಮಿಯ ಸಾಂಸ್ಕೃತಿಕ ಬೇರುಗಳನ್ನು ಆಳವಾಗಿ ಅಧ್ಯಯನ ಮಾಡಿದೆವು. ಅದು ಕಲಿಕೆ ಮತ್ತು ಕಲಾತ್ಮಕ ಸಂಶೋಧನೆಯ ಸಮಯವಾಗಿತ್ತು.



ನಂತರದ ವರ್ಷಗಳಲ್ಲಿ ಅನಿಶ್ಚಿತತೆ ಕಾಡಿತು. ನಮ್ಮ ಉದ್ಯೋಗಗಳು ಕಾಯಂ ಆಗದ ಕಾರಣ, ನಾವು ಅಸುರಕ್ಷಿತರು ಎನಿಸಿತು. ವಿಶೇಷವಾಗಿ ನಾನು ಸರ್ಕಾರಿ ಕೆಲಸವನ್ನು ಬಿಟ್ಟು ರಂಗಾಯಣಕ್ಕೆ ಸೇರಿದ್ದೆ. ಸೂಕ್ತ ಸಂಬಳ ಪಡೆಯಲು ನಾವು ಹಲವು ವರ್ಷಗಳ ಕಾಲ ಹೆಣಗಾಡಬೇಕಾಯಿತು.

ಕೆಲವು ಕಲಾವಿದರು ರಂಗಭೂಮಿಗೇ ಸರ್ವಸ್ವವನ್ನೂ ಅರ್ಪಿಸಿದ್ದರೂ, ಕೆಲಸದ ಅಭದ್ರತೆಯಿಂದಾಗಿ ರಂಗಾಯಣವನ್ನು ತೊರೆದರು. ನಾನು ಸಹ ರಂಗಾಯಣವನ್ನು ತೊರೆಯಲು ಯೋಚಿಸಿದ್ದು ಉಂಟು. ವರ್ಷಗಳ ನಿರಂತರ ಹೋರಾಟದ ನಂತರವೇ ರಾಜ್ಯ ಸರ್ಕಾರವು ನಮಗೆ ಉದ್ಯೋಗ ಯೋಜನೆಯನ್ನು ನೀಡಿತು. ಇದು ರಂಗಾಯಣ ಕಲಾವಿದರಿಗೆ ಅಗತ್ಯವಾದ ಸ್ಥಿರತೆಯನ್ನು ನೀಡಿತು.

ಮಿತ್ರ: ***ನಿಮ್ಮ ನಿವೃತ್ತಿಗೆ ಕೆಲವೇ ತಿಂಗಳುಗಳು ಬಾಕಿ ಇರುವುದರಿಂದ ನೀವು ಭವಿಷ್ಯಕ್ಕಾಗಿ ಏನಾದರೂ ಯೋಜನೆ ರೂಪಿಸಿದ್ದೀರಾ?***

ಗೀತಾ ಮೊಂಟಡ್ಕ: ಅದೃಷ್ಟವಶಾತ್ ನನ್ನ ಪ್ರಯಾಣದುದ್ದಕ್ಕೂ ನನಗೆ ಬೆನ್ನೆಲುಬಾಗಿ ನನ್ನ ಕುಟುಂಬ ನನ್ನೊಂದಿಗಿದೆ. ನಿವೃತ್ತಿಯ ನಂತರ ನಾನು ರಂಗಭೂಮಿಯೊಂದಿಗೆ ಸಂಪರ್ಕದಲ್ಲಿರಲು ಉದ್ದೇಶಿಸಿದ್ದೇನೆ. ಯುವ, ಉತ್ಸಾಹಭರಿತ ಕಲಾವಿದರೊಂದಿಗೆ ಕೆಲಸ ಮಾಡುವ ಬಯಕೆಯೂ ನನ್ನದಾಗಿರುವುದರಿಂದ ಆಹ್ವಾನಿಸಿದರೆ ಹವ್ಯಾಸಿ ರಂಗಭೂಮಿ ಗುಂಪುಗಳೊಂದಿಗೆ ಸಹಕರಿಸಲು ನಾನು ಉತ್ಸುಕಳಾಗಿದ್ದೇನೆ. ಹೆಚ್ಚುವರಿಯಾಗಿ ನಾನು ವರ್ಷಗಳಿಂದ ಬರೆದ ನಾಟಕಗಳನ್ನು ಪ್ರಕಟಿಸಲು ಚಿಂತನೆ ನಡೆಸಿದ್ದೇನೆ. ಅದು ನಾನು ಬಹಳ ದಿನಗಳಿಂದ ಕಾಣುತ್ತಿರುವ ಕನಸು ಆಗಿದೆ.

ಮಿತ್ರ: ***ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಸಂದರ್ಭದಲ್ಲಿ ಮಹಿಳೆಯರಿಗೆ ನಿಮ್ಮ ಸಂದೇಶವೇನು?***

ಗೀತಾ ಮೊಂಟಡ್ಕ: ಮಹಿಳಾ ಸಬಲೀಕರಣವು ಭಾಷಣಗಳು ಮತ್ತು ವೇದಿಕೆ ಕಾರ್ಯಕ್ರಮಗಳಿಗೆ ಸೀಮಿತವಾಗಿರಬಾರದು. ಅದು ಮನೆಯಿಂದಲೇ ಪ್ರಾರಂಭವಾಗಬೇಕು. ಪ್ರತಿ ಮನೆಯೂ ಸಮಾನತೆಯನ್ನು ಪ್ರೋತ್ಸಾಹಿಸಿದಾಗ, ಮಹಿಳೆಯರು ತಮ್ಮ ಆಯ್ಕೆಗಳನ್ನು ಮಾಡಲು ಮತ್ತು ಅವರ ಕನಸುಗಳನ್ನು ನನಸಾಗಿಸಿಕೊಳ್ಳಲು ಅವಕಾಶ ನೀಡಿದಾಗ ನಿಜವಾದ ಸಬಲೀಕರಣ ಪ್ರಾರಂಭವಾಗುತ್ತದೆ. ನಾನು ಯಾವಾಗಲೂ ಪುರುಷರು ಮತ್ತು ಮಹಿಳೆಯರನ್ನು ಸಮಾನರಾಗಿ ನೋಡಿದ್ದೇನೆ ಮತ್ತು ಈ ಮನಃಸ್ಥಿತಿಯು ಸಮತೋಲಿತ ಮತ್ತು ಪ್ರಗತಿಪರ ಸಮಾಜವನ್ನು ನಿರ್ಮಿಸಲು ಮುಖ್ಯವಾಗಿದೆ ಎಂದು ನಾನು ನಂಬುತ್ತೇನೆ.

ಜೈಲಲ್ಲಿ ಶಿಕ್ಷೆ ಬದಲು ಶಿಕ್ಷಣ ನೀಡಿದರು...!

✍... ಎ.ಗಣೇಶ



ಪತ್ನಿ ರೇವತಿ ಮತ್ತು ಮಕ್ಕಳೊಂದಿಗೆ ಅನ್ಬುರಾಜ್.

ಜೈಲುವಾಸ ಶಿಕ್ಷೆ ಅಲ್ಲ, ಅದು ಅರಿವಿನ ಅವಕಾಶ ಎಂಬುದು ಮೈಸೂರು ಕೇಂದ್ರ ಕಾರಾಗೃಹ ಸಾಬೀತುಪಡಿಸಿದ್ದು, ಇಲ್ಲಿ ಶಿಕ್ಷೆ ಮುಗಿಸಿ ಹೊರಬಂದ ಕೈದಿಗಳು ಮನ ಪರಿವರ್ತನೆಯಾಗಿ ಉತ್ತಮ ಜೀವನ ನಡೆಸುವ ಮೂಲಕ ಸಮಾಜಕ್ಕೆ ಮಾದರಿಯಾಗುತ್ತಿದ್ದಾರೆ.

ಮೈಸೂರಿನ ಕೇಂದ್ರ ಕಾರಾಗೃಹದಲ್ಲಿ ವ್ಯವಸ್ಥೆ ಮಾಡಿರುವ ಹೊಲಿಗೆ ತರಬೇತಿ, ನೇಕಾರಿಕೆ, ಗುಡಿ ಕೈಗಾರಿಕೆ, ಬೇಕರಿ ತಿನಿಸು ತಯಾರಿಕೆ, ಎಲೆಕ್ಟ್ರಿಕಲ್ ತರಬೇತಿ, ರಂಗಭೂಮಿ ಹೀಗೆ ಹತ್ತು ಹಲವು ಚಟುವಟಿಕೆಗಳು ವ್ಯಕ್ತಿಯ ಪರಿವರ್ತನೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿವೆ. ಜೊತೆಗೆ ರಂಗಭೂಮಿಗೂ ಅಧಿಕ ಒತ್ತು ನೀಡಿ ರಂಗ ತರಬೇತಿ ನೀಡಲಾಗುತ್ತಿದ್ದು, ಇದರ ಮೂಲಕ ಅನೇಕ ಕೈದಿಗಳು ತಾವು ಪರಿವರ್ತನೆಗೊಂಡು ಇನ್ನು ಮುಂದೆ ಸಮಾಜದಲ್ಲಿ ಸರಿ ದಾರಿಯಲ್ಲಿ ನಡೆದು ಸೈ ಎನಿಸಿಕೊಳ್ಳುತ್ತಿದ್ದಾರೆ. ಪ್ರಮುಖವಾಗಿ ರಂಗಭೂಮಿ ಒಲವು ಹೊಂದಿರುವ ಕೈದಿಗಳು, ಸಮಾಜದ ಏಳು-ಬೀಳು, ಶಿಕ್ಷಣ ಹಾಗೂ ಸಾವಯವ ಕೃಷಿ ಕುರಿತು ಅರಿವು ಮೂಡಿಸುವ ಕೆಲಸವನ್ನು ಮಾಡುವ ಮೂಲಕ ಸಮಾಜಕ್ಕೆ ತಮ್ಮದೇ ಕೊಡುಗೆ ನೀಡಲು ಮುಂದಾಗಿದ್ದಾರೆ.

ಸಣ್ಣ ವಯಸ್ಸಿನಲ್ಲಿ ಅಚಾನಕ್ ಆಗಿ ಕಾಡುಗಳ್ಳ ವೀರಪ್ಪನ್ ತಂಡದಲ್ಲಿ ಸೇರ್ಪಡೆಯಾಗಿ ಆತನ ದುಷ್ಕೃತ್ಯಗಳಲ್ಲಿ ಭಾಗಿಯಾದ ಅನ್ಬುರಾಜ್ ಸುಮಾರು 20 ವರ್ಷ ಜೈಲು ಶಿಕ್ಷೆ ಅನುಭವಿಸಿ ನಂತರ ಪರಿವರ್ತನೆಗೊಂಡು ಈಗ ಸಮಾಜಕ್ಕೆ ಮಾದರಿಯಾಗಿ ಜೀವನ ನಡೆಸುತ್ತಿದ್ದಾರೆ. ಕೇವಲ 6ನೇ ತರಗತಿಯವರೆಗೂ ಮಾತ್ರ ವ್ಯಾಸಂಗ ಮಾಡಿದ್ದ ಅನ್ಬುರಾಜ್ ಮೈಸೂರಿನ ಜೈಲಿನಲ್ಲಿ ಓದು ಮುಂದುವರೆಸಿ ಪದವಿ ಪಡೆದುಕೊಂಡಿದ್ದಾರೆ. ಮೂಲತಃ ತಮಿಳರಾದ ಇವರು ಕನ್ನಡ ಕಲಿತು ಜೈಲಿನಲ್ಲಿ ಕುವೆಂಪು, ತೇಜಸ್ವಿ, ಯು.ಆರ್.ಅನಂತಮೂರ್ತಿ, ಜೆ.ಸಿ.ಕುಮರನ್ ಅವರುಗಳ ಕೃತಿ ಓದಿ, ಸಾಹಿತ್ಯವನ್ನೂ ಮೈಗೂಡಿಸಿಕೊಂಡಿದ್ದಾರೆ. ಶಿಕ್ಷಣದ ಮಹತ್ವವನ್ನು ಜೈಲಿನಲ್ಲಿ ಅರಿತುಕೊಂಡಿದ್ದ ಅವರು, ಬಿಡುಗಡೆಯಾದ ನಂತರ ಶಿಕ್ಷಣದಿಂದ ಯಾರೂ ವಂಚಿತರಾಗಬಾರದು ಎಂದು ತಮ್ಮ ಕೆಲ ಸ್ನೇಹಿತರೊಡಗೂಡಿ ಟ್ರೈಬಲ್ ಫೌಂಡೇಶನ್ ಸಂಸ್ಥೆಯನ್ನು ಕಟ್ಟಿ, ತಮಿಳುನಾಡಿನ ಕಾಡಂಚಿನ ಗ್ರಾಮಗಳಲ್ಲಿ ಪ್ರೌಢ ಶಿಕ್ಷಣ ಮುಗಿಸಿ ಮುಂದೆ ಕಾಲೇಜಿಗೆ ಹೋಗಲು ಸಾಧ್ಯವಿಲ್ಲದ ಬಡ ವಿದ್ಯಾರ್ಥಿಗಳ ನೆರವಿಗೆ ನಿಂತಿದ್ದಾರೆ. ಬುಡಕಟ್ಟು ಸಮುದಾಯದ

❛ 20 ವರ್ಷದ ಜೈಲು ಶಿಕ್ಷೆಯನ್ನು ತಮಿಳುನಾಡು, ಕೇರಳ ಹಾಗೂ ಕರ್ನಾಟಕದ ಜೈಲಿನಲ್ಲಿ ಕಳೆದಿದ್ದೇನೆ. ಆದರೆ, ಮೈಸೂರಿನ ಜೈಲಿನಲ್ಲಿ ಶಿಕ್ಷೆ ನೀಡುವ ಬದಲು ಶಿಕ್ಷಣದ ಮೂಲಕ ಪರಿವರ್ತನೆ ಮಾಡಿದ್ದಾರೆ. ಯಾವುದೇ ಜೈಲಾದರೂ ಶಿಕ್ಷೆ ನೀಡುವ ಬದಲು ಶಿಕ್ಷಣ ನೀಡಬೇಕು. ರಂಗಭೂಮಿ, ಸಂಗೀತ, ಕರಕುಶಲತೆ ಸೇರಿದಂತೆ ಇತರೆ ಚಟುವಟಿಕೆಯಿಂದ ಮಾತ್ರ ಕೈದಿಗಳ ಮನ ಪರಿವರ್ತನೆ ಸಾಧ್ಯ. ಅದಕ್ಕೆ ನಾನೇ ಸಾಕ್ಷಿ. ಜೈಲಿನಲ್ಲಿ ಸಿಕ್ಕ ಶಿಕ್ಷಣದಿಂದ ಇಂದು ಸಮಾಜದಲ್ಲಿ ಉತ್ತಮ ವ್ಯಕ್ತಿಯಾಗಿ ರೂಪುಗೊಂಡು ನನ್ನ ಮಕ್ಕಳಿಗೆ ಒಳ್ಳೆಯ ತಂದೆಯಾಗಿದ್ದೇನೆ. –ಅನ್ಬುರಾಜ್

ನೂರಾರು ಮಕ್ಕಳಿಗೆ ಉನ್ನತ ಶಿಕ್ಷಣವನ್ನು ತಮ್ಮ ಸಂಸ್ಥೆ ಮೂಲಕ ಕೊಡಿಸಿ, ಈವರೆಗೆ 83 ವಿದ್ಯಾರ್ಥಿಗಳನ್ನು ಪದವೀಧರರನ್ನಾಗಿ ಮಾಡಿದ್ದಾರೆ ಅಲ್ಲದೇ, ಸಾವಯವ ಕೃಷಿ ಕುರಿತು ಅರಿವು ಮೂಡಿಸುವ ಕಾರ್ಯವನ್ನೂ ಮಾಡುತ್ತಿರುವ ಅವರು, ತಮಿಳುನಾಡಿನ ಅಂದಿಯೂರಿನಲ್ಲಿ ಸಾವಯವ ಕೃಷಿಯಿಂದ ಬೆಳೆದ ಪದಾರ್ಥಗಳ ಮಾರಾಟ ಮಳಿಗೆ ತೆರೆದಿದಾರೆ. ಇದರಿಂದ ಯಾವುದೇ ಲಾಭಾಂಶ ಉದ್ದೇಶವಿಲ್ಲದೆ. ಸಮಾಜಕ್ಕೆ ಸಾವಯವ ಕೃಷಿ ಮಹತ್ವವನ್ನು ಸಾರುತ್ತಿದ್ದಾರೆ.

ಜೈಲಿನಲ್ಲಿ ಮನಪರಿವರ್ತನೆಯಾಗಿದ್ದು ಹೇಗೆ?: ತಮಿಳುನಾಡಿನ ಅಂದಿಯೂರಿನ ಕಾಡಂಚಿನ ಗ್ರಾಮವೊಂದರ ನೇಕಾರ ಕುಟುಂಬಕ್ಕೆ ಸೇರಿದ, ಕೇವಲ 6ನೇ ತರಗತಿಯಷ್ಟೇ ವ್ಯಾಸಂಗ ಮಾಡಿದ್ದ ಅನ್ಬುರಾಜ್, ವೀರಪ್ಪನ್ ಕಾರ್ಯಾಚರಣೆ ವೇಳೆ ಎಸ್‌ಟಿಎಫ್ ತಂಡದಿಂದ ಕೆಲವರ ಮೇಲೆ ಆದ ದೌರ್ಜನ್ಯ, ಕಿರುಕುಳ ಕಣ್ಣಾರೆ ಕಂಡಿದ್ದ, ವಯೋಸಹಜ ಗುಣದಂತೆ ಈತ ವೀರಪ್ಪನ್‌ನನ್ನು ಹೀರೋವಾಗಿ ಕಲ್ಪನೆ ಮಾಡಿಕೊಂಡು ಆತನ ತಂಡ ಸೇರಿಕೊಳ್ಳಲು ನಿರ್ಧಾರ ಮಾಡಿದ್ದ. ಒಂದು ದಿನ ತನ್ನ ಇಬ್ಬರು ಸ್ನೇಹಿತರೊಂದಿಗೆ ಕಾಡಿನಲ್ಲಿ ಕುರಿ ಮೇಯಿಸುತ್ತಿದ್ದಾಗ ಅಲ್ಲಿ ವೀರಪ್ಪನ್ ತಂಡ ಪ್ರತ್ಯಕ್ಷವಾಗಿದೆ. ಆ ಕ್ಷಣ ಸಂಭ್ರಮಿಸಿದ ಆತ ಹಿಂದೆ ಮುಂದೆ ನೋಡದೇ ತನ್ನ ಸ್ನೇಹಿತರೊಂದಿಗೆ ವೀರಪ್ಪನ್ ತಂಡವನ್ನು ಹಿಂಬಾಲಿಸಿದ. ಆದರೆ, ನಂತರದ ದಿನಗಳಲ್ಲಿ ನಾವು ತಪ್ಪು ಮಾಡುತಿದ್ದೇವೆಂದು ಅವರಿಗೆ ಮನವರಿಕೆಯಾಗಿದೆ.



ಅಂದಿಯೂರಿನ ತಮ್ಮ ಸಾವಯವ ಕೃಷಿ ಪರಿಕರಗಳ ಮಳಿಗೆಯಲ್ಲಿ ಅನ್ಬುರಾಜ್.

ಅಷ್ಟರಲ್ಲಿ ಎಲ್ಲವೂ ಕೈಮೀರಿ ಹೋಗಿದೆ. ಇವರು ವೀರಪ್ಪನ್ ತಂಡದಲ್ಲಿರುವುದು ಬಹಿರಂಗವಾಗಿ ಹೋಗಿದೆ. ಪೊಲೀಸರು ಇವರನ್ನೂ ಹುಡುಕಾಡುಕಲಾಂಭಿಸಿದ್ದಾರೆ. ಮನೆಗೆ ಹೋದರೆ ನಮ್ಮನ್ನು ಪೊಲೀಸರು ಎನ್‌ಕೌಂಟರ್ ಮಾಡಿಬಿಡುತ್ತಾರೆ ಎಂಬ ಭಯ ಇವರಿಗೆ ಶುರುವಾಯಿತು. ಬೇರೆ ದಾರಿ ಕಾಣದೆ ವೀರಪ್ಪನ್ ಜೊತೆ ಹೆಜ್ಜೆ ಹಾಕಿದ ಇವರು ಆತ ನಡೆಸಿದ ಅಪಹರಣ ಮತ್ತಿತರ ಪ್ರಕರಣಗಳಲ್ಲಿ ಸಕ್ರಿಯವಾಗಿ ಭಾಗಿಯಾಗಿದ್ದಾರೆ. ಈ ಹಂತದಲ್ಲಿ ವೀರಪ್ಪನ್ ಯಾವುದೇ ಹತ್ಯೆ ನಡೆಸಿರಲಿಲ್ಲ. ವೀರಪ್ಪನ್ ಜೊತೆಗಿದ್ದರೂ ತಾವು ಮನೆಗೆ ಹೋಗಬೇಕು ಎಂಬ ಇಂಗಿತವನ್ನು ಇವರು ವೀರಪ್ಪನ್ ಬಳಿ ಆಗಾಗ ಪ್ರಸ್ತಾಪಿಸುತ್ತಲೇ ಇದ್ದರು. ಆದರೆ ಇವರನ್ನು ಸುರಕ್ಷಿತವಾಗಿ ಶರಣಾಗಿಸುವುದು ವೀರಪ್ಪನ್ ಉದ್ದೇಶವಾಗಿತ್ತು.

ಈ ಮಧ್ಯೆ ತಮಿಳುನಾಡಿನ 'ನೆಟ್ರಿಕಣ್' ಪತ್ರಿಕೆ ಸಂಪಾದಕ ಮಣಿ ಅವರು ವೀರಪ್ಪನ್‌ನನ್ನು ಭೇಟಿ ಮಾಡಿದಾಗ ಶರಣಾದರೆ ಕೇವಲ ಒಂದು ವರ್ಷ ಮಾತ್ರ ಜೈಲು ಶಿಕ್ಷೆಯಾಗಬಹುದು. ನಂತರ ಬಿಡುಗಡೆ ಮಾಡಲಾಗುತ್ತದೆ. ಇದಕ್ಕೆ ಸರ್ಕಾರ ಒಪ್ಪಿದೆ ಎಂದು ಹೇಳಿದಾಗ, ಮೊದಲು ಈ ಹುಡುಗರನ್ನು ಸರ್ಕಾರಕ್ಕೆ ಶರಣಾಗಿಸಿ ಎಂದು ಅನ್ಬುರಾಜ್ ಮತ್ತು ಅವರ ಇಬ್ಬರು ಸ್ನೇಹಿತರನ್ನು ಮಣಿ ಅವರ ಜೊತೆ ಕಳುಹಿಸಿಕೊಡುತ್ತಾನೆ ಶರಣಾದ ಅನ್ಬುರಾಜ್ ಮತ್ತು ಸ್ನೇಹಿತರು ಬಂಧಿಸಲ್ಪಟ್ಟು ತಮಿಳುನಾಡಿನ ಜೈಲುಗಳಲ್ಲಿ ಕೆಲವರ್ಷ ಇದ್ದು, ಅಲ್ಲಿನ ಪ್ರಕರಣಗಳಲ್ಲಿ ಬಿಡುಗಡೆಯಾಗುತ್ತಿದ್ದಂತೆಯೇ ಕರ್ನಾಟಕದಲ್ಲಿ ದಾಖಲಾಗಿದ್ದ ಪ್ರಕರಣಗಳಲ್ಲಿ ಬಂಧಿಸಲ್ಪಟ್ಟು ಮೈಸೂರು ಜೈಲು ಸೇರಿದರು.

ಕೃಪಾಕರ– ಸೇನಾನಿ ಅಪಹರಣ ಪ್ರಕರಣದಲ್ಲಿ ಇವರು ದೋಷಮುಕ್ತರಾದರೂ, ಗುಂಡಾಲ್ ಅರಣ್ಯಪ್ರದೇಶದಲ್ಲಿ 9 ಮಂದಿ ಅರಣ್ಯ ಸಿಬ್ಬಂದಿ ಅಪಹರಣ ಪ್ರಕರಣದಲ್ಲಿ ಇವರಿಗೆ ಜೀವಾವಧಿ ಶಿಕ್ಷೆಯಾಗುತ್ತದೆ. ಒಟ್ಟಾರೆ ಸುಮಾರು 20 ವರ್ಷ ಜೈಲಿನಲ್ಲಿ ಇವರು ಇರಬೇಕಾಗುತ್ತದೆ. ಕೊನೆಗೆ ಗೌರಿ ಲಂಕೇಶ್ ಮತ್ತಿತರರ ಪ್ರಯತ್ನದಿಂದಾಗು ಇವರೆಲ್ಲರೂ 2016ರಲ್ಲಿ ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದ ವೇಳೆ ಜೈಲಿನಿಂದ ಬಿಡುಗಡೆಯಾಗುತ್ತಾರೆ ಎಂಬುದನ್ನು ಅನ್ಬುರಾಜ್ ಸ್ಮರಿಸಿಕೊಳ್ಳುತ್ತಾರೆ.



ವೀರಪ್ಪನ್ ತಂಡದೊಂದಿಗೆ ಅನ್ಬುರಾಜ್ (ವೃತ್ತದಲ್ಲಿರುವವರು).


ಮೈಸೂರು ಕೇಂದ್ರ ಕಾರಾಗೃಹದಲ್ಲಿದ್ದ ವೇಳೆ ಜೈಲಿನಿಂದ ತಪ್ಪಿಸಿಕೊಳ್ಳಲು ಅನ್ಬುರಾಜ್ ಹೊಂಚು ಹಾಕುತ್ತಿದ್ದಾಗ ಜೈಲು ಕೈದಿಗಳಿಗೆ ರಂಗ ತರಬೇತಿ ನೀಡಲು ಆಗಮಿಸಿದ್ದ ಖ್ಯಾತ ರಂಗಕರ್ಮಿ ಹುಲುಗಪ್ಪ ಕಟ್ಟಿಮನಿ ಅವರ ಕಣ್ಣಿಗೆ ಬಿದ್ದಿದ್ದಾನೆ. ಅವರು, ನಾನು ರಂಗ ಶಿಕ್ಷಕ, ಜೈಲಿನಲ್ಲಿ ಕೈದಿಗಳಿಗೆ ನಾಟಕ ಮಾಡಿಸಲು ಬಂದಿದ್ದೇನೆ. ನೀನು ಸೇರುವೆಯಾ ಎಂದು ಕೇಳಿದ ತಕ್ಷಣ ಇವರೊಟ್ಟಿಗೆ ಸೇರಿಕೊಂಡರೆ ಸುಲಭವಾಗಿ ಜೈಲಿನಿಂದ ತಪ್ಪಿಸಿಕೊಳ್ಳಬಹುದು ಎಂದು ಆಲೋಚಿಸಿ ನಂತರ ರಂಗ ಶಿಕ್ಷಣ ಆರಂಭಿಸಿದ.

ಹೀಗೆ ರಂಗ ತರಬೇತಿ ಪಡೆದುಕೊಳ್ಳಲು ಆರಂಭಿಸಿದ ಅನ್ಬುರಾಜ್, ಅನೇಕ ನಾಟಕಗಳ ಪ್ರದರ್ಶನ ಆರಂಭಿಸಿ ರಂಗಭೂಮಿಯನ್ನು ನೆಲೆಯಾಗಿಸಿಕೊಂಡಿದ್ದಾರೆ. ಈ ವೇಳೆ ಮಹಿಳಾ ಪಾತ್ರಗಳನ್ನು ಪುರುಷ ಕೈದಿಗಳೇ ನಿರ್ವಹಿಸಬೇಕಾಗಿತ್ತು. ಈ ಹಿನ್ನೆಲೆಯಲ್ಲಿ ಮೈಸೂರಿನ ರಂಗಕರ್ಮಿ ಸಂಚಲನ ದೀಪಕ್ ಅವರು ಬೆಂಗಳೂರಿನ ಕೇಂದ್ರ ಕಾರಾಗೃಹಕ್ಕೆ ತೆರಳಿ ಅಲ್ಲಿನ ಮಹಿಳಾ ಕೈದಿಗಳನ್ನು ಭೇಟಿ ಮಾಡಿ ರಂಗಭೂಮಿಯಲ್ಲಿ ಆಸಕ್ತಿ ಉಳ್ಳವರನ್ನು ಆಯ್ಕೆ ಮಾಡಿ ಮೈಸೂರಿನ ಜೈಲಿಗೆ ಕರೆತಂದರು.

ಹೀಗೆ ಬೆಂಗಳೂರಿನ ಜೈಲಿನಿಂದ ಮೈಸೂರಿನ ಜೈಲಿಗೆ ಬಂದ ಮಹಿಳಾ ಕೈದಿಗಳಲ್ಲಿ ರೇವತಿ ಎಂಬ ಜೀವಾವಧಿ ಶಿಕ್ಷೆಗೆ ಗುರಿಯಾಗಿದ್ದ ಕೈದಿಯೂ ಇದ್ದರು. ನಾಟಕ ತರಬೇತಿ ವೇಳೆ ರೇವತಿ ಹಾಗೂ ಅನ್ಬುರಾಜ್ ನಡುವೆ ಪ್ರೇಮಾಂಕುರವಾಗಿ ನಂತರ ಇಬ್ಬರು ಜೈಲಿನಲ್ಲಿದ್ದಾಗಲೇ ವಿವಾಹವಾಗಿದ್ದಾರೆ. ಈಗ ಇಬ್ಬರು ಮಕ್ಕಳು ಸೇರಿದಂತೆ ಇವರ ಪುಟ್ಟ ಸಂಸಾರ ಸುಖಮಯ ಜೀವನವನ್ನು ಸಾಗಿಸುತ್ತಿದೆ.

ಜೈಲಿನ ಕಂಚಿನ ಕಂಠದ ಹಕ್ಕಿ: ಕೌಟುಂಬಿಕ ಕಲಹದ ವೇಳೆ ಅತ್ತೆಯನ್ನು ಕೊಲೆ ಮಾಡಿದ ಆರೋಪದಡಿ ಮಹದೇವಸ್ವಾಮಿಗೆ ಜೀವಾವಧಿ ಶಿಕ್ಷೆ ನೀಡಲಾಗಿತ್ತು ಮೈಸೂರಿನ ಕೇಂದ್ರ ಕಾರಾಗೃಹದಲ್ಲಿ ಶಿಕ್ಷೆ ಅನುಭವಿಸುತ್ತಿದ್ದ ಮಹದೇವಸ್ವಾಮಿಯ ಕಂಚಿನ ಕಂಠದ ಧ್ವನಿ ರಂಗಕರ್ಮಿ ಹುಲುಗಪ್ಪ ಕಟ್ಟಿಮನಿ ಅವರ ಕಿವಿಗೆ ಬಿತ್ತು. ಹೀಗಾಗಿ ಆತನೂ ರಂಗಭೂಮಿಯಲ್ಲಿ ತೊಡಗಿಕೊಳ್ಳುವಂತೆ ಪ್ರೇರೇಪಿಸಿದರು, ಜನಪದ, ರಂಗಭೂಮಿ ಬಗ್ಗೆ ಅಪಾರ ಆಸಕ್ತಿ ಹೊಂದಿದ್ದ ಮಹದೇವಸ್ವಾಮಿಗೆ ಕಟ್ಟಿಮನಿಯವರ ಆಹ್ವಾನ ಸನ್ಮಾರ್ಗದ ದಾರಿಗೆ ದೀಪವಾಯಿತು.

ಹುಲುಗಪ್ಪ ಕಟ್ಟಿಮನಿ ಅವರ ನಿರ್ದೇಶನದಲ್ಲಿ ನಾಟಕಗಳನ್ನು ಮಾಡಿಕೊಂಡು ಜೈಲುವಾಸ ಅನುಭವಿಸುತ್ತಿದ್ದ ವೇಳೆ 2013ರಲ್ಲಿ ಅಂದಿನ ಗೃಹ ಸಚಿವರಾಗಿದ್ದ ಡಾ.ಜಿ.ಪರಮೇಶ್ವರ್ ಜೈಲಿಗೆ ಭೇಟಿ ನೀಡಿದ್ದ ವೇಳೆ ಮಹದೇವಸ್ವಾಮಿಯ ರಸಮಂಜರಿ ಕಾರ್ಯಕ್ರಮದ ಮೂಲಕ ರಂಜಿಸುತ್ತಿದ್ದ ಆ ಧ್ವನಿ ಗೃಹ ಸಚಿವರ ಕಿವಿಗೆ ಬಿದ್ದು ಮಹದೇವಸ್ವಾಮಿ ಬಗ್ಗೆ ಜೈಲಿನ ಅಧಿಕಾರಿಗಳ ಬಳಿ ವಿಚಾರಿಸಿದಾಗ ಆತನ ಬಗ್ಗೆ ಉತ್ತಮ ಅಭಿಪ್ರಾಯ ವ್ಯಕ್ತವಾಗಿದೆ. ನಂತರ ಆತನನ್ನು ಸನ್ನಡತೆ ಆಧಾರದ ಮೇಲೆ ಬಿಡುಗಡೆ ಮಾಡುವಂತೆ ಶಿಫಾರಸು ಮಾಡಿದರು. ಅದರಂತೆ 2016ರ ಗಣರಾಜೋತ್ಸವದಂದು ಜೈಲಿನ ಪಂಜರದಿಂದ ಹೊರಬಂದ.



❛ ತಪ್ಪು ನಿರ್ಧಾರದಿಂದ ಜೈಲು ಸೇರಿ ಅಲ್ಲಿ ನೀಡುವ ಶಿಕ್ಷಣ ಪಡೆದು ಮರಳಿ ಸಮಾಜದಲ್ಲಿ ಒಳ್ಳೆಯದಾಗಿ ಬದುಕುತ್ತಿದ್ದೇನೆ. ತಪ್ಪು ಮಾಡಿ ಜೈಲುವಾಸ ಅನುಭವಿಸಿ ಬಂದವರ ಸಮಾಜ ಉತ್ತಮ ರೀತಿಯಲ್ಲಿ ಸ್ವೀಕರಿಸಬೇಕು. ಜೈಲಿನಿಂದ ಹೊರ ಬಂದವರೂ ಸಮಾಜದಲ್ಲಿ ಸಂಕಷ್ಟಗಳನ್ನು ಮೆಟ್ಟಿ ನಿಲ್ಲಬೇಕು.

–ಮಹದೇವಸ್ವಾಮಿ

ಜೈಲಿನಿಂದ ಬಿಡುಗಡೆಗೊಂಡ ಬಳಿಕ ಮಹದೇವಸ್ವಾಮಿ ರಂಗ ತಂಡವನ್ನು ಸೇರಿಕೊಂಡು ಬೀದಿ ನಾಟಕ ಮಾಡಲು ಆರಂಭಿಸಿ, ಸರ್ಕಾರದ ಯೋಜನೆಗಳು, ಶಿಕ್ಷಣದ ಮಹತ್ವ, ಮೂಢನಂಬಿಕೆ ಬಗ್ಗೆ ಜನರಿಗೆ ಅರಿವೂ ಮೂಡಿಸುವ ಕಾರ್ಯದಲ್ಲಿ ತನ್ನನ್ನು ತಾನು ತೊಡಗಿಸಿಕೊಂಡ ಮಹದೇವಸ್ವಾಮಿಗೆ ಕಲರ್ಸ್ ಕನ್ನಡದ ರಿಯಾಲಿಟಿ ಶೋ ಕನ್ನಡ ಕೋಗಿಲೆಗೆ ಆಯ್ಕೆಯಾದ ಅಲ್ಲಿಯೂ ಗಾಯನ ಶೈಲಿ ಮೂಲಕ ಶೋನ ತೀರ್ಪುಗಾರರು ಮತ್ತು ಸಾರ್ವಜನಿಕರ ಮೆಚ್ಚಿಗೆಗೆ ಪಾತ್ರನಾದ.

ಹೀಗೆ ಸಣ್ಣ ಪುಟ್ಟ ಕಾರ್ಯಕ್ರಮಗಳಲ್ಲಿ ಕಾಣಿಸಿಕೊಳ್ಳುತ್ತಿದ್ದ ಮಹದೇವಸ್ವಾಮಿಗೆ ಜೀವನ ನಿರ್ವಹಣೆಗೆ ಕಷ್ಟವಾದರೂ ಯಾರ ಬಳಿಯೂ ಕೈ ಚಾಚದೆ ಗಾರೆ ಕೆಲಸ ಮಾಡಿ ಜೀವನ ಸಾಗಿಸುತ್ತಿದ್ದ ವೇಳೆ 'ಪಬ್ಲಿಕ್ ಟಿವಿ'ಯ ಮುಖ್ಯಸ್ಥರಾದ ಹೆಚ್.ಆರ್.ರಂಗನಾಥ್, ಮಹದೇವಸ್ವಾಮಿಯನ್ನು ಕರೆಸಿಕೊಂಡು ಜೀವನ ನಿರ್ವಹಣೆಗೆ ಆಟೋ ಕೊಡಿಸಿದ್ದಾರೆ. ಈ ಆಟೋ ಮೂಲಕ ದುಡಿಮೆ ಮಾಡುತ್ತಿರುವ ಅವರು ಸಮಯ ಸಿಕ್ಕಾಗ ವಿವಿಧಾಯನ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದಾರೆ.


Shree Mahalakshmi Sweets wishes
Mysore's Trusted Newspaper
MYSURU MITHRA
on its 46th Anniversary
46
ಮೈಸೂರು ಮಿತ್ರ
SHREE
Mahalakshmi
SWEETS
MYSURU
SINCE 1991
For Orders/Enquiries
Call us on 1800 571 9949 or visit our branches
www.shreemahalakshmisweets.com


BHIMA
roperties
Creating a better living for
Lifetime
A Venture of
SHREE
Mahalakshmi
SWEETS
MYSURU
SINCE 1991
Bhima Properties wishes
Mysore's Trusted Newspaper
MYSURU MITHRA
on its 46th Year Anniversary
ಮೈಸೂರು ಮಿತ್ರ
46
UP TO
75 %
Bank
Loan
Bhima Vishaka
Krithika Hill View
Ashwini Phase 2
Sindhoor
Sites ready for registration
Available site Dimensions
30x40 I 30x50 I 30xODD
MUDA
RERA
1200+ HAPPY CUSTOMER
1.3+ Million Sq.ft Affordable Luxury
10 Years Experience
+91 97419 88821
info@bhimaproperties.com
www.bhimaproperties.com

ಮೈಸೂರು ಮಿತ್ರ


ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತು ಗಳು ವಿಶ್ವಾಸಪೂರ್ಣವೇ ಆದರೂ ಅವು ಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸ ಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು


ಮೈಸೂರು ಮಿತ್ರ ನಿಗೆ
46ನೇ ವಾರ್ಷಿಕೋತ್ಸವದ ಶುಭಾಶಯಗಳು
ಮೈಸೂರು ಮಿತ್ರ
46
ಶುಭ ಕೋರುವವರು
ಶ್ರೀ ಅಯುಬ್ ಖಾನ್
ಮಾಜಿ ಮಹಾ ಪೌರರು, ಮೈ.ನ.ಪಾ. &
ಅಧ್ಯಕ್ಷರು, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರ


46
ಮೈಸೂರು ಮಿತ್ರ
ನಿಮ್ಮ ಮೆಚ್ಚಿನ ಕನ್ನಡ ದಿನಪತ್ರಿಕೆ
46 ನೇ ವರ್ಷಕ್ಕೆ
ಪಾದಾಪರ್ಣ ಮಾಡುತ್ತಿರುವ ಕನ್ನಡ ದಿನಪತ್ರಿಕೆ
ಮೈಸೂರು ಮಿತ್ರನಿಗೆ
ಶುಭಾಶಯಗಳು
ಶುಭಕೋರುವವರು :
ಮೈಸೂರು ನಗರ ಕಾಂಗ್ರೆಸ್
ಸಮಿತಿ ಹಿಂದುಳಿದ ವರ್ಗ
ಎಂ.ಎಲ್.ಗೋಪಾಲ್
ಹಿರಿಯ ಉಪಾಧ್ಯಕ್ಷರು
ಜಿ.ಜಿ.ಕೇಶವ
ಕಾರ್ಯದರ್ಶಿ
ಕಮಲ ಅನಂತರಾಮ್
ರಾಜ್ಯ ಉಪಾಧ್ಯಕ್ಷರು
ಎಂ.ಎಸ್.ಲಕ್ಷ್ಮೀನಾರಾಯಣ್
ಸಂಚಾಲಕರು
ದಿವಾಕರ್
ಉಪಾಧ್ಯಕ್ಷರು
ಎನ್.ಆರ್.ನಾಗೇಶ್
ಅಧ್ಯಕ್ಷರು


ಮೈಸೂರು ಮಿತ್ರ
46
ಜನ, ಮನ ಮೆಚ್ಚುಗೆಯ ಮಾಧ್ಯಮದ ಗೆಳೆಯ
ಮೈಸೂರು ಮಿತ್ರನಿಗೆ
46ನೇ ವರ್ಷದ ವಾರ್ಷಿಕೋತ್ಸವದ
ಶುಭಾಶಯಗಳು
ಡಾ. ತಿಮ್ಮಯ್ಯ
ವಿಧಾನ ಪರಿಷತ್ ಸದಸ್ಯರು, ಮೈಸೂರು-ಚಾಮರಾಜನಗರ ಕ್ಷೇತ್ರ


ಮೈಸೂರು ಮಿತ್ರ
46
'ಮೈಸೂರು ಮಿತ್ರ'
ಪ್ರಾದೇಶಿಕ ದಿನಪತ್ರಿಕೆಗೆ
ವಾರ್ಷಿಕೋತ್ಸವದ
ಶುಭಾಶಯಗಳು
ದರ್ಶನ್ ಧ್ರುವನಾರಾಯಣ್
ಶಾಸಕರು, ನಂಜನಗೂಡು
ವಿಧಾನಸಭಾ ಕ್ಷೇತ್ರ

ಪಟ

ಪ್ರಥಮ ಬಹುಮಾನ



ಗಾಯತ್ರಿ ಸುಂದರೇಶ್
ಸಂಸ್ಥಾಪನ ಕಾರ್ಯದರ್ಶಿ
ಸಖಿ ಫೌಂಡೇಶನ್ ಮತ್ತು
ಸೂರ್ಯ ಚಾರಿಟೆಬಲ್ ಟ್ರಸ್ಟ್,
ಮೈಸೂರು. ಮೊ: 9964790442



ಅಕ್ಕೋ...ಮಲ್ಲಕ್ಕೋ...ಪ್ಯಾಟ್ಯಾಗಿಂದ ಎಲ್ಲಾ ತಕ್ಕಬಂದೀವ್ನಿ ವಸಿ ಬಿರ್ನೆ ಬಾ...ನಂಗೆ ತ್ವಾಟದಾಗೆ ಸ್ಯಾನೆ ಕ್ಯಾಮೆ ಐತೆ' ತಮ್ಮ 'ಸೀನ'ನ ಕೂಗಿಗೆ ಹಿತ್ತಲಲ್ಲಿ ಕೊಟ್ಟಿಗೆ ಸ್ವಚ್ಛಗೊಳಿಸುತ್ತಿದ್ದ 'ಮಲ್ಲಿ' ಅಲ್ಲಿಯೇ ಹಸುಗಳಿಗೆ ನೀರುಣಿಸುವ ದೊಡ್ಡ ಕಡಾಯಿಯಲ್ಲಿದ್ದ ನೀರನ್ನು ತನ್ನ ಮೊಣಕೈ ಸಹಾಯದಿಂದ ಅಂಗೈವರೆಗೂ ತೊಳೆದುಕೊಂಡಳು. ಒದ್ದೆಯಾದ ಕೈಗಳನ್ನು ಸೆರಗಿನ ತುದಿಯಿಂದ ಒರೆಸಿಕೊಳ್ಳುತ್ತ ಮುಂಬಾಗಿಲ ಬಳಿ ಬಂದವಳೇ...ತನ್ನ ಬಾಯಿಗೆ ಕೆಲಸ ಕೊಟ್ಟಳು!

'ನೆನ್ನೆ ವತ್ತಾರೆ ವೋದವ ಈಟೋತ್ತ್ಗಂಟ ಏನ್ಲಾ ಮಾಡ್ತಿದ್ದೆ... ಪ್ಯಾಟೆಗೋಗ್ಬುಟ್ರೆ ನಿಂಗೆ ಅಟ್ಟಿ, ದನ ಕರ ಏನೂ ನೆಪ್ಪಾಗಂಗೆ ಇಲ್ಲ ನೋಡು, ಅಲ್ಲಾ ಕಣ್ಲಾ ವತ್ತಾರೆ ವೋಗಿ ಸಂದೆ ವತ್ಗೆ ಬಂದು ಅಟ್ಟಿಗ್ ಸೇರ್ಕಳಕ್ಕೆ ಏನ್ ರ್‍ವಾಗ ಅಂತೀನಿ... ಆ ದನಕರುಗಳಾದ್ರು ವಾಸಿ ಕೆಲ್ಸ ಮುಗಿಸ್ಕೊಂಡು ತೆಪ್ಗೆ ಕೊಟ್ಗೆಗ್ತಾವಕ್ಕೆ ಬಂದು ಸೇರ್ಕತಾವೆ' ಮಲ್ಲಿಯ ಲೊಚಗುಟ್ಟುವಿಕೆ ನಿಲ್ಲುತ್ತಲೇ ಇಲ್ಲ. 'ಅಯ್ಯ ಸಿವನೇ ಏನೇ ಮಲ್ಲಿ ನಿನ್ ರಾಗ.. ಆ ಐದ ದಣಿಕ್ಕೊಂಡು ಬಂದಾವ್ನೆ.. ವಸಿ ಕಾಪಿಯೋ ಗಂಜಿಯೋ ಕೊಡಾದ್ ಬುಟ್ಟು ನಿನ್ ಅರಿಕೆತೆ ಸುರುಮಾಡಕ್ಕೊಂಡ್ಯಲ್ಲೆ' ಹೊಲದ ಕೆಲಸ ಮುಗಿಸಿ ಬಂದ ಮಲ್ಲಿಯ ಗಂಡ 'ಮಾದೇವ' ಸೀನನ ಪರ ನಿಂತ. 'ಸರಿ ಸರಿ...ನೀವ್ ಭಾವಭಾಮೈದ ಜೊತೆ ಸೇರ್ಕಂಡ್ರೆ ನನ್ ಮಾತು ಕಿವಿಗೆ ಕಾದ ಸೀಸ ಆಯ್ತದೆ ಅಲ್ಲವಾ' ಮಲ್ಲಿ ಮೂತಿ ಸೊಟ್ಟಗೆ ಮಾಡಿಕೊಂಡು ಮುಖ ಊದಿಸಿಕೊಂಡು ನಿಂತಳು.

'ಏ...ಬಾರ್ಲ ಸೀನ ನಿಮ್ಮಕ್ಕಂದು ಇದ್ದದ್ದೆಯಾ... ನಾ ಯೋಳಿದ್ನಲ್ಲ ಆ ಕೆಲ್ಸ ಏನ್ ಮಾಡ್ದೆ' ಮಾದೇವ ಮೆಲ್ಲನೆ ಸೀನನ್ನು ಪಕ್ಕದ ಓಣಿಗೆ ಕರೆದುಕೊಂಡು ಹೋಗಿ ವಿಚಾರಿಸಿದ. 'ವಸಿ ಸುಮ್ಕಿರು ಭಾವೋ ಆ ಕೆಲ್ಸ ಎಲ್ಲ ಎಂಗ್ಮಾಡದು ಅಂತ ನಂಗೆ ಗೊತ್ತಾಗಾಕಿಲ್ಲ...ಪ್ಯಾಟ್ಯಾಗಿರೋ ವೆಂಕಣ್ಣನ ಸ್ಯಾನೆ ವಿಚಾರ್‍ಸದೆ' ಸೀನ ವಿನಮ್ರನಾಗಿ ಭಾವನಿಗೆ ಉತ್ತರಿಸಿದ. 'ಊರ್‍ಗೊಬ್ಳೆ ಪದ್ಮಾವತಿ ಅಂದಾರಲ್ಲ ಅಂಗೆ, ವೆಂಕಣ್ಣ ವೊಬ್ನೇಯೇನ್ಲ ಇರಾದು...ಪ್ಯಾಟ್ಯಾಗೆ ಸ್ಯಾನೆ ಮಂದಿಗೊತ್ತು ಅಂತ ಊರೆಲ್ಲಾ ಯೋಳ್ಕೊಂಡು ತಿರಗಾಡೀಯಲ್ಲ...ನಾ ಯೋಳಿರೊ ಸಣ್ ಕೆಲಸಾನೂ ನಿಂಗೆ ಆಗಾಕಿಲ್ಲ...ಇರ್ಲಿ ಬುಡು ನಾನೆ ಯೋನಾರ ಮಾಡೇನು ನಂಗೂ ಪ್ಯಾಟೆನಾಗೆ ಸ್ಯಾನೆ ಮಂದಿ ಗೊತ್ತಿರವರು ಅವರೆ' ಎಂದು ಮಾದೇವ ಹೆಗಲ ಮೇಲಿನ ವಸ್ತ್ರ ಸರಿಪಡಿಸಿಕೊಂಡು ಸೀನನಿಗೆ ಸವಾಲು ಹಾಕುವ ರೀತಿಯಲ್ಲಿ ನೋಡುತ್ತ ಅಲ್ಲಿಂದ ಹೊರಟ!

ಮಾದೇವನ ನಿರ್ಗಮನದಿಂದ ಸೀನ ತುಸು ನಿರಾಳನಾದರೂ ಭಾವನ ಆಸೆ ಈಡೇರಿಸುವ ಬಗೆ ಹೇಗೆ? ಎಂದು ತಲೆಕೆರೆದುಕೊಂಡ.

*****

'ಬ್ಯಾಕ್ ಪೇಜ್ ಫುಲ್ ಕವರ್ ಆಗಿದೆ, ಜಾಗ ಖಾಲಿ ಇಲ್ಲ ಮತ್ತೇ ಯಾವುದಾದರೂ ಐಟಂ ಬಂದರೆ ಒಳಗಡೆ ಪೇಜ್‌ಗೇ ತಗೊಳಿ' ಪ್ರಸಿದ್ಧ ಪತ್ರಿಕೆಯ ಜಾಹೀರಾತು ವಿಭಾಗದಲ್ಲಿನ ಸಂಭಾಷಣೆ ನಿತ್ಯದಂತೆ ಸಾಗುತ್ತಿದೆ. 'ನಮಸ್ಕಾರ ಗೋವಿಂದಣ್ಣ.. ಚಂದಾಗಿದೀರಾ' ದಪ್ಪದನಿ ಬಂದೆಡೆಗೆ ಜಾಹೀರಾತು ವಿಭಾಗದ ಮುಖ್ಯಸ್ಥ ಗೋವಿಂದರಾಜು ತಿರುಗಿದ. 'ಓಹೋ.ಹೋ...ಬರಬೇಕು ಬರಬೇಕು ಮುನಿಯಪ್ಪನೋರು... ಮೂರ್‍ನಾಲ್ಕು ತಿಂಗಳಿಂದ ಈ ಕಡೆ ತಮ್ಮನ್ನ ಕಂಡಿದ್ದೇ ಇಲ್ಲ' ಎಂದು ಕುಶಲೋಪರಿ ವಿಚಾರಿಸಿ ಕುರ್ಚಿಯ ಕಡೆ ಕೈ ತೋರಿದ. ತಾನೂ ಒಂದು ಚೇರನ್ನು ಎಳೆದುಕೊಂಡು ಬಂದ ವಿಷಯವೇನು ಎಂಬಂತೆ ಮುನಿಯಪ್ಪನ ಮುಖ ನೋಡಿದ.

'ಅದೇ ಗೋವಿಂದಣ್ಣ ನಾಳೀಕೆ ನಮ್ಮ ಜಯರಾಜಪ್ಪಂದು ಉಟ್ಟಬ್ಬ ಐತಲ್ಲ ಅದ್ಕೆ ಅಡ್ವಟೇಜ್ಮೆಂಟು ಕೊಡಾವ ಅಂತ ಬಂದಿ, ತಕ್ಕಳಣ್ಣ ಎಲ್ಲಾ ಪಟಗೊಳೋ, ಅಂಗೆಯಾ ಮ್ಯಾಟ್ರು' ಎಂದು ಒಂದಷ್ಟು ಭಾವಚಿತ್ರಗಳನ್ನು ಅದರ ಜೊತೆಗೆ ಒಂದು ಕಾಗದದಲ್ಲಿ ಬರೆದ ಹೆಸರುಗಳನ್ನು ಗೋವಿಂದರಾಜುವಿನ ಮೇಜಿನ ಮೇಲಿಟ್ಟ 'ಏನ್ ಮುನಿಯಪ್ಪನವರೇ... ಈ ಕಾಲದಲ್ಲಿ ಎಲ್ಲರೂ ಡಿಸೈನ್ ಡಿಟಿಪಿ ಮಾಡಿಸಿ ಕೊಡ್ತಾರೆ, ಫೋಟೋ ಎಲ್ಲಾ ವಾಟ್ಸಪ್ಪು, ಇಮೇಲು ಅಂತ ಮಾಡ್ತಾರೆ, ನೀವು ನೋಡಿದ್ರೆ ಇನ್ನೂ ಹಳೇ ಕಾಲದ್ದ್ ತರಾನೇ ಫೋಟೋ, ಮ್ಯಾಟ್ರು ಅಂತ ಕೊಟ್ಟು ನಮ್ಮ ಟೈಂ ವೇಸ್ಟ್ ಮಾಡ್ತೀರಲ್ಲ' ಎಂದು ಗೋವಿಂದರಾಜು ಮೂಗು ಮುರಿದ.

'ಅದೆಲ್ಲ ನಂಗೆ ತಿಳೀವಲ್ದು ಗೋವಿಂದಣ್ಣ ವೊದ್ಲಿಂದ ಎಂಗಿತ್ತೋ ಅಂಗೆಯಾ ನಾವಿರಾದು. ಡಿಜೈನೆಲ್ಲಾ ಎಂಗೆ ಬರ್ಬೇಕು ಅಂತ ನಿಂಗೇ ಗೊತ್ತಾದೆ ಅಲ್ಲವಾ ಫ್ರಂಟ್ ಪೇಜ್ನಾಗೆ ಮಿರಿ ಮಿರಿ ಮಿಂಚಬೇಕು. ಅಂಗೆಯಾ ನಮ್ಮ ಐಕ್ಳು ಪಟ ಯಾರದ್ದೂ ಬುಟ್ಟೋಗ್ ಬ್ಯಾಡ್ದು... ನೆಪ್ಪಿರ್ಲಿ... ಈ ಸಾರಿ ವಸದಾಗಿ ಎಲ್ಲ ಐಕ್ಳು ಸೇರಾವೆ ವಸಿ ನೋಡಿ ಮಾಡಿ ಚೆಂದಾಗಿ ಆಕಿ...ನಾ ಬರ್‍ಲಾ...ದುಡ್ಡೆಲ್ಲಾ ಕಟ್ಟೀವ್ನಿ ಕಣಣ್ಣೋ' ಎಂದು ಮಾತಾಡುತ್ತಲೇ ಮುನಿಯಪ್ಪ ಮರೆಯಾದ. ರಪರಪನೆ ಧೋ ಎಂದು ಸುರಿಯುತ್ತಿದ್ದ ಮಳೆ ತಟ್ಟನೆ ನಿಂತ ಅನುಭವವಾಯಿತು ಅಲ್ಲಿದ್ದವರಿಗೆಲ್ಲಾ. ಗೋವಿಂದರಾಜು ಒಮ್ಮೆಲೆ ಉಸಿರು ಹೊರಹಾಕಿ 'ನಿತೀಶ್ ತಗೊಳ್ಳಿ ಇದನ್ನ... ಬೇಗ ಡಿಸೈನ್ ಮಾಡಿ, ಫ್ರಂಟ್ ಪೇಜ್ ಫುಲ್ ಕವರ್ ಆಗ್ಲಿ, ಸಣ್ಣಪುಟ್ಟ ಮ್ಯಾಟರ್‌ದೆಲ್ಲಾ ಹೋಲ್ಡ್ ಮಾಡಿ ನಾಳೆ ತಗೋಳಿ? ಎಂದು ಕೆಲಸವನ್ನು ವರ್ಗಾಯಿಸಿದ.

ಸರ್...'ಮುನಿಯಪ್ಪನ ಕಡೆ ಜಾಹೀರಾತು ಬಂದರೆ ತಗೊಳೋದು ಬೇಡ ಅಂತ ಚೀಫ್ ಎಡಿಟರ್ ಹೇಳಿದ್ರಲ್ಲ' ಎಂದು ನಿತೀಶ ಹೇಳಿ ಮುಗಿಸುವ ಮುನ್ನವೇ ಗೋವಿಂದಪ್ಪ 'ನೋಡ್ರಿ... ನಿಮ್ಮ ಕೆಲಸ ಎಷ್ಟಿದೆಯೋ ಅಷ್ಟು ಮಾಡಿ, ಅವರಿಗೆ ಹೇಗೆ ಹೇಳಬೇಕು, ಏನು ಉತ್ತರ ಕೊಡಬೇಕು ಎಲ್ಲ ನನಗೆ ಗೊತ್ತು' ಎಂದು ಬಾಯಿಮುಚ್ಚಿಸಿದ.

> ಅರಳೀಮರದ ಕಟ್ಟೆಯ ಮುಂದೆ ಮಾದೇವನ 'ಪಟ'ಕ್ಕೆ ಚಪ್ಪಲಿಯ ಹಾರ ಹಾಕಿದ ದೃಶ್ಯ ಬಸ್ಸಿನೊಳಗಿನಿಂದಲೇ ಕಣ್ಣಿಗೆ ಬಿತ್ತು! ಅಯ್ಯೋ ದೇವರೆ ಏನಪ್ಪ ಇದೆಲ್ಲ ಏನೊಂದು ತಿಳಿಯದ ಮುಗ್ಧ ಜನಕ್ಕೆ ಹೀಗೂ ಮೋಸ ಮಾಡುವುದಾ? ಒಳ್ಳೆ ಮಂದಿ ಎಂದು ಹಳ್ಳಿಯ ಜನ ಪ್ಯಾಟೆಯವರನ್ನು ಹತ್ತಿರ ಸೇರಿಸಿಕೊಳ್ಳುವುದೇ ತಪ್ಪಾ. ತಮ್ಮ ಅಸಹ್ಯಕರ ಚಟುವಟಿಕೆಗೆ ಹಳ್ಳಿಯ ಮುಗ್ಧ ಮಂದಿ ಬಲಿಯಾಗಬೇಕಾ? ಸಣ್ಣದೊಂದು ಆಸೆಯನ್ನೇ ಅಸ್ತ್ರ ಮಾಡಿಕೊಳ್ಳುವ ಆಷಾಡಭೂತಿಗಳಿಗೆ ಮಾದೇವ ಬಲಿಯಾದನಲ್ಲ ಎಂದು ಸೀನ ತನ್ನ ಭಾವನ ಸ್ಥಿತಿ ನೆನೆದು ಒದ್ದಾಡಿದ. ಬಸ್ಸಿನಿಂದ ಇಳಿದ ಕೂಡಲೇ ಸೀನ ಆ 'ಪಟ' ತೆಗೆಯುವ ಪ್ರಯತ್ನಕ್ಕೆ ಮುಂದಾದ.

ಮತ್ತೆ ಮುಖ ನೋಡುತ್ತಿದ್ದ ನಿತೀಶನ ಬಳಿ ಹೋಗಿ ? ಸಾವಿರಾರು ರೂಪಾಯಿ ಬರೋ ಜಾಹೀರಾತು ಬೇಡ ಅಂದ್ರೆ ನಾಳೆ ಯಜಮಾನ್ರು ನಮಗೆಲ್ಲ ಸಂಬಳ ಹೇಗೆ ತಾನೇ ಕೊಡ್ತಾರೆ? ಸುದ್ದೀನೂ ಬೇಕು, ಅಡ್ವಟೇಜು ಬೇಕು. ಎರಡೂ ಎರಡು ಕಣ್ಣು ಇದ್ದಹಾಗೆ ತಿಳ್ಕೊಳಿ, ಯಾವುದನ್ನೂ ಬಿಡಬಾರದು. ಹಾಗೆ ಇನ್ನೊಂದು ಮುಖ್ಯವಾದ ವಿಷಯ ನೀವು ಮರೆಯಲೇಬಾರದು ನೋಡಿ...? ಪೇಪರ್‌ನಲ್ಲಿ ಬರೋ ಜಾಹೀರಾತುಗಳಿಗೆಲ್ಲ ಪತ್ರಿಕೆ ಹೊಣೆಯಲ್ಲ? ಅನ್ನೋ ಸುದ್ದೀ ಮಾತ್ರ ಹಾಕೋದು ಮರೀಬೇಡಿ, ಇವರು ಏನು ಕೊಡ್ತಾರೋ ಅದನ್ನ ಹಾಕೋದಷ್ಟೇ ನಮ್ಮ ಕೆಲಸ, ಆಮೇಲೆ ಅದಕ್ಕೆಲ್ಲ ತಲೆ ಹಾಕ್ತಾ ಕೂರೋದಕ್ಕೆ ನಮ್ಮ ಹತ್ರ ಸಮಯಾನೂ ಇಲ್ಲ, ಸಂಯಮಾನೂ ಇಲ್ಲ ತಿಳೀತಾ? ಎಂದು ಹೇಳುತ್ತಾ ಕಾಫಿ ಕೌಂಟರಿನತ್ತ ನಡೆದ.

*****

'ಪ್ಯಾಪರ್‍ನಾಗೆ ಮಾದೇವಣ್ಣನ "ಪಟ" ಬಂದದೆ...ಮಲ್ಲಕ್ಕ, ಮಲ್ಲಕ್ಕ ಬಿರ್ನೆ ಬಾ' ಹಿಂದಿನ ಬೀದಿಯ ರಮೇಶ ಸೈಕಲ್ ಸವಾರಿ ಮಾಡುತ್ತಾ ಎಲ್ಲೆಡೆ ಪೇಪರ್ ತೋರಿಸಿ ಸಂಭ್ರಮಿಸುತ್ತಿದ್ದಾನೆ! ಮಲ್ಲಿಯ ಸಮೀಪ ಬಂದು ಸೈಕಲ್ಲಿನಲ್ಲಿ ಸುತ್ತುತ್ತ 'ನೋಡಕ್ಕೋ ನಮ್ ಮಾದೇವಣ್ಣ' ಎಂದು ಬೀಗಿ ತೋರಿಸುತ್ತಿದ್ದಾನೆ, ಏನೊಂದೂ ತಿಳಿಯದ ಮಲ್ಲಿ ತಲೆಕೆರೆದುಕೊಂಡು 'ಏ ಅದೇನ್ ಅಂಗೆ ಸುಮ್ಕೆ ಸುತ್ತಾಡೀಯೇ ವಸಿ ಸೈಕಲ್ನ ನಿಲ್ಲುಸ್‌ಬುಟ್ಟು ಅದೇನ್ ಬಂದಾದೆ ಅಂತ ಸರ್‍ಯಾಗ್ ತೋರ್‍ಸು' ಎಂದು ರಮೇಶನ ಸೈಕಲ್ ನಿಲ್ಲಿಸಿ ಅವನ ತಲೆ ಮೊಟಕಿದಳು.

ಜನಪ್ರಿಯ ಮಂತ್ರಿಗಳ ಮಗ ಜಯರಾಜಪ್ಪನ ಹುಟ್ಟುಹಬ್ಬಕ್ಕೆ ಶುಭ ಕೋರಿರುವ ಜಾಹೀರಾತಿನಲ್ಲಿ ಮಾದೇವನಿದ್ದಾನೆ! ಅದೂ ಮೊದಲನೇ ಪುಟದ ಮೊದಲನೇ ಸಾಲಿನಲ್ಲಿ! ಲಕ್ಷಣವಾಗಿ ತಲೆ ಬಾಚಿಕೊಂಡು ಒಳ್ಳೆ ಬಟ್ಟೆಹಾಕಿಕೊಂಡಿರುವ ಮಾದೇವ ಮಲ್ಲಿಯ ಕಣ್ಣಿಗೆ ಮನ್ಮಥನಂತೆ ಕಾಣುತ್ತಿದ್ದಾನೆ! 'ಅವ್ವೈ' ಜಾಹೀರಾತು ನೋಡಿದ ಮಲ್ಲಿಯ ಮೊದಲ ಉದ್ಗಾರ! 'ಅಲ್ಲ ಕಣ್ಲ ರಮೇಸ...ಎಂಗ್ಲಾ ಇದೆಲ್ಲ... ಇವಯ್ಯ ಇಂತ 'ಪಟ'ಎಲ್ಲಿ ಮಡಗಿದ್ದ ಅಂತೀನಿ... ಬೋ ಪಸಂದಾಗವ್ನೆ' ಎಂದು ನಾಚುತ್ತಾ, ನುಲಿಯುತ್ತ ಮನೆಯತ್ತ ಓಡಿದಳು. 'ನೆತ್ತಿಯ ಮೇಲಿನ ಸೂರ್ಯ ನೇರವಾಗಿ ಮಲ್ಲಿಯ ಮೊಗದಲ್ಲಿ ಲಾಸ್ಯವಾಡಿದಾಗ ಅವಳ ನಾಚಿಕೆಯ ಕೆಂಪು ಹಸಿರೂರಿನಲ್ಲಿ ಓಕುಳಿಯ ನೀರೆರಚಿದಂತೆ ಕಂಡಿತು'

ಮುಂಬಾಗಿಲ ಜಗುಲಿ ಕಟ್ಟೆಯ ಮೇಲೆ ಕುಳಿತ ಮಾದೇವ ಕೈಯಲ್ಲಿ ಪೇಪರ್ ಹಿಡಿದ ಸೀನನ ಬರುವಿಕೆಯನ್ನು ಖಚಿತಪಡಿಸಿಕೊಂಡವನೇ ಧಿಮಾಕಿನಿಂದ ತನ್ನ ಬಳಿ ಇದ್ದ ಪೇಪರ್ ಮುಖಕ್ಕೆ ತಾಗಿಸಿಕೊಂಡು ಕಾಲಮೇಲೆ ಕಾಲು ಹಾಕಿಕೊಂಡು ಕುಳಿತಿದ್ದಾನೆ! 'ಭಾವೋ...ಭಾವೋ...' ಎಂದು ಸಡಗರದಿಂದ ಕೂಗುತ್ತ ಮಾದೇವನ ಬಳಿ ಬಂದ ಸೀನ. 'ಏನ್ ಭಾವ ಈ ಪಾಟಿ ಮಿಂಚತಿದ್ದೇಂಯೇ ಏನ್ ಸಮಾಚಾರ' ಎಂದು ಕಿಚಾಯಿಸಿದ.

ಗತ್ತಿನಿಂದ ಮುಖದ ಮೇಲೆ ಮರೆಮಾಚಿಕೊಂಡಿದ್ದ ದಿನಪತ್ರಿಕೆಯನ್ನು ಕೆಳಗೆ ಇಳಿಸುತ್ತ ಮಾದೇವ, ಮತ್ತೆ ನಾವು ಅಂದ್ರೆ ಸುಮ್ಕೆಯಾ...ಪ್ಯಾಟೆನಾಗೆ ನಂಗೂ ಸ್ಯಾನೆ ಮಂದಿ ಗೊತ್ತವ್ರೆ ಅಂತ ಅವತ್ತೇ ಯೋಳಿದ್ದೆ ತಾನೆ ನಿನ್ಕೂಡೆ...ಈಗ ನಿಂಗೆ ಚೆಂದಾಕಿ ಗೊತ್ತಾಯ್ತು ನಂಗೆ ಯಾರೆಲ್ಲ ದೋಸ್ತಿಗೊಳವ್ರೆ ಅಂತ' ಎಂದು ತನ್ನ ಮೀಸೆ ತಿರುವಿದ. 'ಬೋ ಕುಸಿಯಾಯ್ತು ಬುಡು ಭಾವೋ... ಊರ್ ಮಂದಿಗೆಲ್ಲಾ ಬೂಂದಿಕಾಳ್ ಕೊಟ್ಟು "ಪಟ" ತೋರಿಸ್ಕೊಂಡ್ ಬತ್ತೀನಿ ಎಂದು ಮತ್ತೊಮ್ಮೆ ದಿನಪತ್ರಿಕೆಯ ಜಾಹೀರಾತನ್ನೇ ತದೇಕ ಚಿತ್ತದಿಂದ ನೋಡಿದ ಸೀನ 'ಮಲ್ಲಕ್ಕ ಪ್ಯಾಪರ್ ನೋಡುದ್ಲಾ' ಎಂದು ಕಣ್ಣುಮಿಟುಕಿಸಿ ಮೆಲುದನಿಯಲ್ಲಿ ಕೇಳಿದ. 'ನನ್ಕಿಂತ ನಿಮ್ಮಕ್ಕಾನೇ ಸ್ಯಾನೆ ಕುಸಿ ಪಡ್ತಾವಳೆ ಕಣ್ಲ ಸೀನ, ಅವಳ ಮೂತಿ ಒಳ್ಳೆ ಸೂರ್ಯಕಾಂತಿ ವೂವಂಗೆ ಅಳ್ಳೈತೆ' ಎಂದು ಹೆಂಡತಿಯ ನಾಚಿಕೆಯ ಮುಖವನ್ನ ವರ್ಣಿಸಿದ.

'ಅದ್ಸರಿ ಭಾವ ಈ ಪಟದಾಗೆ ಯಾರ್‍ಯಾರೊ ಬೋ ಮಂದಿ ಅವರೆ ಅವರೆಲ್ಲಾ ನಿಂಗೆ ಗೊತ್ತ...ಎಂದು ಸೀನ ಮಾದೇವನಿಗೆ ಕೇಳಿದ' ಸೀನನಿಂದ ಪ್ರಶ್ನೆ ನಿರೀಕ್ಷಿಸಿದ್ದ ಮಾದೇವ 'ನಂಗೇನ್ಲ ಗೊತ್ತದೆ... ಅವರ್‍ಯಾರು ನಂಗೆ ಪರಿಚಯವೇ ಇಲ್ಲ. ಅವರಿಗೂ ಎಲ್ಲ ನನ್ನಂಗೆ ಜಯರಾಮಪ್ಪನ್ನ ಕಂಡ್ರೆ ಪಿರುತಿ ಗೌರವ ಅಂತ ಕಾಣ್ತದೆ. ನಮ್ಮ ಪರಮೇಸಿ ಅವನಲ್ಲ ಅವರ ಸೋದರಮಾವ ಮುನಿಯಪ್ಪ ಪ್ಯಾಟೆನಾಗೆ ಅವ್ರೆ. ಅವರಿಗೆ ಮಂತ್ರಿಗೊಳು, ಜಯರಾಮಪ್ಪ ಎಲ್ಲಾ ಬಾಳ ಬಾಳಾ ಖಾಸ ಅಂತೆ ಕಣ್ಲ, ಪಟ ಆಕಕ್ಕೆ ನಂತಾವ ಕಾಸೇ ತಕ್ಕಳ್‌ನಿಲ್ಲ ಅಂತೀನಿ, ಪಾಪ... ಬೋ..ಒಳ್ಳೆ ಮಂದಿ' ಎಂದು ಮಾದೇವ ದಿನಪತ್ರಿಕೆಯ ಜಾಹೀರಾತಿನಲ್ಲಿ ತನ್ನ ಫೋಟೊ ಬಂದ ಕತೆಯನ್ನು ಭಾಮೈದನಿಗೆ ವರ್ಣಿಸಿದ.

'ಸರಿ ಬುಡು ಭಾವ ಎಂಗೋ ನಿನ್ ಆಸೆ ತೀರ್‍ತಲ್ಲ... ಅಷ್ಟೇ ಕುಸಿ ನಂಗೆ... ಅಲ್ಲ ಪ್ಯಾಪರ್‌ನಾಗೆ ಅವರಕೂಡೆ ಪಟ ಬಂದದ್ದೇ ನಿಂಗೆ ಈ ಪಾಟಿ ಕುಸಿಯಲ್ಲ ಇನ್ನೇನಾದ್ರು ಅವರ ಕೂಡೆ ಮಾತಾಡಾದೋ, ಓಡಾಡದೋ ಮಾಡ್ಬುಟ್ರೆ ನಿನ್ನ ಇಡ್ಕಕ್ಕಾಯ್ತದಾ ಭಾವೋ' ಎಂದು ಮಾದೇವನನ್ನು ಕಿಚಾಯಿಸುತ್ತ ಸೀನ ಅಲ್ಲಿಂದ ಹೊರಟ.

*****

'ಕೇಳ್ರಪ್ಪೋ...ಕೇಳ್ರಿ...ಸುತ್ತ ಮೂರೂರ ಜನ ಎಲ್ಲಾ ನಾಳೆ ಸಂಜೆವೊತ್ಗೆ ಶನೇಸ್ವರ ದೇವಸ್ಥಾನದ ತಾವು ಸೇರ್‍ಬೇಕಂತೆ, ನಮ್ಮೂರ ಮಾದೇವಣ್ಣನ ಪಟ ಪ್ಯಾಪರನ್ನಾಗೆ ಬಂದಿರದ್ಕೆ ಆರ ಆಕಿ ಸನ್ಮಾನ ಮಾಡ್ತಾರಂತೆ' ಡಂಗುರದ ಕರಿಯ ಎಲ್ಲೆಡೆ ತಮಟೆ ಬಾರಿಸಿಕೊಂಡು ಪ್ರಚಾರ ಮಾಡುತ್ತಿದ್ದಾನೆ. ಡಂಗುರದ ವಿಷಯ ತಿಳಿಯುತ್ತಲೇ ಮಲ್ಲಿ ಮೊಗ ತಾವರೆಯಂತೆ ಅರಳಿತು. ಗಂಡನಿಗೆ ಊರ ಮುಖ್ಯಸ್ಥರೆಲ್ಲಾ ಸೇರಿ ಸನ್ಮಾನಿಸುವ ದೃಶ್ಯ ನೆನೆದು ಪುಳಕಿತಳಾದಳು.

ಮಾದೇವ ಮಲ್ಲಿಯರ ಮನತಣಿಸುವ ಸಮಯ ಬಂದಾಯಿತು. ಸುತ್ತ ಮೂರು ಹಳ್ಳಿಯ ಜನ ಶನೇಶ್ವರ ದೇವಸ್ಥಾನದಲ್ಲಿ ಜಮಾಯಿಸಿದ್ದಾರೆ. ಮಲ್ಲಿಯ ತಮ್ಮ ಸೀನನಿಗಂತೂ ತನ್ನ ಭಾವ ಯುದ್ಧ ಗೆದ್ದನೇನೋ ಎನ್ನುವಷ್ಟು ಸಂಭ್ರಮ ಸಂತಸ! ಊರಲ್ಲಿ ಇದುವರೆಗೂ ಯಾರ ಫೋಟೋ ಕೂಡ ದಿನಪತ್ರಿಕೆಯಲ್ಲಿ ಬಂದಿಲ್ಲ, ಜಾಹೀರಾತಿನಲ್ಲಿ ಮಾದೇವ ದೊಡ್ಡ ಮನುಷ್ಯರ ಜೊತೆ ಇದ್ದಾನೆ ಎಂಬುದೇ ಊರವರಿಗೆಲ್ಲ ಹೆಮ್ಮೆಯ ವಿಷಯವಾಯಿತು! ಊರ ಪ್ರಮುಖರು ಮಾದೇವನನ್ನು ಕರೆದು ಮುಖ್ಯಸ್ಥಾನದಲ್ಲಿ ಚೇರು ಹಾಕಿ ಕುಳ್ಳಿರಿಸಿದರು. ಕಣಿಗೆಲೆ, ಸೇವಂತಿಗೆ, ಸಂಪಿಗೆಯ ಮಾಲೆಗಳು ಮಾದೇವನ ಕೊರಳು ಸೇರಿತು. ಮನೆಗೊಬ್ಬರಂತೆ ಬಂದು ಮಾದೇವನಿಗೆ ದೃಷ್ಟಿ ತೆಗೆದು ಹೋಗುತ್ತಿದ್ದಾರೆ. ನೋಡನೋಡುತ್ತಿದ್ದಂತೆ ಮಾದೇವ ಊರಿನ ಜನರೆದುರು ಪ್ರಖ್ಯಾತ ವ್ಯಕ್ತಿಯಾಗಿಬಿಟ್ಟ!

ಊರಗೌಡರು ಎದ್ದುನಿಂತು ಮಾದೇವನ ಗುಣಗಾನ ಮಾಡಿದರು. ಮೂರುಹಳ್ಳಿಗಳ ಅಭಿವೃದ್ಧಿ ಮಾಡಬೇಕೆಂದು ಮನವಿ ಮಾಡಿಕೊಂಡರು. ಮುಜುಗರವಾದರೂ ಮಾದೇವನಿಗೆ ಇವೆಲ್ಲ ಆಪ್ಯಾಯಮಾನಿಸಿತು. ತಾನು ಸುತ್ತಲ ಮೂರು ಹಳ್ಳಿಗೂ ಮುಖ್ಯಸ್ಥನಾಗಿಬಿಟ್ಟೆ ಎಂದು ಮನ ಬೀಗಿತು!

ಜಾಹೀರಾತು ಪ್ರಕಟಣೆಯಾಗಿ ವಾರ ಕಳೆದರೂ ಸುತ್ತು ಮೂರು ಹಳ್ಳಿಗಳಲ್ಲಿ ಅದರ ಬಗ್ಗೆ ಮಾತನಾಡುವುದು ಕಡಿಮೆಯಾಗಲಿಲ್ಲ. ಒಬ್ಬರಲ್ಲ ಒಬ್ಬರು ಮಾದೇವನ ಬಗ್ಗೆ ಅವನ ಜೊತೆಗಿರುವ ಮಂದಿಯ ಬಗ್ಗೆ ಮಾತನಾಡಿಕೊಳ್ಳುತ್ತಲೇ ಇದ್ದರು.

ಒಂದು ದಿನ ಪರಮೇಶಿಯ ಮಾವ ಮುನಿಯಪ್ಪ ಮಾದೇವನ ಊರಿಗೆ ಬಂದ. ಆತನ ಗತ್ತು, ವೈಭವ, ವೇಷಭೂಷಣ ಎಲ್ಲವೂ ಹಳ್ಳಿಗರಿಗೆ ವಿಶೇಷವಾಗಿ ಕಂಡಿತು. ಮುನಿಯಪ್ಪನ ಬಗ್ಗೆ ಕೇಳಿದ್ದ ಮಾದೇವ ಆತನನ್ನು ಖುದ್ದಾಗಿ ಕಂಡಿದ್ದೇ ದೇವರು ಪ್ರತ್ಯಕ್ಷವಾದವನಂತೆ ವರ್ತಿಸಿದ! ಪಾದ ತೊಳೆದು ನೀರು ಕುಡಿಯುವುದೊಂದು ಬಾಕಿಯಾಯಿತು! 'ಏನ್ ಮಾದೇವ ಎಂಗಿದೀಯ ನಮ್ಮ ಪರಮೇಸಿ ನಿನ್ ಇಚಾರ ಬಾಳ ಯೋಳಿದ್ದ, ಪರವಾಗಿಲ್ಲ ಒಳ್ಳೆ ಮನೆ ಮಡಿಗಿದೀಯೆ' ಎಂದು ಮಾದೇವನ ಮನೆಯ ಸುತ್ತ ಕಣ್ಣಾಡಿಸುತ್ತ ಅವನ ಬೆನ್ನು ತಟ್ಟಿದ! ಮುನಿಯಪ್ಪನ ಮೆಚ್ಚುಗೆಯ ಸ್ಪರ್ಶ ಮಾದೇವನಿಗೆ ಮೂರಾನೆ ಬಲ ಬಂದಂತಾಯಿತು.

ಮುನಿಯಪ್ಪನನ್ನು ಕರೆದುಕೊಂಡು ಹಳ್ಳಿ ಪೂರ ಸುತ್ತಾಡಿಸಿದ. 'ಅದ್ಸರಿ ಮಾದೇವ ವೊಲದಾಗೆ ಏನಾಕಿದೀಯೇ' ಎಂದು ಕುಶಲೋಪರಿ ವಿಚಾರಿಸುತ್ತಾ ಒಂದು ಸುತ್ತು ಹೊಲವನ್ನೂ ಸಹ ನೋಡಿ ಬಂದ. ಎಲ್ಲಕ್ಕಿಂತ ಹೆಚ್ಚಾಗಿ ಸೀನನ 'ತೋಟ ಹಾಗೂ ತೋಟದ ಮನೆ' ಮುನಿಯಪ್ಪನಿಗೆ ಬಹಳವೇ ಹಿಡಿಸಿತು! ಮಲ್ಲಿ ಮಾಡಿದ ಅಡುಗೆಯ ಸವಿಯನ್ನು ಸವಿದು, ಸೀನನ ಉಪಚಾರವನ್ನು ಸ್ವೀಕರಿಸಿದ. ಮುನಿಯಪ್ಪ ತೋರಿದ ಆತ್ಮೀಯತೆ, ಸರಳತೆ ಸಹೃದಯತೆಗೆ ಮೂವರೂ ಮೂಕರಾದರು!

*****

'ಸೀನ ಸೀನ ಮುನಿಯಪ್ಪಣ್ಣ ಫೋನ್ ಮಾಡಿದ್ದ ನಮ್ಮಳ್ಳಿ ನೋಡಕ್ಕೆ ಪ್ಯಾಟೆ ಐಕಳು ಬತ್ತಾರಂತೆ ವಸಿ ವೋಗಿ ಅದೇನು ಯವಸ್ಥೆ ಬೇಕೊ ಮಾಡ್ಲ' ಎಂದು ಮಾದೇವ ಸೀನನಿಗೆ ತಾಕೀತು ಮಾಡಿದ. 'ಏನ್ ಭಾವೋ ಮುನಿಯಪ್ಪಣ್ಣಂಗೆ ನಮ್ಮಳ್ಳಿ ಬೋ ಪಸಂದಾಗೆ ಇಡಸ್‌ಬುಟ್ಟೈತೆ ಅನ್ನು, ವೋದ್‌ವಾರನೂ ಐಕಳು ಬಂದಿದ್ರು, ನಮ್ ತ್ವಾಟದ ಮನೆಯಾಗೆ ಅಪ್ಪಯ್ಯ ಒಬ್ಬನೆ ಇರಾದಲ್ವ ಅದಕ್ಕೆ ಅಲ್ಲೇ ಇರಯವಸ್ತೆ ಮಾಡಿದ್ದೆ, ಅಪ್ಪಯ್ಯ ಯೋಳ್ತಿದ್ದ ಆ ಐಕಳು ಎಂಗೆಂಗೋ ಆಡ್ತಾರೆ ಅಂತ' ಎಂದ. 'ಬುಡ್ಲಾ ಸೀನ ಪ್ಯಾಟೆ ಐಕಳಲ್ಲವಾ... ನಿಮ್ಮ ಅಪ್ಪಯ್ಯ ಏನ್ ಕಂಡಿದ್ದಾನು' ಎಂದು ಮಾದೇವ ಸೀನನ ಬಾಯಿ ಮುಚ್ಚಿಸಿದ. ಇಷ್ಟವಿಲ್ಲದಿದ್ದರೂ ಸೀನ ಭಾವನಿಗೆ ಮರ್ಯಾದೆ ಕೊಟ್ಟು ಪ್ಯಾಟೆ ಮಂದಿಯನ್ನು ತನ್ನ ತೋಟದ ಒಳಗೆ ಬಿಟ್ಟುಕೊಂಡ!

ಮುನಿಯಪ್ಪ ಪ್ರತೀ ಶನಿವಾರ ಪ್ಯಾಟೆ ಮಂದಿಯನ್ನು ಹಳ್ಳಿಗೆ ಕಳಿಸುವುದು ಮಾಮೂಲಿಯಾಗಿ ಹೋಯಿತು. ಒಂದಷ್ಟು ಮಂದಿ ಬಂದು ಸುತ್ತಾಡಿ, ತಿರುಗಾಡಿ, ಚಿತ್ರ ವಿಚಿತ್ರವಾದದ್ದನ್ನೆಲ್ಲ ತಿಂದು ತೇಗಿ ತಮಗಿಷ್ಟ ಬಂದಂತೆ ಇದ್ದುಹೋಗುವುದು ಅತಿಯಾಯಿತು! ಮೊದಲೆಲ್ಲ ಮಾದೇವನಿಗೆ ವಿಷಯ ಮುಟ್ಟಿಸಿ ಅವನಿಂದ ಪರ್ಮಿಷನ್ ತೆಗೆದುಕೊಂಡು ಬರುತ್ತಿದ್ದವರು ನಂತರದ ದಿನಗಳಲ್ಲಿ ಸದ್ದಿಲ್ಲದೆ ಬಂದುಹೋಗತೊಡಗಿದರು. ಗಂಡುಹುಡುಗರ ಗುಂಪಷ್ಟೇ ಬರುತ್ತಿದ್ದದ್ದು ಈ ನಡುವೆ ಒಂದಷ್ಟು ಹೆಣ್ಣುಮಕ್ಕಳೂ ಸಹ ಜೊತೆ ಸೇರಿಕೊಂಡಿದ್ದಾರೆ! ಮತ್ತು ಬಂದವರಂತೆ ತೇಲಾಡಿ ತೋಟದ ಸ್ಥಿತಿಗತಿಯನ್ನೇ ಬದಲಾಯಿಸಿದ್ದಾರೆ. ಸೀನನಿಗಂತು ಇದೆಲ್ಲವನ್ನೂ ಹೇಗೆ ತಡೆಯುವುದು ಎಂದೇ ತಿಳಿಯುತ್ತಿಲ್ಲ, ತನ್ನ ತೋಟವನ್ನು ದೈವದಂತೆ ನೋಡಿಕೊಳ್ಳುತ್ತಿದ್ದ, ಅಂತಹ ದೇವಸ್ಥಾನದಲ್ಲಿ ಏನೇನೋ ನಡೆಯುತ್ತಿದೆ. ಭಾವನಿಗೆ ವಿಷಯ ತಿಳಿಸುವುದಾದರೂ ಹೇಗೆ? 'ನಂತಾವಿರಾದು ವಲ ಕಣ್ಲ, ನಿನ್‌ಕಂಡಂಗೆ ತ್ವಾಟ ಇದ್ದಿದ್ರೆ ಅಂಗೆ ರಾಜ ರಾಜನಂಗೆ ಮೆರಿತಿದ್ದೆ' ಎಂದು ಒಮ್ಮೆ ಮಾದೇವ ಹೇಳಿದ್ದು ಸೀನನಿಗೆ ತಲೆಯಲ್ಲಿದೆ. ಭಾವನ ಕಡೆಯವರು ಎಂದು ಎಷ್ಟು ತಾನೆ ಸಹಿಸುವುದು, ಯಾಕೋ ಇದೆಲ್ಲ ಸರಿಬರುತ್ತಿಲ್ಲ ಎಂದು ಸೀನ ಪೇಚಾಡಿಕೊಂಡ.

ಮುನಿಯಪ್ಪನ ಪರಿಚಯವಾದಾಗಿನಿಂದ ತನ್ನ ಭಾವ ಮೊದಲಿನಂತಿಲ್ಲ, ಬಹಳವೇ ವಿಚಿತ್ರವಾಗಿ ಆಡುತ್ತಿದ್ದಾನೆ, ಆಡುವ ಮಾತಿನಲ್ಲಿ, ನಡೆದುಕೊಳ್ಳುವ ರೀತಿಯಲ್ಲಿ ಮೊದಲಿನ ಮುಗ್ಧತೆಯೂ ಇಲ್ಲ, ಆಪ್ಯಾಯತೆಯೂ ಇಲ್ಲ ಎಂದು ಸೀನನಿಗೆ ಅರಿವಿಗೆ ಬಂತು. ಆದರೆ ಅಕ್ಕನ ಮುಖ ನೋಡಿಕೊಂಡು ಭಾವನ ರೀತಿ ರಿವಾಜಿಗೆ ಮಣಿಯ ಬೇಕಾಗಿದೆ ಪೇಪರಿನಲ್ಲಿ ಬಿಟ್ಟಿಯಾಗಿ ಪಟ ಹಾಕಿಸಿ ಕೊಟ್ಟಾಗಲೇ ಮುನಿಯಪ್ಪನ ಬಗ್ಗೆ ಪರಮೇಶಿಯ ಬಗ್ಗೆ ತಿಳಿಯಬೇಕಿತ್ತು ಈಗ ಏನು ಮಾಡಲಿ ಎಂದು ಸೀನ ಒದ್ದಾಡುತ್ತಿದ್ದಾನೆ.

*****

'ರಂಗಣ್ಣ, ದ್ಯಾವಣ್ಣ ಎಲ್ಲಾ ಬಿರ್ನೆ ಬರ್‍ರಿ...ನಮ್ ಮಾದೇವಣ್ಣನ 'ಪಟ' ಟೀವಿನಾಗೆ ಬತ್ತಾ ಇದ್ದಾದಂತೆ... ಅದೇನೇನೊ ಯೋಳ್ತಾವರಂತೆ, ಸೀನಣ್ಣನ ತ್ವಾಟದ ಮನೆಯಾಗೆ ಪ್ಯಾಟೆ ಐಕಳು ಮಾಡ್‌ಬಾರದ್ ಕೆಲಸಾನೆಲ್ಲಾ ಮಾಡ್ತಾವರಂತೆ.. ಮಾದೇವಣ್ಣನೇ ಎಲ್ಲಾಕು ಕುಮ್ಮಕ್ಕಂತೆ...

ಮುಂದುವರಿದ ಭಾಗ ಪುಟ 7ರಲ್ಲಿ

ತೀರ್ಪುಗಾರರ ಪರಿಚಯ



ಡಾ. ಆನಂದ್ ಗೋಪಾಲ್

ವೃತ್ತಿಯಿಂದ ಮೈಸೂರಿನ ಶಾರದಾ ವಿಲಾಸ ಕಾಲೇಜಿನಲ್ಲಿ ಕನ್ನಡ ಸಹಾಯಕ ಪ್ರಾಧ್ಯಾಪಕರಾಗಿರುವ ಇವರು, ಪ್ರವೃತ್ತಿಯಿಂದ ಕತೆಗಾರರು, ಲೇಖಕರು. ಬೆಂಗಳೂರು ವಿಶ್ವವಿದ್ಯಾನಿಲಯದಿಂದ ಕನ್ನಡ ಸಾಹಿತ್ಯದಲ್ಲಿ ಮೊದಲ Rank ನೊಂದಿಗೆ , ನಾಲ್ಕು ಚಿನ್ನದ ಪದಗಳನ್ನು ಪಡೆದುಕೊಂಡಿರುವ ಇವರು ಅನಂತರ ಮೈಸೂರು ವಿಶ್ವವಿದ್ಯಾನಿಲಯ ದಿಂದ ಕಥಾ ಸಾಹಿತ್ಯದ ಮೇಲೆ Ph.D. ಪದವಿ ಸಂಪಾದಿಸಿದ್ದಾರೆ.

ಇವರು 2022 ರಲ್ಲಿ "ಆಟಗಾಯಿ"ಎಂಬ ಕಥಾ ಸಂಕಲನ ಪ್ರಕಟ ಮಾಡಿದ್ದಾರೆ. ಇದಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನ ದತ್ತಿ ಬಹುಮಾನ ದೊರೆತಿದೆ. ಮೂರು ಬಾರಿ "ಪ್ರಜಾವಾಣಿಯ ದೀಪಾವಳಿ ಕಥಾ ಸ್ಪರ್ಧೆ"ಯಲ್ಲಿ ಇವರಿಗೆ ಬಹುಮಾನ ಸಿಕ್ಕಿದೆ.

ಕಾಲೇಜು ವಿದ್ಯಾರ್ಥಿಯಾಗಿದ್ದಾಗಲೆ "ಕ್ರೈಸ್ಟ್ ವಿಶ್ವವಿದ್ಯಾಲಯದ ಕನ್ನಡ ಸಂಘ' ಆಯೋಜಿಸುವ ಕಥಾ ಸ್ಪರ್ಧೆಯಲ್ಲಿ ಮೂರು ಬಾರಿ ಬಹುಮಾನಗಳನ್ನು ಪಡೆದಿದ್ದಾರೆ. ಹಿರಿಯ ಸಾಹಿತಿ, ಇತಿಹಾಸಕಾರ ಗಂಜಾಂ ಎಂ.ಕರೀಮುದ್ದಿನ್ ಕುರಿತು "ಜ್ಞಾನ ಫಕೀರ ಪ್ರೊ.ಎಂ. ಕರೀಮುದ್ದಿನ್" ಎಂಬ ಜೀವನ ಚರಿತ್ರೆಯನ್ನು ಕಳೆದ ವರ್ಷ ಪ್ರಕಟ ಮಾಡಿದ್ದಾರೆ. 'ಮಯೂರ', 'ಸುಧಾ', 'ಕಥಾಲೋಕ', 'ಕೆಂಡ ಸಂಪಿಗೆ' ಮುಂತಾದ ಹೆಸರಾಂತ ಪತ್ರಿಕೆಗಳಲ್ಲಿ ಇವರ ಕತೆಗಳು ಪ್ರಕಟವಾಗಿವೆ. ಕೋಲಾರದಿಂದ ಹೊರಡುವ 'ಪರಿವರ್ತನಾ ಪರ್ವ' ಎಂಬ ಮಾಸಪತ್ರಿಕೆಯಲ್ಲಿ ಇವರು ಲೇಖನಗಳನ್ನು ಕೂಡ ಬರೆಯುತ್ತಿದ್ದಾರೆ. ಮೈಸೂರು ಆಕಾಶವಾಣಿಯಲ್ಲಿ ಚಿಂತನಾ, ಕತೆ, ಹಾಗೂ ಲಘು ಪ್ರಬಂಧಗಳನ್ನು ಓದಿದ್ದಾರೆ." ಮೈಸೂರಿನ 'ಅನಾಥಾಲಯ' ಪ್ರತಿ ವರ್ಷ ನಡೆಸುವ ಚರ್ಚಾಸ್ಪರ್ಧೆ ಹಾಗೂ ಪ್ರಬಂಧ ಸ್ಪರ್ಧೆಗಳಲ್ಲಿ ತೀರ್ಪುಗಾರರ ಸ್ಥಾನವನ್ನು ನಿರ್ವಹಿಸಿದ್ದಾರೆ.

ಹಿರಿಯ ಸಾಹಿತಿ ವಿಜಯಾ ದಬ್ಬೆ ನೆನಪಾರ್ಥ ನಡೆಸುವ ಕವಿತಾ ಸ್ಪರ್ಧೆಯ ತೀರ್ಪುಗಾರರಾಗಿದ್ದರು(2024). ನಾಟಕ, ಸಿನಿಮಾ, ಪ್ರವಾಸ ಇವರ ಇನ್ನಿತರ ಹವ್ಯಾಸಗಳು.

ತೀರ್ಪುಗಾರರ ಟಿಪ್ಪಣಿ

'ಕಥೆ' – ನಾಗರಿಕತೆಯನ್ನು ಹೇಳುತ್ತದೆ ಎನ್ನುತ್ತಾರೆ. ಹಾಗೆಯೇ ಮನುಷ್ಯ ತನ್ನ ಮಾತುಕತೆಯನ್ನು 'ಕಥಾ' ರೂಪದಲ್ಲಿಯೇ ಕಟ್ಟಿಕೊಳ್ಳುವುದನ್ನು ನೋಡಿದಾಗ 'ಕತೆ'– ಮನುಷ್ಯನ ಆದಿಯ ಸೃಷ್ಟಿ ಎಂದೂ ನಡೆದೀತು.

ಕನ್ನಡ ಸಾಹಿತ್ಯದಲ್ಲಿ ಈಗ ಕಥಾ ಪ್ರವಾಹವೇ ಹರಿಯುತ್ತಿದೆ. ಒಂದೆಡೆ ಓದುಗರು ಇಳಿಮುಖವಾಗುತ್ತಿದ್ದರೆ, ಬರಹಗಾರರು ಇನ್ನೊಂದೆಡೆ ಏರುಗತಿ ಸಾಧಿಸುತ್ತಿದ್ದಾರೆ. ಓದುಗರಿಗಿಂತ ಬರಹಗಾರರೇ ಹೆಚ್ಚು ಎಂಬ ಮಾತೂ ಈಗ ಚಾಲ್ತಿಯಲ್ಲಿದೆ. ಇದರೊಂದಿಗೆ ಸಾಂಪ್ರದಾಯಿಕ ಪುಸ್ತಕ ಓದಿನ ಜಾಗದಲ್ಲಿ ಇ–ಬುಕ್, ಆಡಿಯೋ ಬುಕ್‌ಗಳು ಕೂಡ ಮುನ್ನೆಲೆಗೆ ಬರುತ್ತಿರುವುದು ವಿಶೇಷ.

ಈ ಹಿಂದೆ ಪತ್ರಿಕೆಗಳಲ್ಲಿ ಸಂಪಾದಕರು ಬಂದ ಬರಹಗಳನ್ನೆಲ್ಲಾ ಪ್ರಕಟಿಸುತ್ತಿರಲಿಲ್ಲ. ಅವುಗಳ ನೆಲೆ–ಬೆಲೆಯನ್ನು ತೂಗಿ ನೋಡಿ, ಮುಂದುವರಿಯುತ್ತಿದ್ದರು. ಆದರೆ ಈಗ ಫೇಸ್‌ಬುಕ್, ಬ್ಲಾಗ್‌ಗಳ ಮೂಲಕ ಬರಹಗಾರರು ತಮ್ಮ ಇಷ್ಟದ ರೀತಿ ಬರೆಯುತ್ತಿದ್ದಾರೆ. ಈ ಸ್ವಾತಂತ್ರ್ಯ ಒಂದು ರೀತಿ ಸ್ವಾಗತಾರ್ಹವೆನಿಸಿದರೂ ಅದರ ಗಟ್ಟಿತನದ ಬಗ್ಗೆ ಸಂಶಯಗಳು ಇದ್ದೇ ಇರುತ್ತದೆ.

ಕನ್ನಡ ಕಥಾ ಲೋಕದಲ್ಲಿ ಕಥಾ ಸ್ಪರ್ಧೆಗಳು ಈಗ ಬಹು ಪ್ರತಿಷ್ಠಿತವೆನಿಸಿವೆ. ನಾಡಿನ ಎಲ್ಲ ದೈನಿಕ ಪತ್ರಿಕೆಗಳೂ ಇಂತಹ ಸ್ಪರ್ಧೆಗಳಿಗೆ ವೇದಿಕೆ ಕಲ್ಪಿಸಿವೆ. ಅವುಗಳು ನೀಡುವ ಬಹುಮಾನ ಮೊತ್ತವೂ ಆಕರ್ಷಕವಾಗಿದ್ದು, ಬರಹಗಾರರು ಅದರ ಮೇಲೇ ಕಣ್ಣಿಟ್ಟು ಬರೆಯುವುದೂ ಉಂಟು. (ಈ ಮಾತು ಎಲ್ಲರಿಗೂ ಅನ್ವಯವಾಗುವುದಿಲ್ಲ).

ಇಂತಹ ಕಥಾ ಸ್ಪರ್ಧೆಗಳಲ್ಲಿ ಬಹುಮಾನ ಪಡೆದ ಕತೆಗಾರರು ಮುಂದೆ ಕಥಾ ಜಗತ್ತಿನಲ್ಲಿ ರಾರಾಜಿಸಿದ ಉದಾಹರಣೆಗಳಿವೆ. ಹಾಗಾಗಿ ಪತ್ರಿಕೆಗಳ ಈ 'ಕಥಾ ಸ್ಪರ್ಧೆ' ಆಯೋಜನೆ ಸ್ವಾಗತರ್ಹವಾದುದು, ಸ್ತುತ್ಯಾರ್ಹವಾದುದು.

'ಮೈಸೂರು ಮಿತ್ರ'– ದೈನಿಕವು ಕಳೆದ ನಾಲ್ಕೂವರೆ ದಶಕಗಳಿಂದ ಈ 'ಕಥಾ ಸ್ಪರ್ಧೆ'ಯನ್ನು ಆಯೋಜಿಸಿಕೊಂಡು ಬಂದಿದೆ. ನಾಡಿನ ಮೂಲೆ ಮೂಲೆಗಳಿಂದ ಈ ಸ್ಪರ್ಧೆಗೆ ಕತೆಗಳು ಬರುತ್ತವೆ. ಹೆಚ್ಚಿನ ಕತೆಗಳು ಗ್ರಾಮೀಣ ಬದುಕಿನ ಜೀವನ ವ್ಯಾಪಾರವನ್ನು ಅನಾವರಣಗಳಿಸುವತ್ತ ಗಮನಹರಿಸುವುದು, ಪತ್ರಿಕೆಯು ಗ್ರಾಮೀಣ ಭಾಗದಲ್ಲಿ ಹೆಚ್ಚು ಜನಪ್ರಿಯವಾಗಿರುವುದು ಒಂದಕ್ಕೊಂದು ಸಂಬಂಧವಿದೆ ಎನಿಸುತ್ತದೆ.

ಬಹುಮಾನಕ್ಕೆ ಅರ್ಹವೆನಿಸಿರುವ ಕಥೆಗಳು ತಮ್ಮ ಕಥಾವಸ್ತು, ನಿರೂಪಣಾ ಶೈಲಿ ಹಾಗೂ ಸಂವಿಧಾನದಿಂದ ಗಟ್ಟಿಯಾಗಿದ್ದು, ಬಹುಮಾನ ಪಡೆಯಲು ಅರ್ಹವೆನಿಸಿವೆ.

ಮೊದಲ ಬಹುಮಾನ ಪಡೆದಿರುವ 'ಪಟ' ಕಥೆಯು, ಗ್ರಾಮೀಣ ಜಗತ್ತಿನ ಒಳ ರಾಜಕಾರಣವನ್ನು 'ಫೋಟೋ' ಒಂದರ ರೂಪಕದ ಮೂಲಕ ಸಶಕ್ತವಾಗಿ ಕಟ್ಟಿಕೊಟ್ಟಿದೆ. ಪುಢಾರಿ ರಾಜಕಾರಣ ಮಾಡುವವರು ಕ್ರಮೇಣ ಭ್ರಷ್ಟರಾಗುವುದಲ್ಲದೆ, ಅದನ್ನು ಆದರಿಸಿ ಹಾಳಾಗುವುದು ಸ್ವಯಂಸಿದ್ಧ ಎಂಬುದು ಲೋಕಸಿದ್ಧವಾದ ಮಾತು.

ಇಂದಿಗೂ ಹಳ್ಳಿಗಳಲ್ಲಿ ಮಾದೇವಣ್ಣನಂತಹ ಮುಗ್ಧರು, ಮುನಿಯಪ್ಪಣ್ಣನಂತಹ ರಾಜಕಾರಣಿಗಳ ಬಾಲಗಳಾಗಿ, ಬಾಳುಗೆಡುವ, ನೀಚಕೃತ್ಯಗಳಿಗೆ ಇಳಿಯುವುದು ನೋಡಿದಾಗ 'ಪಟ' ಕಥೆಯ ಕಡುವಾಸ್ತವ ಮುಖಕ್ಕೆ ರಾಚುತ್ತದೆ.

ಕಥೆಯ ಅಂತ್ಯದಲ್ಲಿ ಉಪದೇಶದ ಮಾತುಗಳ ವಿನಾ ಒಟ್ಟಾರೆ 'ಪಟ' ಕಥೆಯು ಗಟ್ಟಿಯಾದ, ರಕ್ತ–ಮಾಂಸ ತುಂಬಿದ, ಜೀವಂತ ಪಾತ್ರಗಳ ಸಜೀವ ದರ್ಶನ ವೀಯ್ಯುವ ಮಹತ್ವದ ಕಥೆಯೆನಿಸಿದೆ.

ಎರಡನೆಯ ಬಹುಮಾನ ಪಡೆದಿರುವ 'ಶ್ರದ್ಧಾಂಜಲಿ–ಕಥೆಯು, ಓದುಗರನ್ನು ಖಿನ್ನರಾಗಿಸುವ ಕಥೆ. ಕೃಷ್ಣಪ್ಪ ಹಾಗೂ ಅವನ ಸೋದರರು, ತಾಯಿಯ ಸಾವಿನಲ್ಲೂ ಅಮಾನವೀಯರಾಗುವ ಚಿತ್ರಣವನ್ನು ಕಥೆ ನಿರೂಪಿಸಿದೆ.

ಕೃಷ್ಣಪ್ಪನ ತಾಯಿಯ ಸಾವಿನಲ್ಲಿ ಭಾಗಿಯಾಗುವ ಚಂದ್ರು, ಅವನ ಕುಟುಂಬದ ಕಥೆಗೆ ಸಾಕ್ಷಿಯಾಗುತ್ತಾನೆ. ಕೃಷ್ಣಪ್ಪನ ಮಾತು, ದೈನ್ಯತೆ, ಸಣ್ಣತನಗಳನ್ನು ಕಥೆ ಚೊಕ್ಕವಾಗಿ ಕಟ್ಟಿಕೊಟ್ಟಿದೆ. ಇದು ಯಾರ ಮನೆಯ ಕತೆಯೂ ಆಗಬಹುದು ಎಂಬಷ್ಟು ಸಾರ್ವತ್ರಿಕತೆ ಪಡೆದಿರುವುದೇ ಈ ಕಥೆಯ ವಿಶೇಷತೆ.

ಸಾವಿನಂತಹ ದುರ್ಬರ ಘಳಿಗೆಯಲ್ಲೂ ಲೆಕ್ಕಚಾರದಲ್ಲಿ ತೊಡಗುವ ಮನುಷ್ಯ ಸ್ವಭಾವವನ್ನು ಸಜೀವವಾಗಿ ಕಟ್ಟಿ ನಿಲ್ಲಿಸುವಲ್ಲಿ ಈ ಕಥೆ ಸಶಕ್ತವಾಗಿದೆ.

ಮೂರನೆಯ ಬಹುಮಾನಕ್ಕೆ ಭಾಜನವಾಗಿರುವ 'ಮುಗಿಲೆತ್ತರದ ಮಾತ್ಸರ್ಯ' ಕಥೆಯು ಮೇಲ್ನೋಟಕ್ಕೆ ಅಥವಾ ಮೊದಲ ಓದಿಗೆ ಪತ್ತೆದಾರಿ ಕಥೆಯಂತೆ ಭಾಸವಾಗುತ್ತದೆ. ನಗರಗಳಲ್ಲಿ ನಡೆಯುವ ಕೊಲೆಗಳ ಬಹುಭಾಗ ದರೋಡೆ, ಕಳ್ಳತನದ ಕಾರಣಗಳನ್ನು ಹೊಂದಿರುತ್ತವೆ. (ಇಲ್ಲಿನ) ಕಥೆಯ ಕಾಳೇಗೌಡ, ಪತ್ನಿ ರತ್ನಮ್ಮ, ಮಗ ರವಿಯ ಕೊಲೆ ಭೀಕರವಾಗಿರುತ್ತದೆ. ಈ ಭೀಭತ್ಸ ಕೃತ್ಯವೇ ಅದು ಆಕಸ್ಮಿಕ ಕೊಲೆಯಾಗಿರದೆ, ದ್ವೇಷದ ಭಾಗವಾಗಿದೆ ಎಂದು ಸಿಬಿಐ ಆಫೀಸರ್ ಸೂರ್ಯನಿಗೆ ಅಂದಾಜಾಗಿ, ತನಿಖೆ ಮಾಡುತ್ತಾನೆ.

ಪತ್ತೇದಾರಿ ಕತೆಯಂತೆ ಓದುಗರನ್ನು ಆಕರ್ಷಿಸುವ 'ಮುಗಿಲೆತ್ತರದ ಮಾತ್ಸರ್ಯ' ಈ ಕಾರಣಕ್ಕಾಗಿ ಬಹುಮಾನ ಪಡೆದಿಲ್ಲ. ತನ್ನ ಕಥನ ನಿರೂಪಣೆಯಲ್ಲಿ ಜನಪ್ರಿಯ ಶೈಲಿ ಅನುಸರಿಸಿದ್ದರೂ, ಮನುಷ್ಯನ ಆದಿಮ ಸ್ವಭಾವವೆನಿಸಿರುವ ಮಾತ್ಸರ್ಯ, ಹೇಗೆಲ್ಲಾ ಜೀವನದ ಲೆಕ್ಕಾಚಾರಗಳನ್ನು ತಲೆಕೆಳಗಾಗಿಸುತ್ತದೆ ಎಂದು ಇಲ್ಲಿನ ಕಾಳೇಗೌಡನ ಕಥೆ ಅಭಿವ್ಯಕ್ತಿಸುತ್ತದೆ. ಇನ್ಸ್‌ಪೆಕ್ಟರ್ ಜಮಾದಾರ್, ಇನ್ಸ್‌ಪೆಕ್ಟರ್ ಸೂರ್ಯರಂತಹ ದಕ್ಷ ಅಧಿಕಾರಿಗಳ ಪಾತ್ರ ನಿರ್ವಹಣೆ ಗಮನ ಸೆಳೆಯುತ್ತದೆ. ಪೊಲೀಸ್ ಇಲಾಖೆ ನಿರ್ವಹಿಸುವ ತನಿಖಾ ವಿಧಾನದ ಸ್ವರೂಪವನ್ನು ಕಥೆ ಜೀವಂತವಾಗಿ ನಿರೂಪಿಸಿದೆ. ಮನುಷ್ಯನ ಕತ್ತಲು ಭಾಗವನ್ನು ಕಥೆ ಬೆಳಕಿಗೆ ಹಿಡಿದಿದೆ.

ಸಮಾಧಾನಕರ ಬಹುಮಾನ ಪಡೆದಿರುವ 'ನವಿಲುಗರಿ' ಹಾಗೂ 'ಅಮ್ಮನಿಗೆ ಪತ್ರ' ಕಥೆಗಳು ನಗರ ಜೀವನದ ಧಾವಂತವನ್ನು ಹಿಡಿದಿಟ್ಟಿರುವ ಕತೆಗಳು. 'ನವಿಲುಗರಿ'– ಕಥೆಯು ಪುಟ್ಟ ಕತೆಯಾದರೂ ಅದರ ವೇಗ ನಗರದ ಗತಿಯನ್ನು ಪ್ರತೀಕವಾಗಿ ತೋರಿಸುವಂತಿದೆ.

ಸೂರ್ಯಕಾಂತಿ 'ಕಂಟೆಂಟ್ ಕ್ರಿಯೇಟರ್' ಆಗಿ ಒಳ್ಳೆಯ ಜೀವನ ಕಟ್ಟಿಕೊಳ್ಳಬಹುದಿತ್ತು. ಆದರೆ 'ನಗರ'ದ ಜೀವನ ವಿಲಾಸಿ ಜೀವನದತ್ತ ಸದಾ ದೂಡುತ್ತಿರುತ್ತದೆ. ಇಲ್ಲಿನ ಆಕರ್ಷಣೆಗಳು, ಸುಲಭಕ್ಕೆ ಸಿಗುವ ಸಂಪರ್ಕಗಳು ಸೂರ್ಯಕಾಂತಿಯನ್ನು ಅಧೋಗತಿಗೆ ಇಳಿಸುತ್ತದೆ.

ನಮ್ಮ ಕಾಲದ ವೆಬ್ ವಂಚನೆಗಳನ್ನು ಈ ಕಥೆ ನಿರೂಪಿಸುತ್ತದೆ. ವರ್ತಮಾನದ ಕನ್ನಡಿಯಂತೆ ಈ 'ನವಿಲುಗರಿ' ಕಥೆ ಕಾಣಿಸುತ್ತದೆ. ವಿದ್ಯಾವಂತರೇ ಹಣದ ಆಸೆಗೆ ಬಿದ್ದು, ವೆಬ್ ವಂಚನೆಗೆ ಗುರಿಯಾಗುವ ಘಟನೆಗಳನ್ನು ನೋಡಿದಾಗ 'ಆಸೆ' ಎಂಬ ಮಾಯದ ವಸ್ತು ಎಷ್ಟು ಆಕರ್ಷಕ ಎನಿಸದಿರದು. ಕಥೆ ಹೇಳುತ್ತಿರುವುದು : 'ವಂಚನೆ ಎಷ್ಟು ಜಾಣ್ಮೆಯಿಂದ ಮಾಡುತ್ತಾರೆಂದಲ್ಲ; ಎಂತಹ ಜಾಣನೂ 'ಆಸೆ' ಎಂಬ ಪುಷ್ಪಕ್ಕೆ ಕೀಟಕನಾಗುತ್ತಾನಲ್ಲ ಎಂದು!

'ಅಮ್ಮನಿಗೆ ಪತ್ರ' – ಕತೆಯು ಭಾವನೆಗಳ ಸಹಜ ಅಭಿವ್ಯಕ್ತಿಯಿಂದ ಗಮನ ಸೆಳೆಯುತ್ತದೆ. ಕತೆ, ಇಂಗ್ಲೀಷ್ ಭಾಷೆಗಿಂತ ಕನ್ನಡ ಭಾಷೆಯ ಅಭಿವ್ಯಕ್ತಿ ಹೆಚ್ಚು ಸಹಜವಾದುದು ಎಂಬಂತೆ ನಿರೂಪಿಸ ಹೊರಟರೂ, ಇದರಿಂದಾಚೆಗೂ ಕಥೆ ಆಳವಾಗಿ ಕಲಕುತ್ತದೆ.

ಅಮ್ಮನಿಗೆ, ವಿಕಾಸ ಬರೆಯುವ ಪತ್ರದಲ್ಲಿ ಅವನ ಬಾಲ್ಯಕತೆ ಬಿಚ್ಚಿಕೊಳ್ಳುತ್ತ, ತನ್ನ ಆಧಾರವಾಗಿರುವ ಅಮ್ಮನಿಗೆ ಕೃತಜ್ಞತೆ ಹೇಳ ಹೊರಟರೂ, ಆ ಪತ್ರದ ನವಿರು ಭಾವನೆಗಳ ಸಹಜ ಪ್ರಸರಣ, ಪ್ರಾಮಾಣಿಕತೆ ನಮ್ಮನ್ನು ತಟ್ಟುತ್ತದೆ.

ಪತ್ರ ಮೂಲಕ ತನ್ನ ನೌಕರಿ ಸಂಗತಿಯನ್ನು ವಿಕಾಸ್ ಹೇಳಿ ಹೊರಟರೂ ಅದನ್ನು ವೈಯಕ್ತಿಕ ನೆಲೆಗಷ್ಟೇ ಸೀಮಿತಗೊಳಿಸದಿರುವುದು ಕಥೆಯ ಅರ್ಥವ್ಯಾಪ್ತಿಯನ್ನು ಹಿಗ್ಗಿಸಲು ಸಾಧ್ಯವಾಗಿದೆ

ಪತ್ರಗಳಲ್ಲಿ 'ವೈಯಕ್ತಿಕ' ಸ್ಪರ್ಶ ಇದ್ದಾಗಲೇ ಅದು ಕತೆಯಾಗುವುದು. 'ಅಮ್ಮನಿಗೆ ಪತ್ರ' – ಈ ಕಾರಣಕ್ಕಾಗಿ ಬಹುಮಾನ ಪಡೆದಿದೆ.

ದ್ವಿತೀಯ ಬಹುಮಾನ

ಶ್ರದ್ಧಾಂಜಲಿ



ಬಿ.ಆರ್.ನಾಗರತ್ನ
1125, 9ನೇ ಮುಖ್ಯರಸ್ತೆ, ಗೋಕುಲಂ 3ನೇ ಹಂತ, ಮೈಸೂರು–570002
ಮೊ: 9731999313

ತೃತೀಯ ಬಹುಮಾನ

ಮುಗಿಲೆತ್ತರದ ಮಾತ್ಸರ್ಯ



ಹೆಚ್.ಕೆ.ಶಶಿಕುಮಾರ್
ಮನೆ ನಂ. 120, ಸರ್ವೋದಯ ಡಿವಿಸಿ ಲೇಔಟ್, ರಾಮಕೃಷ್ಣನಗರ, ಮೈಸೂರು–23, ಮೊ: 7019154192

ಸಮಾಧಾನಕರ ಬಹುಮಾನ

ನವಿಲುಗರಿ



ಯಶಸ್ವಿನಿ.ಎಂ.ಎನ್
2310/3, ಮೊದಲನೇ ಕ್ರಾಸ್, ವಿನಾಯಕ ನಗರ, ಪಡುವಾರಹಳ್ಳಿ
ಮೊ: 9731999313

ಸಮಾಧಾನಕರ ಬಹುಮಾನ

ಅಮ್ಮನಿಗೆ ಪತ್ರ



ಮನೋಜ್ ಕುಮಾರ್.ಕೆ
ಹೊಸಹಂಪಾಪುರ, ಕೊಳ್ಳೇಗಾಲ ತಾ. ಚಾಮರಾಜನಗರ ಜಿಲ್ಲೆ
ಮೊ: 9620414115



ನನಗೆ ಯಾರು ಹಣ ಕೊಟ್ಟರು ಎಂದು ನೀವು ಕೇಳಲೂಬಾರದು... ನಾನು ಹೇಳಲೂಬಾರದು...

- ಆರ್‌ಟಿಐ ಕಾರ್ಯಕರ್ತ ಸ್ನೇಹಮಯಿ ಕೃಷ್ಣ

ಮೈಸೂರಿನ ಆರ್‌ಟಿಐ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಈಗ ಇಡೀ ದೇಶದ ಗಮನ ಸೆಳೆದಿದ್ದಾರೆ. ಕಾರಣ ಇಷ್ಟೇ; ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶಾಮೀಲಾಗಿದ್ದಾರೆಂದು ಹೇಳಲಾಗುತ್ತಿರುವ ಮುಡಾ ನಿವೇಶನ ಹಗರಣದಲ್ಲಿ ಕಾನೂನು ಸಮರ ಸಾರಿದ್ದಾರೆ. ಏಕಾಏಕಿ ರಾಜ್ಯದ ದೊರೆಯ ವಿರುದ್ಧವೇ ಸೆಟೆದು ನಿಂತಿರುವ ಸ್ನೇಹಮಯಿ ಕೃಷ್ಣರಿಗೆ ಈ ತಾಕತ್ತು ಹೇಗೆ ಬಂತು ಎಂಬುದು ಮಿಲಿಯನ್ ಡಾಲರ್ ಪ್ರಶ್ನೆ. ಜೊತೆಗೆ ಅವರ ಹಣಕಾಸಿನ ಮೂಲ, ರೌಡಿಶೀಟರ್ ಪಟ್ಟಿಯಲ್ಲಿ ಸೇರಿರುವುದು, ಗಳಿಸಿರುವಂತಹ ಆಸ್ತಿ-ಪಾಸ್ತಿ, ಅವರ ಮೇಲಿನ ಬ್ಲ್ಯಾಕ್‌ಮೇಲ್ ಆರೋಪ ಸೇರಿದಂತೆ ಜನ ಸಾಮಾನ್ಯರಲ್ಲಿ ಅವರ ಬಗ್ಗೆ ಹತ್ತು ಹಲವು ಸಂಶಯಗಳಿವೆ. ಈ ಹಿನ್ನೆಲೆಯಲ್ಲಿ ಸ್ನೇಹಮಯಿ ಕೃಷ್ಣ ಅವರನ್ನು 'ಮೈಸೂರು ಮಿತ್ರ' ಬೆನ್ನತ್ತಿ ಹಿಡಿದು, ಕೆಲ ಸಂಗತಿ ಬಾಯ್ಬಿಡಿಸಿದೆ. ಆ ವಿಚಾರಗಳು ನಮ್ಮ ಓದುಗರಿಗಾಗಿ;

✍...ಬಾಪುಲಿಂಗರಾಜ್ ಅರಸ್

ಮೈಸೂರು ಮಿತ್ರ: ***ದಿನ ನಿತ್ಯವೂ ಒಂದಲ್ಲ ಒಂದು ಸಾಮಾಜಿಕ ಹೋರಾಟದಲ್ಲೇ ತೊಡಗಿಸಿಕೊಂಡಿದ್ದರೆ ನಿಮ್ಮ ಜೀವನ ನಡೆಯುವುದು ಹೇಗೆ? ನಿಮ್ಮ ಆದಾಯದ ಮೂಲವೇನು?***

ಸ್ನೇಹಮಯಿ ಕೃಷ್ಣ: ಇದುವರೆಗೆ ಖಾಸಗಿ ಕಂಪನಿ, ಮೆಡಿಕಲ್ ಸ್ಟೋರ್, ಪತ್ರಿಕಾ ಕಾರ್ಯಾಲಯದಲ್ಲಿ ನಾನು ಕೆಲಸ ಮಾಡಿದ್ದೇನೆ. ಸಿನಿಮಾ ಕ್ಷೇತ್ರ, ಧಾರಾವಾಹಿ ಸೇರಿದಂತೆ ಹಲವು ಕಡೆ ದುಡಿದಿದ್ದೇನೆ. ಆದರೆ 2006 ರಿಂದ ಸಾಮಾಜಿಕ ಹೋರಾಟದಲ್ಲಿ ಪೂರ್ಣ ಪ್ರಮಾಣದಲ್ಲಿ ತೊಡಗಿಸಿಕೊಂಡಿದ್ದೇನೆ. 2007 ರಿಂದ 'ಸುದ್ದಿ ಪಾಕ್ಷಿಕ' ಪತ್ರಿಕೆ ನಡೆಸುತ್ತಿದ್ದೇನೆ. ಪತ್ರಿಕೆಯಲ್ಲಿ ಕೆಲಸ ಮಾಡುವುದರ ಜೊತೆ ಜೊತೆಗೆ ಸಾಮಾಜಿಕ ಹೋರಾಟ ಮಾಡುತ್ತಿದ್ದೇನೆ.

ಈ ವೇಳೆ ನನ್ನ ಹೋರಾಟಕ್ಕೆ ದಾಖಲಾತಿ ಸಂಗ್ರಹಿಸಲು ಮಾಹಿತಿ ಹಕ್ಕು ಕಾಯ್ದೆ (ಆರ್‌ಟಿಐ) ನನಗೆ ಅಸ್ತ್ರವಾಯಿತು. ಈ ಮೂಲಕ ಭ್ರಷ್ಟಾಚಾರ ಪ್ರಕರಣಗಳ ದಾಖಲಾತಿ ಸಮೇತ ಹೋರಾಟ ಮಾಡುತ್ತಿದ್ದೇನೆ.

ನನ್ನ ಪತ್ನಿಯ ತವರು ಮನೆಯಿಂದ ದವಸ-ಧಾನ್ಯ ಬರುತ್ತೆ. ಸಣ್ಣ ಪುಟ್ಟ ಕೆಲಸ ಮಾಡಿಕೊಟ್ಟರೆ ಜನ ನನಗೆ ಹಣ ನೀಡ್ತಾರೆ. ನ್ಯಾಯಾಲಯದಲ್ಲಿ ವ್ಯಾಜ್ಯ ನಡೆಸುವ ಸಂದರ್ಭದಲ್ಲಿ ಅವರ ವಕೀಲರ ಜೊತೆಯಾಗಿ ನಾನು ಕೆಲಸ ಮಾಡುತ್ತೇನೆ. ಆಗ ಅವರು ನನಗೆ ಗೌರವ ಧನ ನೀಡುತ್ತಾರೆ. ಅದೆಲ್ಲದರಿಂದ ಹೇಗೋ ಜೀವನ ನಡೀತಿದೆ.

ಮೈಸೂರು ಮಿತ್ರ: ***ಹಳ್ಳಿಯಿಂದ ಬರುವ ದವಸ-ಧಾನ್ಯ, ಸಣ್ಣ ಪುಟ್ಟ ಕೆಲಸಗಳಿಗೆ ಜನರು ನೀಡುವ ಹಣದಿಂದ ಕುಟುಂಬ ನಿರ್ವಹಣೆ ಸಾಧ್ಯವೇ?***

ಸ್ನೇಹಮಯಿ ಕೃಷ್ಣ: ನನ್ನ ಹೋರಾಟಕ್ಕೆ ಬೆನ್ನೆಲುಬಾಗಿ ನಿಂತಿರುವವರು ನನಗೆ ತಿಂಗಳಿಗೆ ಇಂತಿಷ್ಟು ಅಂತಾ ಹಣ ನೀಡ್ತಾರೆ. ನನ್ನ ಕೆಲಸಕ್ಕೆ ಪೂರಕ ಪರಿಕರಗಳಾದ ಪ್ರಿಂಟರ್, ಸ್ಟೇಷನರಿ ವಸ್ತುಗಳನ್ನು ನೀಡ್ತಾರೆ. ಕೆಲವರು ನಗದು ರೂಪದಲ್ಲಿ ಸಹಾಯ ಮಾಡಿದರೆ, ಇನ್ನೂ ಕೆಲವರು ವಸ್ತುವಿನ ರೂಪದಲ್ಲಿ ಸಹಾಯ ಮಾಡಿ ನನ್ನ ಹೋರಾಟ ಉತ್ತೇಜಿಸುತ್ತಾರೆ. ಒಬ್ಬರು ನನ್ನ ಮನೆಗೆ ಸಿಸಿ ಕ್ಯಾಮರಾ ಹಾಕಿಸಿಕೊಟ್ಟಿದ್ದಾರೆ.

ಮೈಸೂರು ಮಿತ್ರ: ***ನಿಮಗೆ ಹೀಗೆ ನಗದು, ವಸ್ತು ರೂಪದಲ್ಲಿ ಸಹಾಯ ಮಾಡುತ್ತಿರುವವರು ಯಾರು?***


ಸ್ನೇಹಮಯಿ ಕೃಷ್ಣ: ಯಾರು ಎಷ್ಟು ಹಣ, ಏನು ವಸ್ತು ಕೊಟ್ಟರು ಎಂದು ನೀವು ಕೇಳಲೂ ಬಾರದು, ನಾನು ಹೇಳಲೂ ಬಾರದು. ಬ್ರಿಟಿಷರ ವಿರುದ್ಧ ರಾಷ್ಟ್ರಪಿತ ಮಹಾತ್ಮಾ ಗಾಂಧಿ ಅವರು ದೊಡ್ಡಮಟ್ಟದ ಹೋರಾಟ ಮಾಡುತ್ತಿದ್ದರು. ಹಾಗಾದರೆ ಹೋರಾಟ ಮಾತ್ರ ಮಾಡುತ್ತೀರಾ, ನಿಮ್ಮ ಕುಟುಂಬ ನಿರ್ವಹಣೆ ಹೇಗೆ, ನಿಮಗೆ ಯಾರು ಹಣ ಸಹಾಯ ಮಾಡುತ್ತಿದ್ದಾರೆ ಎಂದು ಬ್ರಿಟಿಷರು ಗಾಂಧಿ ಅವರನ್ನು ಏನಾದರೂ ಕೇಳಿದ್ರಾ! ಹಾಗೆ, ನನಗೆ ಹೇಗೋ ಆದಾಯ ಬರುತ್ತದೆ. ಆದರೆ ಆದಾಯದ ಮೂಲ ನಿರ್ದಿಷ್ಟವಾಗಿಲ್ಲ.

ಮೈಸೂರು ಮಿತ್ರ: ***ನಿಮ್ಮ ಹೋರಾಟದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಮಾತ್ರವೇ ಟಾರ್ಗೆಟ್ ಮಾಡಿದ್ದೀರಾ. ಹಾಗಾದರೆ ಅಕ್ರಮ ಎಸಗಿರುವ ಬೇರೆಯವರು ನಿಮ್ಮ ಕಣ್ಣಿಗೆ ಬೀಳುತ್ತಿಲ್ಲವೇ?***

ಸ್ನೇಹಮಯಿ ಕೃಷ್ಣ: ಸಿದ್ದರಾಮಯ್ಯ ವಿರುದ್ಧದ ಹೋರಾಟಕ್ಕೂ ಮುನ್ನ ನಾನು ಶಾಸಕ ಜಿ.ಟಿ.ದೇವೇಗೌಡರ ವಿರುದ್ಧವೂ ಹೋರಾಟ ಮಾಡಿದ್ದೇನೆ. ಮಾಜಿ ಶಾಸಕ ರಾಮದಾಸ್ ವಿರುದ್ಧ 13 ವರ್ಷಗಳ ಕಾಲ ಹೋರಾಟ ಮಾಡಿದ್ದೇನೆ. ಮುಡಾದಿಂದ ಸಿದ್ದರಾಮಯ್ಯ ಕುಟುಂಬ ಅಕ್ರಮವಾಗಿ ನಿವೇಶನ ಪಡೆದಿದ್ದ ಕಾರಣ ಈಗ ಅವರ ವಿರುದ್ಧ ಹೋರಾಟ ಮಾಡುತ್ತಿದ್ದೇನೆ.

ಮೈಸೂರು ಮಿತ್ರ: ***ಸಿದ್ದರಾಮಯ್ಯ ಅವರಂತೆ ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್. ಯಡಿಯೂರಪ್ಪ, ಹೆಚ್.ಡಿ.ಕುಮಾರಸ್ವಾಮಿ ಸೇರಿ ಹಲವರು ಭ್ರಷ್ಟಾಚಾರದ ಆರೋಪ ಎದುರಿಸುತ್ತಿದ್ದಾರೆ. ಇವರ ವಿರುದ್ಧವೂ ನೀವು ಸಮರ ಸಾರಬಹುದಿತ್ತಲ್ಲವೇ?***

ಸ್ನೇಹಮಯಿ ಕೃಷ್ಣ: ಯಡಿಯೂರಪ್ಪ, ಕುಮಾರಸ್ವಾಮಿ ಸೇರಿದಂತೆ ಹಲವರ ವಿರುದ್ಧದ ಭ್ರಷ್ಟಾಚಾರ ಪ್ರಕರಣ ಸಂಬಂಧ ಎಸ್.ಆರ್. ಹಿರೇಮಠ್ ಸೇರಿ ಕೆಲವರು ಹೋರಾಟ ಮಾಡುತ್ತಿದ್ದಾರೆ. ಅವರ ಹೋರಾಟದಲ್ಲಿ ನಾನೇಕೆ ಮೂಗು ತೂರಿಸಲಿ. ನಾನು ಯಾರ ವಿರುದ್ಧವೂ ವೈಯಕ್ತಿಕ ಹಿತಾಸಕ್ತಿಗೆ ಹೋರಾಟ ಮಾಡುತ್ತಿಲ್ಲ.



ಮೈಸೂರು ಮಿತ್ರ: ***ಸಿದ್ದರಾಮಯ್ಯ ವಿರುದ್ಧ ಹೋರಾಟ ಮಾಡಲು ವಿರೋಧ ಪಕ್ಷಗಳು ನಿಮಗೆ ಹಣ ನೀಡಿವೆ ಎಂಬ ಬಲವಾದ ಆರೋಪ ಕೇಳಿ ಬರುತ್ತಿದೆಯಲ್ಲಾ?***

ಸ್ನೇಹಮಯಿ ಕೃಷ್ಣ: ಮುಖ್ಯಮಂತ್ರಿ ಸಿದ್ದರಾಮಯ್ಯ ಬಳಿ ಗುಪ್ತಚರ ಇಲಾಖೆ ಇದೆ. ಈಗ ರಾಜ್ಯದಲ್ಲಿ ಇರುವುದು ಅವರದೇ ಸರ್ಕಾರ ಅಲ್ವಾ. ನಾನು ವಿರೋಧ ಪಕ್ಷಗಳಿಂದ ಹಣ ಪಡೆದಿರುವುದನ್ನು ಪತ್ತೆ ಮಾಡಿ, ತನಿಖೆ ಮಾಡಿಸಲಿ. ನನ್ನ ವಿರುದ್ಧದ ಆರೋಪ ಸಾಬೀತು ಮಾಡಲಿ. ಆಗ ಯಾವುದೇ ಶಿಕ್ಷೆ ಅನುಭವಿಸಲು ನಾನು ಸಿದ್ಧನಿದ್ದೇನೆ. ಆರೋಪಕ್ಕೆ ಸಾಕ್ಷಿ ಕೊಟ್ಟರೆ ನಾನೇ ಜೈಲಿಗೆ ಹೋಗಿ ಕೂರುತ್ತೇನೆ.

ಮೈಸೂರು ಮಿತ್ರ: ***ಸಿದ್ದರಾಮಯ್ಯ ಪ್ರಕರಣದಲ್ಲಿ ನಿಮ್ಮ ಪರವಾಗಿ ವಾದ ಮಾಡಿದ ಸುಪ್ರೀಂಕೋರ್ಟ್ ಖ್ಯಾತ ವಕೀಲ ಮಣಿಂದರ್ ಸಿಂಗ್ ಹಣವಿಲ್ಲದೆ ಹೇಗೆ ನಿಮ್ಮ ಪರ ವಕಾಲತ್ತು ವಹಿಸಿದರು. ಸಿದ್ದರಾಮಯ್ಯ ವಿರೋಧಿಗಳು ನಿಮ್ಮ ಮೂಲಕ ಅವರಿಗೆ ಹಣ ಕೊಟ್ಟಿದ್ದಾರೆಂಬ ಆರೋಪವಿದೆ.***

ಸ್ನೇಹಮಯಿ ಕೃಷ್ಣ ಸಿದ್ದರಾಮಯ್ಯ ಪ್ರಕರಣದಲ್ಲಿ ನನ್ನ ವಕೀಲ ವಸಂತ್ ಕುಮಾರ್ ವಾದ ಮಾಡುತ್ತಿದ್ದರು. ಅವರು ಬಲವಾದ ವಾದ ಮಂಡನೆ ಮಾಡುವ ಸಲುವಾಗಿ ತಮಗೆ ಪರಿಚಯದ ಮಣಿಂದರ್ ಸಿಂಗ್ ಅವರನ್ನು ಕರೆ ತಂದರು. ನನ್ನ ಪ್ರಾಮಾಣಿಕ ಹೋರಾಟ ಪರಿಗಣಿಸಿ ಹಣ ಪಡೆಯದೇ ಮಣಿಂದರ್ ಸಿಂಗ್ ಫ್ರೀ ಆಗಿ ವಾದ ಮಾಡಿದರು. ಒಂದು ವೇಳೆ ಹಣ ಕೊಟ್ಟಿದ್ದರೆ ಸಾಕ್ಷಿ ತೋರಿಸಲಿ.

ನಾನು ಮಾಡುತ್ತಿರುವ ಹೋರಾಟ ಸತ್ಯದ ಹಾದಿ ಎಂಬುದನ್ನು ತಿಳಿದಂತಹ ಮಹಾನ್ ನ್ಯಾಯವಾದಿಗಳು ನನ್ನ ಪರ ವಾದ ಮಾಡಿ, ತಾವೂ ಪ್ರಖ್ಯಾತಿ ಗಳಿಸಬಹುದು ಎಂಬುದನ್ನು ಮನಗಂಡು, ನನ್ನ ನೆರವಿಗೆ ಮುಂದೆ ಬಂದಿದ್ದಾರೆ. ಏನು ಸಹಾಯ ಬೇಕು ಕೇಳಿ, ನಾವು ಮಾಡುತ್ತೇವೆ ಎಂದು ಹೇಳುತ್ತಾರೆ. ನನ್ನ ಪ್ರಕರಣದಲ್ಲಿ ವಕಾಲತ್ತು ವಹಿಸಿ ಬಹಳಷ್ಟು ವಕೀಲರು ಪ್ರಖ್ಯಾತಿ ಪಡೆದಿದ್ದಾರೆ.

ಸಿದ್ದರಾಮಯ್ಯ ಪ್ರಕರಣದಲ್ಲಿ ಸರ್ಕಾರದ ಪರವಾಗಿ ಹಿರಿಯ ನ್ಯಾಯವಾದಿ ಕಪಿಲ್ ಸಿಬಲ್ ವಾದ ಮಾಡಿದ್ದಾರೆ ಆದರೆ ಅವರಿಗೆ ಎಷ್ಟು ಹಣ ನೀಡಲಾಗಿದೆ ಎಂಬ ಬಗ್ಗೆ ಆರ್‌ಟಿಐನಡಿ ಅರ್ಜಿ ಸಲ್ಲಿಸಿದ್ದು, ಸಮಂಜಸ ಉತ್ತರ ನೀಡಿಲ್ಲ.

ಮೈಸೂರು ಮಿತ್ರ: ***ನಿಮ್ಮ ಆಸ್ತಿ ಎಷ್ಟಿದೆ ಮತ್ತು ಎಲ್ಲೆಲ್ಲಿದೆ?***

ಸ್ನೇಹಮಯಿ ಕೃಷ್ಣ: ಯಾವುದೇ ವ್ಯಕ್ತಿಯ ವೈಯಕ್ತಿಕ ಆದಾಯದ ಮೂಲ ಕೇಳಬಾರದು ಎಂದು ಸುಪ್ರೀಂಕೋರ್ಟ್ ಹೇಳಿದೆ. ಸಿದ್ದರಾಮಯ್ಯ ವಿರುದ್ಧದ ಹೋರಾಟಕ್ಕೆ ಮುನ್ನ ಒಂದು ಆಸ್ತಿ ಖರೀದಿ ಮಾಡಿದ್ದೆ. ಇದರ ಜೊತೆಗೆ ಪಿತ್ರಾರ್ಜಿತ ಆಸ್ತಿ ಇದೆ. ನನ್ನ ಆಸ್ತಿ ವಿವರವನ್ನು ಇಡಿ (ಜಾರಿ ನಿರ್ದೇಶನಾಲಯ)ಗೆ ಸಲ್ಲಿಸಿದ್ದೇನೆ.

ಮೈಸೂರು ಮಿತ್ರ ***ಸಿದ್ದರಾಮಯ್ಯ ವಿರುದ್ಧದ ಪ್ರಕರಣದಲ್ಲಿ ಅವರ ಕಡೆಯ ವರೇ ನಿಮಗೆ ಕೋಟಿ... ಕೋಟಿ ಆಮಿಷ ವೊಡ್ಡಿದ್ದರು ಎಂದು ನೀವು ಹೇಳುತ್ತೀರಾ. ಹಾಗಾದರೆ, ಕೋಟಿ ಕೋಟಿ ಹಣ ಬೇಡವೆನ್ನುವಷ್ಟು ನೀವು ಪ್ರಾಮಾಣಿಕರೆ?***

ಸ್ನೇಹಮಯಿ ಕೃಷ್ಣ: ಹಣ ಬೇಡ ಎಂದು ನಾನು ಹೇಳುವುದಿಲ್ಲ ಆದರೆ ಪ್ರಾಮಾಣಿಕತೆ ಬಿಟ್ಟು ಅನ್ಯಾಯದ ಮಾರ್ಗದಿಂದ ಬರುವ ಹಣ ನನಗೆ ಬೇಕಿಲ್ಲ. ಮನುಷ್ಯನಿಗೆ ಹಣವೇ ಮುಖ್ಯವಲ್ಲ.

ಮೈಸೂರು ಮಿತ್ರ: ***ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಹಲವರ ವಿರೋಧ ಕಟ್ಟಿಕೊಂಡು ಹೋರಾಟ ಮಾಡುತ್ತಿದ್ದೀರಾ. ನಿಮಗೆ ಪ್ರಾಣ ಭಯ ಇಲ್ಲವೇ? ಇಂತಹ ಬೆಳವಣಿಗೆಗಳಿಂದ ಮನೆಯವರು ಆತಂಕಗೊಂಡಿಲ್ಲವೆ?***

ಸ್ನೇಹಮಯಿ ಕೃಷ್ಣ: ನನ್ನ ಹೋರಾಟ ನೋಡಿ ಮನೆಯವರಲ್ಲಿ ಆತಂಕವಿದೆ. ಯಾರಾದರೂ ನನ್ನ ಮೇಲೆ ದಾಳಿ ಮಾಡಬಹುದು ಎಂಬ ಭಯವಿದೆ. ಹೋರಾಟ ಬಿಟ್ಬಿಡಿ ಅಂತಾ ನನ್ನ ಪತ್ನಿ ಕಣ್ಣೀರಿಟ್ಟಿದ್ದಾಳೆ. ಆದರೆ ನಾನು ಹೋರಾಟದಿಂದ ಹಿಂದೆ ಸರಿದಿಲ್ಲ. ಹಿಂದೆ ಸರಿಯುವುದೂ ಇಲ್ಲ. ಪ್ರಾಣ ಭಯ ಇರುವ ಕಾರಣ ಪೊಲೀಸರ ಗನ್‌ಮ್ಯಾನ್ ಭದ್ರತೆ ಕೇಳಿದ್ದೇನೆ. ಆದರೆ ಇನ್ನೂ ಕೊಟ್ಟಿಲ್ಲ.

ಮೈಸೂರು ಮಿತ್ರ: ***ಹೊಸದಾಗಿ ಯಾರ ವಿರುದ್ಧ ಸಮರ ಸಾರಬೇಕೆಂದಿದ್ದೀರಾ?***

ಸ್ನೇಹಮಯಿ ಕೃಷ್ಣ: ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಹೋರಾಟ ಮಾಡಿರುವ ನಾನು ಇನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಹೋರಾಟ ಮಾಡಲು ತಯಾರಿ ಮಾಡಿಕೊಂಡಿದ್ದೇನೆ. ವಿಶ್ವವನ್ನು ಕಾಡುತ್ತಿರುವ ವಿಚಾರವೊಂದರ ಬಗ್ಗೆ ಧ್ವನಿ ಎತ್ತುತ್ತೇನೆ. ಯಾವ ರೀತಿಯ ಹೋರಾಟ ಎಂಬುದನ್ನು ಈಗಲೇ ಹೇಳಲಾರೆ. ಹೋರಾಟ ಪ್ರಾಮಾಣಿಕವಾಗಿದ್ದರೆ ಜಿಲ್ಲೆ, ರಾಜ್ಯ, ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲೂ ಹೆಸರು ಮಾಡಬಹುದು.

ಮೈಸೂರು ಮಿತ್ರ: ***ಹೋರಾಟದ ಹೆಸರಲ್ಲಿ ನೀವು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದೀರಾ. ಅದರಿಂದ ಕೋಟ್ಯಾಂತರ ರೂಪಾಯಿ ಆಸ್ತಿ-ಪಾಸ್ತಿ ಮಾಡಿದ್ದೀರಾ ಎಂಬ ಆರೋಪವಿದೆ?***

ಸ್ನೇಹಮಯಿ ಕೃಷ್ಣ: ನಾನು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದೀನಿ. ಅಕ್ರಮ, ಅನ್ಯಾಯದಿಂದ ಹಣ ಸಂಪಾದನೆ ಮಾಡುತ್ತಿದ್ದೇನೆ. ಕೋಟ್ಯಾಂತರ ರೂಪಾಯಿ ಆಸ್ತಿ-ಪಾಸ್ತಿ ಮಾಡಿದ್ದೇನೆ ಎಂಬುದನ್ನ ಯಾರಾದರೂ ಸಾಬೀತು ಮಾಡಲಿ. ಅದು ಬಿಟ್ಟು ಗಾಳಿಯಲ್ಲಿ ಗುಂಡು ಹೊಡೆಯಬಾರದು. ನಾನು ಯಾರ ವಿರುದ್ಧ ಹೋರಾಟ ಮಾಡುತ್ತಿದ್ದೇನೊ ಅವರು ಈ ಆರೋಪ ಮಾಡುತ್ತಾರೆ. ಅದು ಬಿಟ್ಟು ಯಾರು ಕೂಡ ನನ್ನ ಪ್ರಾಮಾಣಿಕತೆ ಬಗ್ಗೆ ಪ್ರಶ್ನೆ ಮಾಡುತ್ತಿಲ್ಲ.

ಮೈಸೂರು ಮಿತ್ರ: ***ನೀವು ಪ್ರಾಮಾಣಿಕ ಹೋರಾಟಗಾರರೇ ಆಗಿದಿದ್ದರೆ ನಿಮ್ಮನ್ನು ಪೊಲೀಸರು ರೌಡಿ ಶೀಟರ್ ಪಟ್ಟಿಗೆ ಏಕೆ ಸೇರಿಸುತ್ತಿದ್ದರು. ಈಗ ನಿಮ್ಮ ವಿರುದ್ಧ ಎಷ್ಟು ಕ್ರಿಮಿನಲ್ ಪ್ರಕರಣಗಳಿವೆ.***

ಸ್ನೇಹಮಯಿ ಕೃಷ್ಣ: ಪೊಲೀಸ್ ಇಲಾಖೆಯಲ್ಲಿನ ಹಲವು ಭ್ರಷ್ಟಾಚಾರ ಪ್ರಕರಣದ ಬಗ್ಗೆ ಹೋರಾಟ ಮಾಡಿದ್ದೇನೆ. ನನ್ನ ಹೋರಾಟ ಹತ್ತಿಕ್ಕಲು ರೌಡಿ ಶೀಟರ್ ಪಟ್ಟಿಗೆ ನನ್ನನ್ನು ಸೇರಿಸಿದ್ದಾರೆ. ಶಾಸಕಾಂಗ, ಕಾರ್ಯಾಂಗದಲ್ಲಿ ನಡೆಯುವ ಭ್ರಷ್ಟತೆ ಬಗ್ಗೆ ಧ್ವನಿ ಎತ್ತಲು ಜನರು ಭಯ ಪಡುತ್ತಾರೆ. ಆದರೆ ನಾನು ಗಟ್ಟಿ ಧ್ವನಿಯಾಗಿ ನಿಂತ ಕಾರಣ ರೌಡಿಸಂ ಪಟ್ಟ ನೀಡಿದ್ದಾರೆ. ಆದರೆ ನನ್ನನ್ನು ರೌಡಿ ಶೀಟರ್ ಪಟ್ಟಿಯಿಂದ ತೆಗೆಯಬೇಕು ಎಂದು ಈಗ ನ್ಯಾಯಾಲಯ ಹೇಳಿದೆ. ನನ್ನ ವಿರುದ್ಧ 25 ಕ್ರಿಮಿನಲ್ ಕೇಸ್‌ಗಳು ದಾಖಲಾಗಿವೆ. ಈ ಮೊದಲು ದಾಖಲಾಗಿದ್ದ 8 ಪ್ರಕರಣಗಳಲ್ಲಿ ನನ್ನನ್ನು ನ್ಯಾಯಾಲಯ ಖುಲಾಸೆಗೊಳಿಸಿದೆ. 10 ಪ್ರಕರಣಗಳಲ್ಲಿ ಪೊಲೀಸರೇ ಬಿ ರಿಪೋರ್ಟ್ ಹಾಕಿದ್ದಾರೆ.

ಪಟ

ಆರನೇ ಪುಟದಿಂದ

ಸಿಗರೇಟು, ಚುಟ್ಟ ಅನ್ನುಡು ಅದೇನೇನೊ ಕೆಡುಕಿನ್ ಸಾಮಾನೆಲ್ಲಾ ಸೀನಣ್ಣನ ತ್ವಾಟದ ಮನೆಯಾಗೆ ಮಡಿಗಿದ್ನಂತೆ, ಪ್ಯಾಟೆಯಾಗಿರೋ ಎಣ್ ಐಕಳ್ನೆಲ್ಲಾ ದೂರದ ದೇಸಕ್ಕೆ ಮಾರಕ್ಕೆ ಪಿಲಾನೆಲ್ಲಾ ಮಾದೇವಣ್ಣನೇ ಮಾಡ್ತಿದ್ನಂತೆ, ನೆನ್ನೆ ವತ್ತಾರೆನೇ ಮಾದೇವಣ್ಣನ ಪೊಲೀಸ್ ಮಂದಿ ಪ್ಯಾಟೆನಾಗೆ ಇಡ್ಡಾಕ್ಬುಟ್ರಂತೆ' ಡಂಗುರದ ಕರಿಯ ಊರಿಗೆಲ್ಲಾ ಪ್ರಚಾರ ಮಾಡುವುದಕ್ಕಿಂತಲೂ ವಿವರವಾಗಿ ಎಲ್ಲೆಡೆ ಮಾದೇವನ 'ಕೆಡುಕಿನ ಕಾರ್ಯವೈಖರಿ' ಕಿವಿಗೆ ಅಪ್ಪಳಿಸುತ್ತಿದೆ.

ಮತ್ತೆ ಮೂರೂ ಹಳ್ಳಿಯವರು ಅದೇ ಶನೇಶ್ವರನ ದೇವಸ್ಥಾನದ ಮುಂದೆ ಜಮಾಯಿಸಿದ್ದಾರೆ. ಮಾದೇವ ಇಲ್ಲದಿದ್ದರೂ ಅವನ ವಿಚಾರವಾಗಿ ವಾದ ವಿವಾದ ನಡೆಯುತ್ತಿದೆ. ಗುಸು ಗುಸು ಪಿಸು ಪಿಸು ಸದ್ದು ಎಲ್ಲೆಡೆ ಚರ್ಚಿತವಾಗುತ್ತಿದೆ. ಸೀನನಿಗೆ ತಾನು ಭಾವನ ಬಗ್ಗೆ ಅಂದುಕೊಂಡಿದ್ದಕ್ಕಿಂತ ಇನ್ನೂ ಆತ ಮುಂದೆ ಹೋಗಿದ್ದಾನೆ ಎಂಬುದು ಅರಿವಾಯಿತು. ಶಿರಸಾವಹಿಸಿ ಅವನ ಆದೇಶಗಳನ್ನು ಪಾಲಿಸುತ್ತಿದ್ದದ್ದು ಬಿಟ್ಟು ಮತ್ತೇನೂ ಕೇಳದೆ ಇದ್ದದ್ದು ತಪ್ಪಾಯಿತು ಎಂದುಕೊಂಡ. ಎಲ್ಲ ವಿಚಾರಗಳು ತಿಳಿದ ಬಳಿಕ ಮಾದೇವನ ಬಗ್ಗೆ 'ಅಸಹ್ಯ' ಹುಟ್ಟಿಸುವ ಭಾವ ಮೂಡಿದೆ. ಅಂದು ಮಾದೇವನಿಗೆ ಮಾಲೆಹಾಕಿ ಜೈಕಾರ ಹಾಕಿದ್ದ ಊರಮಂದಿ ಇಂದು ಬಹಿಷ್ಕಾರ ಹಾಕುವ ಮಟ್ಟಕ್ಕೆ ಮಾತನಾಡಿಕೊಳ್ಳುತ್ತಿದ್ದಾರೆ! ಮಾದೇವ ಮಾಡಿದ ತಪ್ಪಿಗೆ ಮಲ್ಲಿ ಸೀನ ಇಬ್ಬರೂ ತಲೆ ತಗ್ಗಿಸಿ ದೃಷ್ಟಿ ಕೆಳಗಿಳಿಸಿದ್ದಾರೆ.

ಇಷ್ಟೆಲ್ಲಾ ಬೆಳವಣಿಗೆಗಳ ಮಧ್ಯೆ ಸೀನ ಮಾದೇವನನ್ನು ಭೇಟಿಯಾಗಲು ಪೇಟೆಗೆ ಬಂದ. ಜೈಲಕೋಣೆಯಲ್ಲಿ ಬಂದಿಯಾದ ಭಾವನ ಮುಖ ನೋಡಿ ಮಮ್ಮಲ ಮರುಗಿದ. 'ಸೀನ ನಂಗೇನೂ ತಿಳೀವಲ್ದು ಕಣ್ಲಾ... ಮುನಿಯಪ್ಪಣ್ಣ ಯೋನೇನೋ ಯೋಳಿ ನನ್ ತಲೆ ಕೆಡುಸ್ಬುಟ್ಟ, ತ್ವಾಟದ ಮನ್ಯಾಗೆ ಏನೈತೆ ಅದು ಒಳ್ಳೇದೋ ಕೆಟ್ಟದ್ದೋ ಒಂದೂ ನಂಗೆ ಗೊತ್ತಿಲ್ಲ ಕಣ್ಲಾ...ಆ ಶನೇಸ್ವರನ ಮ್ಯಾಲೆ ಆಣೆ ಮಾಡ್ತೀವ್ನಿ... ನನ್ನದೇನು ತಪ್ಪಿಲ್ಲ ಕಣ್ಲಾ' ಎಂದು ಸೀನನ ಕೈ ಹಿಡಿದು ಗೋಳೋ ಎಂದು ಮಾದೇವ ಕಣ್ಣೀರು ಸುರಿಸಿದ. ಪರಮೇಶಿಯ ಬಗ್ಗೆ ಏನಾದರೂ ಮಾಹಿತಿ ಇದ್ದರೆ ಕೊಡು, ಅವನು ಎಲ್ಲಿರುತ್ತಾನೆ ಎಂದು ತಿಳಿಸು ಹೋಗಿ ವಿಚಾರಿಸುತ್ತೇನೆ ಎಂದು ಸೀನ ಮಾದೇವನನ್ನು ಕೇಳಿಕೊಂಡ 'ಇಲ್ಲ ಕಣ್ಲಾ ಅವ ವೋಡ್ ವಾರಾನೆ ದುಬೈಗೆ ಓಗ್ಬುಟ್ನಂತೆ' ಎಂದು ಕಣ್ಣೀರು ಹಾಕಿದ. ಸೀನ ತಲೆಯ ಮೇಲೆ ಕೈ ಹೊತ್ತು ಹೊರನಡೆದ!

ಸೀನ ಯಾರಯಾರದೋ ಸಹಾಯ ಪಡೆದು ಮುನಿಯಪ್ಪನನ್ನು ಭೇಟಿಯಾಗುವಲ್ಲಿ ಸಫಲನಾದ. ಆದರೆ ಮುನಿಯಪ್ಪ ಸೀನನನ್ನು ಬಾಗಿಲ ಆಚೆಯೇ ನಿಲ್ಲಿಸಿ ತನಗೂ ಇದಕ್ಕೂ ಸಂಬಂಧವೇ ಇಲ್ಲ ಎಂಬಂತೆ ನಟಿಸಿಬಿಟ್ಟ! ಕಾಣದ ಊರಿನಲ್ಲಿ ಸೀನ ಮಲ್ಲಿಯನ್ನೂ ತನ್ನೊಂದಿಗೆ ಕರೆದುಕೊಂಡು ಅಲೆದಾಡಿ ಸುಸ್ತಾದ. ಅಂದು ಭಾವನ 'ಪಟ' ಹಿಡಿದು ಜಾಹೀರಾತಿಗಾಗಿ ಒಂದಿಷ್ಟು ಅಲೆದಾಡಿದ್ದಾಗಿತ್ತು ಇಂದು ಅದೇ 'ಪಟ' ಹಿಡಿದುಕೊಂಡು ಜೈಲಿನಿಂದ ಹೊರತರಲು ಶ್ರಮಿಸುವಂತಾಗಿದೆ. ಆದರೆ ಸೀನನಿಗೆ ಎರಡು ಕೆಲಸಗಳೂ ಕೈ ಹತ್ತಲಿಲ್ಲ. ಅಂದು ಕೊಂಚ ಜವಾಬ್ದಾರಿ ವಹಿಸಿ ತಾನೇ ಫೋಟೋ ಜಾಹೀರಾತು ಹಾಕಿಸಿಬಿಟ್ಟಿದ್ದಿದ್ದರೆ ಚೆನ್ನಾಗಿರುತ್ತಿತ್ತು ಆ ಹಾಳು ಮುನಿಯಪ್ಪನ ಸಹವಾಸವೇ ಭಾವನಿಗೆ ಆಗುತ್ತಿರಲಿಲ್ಲ ಎಂದು ಸೀನ ಮಮ್ಮಲ ಮರುಗಿದ.

*****

ಬೆಂದು ಬಸವಳಿದು ಜೋತು ಮೋರೆ ಹಾಕಿಕೊಂಡು ಊರೊಳಗೆ ಬಂದ ಸೀನ ಮಲ್ಲಿಗೆ ಅರಳೀಮರದ ಕಟ್ಟೆಯ ಮುಂದೆ ಮಾದೇವನ 'ಪಟ'ಕ್ಕೆ ಚಪ್ಪಲಿಯ ಹಾರ ಹಾಕಿದ ದೃಶ್ಯ ಬಸ್ಸಿನೊಳಗಿನಿಂದಲೇ ಕಣ್ಣಿಗೆ ಬಿತ್ತು! ಅಯ್ಯೋ ದೇವರೆ ಏನಪ್ಪ ಇದೆಲ್ಲ ಏನೋಂದು ತಿಳಿಯದ ಮುಗ್ಧ ಜನಕ್ಕೆ ಹೀಗೂ ಮೋಸ ಮಾಡುವುದಾ? ಒಳ್ಳೆ ಮಂದಿ ಎಂದು ಹಳ್ಳಿಯ ಜನ ಪ್ಯಾಟೆಯವರನ್ನು ಹತ್ತಿರ ಸೇರಿಸಿಕೊಳ್ಳುವುದೇ ತಪ್ಪಾ. ತಮ್ಮ ಅಸಹ್ಯಕರ ಚಟುವಟಿಕೆಗೆ ಹಳ್ಳಿಯ ಮುಗ್ಧ ಮಂದಿ ಬಲಿಯಾಗಬೇಕಾ? ಸಣ್ಣದೊಂದು ಆಸೆಯನ್ನೇ ಅಸ್ತ್ರ ಮಾಡಿಕೊಳ್ಳುವ ಆಷಾಢಭೂತಿಗಳಿಗೆ ಮಾದೇವ ಬಲಿಯಾದನಲ್ಲ ಎಂದು ಸೀನ ತನ್ನ ಭಾವನ ಸ್ಥಿತಿ ನೆನೆದು ಒದ್ದಾಡಿದ. ಬಸ್ಸಿನಿಂದ ಇಳಿದ ಕೂಡಲೇ ಸೀನ ಆ 'ಪಟ' ತೆಗೆಯುವ ಪ್ರಯತ್ನಕ್ಕೆ ಮುಂದಾದ.

ಚಪ್ಪಲಿಯ ಹಾರ ತೆಗೆಯಹೊರಟ ಸೀನನ ಬೆನ್ನಿಗೆ ರೊಪ್ಪನೆ ಒಂದು ಕಲ್ಲು ಏಟು ಬಿತ್ತು, ನೋಡ ನೋಡುತ್ತಿದ್ದಂತೆ ಮಲ್ಲಿಯ ಹಣೆಗೂ ಕಲ್ಲೇಟುಗಳು ಬಿದ್ದವು. ಅದೆಲ್ಲಿದ್ದರೋ ಊರ ಮಂದಿ ಒಮ್ಮೆಲೇ ಹೋ ಎಂದು ಎಲ್ಲರೂ ನುಗ್ಗಿ ಇಬ್ಬರಿಗೂ ಎಕ್ಕಾ ಮಕ್ಕಾ ಚಪ್ಪಲಿಯಲ್ಲಿ ಬಾರಿಸತೊಡಗಿದರು! 'ಏ ಬಿಡ್ರಲ್ಲ... ಬಿಡ್ರಲ್ಲ...' ಎಂದು ಕೆಲವರು, 'ಹೊಡಿಲ್ರ... ಹೊಡಿಲ್ರ...' ಎಂದು ಮತ್ತೆ ಕೆಲವರು, ಮಾದೇವನ 'ಪಟ' ಹಿಡಿದು ಬಂದ ಒಂದಷ್ಟು ಹೈಕಳು ಅವನನ್ನು, ಕೆಟ್ಟ ಕೆಟ್ಟ ಶಬ್ದಗಳಿಂದ ಬೈಯುತ್ತ ಬೆಂಕಿ ಹಚ್ಚಿದರು!

ಊರವರ ಆಕ್ರಮಣಕ್ಕೆ ಸೀನ ಹೈರಾಣಾದ, ತನ್ನನ್ನು ತಾನು ಕಾಪಾಡಿಕೊಳ್ಳಲೂ ಆಗದೆ ಅಕ್ಕನನ್ನು ಬಚಾವು ಮಾಡಲೂ ಆಗದೆ ನಿಸ್ಸಹಾಯಕನಾದ. ತನ್ನ ಭಾವನ ಒಂದು 'ಪಟ'ದ ಆಸೆಯಿಂದ ಅಕ್ಕನ ಇಡೀ ಬದುಕೇ ಪಲಾಯನವಾಯಿತಲ್ಲ ಎಂದು ಪೇಚಾಡಿಕೊಂಡ. ಕಣ್ಣೆದುರೇ ಭಾವನ ಭಾವಚಿತ್ರ ಬರ್ರನೆ ಉರಿಯುತ್ತಿದೆ! ಬೆಂಕಿಯ ಜ್ವಾಲೆ ಬರಿದಾದ ಬದುಕನ್ನು ಊರಮಂದಿಗೆ ಬಿಚ್ಚಿ ತೋರುತ್ತಿದೆ.

ಸೀನನ ಮನದೊಳಗಿನ ಪ್ರಶ್ನೆಗಳಿಗೆ ಉತ್ತರಿಸುವವರಾರೂ ಇಲ್ಲವಾದರು. ಮುನಿಯಪ್ಪನ ಮನಸ್ಥಿತಿ ಅರಿಯದ ಮಾದೇವನ ಉಸಾಬರಿಗೆ ಇಂದು ಊರೇ ಸುಡುಗಾಡಾಗಿದೆ. ಶೋಕಿಗಾಗಿಯೋ ಸ್ವಾರ್ಥಕ್ಕಾಗಿಯೋ ತೆಗೆದುಕೊಂಡ ಸಣ್ಣದೊಂದು ತಪ್ಪು ನಿರ್ಧಾರದಿಂದ ಊರವರ ಮುಂದೆ ಸೀನ, ಮಲ್ಲಿ, ಮಾದೇವ ಬೆತ್ತಲಾಗಿದ್ದಾರೆ! ಗೋಮುಖ ವ್ಯಾಘ್ರಗಳ ಮಧ್ಯೆ ಮುಗ್ಧ ಮನಃಸ್ಥಿತಿ ಮಂದವಾಗಿದೆ. ಊರವರು ಹಚ್ಚಿರುವ ಕಿಚ್ಚು ಪರಮೇಶಿಗೋ, ಮುನಿಯಪ್ಪನಿಗೋ ಸುಡುವುದಕ್ಕೂ ಹೆದರುತ್ತಿದೆ. ತಪ್ಪು ಕೆಲಸ ಮಾಡಿದವರು ಮುಖವಾಡದ ಬದುಕಿನೊಂದಿಗೆ ಬಿಂದಾಸಾಗಿ ಬದುಕುತ್ತಿದ್ದಾರೆ, ಯಾರದೋ ಹೊಲಸು ಕೆಲಸಕ್ಕೆ ಹೆಸರು ಸೇರಿಸಿಕೊಂಡವರು ಕಂಬಿಯ ಹಿಂದಿದ್ದಾರೆ. ಕಾಸಿರುವವರರನ್ನು ಬಚಾವು ಮಾಡಲು ಕಾಣದ ಕೈಗಳು ನಾ ಮುಂದು ತಾ ಮುಂದು ಎಂದು ಬರುತ್ತಿವೆ. ಸಹಾಯಹಸ್ತ ಬಯಸುತ್ತಿರುವ ಸೀನ, ಮಾದೇವರಿಗೆ ಬರಿದಾದ ಬಾಗಿಲುಗಳೇ ಕಾಣುತ್ತಿವೆ!

ಧಗಧಗನೆ ಉರಿಯುವ ಬೆಂಕಿಯ ಜ್ವಾಲೆ ಮಲ್ಲಿಯ ಮುಗ್ಧ ಮುಖದ ಮೇಲೆ ಹಾದು ಹೋಗುತ್ತಿದೆ! ಪತ್ರಿಕೆಯಲ್ಲಿ ಪ್ರಕಟವಾದ ಜಾಹೀರಾತಿನ 'ಪಟ' ವನ್ನೇ ತಬ್ಬಿ ಹಿಡಿದಿಕೊಂಡಿರುವ ಮಲ್ಲಿ ಬೆಂಕಿಯ ಜ್ವಾಲೆಯಲ್ಲಿ ಕಪ್ಪಾಗಿ ಹೋಗುತ್ತಿದ್ದಾಳೆ. ಪಶ್ಚಿಮದಲ್ಲಿನ ಸಂಧ್ಯಾ ಸೂರ್ಯನ ಕಿರಣಗಳು ಮಲ್ಲಿಯ ಮುಂದಿನ ಜೀವನದ ಕತೆಹೇಳುತ್ತ ಕಣ್ಮರೆಯಾಗುತ್ತಿವೆಯೇನೋ ಎಂದು ಸೀನ ತನ್ನ ಅಕ್ಕನ ಮೊಗವನ್ನೇ ನೋಡಿ ಗಟ್ಟಿಯಾಗಿ ಕಿರುಚುತ್ತಿದ್ದಾನೆ. ಅವನ ಚೀರಾಟದ ಶಬ್ದ ಊರ ಮಂದಿಯ ಗಲಬೆಯ ಸದ್ದಿನಲ್ಲಿ ಅಡಗಿಹೋಗಿದೆ. ಕೂಗುತ್ತಿರುವ ಕೂಗು ರಾಕ್ಷಸ ಅಟ್ಟಹಾಸದ ಮಧ್ಯೆ ಕಿವುಡಾಗಿದೆ ಅದರೊಟ್ಟಿಗೆ ಮಾದೇವನ 'ಪಟ' ಸುಟ್ಟು ಬೂದಿಯಾಗಿದೆ.

ಕಾಲ್ಗೆ ತಾಕತ್ತು ಕಾಲ್ಸೂಪ್





> ಇತ್ತೀಚೆಗೆ ಕಾಲ್ಸೂಪ್ ಕುಡಿಯುವವರ ಸಂಖ್ಯೆ ಹೆಚ್ಚಾಗುತ್ತಿದೆ. ಅದೂ ಬೆಳಗ್ಗೆ ಭಾರಿ ಡಿಮ್ಯಾಂಡ್ ಇರುತ್ತೆ. ಮಿಕ್ಕಂತೆ ದಿನದ ಎಲ್ಲಾ ಸಮಯದಲ್ಲೂ ಕಾಲ್ಸೂಪು ಕುಡಿಯುವವರು ಇದ್ದಾರೆ. ಅದರಲ್ಲೂ ಕೆಲವರು ಹುಡುಕಿಕೊಂಡು ಹೋಗಿ, ಕೇಳಿ ಕೇಳಿ ಕುಡಿಯುತ್ತಾರೆ.
>
> -ಅಭಿಲಾಷ್ ಮತ್ತು ಸುನೀಲ್, ಫಾಸ್ಟ್‌ಫುಡ್ ಮಾಲೀಕರು

● ಎಂ.ಟಿ.ಯೋಗೇಶ್ ಕುಮಾರ್

ಕೈ, ಕಾಲು, ಕೀಲು, ಮೂಳೆಗೆ ಶಕ್ತಿವರ್ಧಕ ಪೇಯ, ವೈದ್ಯರು ಶಿಫಾರಸ್ಸು ಮಾಡುವುದು ಕುರಿ, ಮೇಕೆ ಕಾಲ್ಸೂಪ್. ಈಗ ಇದಕ್ಕೆ ಎಲ್ಲಿಲ್ಲದ ಬೇಡಿಕೆ. ಮೈಸೂರಿನೆಲ್ಲೆಡೆ ಫಾಸ್ಟ್‌ಫುಡ್ ಹಾಗೂ ಮಾಂಸಾಹಾರಿ ಹೋಟೆಲ್‌ಗಳಲ್ಲಿ ಕಾಲ್ಸೂಪ್ ಸೇವಿಸುವವರ ಸಂಖ್ಯೆ ದಿನೇ ದಿನೆ ಹೆಚ್ಚಾಗುತ್ತಿದೆ.

ಆಯುರ್ವೇದ ಮತ್ತು ಇಂಗ್ಲೀಷ್ ಮೆಡಿಸಿನ್ ಪದ್ಧತಿಯ ವೈದ್ಯರು ಮೂಳೆ, ಕೀಲು ದುರ್ಬಲತೆ ಸಮಸ್ಯೆ, ನಿಶ್ಶಕ್ತಿ ಸೇರಿದಂತೆ ವಿವಿಧ ಅನಾರೋಗ್ಯ ಸಮಸ್ಯೆಯಿಂದ ಬಳಲುತ್ತಿರುವವರಿಗೆ ವಾರಕ್ಕೆ ಎರಡು ಬಾರಿಯಾದರೂ ಕಾಲ್ಸೂಪ್ ಸೇವಿಸುವಂತೆ ಶಿಫಾರಸ್ಸು ಮಾಡುತ್ತಾರೆ. ಅದನ್ನು ಯಾವಾಗ, ಯಾವ ರೀತಿ ಸೇವಿಸಬೇಕು ಎಂಬುದನ್ನು ಮನದಟ್ಟು ಮಾಡಿಕೊಡುತ್ತಿರುವುದರಿಂದ ಕಾಲ್ಸೂಪ್‌ಗೆ ದಿನೇ ದಿನೆ ಡಿಮ್ಯಾಂಡ್ ಹೆಚ್ಚಾಗುತ್ತಿದೆ. ಅದರಲ್ಲೂ ಆಯ್ದ ಸ್ಥಳಗಳ ಫಾಸ್ಟ್‌ಫುಡ್‌ನಲ್ಲಿ ಕಾಲ್ಸೂಪ್‌ಗೆ ಮುಗಿಬೀಳುವ ಪರಿಸ್ಥಿತಿ ಉಂಟಾಗಿದೆ.



ತಯಾರಿಕೆ: ಚೆನ್ನಾಗಿ ಸುಟ್ಟು ಕ್ಲೀನ್ ಮಾಡಿದ ಕುರಿ ಇಲ್ಲವೆ ಮೇಕೆ ಕಾಲನ್ನು ಚೆನ್ನಾಗಿ ತೊಳೆದು ಎಣ್ಣೆಯಲ್ಲಿ ಹರಿಶಿನ ಹಾಕಿ ಉರಿದು, ನಂತರ ಉಪ್ಪು ಹಾಕಿ ನೀರಲ್ಲಿ ಚೆನ್ನಾಗಿ ಬೇಯಿಸಲಾಗುತ್ತದೆ. ಆ ಬಳಿಕ, ಈರುಳ್ಳಿ, ಧನಿಯಾ, ಜೀರಿಗೆ, ಕಾಳುಮೆಣಸು, ಹಸಿ ಮೆಣಸಿನಕಾಯಿ, ಲವಂಗ, ಏಲಕ್ಕಿ, ಬೆಳ್ಳುಳ್ಳಿ, ಕೊತ್ತಂಬರಿ ಸೊಪ್ಪು ಉರಿದು, ಚೆನ್ನಾಗಿ ರುಬ್ಬಿ(ಪೇಸ್ಟ್) ಅದನ್ನು ಮಿಶ್ರಣ ಮಾಡಿ ಮತ್ತೆ ಬೇಯಿಸಲಾಗುತ್ತದೆ. ಮೂಳೆಯಲ್ಲಿನ ರಸವನ್ನು ಕುಡಿದರೆ ಮೂಳೆಗೆ ಶಕ್ತಿ ಬರುತ್ತದೆ ಎಂಬುದು ನಾಟಿ ವೈದ್ಯರಿಂದ ಆಧುನಿಕ ವೈದ್ಯರವರೆಗೆ ಸಲಹೆ ನೀಡುತ್ತಾರೆ.

ಸೈಕಲ್ ಶಾಪ್‌ಗಳು –ಅವನತಿಯ ಹಾದಿ

● ಎಂ.ಬಿ.ಪವನ್‌ಮೂರ್ತಿ

ರಸ್ತೆ ಸಾರಿಗೆ ವ್ಯವಸ್ಥೆ ಈಗ ಸಾಕಷ್ಟು ಸುಧಾರಣೆ ಕಂಡ ಪರಿಣಾಮ ಇಂದು ಸೈಕಲ್ ಅಥವಾ ಬೈಸಿಕಲ್ ಬಳಕೆ ಇಳಿಮುಖವಾಗಿದೆ. ಜೊತೆಗೆ ಬೈಸಿಕಲ್ ದುರಸ್ತಿ ಸೇರಿದಂತೆ ಅವುಗಳ ನಿರ್ವಹಣೆ ಕೇಂದ್ರವಾದ 'ಸೈಕಲ್ ಶಾಪ್'ಗಳು ಈಗ ವಿರಳಾತಿ ವಿರಳವಾಗಿದ್ದು, ಅವು ಉಳಿದಿರುವುದೇ ಹೆಚ್ಚು. ಸೈಕಲ್ ಜಾಗವನ್ನು ಈಗ ಬೈಕ್–ಸ್ಕೂಟರ್‌ಗಳು ಆಕ್ರಮಿಸಿಕೊಂಡಿವೆ. ಈ ನಡುವೆಯೂ ಹೊಸ ವಿನ್ಯಾಸ–ಆವಿಷ್ಕಾರಗಳನ್ನು ಆವರಿಸಿಕೊಂಡು ಬೈಸಿಕಲ್ ತನ್ನ ಅಸ್ತಿತ್ವ ಉಳಿಸಿಕೊಂಡಿದೆ.

ಹೌದು, ಹೊಸ ಸ್ವರೂಪದಲ್ಲಿ ಬೈಸಿಕಲ್ ಈಗಲೂ ಜನಜೀವನದ ಭಾಗವಾಗಿ ಉಳಿದಿದೆ. ಮೈಸೂರು ಇಲ್ಲವೇ ಕರ್ನಾಟಕ ಹಾಗೂ ಭಾರತದಲ್ಲಿ ಮಾತ್ರವಲ್ಲ, ಇಡೀ ಪ್ರಪಂಚದಲ್ಲೇ ಸೈಕಲ್ ತನ್ನ ಅಸ್ತಿತ್ವ ಉಳಿಸಿಕೊಂಡಿದೆ ಎಂಬುದನ್ನು ಯಾರು ಬೇಕಾದರೂ ಸುಲಭದಲ್ಲಿ ಊಹಿಸಬಹುದು. ನಮ್ಮಲ್ಲಿ 80ರಿಂದ 90ರ ದಶಕದ ಅವಧಿಯಲ್ಲಿ ಮಕ್ಕಳು, ಯುವ ಸಮೂಹಕ್ಕೆ ಬೈಸಿಕಲ್ ಎಂದರೆ ಒಂದು ರೀತಿಯ ರೋಮಾಂಚನ. ಇವರಿಗೆ ಸೈಕಲ್ ಕಲಿಕೆ ನಿಜಕ್ಕೂ ಸಾಹಸಗಾಥೆಯೇ ಸರಿ. ಈ ಸವಿ ಸವಿ ನೆನಪು ಅನೇಕರಲ್ಲಿ ಆಗಾಗ್ಗೆ ಕಾಡಲೂಬಹುದು. ಆದರೆ ಇದಕ್ಕೂ ಪೂರ್ವದಲ್ಲಿ ಸೈಕಲ್ ಹೊಂದುವುದು ಒಂದು ಪ್ರತಿಷ್ಠೆಯೇ ಆಗಿತ್ತು.

ಇಂತಹ ಸೈಕಲ್ ಪ್ರಸ್ತುತದಲ್ಲಿ ಅಸ್ತಿತ್ವ ಉಳಿಸಿಕೊಂಡಿದ್ದರೂ ಹಿಂದಿನಂತೆ ಪ್ರತಿಷ್ಠೆಯ ಸ್ಥಾನಮಾನ ಉಳಿದಿಲ್ಲ. ಈಗಿನ ಮಕ್ಕಳು, ಯುವ ಜನರಿಗೆ ಸೈಕಲ್ ರೋಚಕ ಅನುಭವ ನೀಡುವ ಸಾರಿಗೆಯೂ ಆಗಿಲ್ಲ. ಗೇರ್, ಬ್ಯಾಟರಿಚಾಲಿತ ವ್ಯವಸ್ಥೆಯೊಂದಿಗೆ ಸೈಕಲ್ ಅಸ್ತಿತ್ವ ಉಳಿಸಿಕೊಂಡಿದ್ದರೂ ಅದರ ಬಳಕೆ ಮಾತ್ರ ಮೊದಲಿನಂತಿಲ್ಲ. ಮೈಸೂರು ನಗರದಲ್ಲಿ ಸೈಕಲ್ ಸ್ಥಾನವನ್ನು ಎಲೆಕ್ಟ್ರಿಕಲ್ ಸ್ಕೂಟರ್‌ಗಳು ಹಾಗೂ ಬೈಕ್‌ಗಳು ಆವರಿಸಿಕೊಂಡಿವೆ. ಅಂತೆಯೇ ಇಲ್ಲಿ ಸೈಕಲ್ ಶಾಪ್‌ಗಳ ಸಂಖ್ಯೆಯೂ ಕ್ಷೀಣಿಸುತ್ತಿವೆ. ಒಂದು ಕಾಲದಲ್ಲಿ ಮೈಸೂರು ನಗರದಲ್ಲಿ 350ರಿಂದ 400ರವರೆಗೆ ಇದ್ದ ಸೈಕಲ್ ಶಾಪ್‌ಗಳು, ಈಗ ಬೆರಳಣಿಕೆ ಸಂಖ್ಯೆಗೆ ಇಳಿದಿವೆ. ಇವುಗಳ ಜಾಗವನ್ನು ಈಗ ಶೋರೂಂ ಆವರಿಸಿಕೊಂಡಿವೆ. ಸೈಕಲ್ ಅಸ್ತಿತ್ವ ಉಳಿಸಿಕೊಂಡಿದೆ ಎಂಬುದಕ್ಕೆ ಹೆಚ್ಚೇನೂ ದೂರ ಹೋಗಬೇಕಿಲ್ಲ. ಮೈಸೂರಿನಲ್ಲಿ ಚಾಲ್ತಿಯಲ್ಲಿರುವ ಟ್ರಿನ್ ಟ್ರಿನ್ ಸೈಕಲ್ ವ್ಯವಸ್ಥೆಯೇ ಸಾಕ್ಷಿಯಾಗುತ್ತದೆ.

ಸೈಕಲ್ ಶಾಪ್‌ಗಳು ಅವನತಿಯತ್ತ ಸಾಗಲು ಕಾರಣವೇನು? ಎಂಬ ಬಗ್ಗೆ ಮೈಸೂರಿನಲ್ಲಿ ಸೈಕಲ್ ಶಾಪ್ ಹೊಂದಿರುವ ರಮೇಶ್, ಹಲವು ಸಂಗತಿಗಳನ್ನು ಹೇಳುತ್ತಾರೆ. ಹಿಂದೆಲ್ಲಾ ಎಲ್ಲ ವಯೋಮಾನದವರು ಸೈಕಲ್ ಬಳಕೆ ಮಾಡುತ್ತಿದ್ದರು. ಈಗ 8ನೇ ತರಗತಿವರೆಗಿನ ಮಕ್ಕಳು ಬಳಕೆ ಮಾಡಿದರೆ ಅದೇ ಹೆಚ್ಚು. ಉಳಿದವರಲ್ಲಿ ಕಡಿಮೆ. ಕೆಲ ದೊಡ್ಡವರು ಪ್ಯಾಶನ್‌ಗಾಗಿ ಸೈಕಲ್ ಬಳಕೆ ಮಾಡುತ್ತಾರೆ. ಹಿಂದಿನಂತೆ ಸಾರಿಗೆ ಅಗತ್ಯವಾಗಿ ಸೈಕಲ್ ಬಳಕೆ ಮಾಡುವುದು ತೀರಾ ಕಡಿಮೆ. ಹೀಗಾಗಿ ಸೈಕಲ್ ಬಳಕೆಯೊಂದಿಗೆ ಸೈಕಲ್ ಶಾಪ್‌ಗಳು ಇಳಿಮುಖವಾಗುತ್ತಿವೆ ಎನ್ನುತ್ತಾರೆ ರಮೇಶ್.

ಶಾಲಾ ಬಸ್ ವ್ಯವಸ್ಥೆ: ಶಾಲೆಗೆ ಮಕ್ಕಳು ಸೈಕಲ್‌ನಲ್ಲಿ ಹೋಗುವ ಪರಿಪಾಠ ಸಹ ಈಗ ಕಡಿಮೆಯೇ. ಶಾಲೆಗಳಿಂದಲೇ ಬಸ್ ವ್ಯವಸ್ಥೆ ಇರುತ್ತದೆ. ಪೋಷಕರು ಮಕ್ಕಳನ್ನು ಸೈಕಲ್‌ನಲ್ಲಿ ಶಾಲೆಗೆ ಕಳುಹಿಸಲು ಇಚ್ಛಿಸುತ್ತಿಲ್ಲ. ಕಾರಣ, ಅತಿಯಾದ ಟ್ರಾಫಿಕ್. ರಸ್ತೆಯಲ್ಲಿ ಈಗ ಹೆಚ್ಚುತ್ತಿರುವ ವಾಹನ ದಟ್ಟಣೆಯಿಂದ ಮಕ್ಕಳು ಸೈಕಲ್‌ನಲ್ಲಿ ಶಾಲೆಗೆ ತೆರಳುವುದು ಸುರಕ್ಷಿತವಲ್ಲ ಎಂಬುದು ಬಹುತೇಕ ಪೋಷಕರ ಬಲವಾದ ನಂಬಿಕೆ. ಅದು ನಿಜ ಕೂಡ. ಮೊದಲೆಲ್ಲಾ ಬಾಡಿಗೆ ಸೈಕಲ್‌ಗಳಿಗೆ ಬೇಡಿಕೆ ಇರುತ್ತಿತ್ತು. ಒಂದೊಂದು ಸೈಕಲ್ ಶಾಪ್‌ನಲ್ಲಿ ಹತ್ತಾರು ಸೈಕಲ್‌ಗಳು ಇರುತ್ತಿದ್ದವು. ಆದರೆ ಈಗ ಸೈಕಲ್ ಬಳಕೆಯೇ ಇಲ್ಲವಾಗಿರುವಾಗ ಬಾಡಿಗೆಗೆ ಸೈಕಲ್ ಇಡುವ ಪ್ರಶ್ನೆಯೇ ಇಲ್ಲವಾಗಿದೆ ಎಂಬುದು ರಮೇಶ್ ಅವರ ವಾದ.



ಚಾಮುಂಡಿಪುರಂನಲ್ಲಿರುವ ತಮ್ಮ ಸೈಕಲ್ ಶಾಪ್‌ನಲ್ಲಿ ಮಲ್ಲಣ್ಣ ಹಾಗೂ ಇತರರನ್ನು ಚಿತ್ರದಲ್ಲಿ ಕಾಣಬಹುದು

ಒಂದು ಕಾಲದಲ್ಲಿ ನ್ಯೂಸ್ ಪೇಪರ್, ಹಾಲು ಹಾಕುವವರು, ಗಾರೆ ಕೆಲಸಕ್ಕೆ ಹೋಗುವವರು ಸೈಕಲ್ ಬಳಕೆ ಮಾಡುತ್ತಿದ್ದರು. ಇವರಷ್ಟೇ ಅಲ್ಲ, ಸರ್ಕಾರಿ ಉದ್ಯೋಗಿಗಳೂ ಕಚೇರಿಗೆ ಸೈಕಲ್‌ನಲ್ಲಿ ಹೋಗುತ್ತಿದ್ದ ಕಾಲ ಇತ್ತು. ಆದರೆ ಈಗ ಪರಿಸ್ಥಿತಿ ಬದಲಾಗಿದೆ. ಕಾರಣ, ವಯಸ್ಕರಲ್ಲಿ ಬಹುಪಾಲು ಜನ ಸ್ಕೂಟರ್, ಬೈಕ್ ಬಳಸುತ್ತಿದ್ದಾರೆ. ಜೊತೆಗೆ ಎಲೆಕ್ಟ್ರಿಕಲ್ ದ್ವಿಚಕ್ರ ವಾಹನ ಬಳಕೆಯೂ ಹೆಚ್ಚಾಗಿದೆ. ಹೀಗಾಗಿ ಸೈಕಲ್ ಕೇಳುವವರಿಲ್ಲದೇ ಸೈಕಲ್ ಶಾಪ್ ನಡೆಸುವುದು ಕಷ್ಟವಾಗಿದೆ. ಹಾಗಾಗಿ ಸೈಕಲ್ ಶಾಪ್‌ಗೆ ಹೂಡಿಕೆ ಹೆಚ್ಚು. ಗಳಿಕೆ ಕಡಿಮೆ ಎಂದು ರಮೇಶ್ ಬೇಸರ ವ್ಯಕ್ತಪಡಿಸುತ್ತಾರೆ.

ಪೂರ್ ಪೀಪಲ್ ಎಂದುಕೊಳ್ಳುತ್ತಾರೆ: ಲಾಭವಿಲ್ಲದೇ ಯಾವುದೇ ವಹಿವಾಟು ಸಾಧ್ಯವಿಲ್ಲ. ಮುಂದಿನ ಪೀಳಿಗೆಗೆ ಸೈಕಲ್ ಶಾಪ್ ನೆನಪು ಮಾತ್ರ. ಏಕೆಂದರೆ ಈಗ ಸೈಕಲ್ ಶೋ ರೂಮ್ ಹೆಚ್ಚುತ್ತಿವೆ. 5 ರೂ. ಬಾಡಿಗೆ ನೀಡಿ ಇಡೀ ದಿನ ಸೈಕಲ್ ಬಳಕೆ ಮಾಡುತ್ತಿದ್ದ ಕಾಲ ಈಗಿಲ್ಲ. ಮನೆಯಲ್ಲಿ ಸೈಕಲ್ ಇದ್ದರೆ ಅವುಗಳನ್ನು ಬಳಕೆ ಮಾಡದೇ ಮೂಲೆಗುಂಪು ಮಾಡಿಟ್ಟಿರುವ ಸ್ಥಿತಿಯೂ ಇದೆ. ದೊಡ್ಡವರಲ್ಲಿ ಕೆಲವರು ನೆನಪಿಗಾಗಿ ಸೈಕಲ್ ಮನೆಯಲ್ಲಿ ನಿಲ್ಲಿಸಿಕೊಂಡಿದ್ದಾರೆ. ಸೈಕಲ್‌ನಲ್ಲಿ ಕೆಲಸ ಕಾರ್ಯಕ್ಕಾಗಿ ಓಡಾಡುವವರು 'ಪೂರ್ ಪೀಪಲ್ (ಬಡಜನ)' ಎಂದುಕೊಳ್ಳುವ ಕಾಲ ಬಂದಿದೆ ಎನ್ನುವ ರಮೇಶ್, ಮೈಸೂರಿನಲ್ಲಿ ಸುಮಾರು 300 ಸೈಕಲ್ ಶಾಪ್‌ಗಳಿದ್ದವು ಎನ್ನಲಾಗುತ್ತದೆ. ಆದರೆ ಇಂದು ಇಡೀ ಸಿಟಿ ಹುಡುಕಿದರೂ 40 ಸೈಕಲ್ ಶಾಪ್ ಕಾಣಸಿಗುವುದಿಲ್ಲ ಎನ್ನುತ್ತಾರೆ.


ಮೈಸೂರಿನ ಚಾಮುಂಡಿಪುರಂನಲ್ಲಿ ಸೈಕಲ್ ಶಾಪ್ ಹೊಂದಿರುವ ಮಲ್ಲಣ್ಣ, 1960ರಿಂದ ಇದೇ ಕಾಯಕದಲ್ಲಿ ಮುಂದುವರೆದಿದ್ದಾರೆ. ಅವರು ಹೇಳುವಂತೆ ಒಂದು ಕಾಲದಲ್ಲಿ ಸೈಕಲ್ ಲಕ್ಸುರಿ (ಐಷಾರಾಮಿ). ವರದಕ್ಷಿಣೆಗೆ (ವರದಕ್ಷಿಣೆ ಈಗ ಶಿಕ್ಷಾರ್ಹ ಅಪರಾಧ) ಸೈಕಲ್ ಕೊಡುವ ಕಾಲವೂ ಇತ್ತು. ಸೈಕಲ್ ಹೊಡೆಯುವವರು ಕಡಿಮೆಯಾದಂತೆ ಸೈಕಲ್ ಶಾಪ್‌ಗಳು ಕಡಿಮೆಯಾಗಿವೆ. ಸೈಕಲ್‌ಗೆ ಬದಲಾಗಿ ಸ್ಕೂಟರ್–ಬೈಕ್ ಮತ್ತು ಕಾರ್ ಸವಾರಿ ಹೆಚ್ಚಾಗಿದೆ

ಸೈಕಲ್ ಶಾಪ್ ವ್ಯವಹಾರ ನಿನ್ನ ತಲೆಗೆ ಸಾಕಪ್ಪಾ ಎಂದು ಮಕ್ಕಳು ಹೇಳುತ್ತಿದ್ದಾರೆ. ನನ್ನ ಮಕ್ಕಳು ಶಿಕ್ಷಣ ಪಡೆದು ಇಂಜಿನಿಯರ್ ಸೇರಿದಂತೆ ಬೇರೆ ಬೇರೆ ವೃತ್ತಿ ಜೀವನದಲ್ಲಿ ಬದುಕು ಕಂಡುಕೊಂಡಿದ್ದಾರೆ. ಈಗ ಸೈಕಲ್ ಶಾಪ್‌ಗಳನ್ನು ಶೋ ರೂಮ್‌ಗಳು ನುಂಗುವಂತಾಗಿದೆ. ಈ ಶೋ ರೂಮ್ ಸಂಸ್ಕೃತಿ ದುಬಾರಿ ಎಂಬುದು ಜನಕ್ಕೆ ಅರ್ಥವಾಗದಿರುವುದೇ ಹೆಚ್ಚು. ಶೋ ರೂಮ್‌ನಲ್ಲಿ 10 ರೂ. ಕೆಲಸಕ್ಕೆ 100 ರೂ. ಪಡೆಯುತ್ತಾರೆ.



ಸೈಕಲ್ ಶಾಪ್‌ನಲ್ಲಿ ಕಾರ್ಯ ನಿರತರಾಗಿರುವ ಮಲ್ಲಣ್ಣನವರು

ಮೈಸೂರಿಗೆ ಸೈಕಲ್ ತರಿಸಿದ್ದೇ ಮಹಾರಾಜರು: ಸೈಕಲ್‌ನಲ್ಲಿ ನಾವು ಎಲ್ಲಿಂದ ಎಲ್ಲಿಗೆ ಬೇಕಾದರೂ ಹೋಗುತ್ತಿದ್ದೆವು. ಎಷ್ಟು ದೂರವಾದರೂ ಕ್ರಮಿಸುತ್ತಿದ್ದೆವು. ಮೈಸೂರಿಗೆ ಸೈಕಲ್ ತರಿಸಿದ್ದೇ ಮಹಾರಾಜರು. ಎರಡು ಸೈಕಲ್‌ಗಳನ್ನು ಜರ್ಮನಿಯಿಂದ ತರಿಸಿ, ಸೈಕಲ್ ಹೊಡೆಯುವ ಇಬ್ಬರನ್ನು ಕರೆದುಕೊಂಡು ಬಂದಿದ್ದರು. ಅಶೋಕ ರಸ್ತೆಯನ್ನು ಆಗ ದೊಡ್ಡ ಪೇಟೆ ಎಂದು ಕರೆಯುತ್ತಿದ್ದರು. ಅಲ್ಲಿ ಈ ಇಬ್ಬರು ಸೈಕಲ್‌ನಲ್ಲಿ ರೌಂಡ್ ಹೊಡೆಯುತ್ತಿದ್ದುದನ್ನು ನೂರಾರು ಜನ ನಿಂತು ನೋಡುತ್ತಿದ್ದರು. ನಾನೂ ನೋಡುತ್ತಿದ್ದೆ.



ಮೈಸೂರಿನ ರಾಮಕೃಷ್ಣ ನಗರದ ಇ ಅಂಡ್ ಎಫ್ ಬ್ಲಾಕ್‌ನಲ್ಲಿರುವ ರಮೇಶ್ ಅವರ ಸೈಕಲ್ ಶಾಪ್. ಚಿತ್ರದಲ್ಲಿ ಶಾಪ್ ಮಾಲೀಕ ರಮೇಶ್ ಅವರನ್ನು ಕಾಣಬಹುದು

ವೇಗದ ಜೀವನದಲ್ಲಿ ಸೈಕಲ್ ಮೂಲೆಗುಂಪು

ಇಂದಿನ ವೇಗದ ಜೀವನದಲ್ಲಿ ಜನರಿಗೆ ಸಮಯ ಸಾಲುತ್ತಿಲ್ಲ. ಹಾಗಾಗಿ ಸೈಕಲ್ ಮರೆಯುತ್ತಿದ್ದಾರೆ ಎನ್ನುವ ಮಹದೇವಸ್ವಾಮಿ, ಕಳೆದ 35 ವರ್ಷಗಳಿಂದ ಸೈಕಲ್ ಶಾಪ್ ನಡೆಸುತ್ತಿದ್ದೇನೆ. ಇದರಿಂದಲೇ ಬದುಕು ಕಟ್ಟಿಕೊಂಡೆ ಎಂದು ಭಾವುಕರಾಗುತ್ತಾರೆ.

ಸೈಕಲ್ ಹೊಡೆಯುವುದು ಒಂದು ಕ್ರೇಜ್ ಆಗಿಯಷ್ಟೇ ಉಳಿದಿದೆ. ಕೇವಲ ಶೇ.10ರಷ್ಟು ಜನ ಮಾತ್ರ ಸೈಕಲ್ ಬಳಕೆ ಮಾಡುತ್ತಿದ್ದಾರೆ. ದೈಹಿಕ ವ್ಯಾಯಾಮ ಅಗತ್ಯವೆಂದು ಡಾಕ್ಟರ್ ಹೇಳಿದಾಗ ಕೆಲವರು ಆರಂಭದಲ್ಲಿ ಸೈಕಲ್ ಹೊಡೆದು ನಂತರ ಮರೆಯುತ್ತಾರೆ. ಇದೇ ರೀತಿ ನಾಲ್ಕು ದಿನ ಬಳಸಿ ಮೂಲೆಗೆ ಹಾಕುವ ಪ್ರವೃತ್ತಿ ಇಂದು ಹೆಚ್ಚುತ್ತಿದೆ. ಕೆಲವರು ಅಂಟಿಕ್ ಪೀಸ್ ರೀತಿ ಮನೆಯಲ್ಲಿ ನಿಲ್ಲಿಸಿಕೊಂಡಿದ್ದಾರೆ ಎನ್ನುತ್ತಾರೆ ಅವರು. ಈಗೆಲ್ಲಾ ಒಂದು ಮಗು ಸಂಸ್ಕೃತಿ ಜಾಸ್ತಿ. ಹಾಗಾಗಿ ಹೆಚ್ಚಿನ ಟ್ರಾಫಿಕ್ ಕಾರಣ ಪೋಷಕರು ತಮ್ಮ ಮಕ್ಕಳನ್ನು ಸೈಕಲ್‌ನಲ್ಲಿ ಶಾಲೆಗೆ ಕಳುಹಿಸಲು ಹಿಂದೇಟು ಹಾಕುತ್ತಾರೆ. ಕಾಲೇಜು ವಿದ್ಯಾರ್ಥಿಗಳಲ್ಲಿ ಸೈಕಲ್ ಬಳಕೆ ಕಡಿಮೆಯಾಗಿದೆ



ಮೈಸೂರಿನ ಕೆ ಜಿ ಕೊಪ್ಪಲಿನ ಕಾಂತರಾಜ್ ಅರಸ್ ರಸ್ತೆಯಲ್ಲಿರುವ ತಮ್ಮ ಸೈಕಲ್ ಶಾಪ್‌ನಲ್ಲಿ ಮಾಲೀಕ ಸಮೀರ್ ಬಾಬು ಸೈಕಲ್ ದುರಸ್ತಿಯಲ್ಲಿ ನಿರತರಾಗಿರುವುದು

ಆರೋಗ್ಯ ದೃಷ್ಟಿಯಲ್ಲಿ ಸೈಕಲ್ ಬಳಕೆ ಒಳ್ಳೆಯದು...

ನಾನು 30 ವರ್ಷಗಳಿಂದ ಸೈಕಲ್ ಶಾಪ್ ಹೊಂದಿದ್ದೇನೆ. ಪರವಾಗಿಲ್ಲ, ವಹಿವಾಟು ನಡೆಯುತ್ತಿದೆ ಎನ್ನುವ ಸಮೀರ್, ಸೈಕಲ್ ಎಂದರೆ ಸಮಾಜದಲ್ಲಿ ಈಗ ಸ್ಥಾನಮಾನ ಕಡಿಮೆಯಾಗುತ್ತದೆ ಎಂಬ ಮನೋಭಾವ ಇದೆ. ಈ ಕಾರಣಕ್ಕೆ ಸಾಕಷ್ಟು ಜನ ಸೈಕಲ್ ಬಳಸುತ್ತಿಲ್ಲ. ಅಂತೆಯೇ ಸೈಕಲ್ ಶಾಪ್ ಸಹ ಮುಚ್ಚಿ ಹೋಗುತ್ತಿವೆ. ಈಗ ಇಎಂಐ ಸಾಲದಲ್ಲಿ ಬೈಕ್, ಸ್ಕೂಟರ್ ಖರೀದಿ ಮಾಡುತ್ತಾರೆಯೇ ಹೊರತು ಸೈಕಲ್‌ನತ್ತ ಮುಖ ಮಾಡುವುದಿಲ್ಲ. ಆದರೆ ಸೈಕಲ್ ಬಳಕೆಯಿಂದ ನಮ್ಮ ಆರೋಗ್ಯ ವೃದ್ಧಿಸಲಿದೆ. ದೇಹಕ್ಕೆ ಅಗತ್ಯವಿರುವ ವ್ಯಾಯಾಮ ದೊರೆಯಲಿದೆ. ಬಿಪಿ–ಶುಗರ್ ನಿಯಂತ್ರಣದಲ್ಲಿ ಇರಲಿದೆ ಎನ್ನುತ್ತಾರೆ ಅವರು.

ನಮ್ಮಲ್ಲಿಗೆ ವಯಸ್ಸಾದ ಸುಮಾರು ಜನ ಬಂದು ಸೈಕಲ್ ಪಡೆದು ಸುತ್ತಾಡುತ್ತಾರೆ. 80, 90 ವರ್ಷದ ಅಜ್ಜಂದಿರು ಸೈಕಲ್ ತೆಗೆದುಕೊಂಡು ಸುತ್ತಾಡಿ ಬರುತ್ತಾರೆ. ಅವರನ್ನು ಈಗ ಏಕೆ ನೀವು ಸೈಕಲ್ ಹೊಡೆಯುತ್ತೀರಾ? ಎಂದು ಕೇಳಿದ್ದೆ. ಅದಕ್ಕೆ ಅವರು, 'ಬಿಪಿ–ಶುಗರ್ ಕಂಟ್ರೋಲ್ ಆಗುತ್ತದೆ ಎಂದರು. ಹಾಗಾಗಿ ಆರೋಗ್ಯ ದೃಷ್ಟಿಯಿಂದಲಾ ದರೂ ಸೈಕಲ್ ಬಳಕೆ ಒಳ್ಳೆಯದು. ಕೆಲವರು 'ಸೈಕಲ್ ಸವಾರಿ ಅಂದ್ರೆ ಜಾಸ್ತಿ ಸಮಯರೀ' ಅಂತಾರೇ. ಆದರೆ ಆರೋಗ್ಯ ಮುಖ್ಯವಲ್ಲವೇ. ನನಗೆ ಈಗ 45 ವರ್ಷ. 30 ವರ್ಷಗಳಿಂದ ಸೈಕಲ್ ಶಾಪ್‌ನಿಂದಲೇ ಜೀವನ ಸಾಗಿಸುತ್ತಿದ್ದೇನೆ ಎಂದು ತೃಪ್ತಿಭಾವ ವ್ಯಕ್ತಪಡಿಸುತ್ತಾರೆ.



ಮೈಸೂರಿನ ವಿದ್ಯಾರಣ್ಯಪುರಂನಲ್ಲಿರುವ ತಮ್ಮ ಸೈಕಲ್ ಶಾಪ್‌ನಲ್ಲಿ ಕಾರ್ಯ ನಿರತರಾಗಿರುವ ಶಾಪ್ ಮಾಲೀಕ ಮಹಾದೇವಸ್ವಾಮಿ ಅವರನ್ನು ಚಿತ್ರದಲ್ಲಿ ಕಾಣಬಹುದು

ಸದಾ ನಮ್ಮ ಪ್ರಾರ್ಥನೆ ನಿಸ್ವಾರ್ಥವಾಗಿರಲಿ



ಪ್ರಶಾಂತ್ ಕುಮಾರ್ ಎ.ಪಿ.
ಮೊ: 9844859950

ಎಲ್ಲಾ ಜಾತಿ, ಧರ್ಮದವರು ತಮ್ಮ ಆಸೆ,ಆಕಾಂಕ್ಷೆ, ಬಯಕೆ, ಬೇಡಿಕೆಗಳನ್ನು ಈಡೇರಿಸು ಎಂದು ದಿನನಿತ್ಯವೂ ಒಂದಲ್ಲ ಒಂದು ರೀತಿಯಲ್ಲಿ ಭಗವಂತನಲ್ಲಿ ಬೇಡಿಕೊಳ್ಳುತ್ತಾರೆ. ಆ ಬೇಡಿಕೆಯ ಪಟ್ಟಿಯಲ್ಲಿ ಹೆಚ್ಚಿನವು ತಮಗೆ ಹಾಗೂ ತಮ್ಮವರ ಒಳಿತಿಗಾಗಿಯೇ ಮೀಸಲಾಗಿರುತ್ತವೆ.

ಹೀಗೆ ಪ್ರತೀ ದಿನದ ಪೂಜೆ ನಂತರದ ಪ್ರಾರ್ಥನೆಯಲ್ಲಿ ನನ್ನ ಮತ್ತು ನನ್ನ ಕುಟುಂಬದವರಿಗೆ ಒಳ್ಳೆಯದಾಗಲಿ, ನನ್ನ ಮಕ್ಕಳು ಚೆನ್ನಾಗಿ ಓದಿ ಉತ್ತಮ ಉದ್ಯೋಗ ಪಡೆಯಲಿ, ನಮ್ಮ ಮನೆಮಂದಿಯ ಆರೋಗ್ಯ, ಅಂತಸ್ತು, ಸಕಲೈಶ್ವರ್ಯಗಳು ವೃದ್ಧಿಯಾಗಲಿ, ಮದುವೆಯಾಗಲಿ, ಮಕ್ಕಳಾಗಲಿ, ನಿವೇಶನ, ಆಸ್ತಿ ಖರೀದಿಸುವಂತಾಗಲಿ, ಪ್ರಮೋಷನ್ ಸಂಬಳ ಜಾಸ್ತಿಯಾಗಲಿ, ಮಗ–ಮಗಳು ಪರೀಕ್ಷೆಯಲ್ಲಿ ರ್‍ಯಾಂಕ್ ಬರಲಿ. ಹೀಗೆ ಹತ್ತು ಹಲವಾರು. ಇರಲಿ, ಆಸೆಗಳು ಮನುಷ್ಯನಿಗಲ್ಲದೆ ಮರಗಳಿಗಿರುತ್ತವೆಯೆ?

ಎಷ್ಟು ಮಂದಿ ತಮ್ಮ ದೈನಂದಿನ ಪ್ರಾರ್ಥನೆಯಲ್ಲಿ ತನ್ನ ಸ್ವಂತ ಬೇಡಿಕೆಗಳ ಜೊತೆಗೆ ಈ ವರ್ಷ ಸಮೃದ್ಧ ಮಳೆ–ಬೆಳೆಯಾಗಲಿ, ಭೂತಾಯಿ ತಂಪಾಗಿರಲಿ, ಕೆರೆ–ಕಟ್ಟೆಗಳು ತುಂಬಿ ನಳನಳಿಸಲಿ, ಪ್ರಕೃತಿ ಮಾತೆ ಸದಾಕಾಲ ಹಚ್ಚಹಸಿರಾಗಿರಲಿ, ಪ್ರಾಣಿ ಪಕ್ಷಿಗಳು ಸುಖ–ಸಂತೋಷದಿಂದಿರಲಿ ಎಂದು ಬೇಡಿಕೊಳ್ಳುತ್ತಾರೆ? ಪರಿಸರ ಮತ್ತು ಪ್ರಕೃತಿ ತಂಪಾಗಿದ್ದರೆ ತಾನೆ ನಮ್ಮ ಸ್ವಂತ ಹಾಗೂ ಸ್ವಾರ್ಥ ಬೇಡಿಕೆಗಳ ಪ್ರಾರ್ಥನೆಗೆ ಬೆಲೆ ಹಾಗೂ ಬಲ.

ಯಾರು ತನಗಾಗಿ ಮತ್ತು ತಮ್ಮವರಿಗಾಗಿ ಮಾತ್ರ ಬದುಕುತ್ತಾರೆಯೋ ಅವರು ಬದುಕಿದ್ದರು ಸತ್ತಂತೆಯೆ, ಯಾರು ತಮ್ಮವರ ಜೊತೆ ಇತರರಿಗಾಗಿಯೂ ಬದುಕುತ್ತಾನೆಯೋ ಅವನು ಸತ್ತ ನಂತರವೂ ಬದುಕಿರುತ್ತಾನೆ. ಇಲ್ಲಿ ಇತರರು ಎಂದರೆ ಸಂಬಂಧಿಕರಲ್ಲ, ಸ್ನೇಹಿತರಲ್ಲ. ಇತರರು ಎಂದರೆ ನಮ್ಮ ಸುತ್ತಮುತ್ತಲಿನ ಪರಿಸರ, ಪ್ರಾಣಿ ಪಕ್ಷಿಗಳು, ಜೀವ ಜಂತುಗಳು.

ನಾವು ನಮ್ಮ ಇಷ್ಟ, ಕಷ್ಟಗಳ ನಿವೇದನೆ, ಕೋರಿಕೆಗಳ ಪ್ರಾರ್ಥನೆಯಲ್ಲಿ ಎಷ್ಟು ಮುಳುಗಿದ್ದೇವೆ ಎಂದರೆ, ನಮ್ಮನ್ನು ಹೊತ್ತಿರುವ ಭೂಮಿ ಹಾಗೂ ಸಾಕಿ ಸಲುಹುತ್ತಿರುವ ಪ್ರಕೃತಿಯ ಮೇಲಾಗುತ್ತಿರುವ ನಿರಂತರ ದೌರ್ಜನ್ಯ, ಪಾಪ ಕೃತ್ಯಗಳು ನಮ್ಮ ಕಣ್ಣಿಗೆ ಕಾಣದಷ್ಟು ಕುರುಡರಾಗಿದ್ದೇವೆ. ಕಿವಿಗೆ ಕೇಳದಷ್ಟು ಕಿವುಡರಾಗಿದ್ದೇವೆ. ಧ್ವನಿ ಎತ್ತದಷ್ಟು ಮೂಕರಾಗಿದ್ದೇವೆ. ನಾವು ಚೆನ್ನಾಗಿದ್ದರಷ್ಟೆ ಸಾಕು, ಉಳಿದದ್ದು ಏನಾದರೂ ಆಗಲಿ ಬಿಡು ಎಂಬ ದೋಷ ಪೂರಿತ ಭ್ರಮೆಯಲ್ಲಿ ಬದುಕುತ್ತಿದ್ದೇವೆ.


ಪ್ರಸ್ತುತ ಸನ್ನಿವೇಶವೇ ಇದಕ್ಕೆ ಸಾಕ್ಷಿ ಮತ್ತು ಸೂಕ್ತ ಉದಾಹರಣೆ. ಹಿಂದೆಂದೂ ಕಾಣದಷ್ಟು, ಕೇಳದಷ್ಟು ಭೀಕರ ಬಿಸಿಲು, ನೀರಿಗಾಗಿ ಹಾಹಾಕಾರ, ಬತ್ತುತ್ತಿರುವ ನೈಸರ್ಗಿಕ ಜಲಮೂಲಗಳು, ಮರುಭೂಮಿಯಂತಾಗುತ್ತಿರುವ ನದಿ, ಕೆರೆ–ಕಟ್ಟೆಗಳು, ನೆಮ್ಮದಿಯ ನಿದ್ದೆ ಕಸಿಯುತ್ತಿರುವ ವಿಪರೀತ ಸೆಖೆ, ಬಿಸಿಗಾಳಿ, ನಾವೆಲ್ಲರೂ ಮರಳುಗಾಡಿನಲ್ಲಿ ಇದ್ದೀವೇನೋ ಎಂಬ ಭಯಾನಕ ಅನುಭವ, ಸುಟ್ಟು ಕರಕಲಾಗುತ್ತಿರುವ ಏನು ತಪ್ಪು ಮಾಡದ ಗಿಡ ಮರಗಳು, ತಮ್ಮ ದಾಹದ ಸಂಕಟವನ್ನು ಮಾತಿನಲ್ಲಿ ತಿಳಿಸಲಾಗದೆ ರೋದಿಸುತ್ತಿರುವ ಪ್ರಾಣಿ ಪಕ್ಷಿಗಳು, ಕಾಡು ಪ್ರಾಣಿಗಳನ್ನು ಬಿಡದೆ ಕಾಡುತ್ತಿರುವ ಕಾಳ್ಗಿಚ್ಚು.



> ಕರ್ಮ ರಿಟರ್ನ್ಸ್ ಎಂಬ ವಾಕ್ಯ ಸರ್ವವಿಧಿತ. ಅಂದು ನಾವೆಲ್ಲರೂ ಸೇರಿ ಪರಿಸರದ ಮೇಲೆ ಮಾಡಿದ ಪಾಪ ಕೃತ್ಯಗಳ ಫಲವಾಗಿ ಇಂದಿನ ಈ ದುಸ್ಥಿತಿಯನ್ನು ನಾವು ಮತ್ತು ಏನೂ ಅರಿಯದ ನಮ್ಮ ಮಕ್ಕಳು ಅನುಭವಿಸುತ್ತಿದ್ದೇವೆ. ಪರಿಸರದ ಅಸಮತೋಲನದಿಂದಾಗಿ ಕಾಲಚಕ್ರವೇ ಅದಲು ಬದಲಾಗುತ್ತಿದೆ. ಮಿಂಚಿ ಹೋದ ಕಾಲಕ್ಕೆ ಚಿಂತಿಸಿ ಫಲವಿಲ್ಲ. ಎಲ್ಲರೂ ಕೈ ಬಿಟ್ಟಾಗ, ನಮ್ಮನ್ನು ಕೈ ಬಿಡದಿರುವ ಒಂದೇ ಒಂದು ಶಕ್ತಿಯೆಂದರೆ ಆ ಭಗವಂತ.

ಇತ್ತೀಚಿನ ವರ್ಷಗಳಲ್ಲಿ ಸಮಯಕ್ಕೆ ಸರಿಯಾಗಿ ನಿರೀಕ್ಷಿತ ಮಳೆಯಾಗದೆ ಭೀಕರ ಬರ. ಮಳೆ ಬಂದರೆ ಅತೀವೃಷ್ಟಿ, ಬರಲಿಲ್ಲವೆಂದರೆ ಅನಾವೃಷ್ಟಿ. ಆಗುವ ಅಲ್ಪ ಸ್ವಲ್ಪ ಮಳೆಯಿಂದ ಕೆರೆ ಕಟ್ಟೆ, ಜಲಾಶಯಗಳಲ್ಲಿ ಶೇಖರಣೆಗೊಂಡಿದ್ದ ನೀರು ಸರಿಯಾದ ನಿರ್ವಹಣೆ ಇಲ್ಲದೆ ಅದಾಗಲೇ ಖಾಲಿ ಖಾಲಿ ಹಂತಕ್ಕೆ ವಾಡಿಕೆಯಂತೆ ಇಷ್ಟೊತ್ತಿಗೆ ಬರಬೇಕಾದ ಪೂರ್ವ ಮುಂಗಾರು ಮಳೆಯು ಹೆಚ್ಚಿನ ಕಡೆಗಳಲ್ಲಿ ಇನ್ನೂ ಆಗಿಲ್ಲ. ಪರಿಣಾಮ ತಾಪಮಾನದಲ್ಲಿ ವಿಪರೀತ ಏರಿಕೆ, ಇದರಿಂದಾಗಿ ಎಳೆ ವಯಸ್ಸಿನ ಮಕ್ಕಳಿಂದ ಹಿಡಿದು ಇಳಿ ವಯಸ್ಸಿನ ವೃದ್ಧರಿಗೂ ಕಾಡುತ್ತಿರುವ ವಿಲಕ್ಷಣ ರೋಗ–ರುಜಿನಗಳು. ಮುಂಗಾರು ಅಧಿಕೃತವಾಗಿ ಪ್ರಾರಂಭವಾಗುವ ಜೂನ್ ಮಾಹೆಯವರೆಗೂ ನಮ್ಮಗಳ ಪರಿಸ್ಥಿತಿ ನೀರಿನಿಂದ ಹೊರಗಿರುವ ಮೀನಿನಂತೆಯೇ. ಸರಿ ಸುಮಾರು ಇನ್ನೂ ಎರಡು ತಿಂಗಳು ನಮ್ಮಗಳ ಗೋಳು ಕೇಳುವವರ್‍ಯಾರು?

ಕರ್ಮ ರಿಟರ್ನ್ಸ್ ಎಂಬ ವಾಕ್ಯ ಸರ್ವವಿಧಿತ ಅಂದು ನಾವೆಲ್ಲರೂ ಸೇರಿ ಪರಿಸರದ ಮೇಲೆ ಮಾಡಿದ ಪಾಪ ಕೃತ್ಯಗಳ ಫಲವಾಗಿ ಇಂದಿನ ಈ ದುಸ್ಥಿತಿಯನ್ನು ನಾವು ಮತ್ತು ಏನೂ ಅರಿಯದ ನಮ್ಮ ಮಕ್ಕಳು ಅನುಭವಿಸುತ್ತಿದ್ದೇವೆ. ಪರಿಸರದ ಅಸಮತೋಲನದಿಂದಾಗಿ ಕಾಲಚಕ್ರವೇ ಅದಲು ಬದಲಾಗುತ್ತಿದೆ. ಮಿಂಚಿ ಹೋದ ಕಾಲಕ್ಕೆ ಚಿಂತಿಸಿ ಫಲವಿಲ್ಲ. ಎಲ್ಲರೂ ಕೈ ಬಿಟ್ಟಾಗ, ನಮ್ಮನ್ನು ಕೈ ಬಿಡದಿರುವ ಒಂದೇ ಒಂದು ಶಕ್ತಿಯೆಂದರೆ ಆ ಭಗವಂತ. ಹಾಗಾಗಿ, ಇಂದಿನಿಂದಲೇ ನಮ್ಮ ದಿನನಿತ್ಯದ ಪ್ರಾರ್ಥನೆ ಹೀಗಿರಲಿ! ಹೇ ಕರುಣಾಮಯಿ ಭಗವಂತ,



ಈ ಭೂಮಿಯ ಮೇಲಿರುವ ಸಕಲ ಜೀವರಾಶಿಗಳೂ ಸುಖ–ಸಂತೋಷದಿಂದಿರಲಿ (ಇದರಲ್ಲಿ ನೀವು, ನಿಮ್ಮ ಕುಟುಂಬ ದವರೂ ಸೇರಿರುತ್ತೀರಿ). ಕಾಲಕಾಲಕ್ಕೆ ಉತ್ತಮ ಮಳೆ–ಬೆಳೆ ಆಗಿ ಭೂಮಿ ತಾಯಿ ಸದಾ ತಂಪಾಗಿರಲಿ, ಹಸಿರಿನಿಂದ ನಳನಳಿಸಲಿ. ಇದುವರೆಗೂ ನಮ್ಮಿಂದ ಪರಿಸರದ ಮೇಲಾಗಿರುವ ಪಾಪಗಳನ್ನು ಮನ್ನಿಸಿ ಕಾಪಾಡು. ಕಣ್ಮುಚ್ಚಿ ಪ್ರಾರ್ಥಿಸಿದರೆ ಒಳಿತು. ಈ ಸಂದರ್ಭದಲ್ಲಿ ಸರ್ವರೂ ಸಂತೋಷ ದಿಂದಿರುವ, ಉತ್ತಮ ಮಳೆಯಾಗುತ್ತಿರುವ, ಭೂಮಿತಾಯಿ ಹಸಿರಾಗಿರುವ, ಪರಿಸರ ತಂಪಾಗಿರುವ, ಎಲ್ಲೆಡೆ ಸುಭಿಕ್ಷವಾಗಿರುವ ಸಕಾರಾತ್ಮಕ ದೃಶ್ಯಗಳನ್ನು ನಿಮ್ಮ ಕಣ್ಮುಂದೆ ತಂದುಕೊಳ್ಳಲು ಪ್ರಯತ್ನಿಸಿ. ಈ ರೀತಿ ಪ್ರಾರ್ಥನೆಯನ್ನು ನಿಮ್ಮ ಮಕ್ಕಳಿಗೂ ಹೇಳಿಕೊಡಿ. ಮಕ್ಕಳ ಪ್ರಾರ್ಥನೆ ಬಹುಬೇಗ ದೇವರಿಗೆ ತಲುಪುತ್ತದೆ.

ಈಗ ಇರುವುದೊಂದೇ ದಾರಿ. ಒಟ್ಟಾಗಿ ಪ್ರಾರ್ಥಿಸೋಣ, ಒಗ್ಗಟ್ಟಿನ ಪ್ರಾರ್ಥನೆಗೆ ಅದಮ್ಯ ಶಕ್ತಿಯಿದೆ ಮತ್ತು ಖಂಡಿತ ಪ್ರತಿಫಲವಿದೆ. ಯಾವುದೇ ಕಾರಣಕ್ಕೂ ಅಯ್ಯೋ ಈ ವರ್ಷ ಇಷ್ಟೇ ಮಳೆಗಾಲ ಬಿಡಿ, ಮತ್ತೆ ಬರಗಾಲ ಬಿಡಿ, ಕೆರೆ ಕಟ್ಟೆ ಖಾಲಿ ಬಿಡಿ ಎಂಬ ನಕಾರಾತ್ಮಕ ಯೋಚನೆ, ಚಿಂತನೆ ಅಪ್ಪಿತಪ್ಪಿಯೂ ಮನಸ್ಸಿನಲ್ಲಿ ಸುಳಿಯದಂತೆ, ಬಾಯಿಯಲ್ಲಿ ಬರದಂತೆ ನೋಡಿಕೊಳ್ಳಿ. ಬೇಡುವ ಕೈ ಒಂದಿರಲು, ಕಾಪಾಡುವ ಕೈ ಒಂದಿರುತ್ತದೆ. ಬಿರುಬಿಸಿಲು ಮಂಕಾಗಿ ಇಳೆಯೆಲ್ಲಾ ತಂಪಾಗಿ, ಮೊದಲ ಮಳೆಯ ಮಣ್ಣಿನ ಸುವಾಸನೆ ಗಮಗಮಿಸಲು, ಮಳೆಗಾಲದ ನಿಸರ್ಗ ಸೌಂದರ್ಯ ಸವಿಯಲು ಪ್ರಾರ್ಥಿಸಲು ಮರೆಯದಿರಿ. ಸರ್ವೇಜನೋ ಸುಖಿನೋ ಭವಂತು.

ಕುರುಬೂರಿನ ರಾಷ್ಟ್ರೀಯ ಪ್ರತಿಭೆಗಳು







ಉತ್ತರಾಖಂಡದಲ್ಲಿ ನಡೆದ ರಾಷ್ಟ್ರೀಯ ಖೋ ಖೋ ಪಂದ್ಯಾವಳಿ -2025ರಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿ, ಕಂಚಿನ ಪದಕ ಪಡೆದಿರುವ (ಎಡದಿಂದ) ಎಲ್. ಮೋನಿಕಾ, ಎಸ್. ವಿನುತಾ, ಕೆ.ಆರ್. ತೇಜಸ್ವಿನಿ, ಬಿ. ಚೈತ್ರಾ, ಕೆ.ಎಂ. ನಿಸರ್ಗ ಮತ್ತು ಎಸ್. ಮೇಘನಾ.

● ಎಸ್.ಎನ್. ವೆಂಕಟನಾಗ ಸೋಬರ್ಸ್

ಮೈಸೂರು ಜಿಲ್ಲೆಯ ಪುಟ್ಟ ಗ್ರಾಮ ಕುರುಬೂರು. ಅಲ್ಲಿರುವುದು ಕೇವಲ 300 ಮನೆ, ಸುಮಾರು ಸಾವಿರ ಜನಸಂಖ್ಯೆ ಇರಬಹುದಷ್ಟೇ. ಆದರೆ ಈ ಗ್ರಾಮ ಅದ್ಭುತ ಕ್ರೀಡಾಪಟುಗಳ ಅಂಗಣವಾಗಿದೆ. ಇಲ್ಲಿನ ಪ್ರತಿಭೆಗಳು ರಾಜ್ಯ ಹಾಗೂ ರಾಷ್ಟ್ರೀಯ ಕ್ರೀಡಾ ಕ್ಷೇತ್ರಕ್ಕೆ ಅತ್ಯಮೂಲ್ಯ ಕೊಡುಗೆ ನೀಡಿವೆ. ಇತ್ತೀಚೆಗೆ ಎಲೆಮರೆ ಕಾಯಿಯಂತೆ ಜಾಗತಿಕ ಸಾಧನೆ ಮೆರೆದ ಕ್ರೀಡಾ ಚೇತನ ವೊಂದು ಹುಟ್ಟೂರಿನ ಕೀರ್ತಿ ಪತಾಕೆ ಯನ್ನು ಮತ್ತಷ್ಟು ಎತ್ತರಕ್ಕೇರಿಸಿದೆ. ಹೆತ್ತವರು ಮಾತ್ರವಲ್ಲ ಗ್ರಾಮ, ತಾಲೂಕು, ಜಿಲ್ಲೆ, ರಾಜ್ಯ, ದೇಶವೇ ಕೊಂಡಾಡುವಂತೆ ಸಾಧನೆ ಮೆರೆದಿದೆ.

ಹಲವು ವರ್ಷಗಳಿಂದಲೂ ರಾಷ್ಟ್ರೀಯ ಹಾಗೂ ರಾಜ್ಯ ಖೋ ಖೋ ತಂಡಕ್ಕೆ ಅತ್ಯುತ್ತಮ ಆಟಗಾರ್ತಿಯರನ್ನು ಕೊಡುಗೆಯಾಗಿ ನೀಡಿರುವ ಮೈಸೂರು ಜಿಲ್ಲೆಯ ತಿ.ನರಸೀಪುರ ಮತ್ತು ಮೂಗೂರು ನಡುವೆ, ರಾಷ್ಟ್ರೀಯ ಹೆದ್ದಾರಿ 766ರಲ್ಲಿರುವ ಕುರುಬೂರು ಗ್ರಾಮದ ಬಿ.ಚೈತ್ರಾ, ಈ ಸಾಧಕಿ. ಇತ್ತೀಚೆಗೆ ನಡೆದ ಪ್ರಪ್ರಥಮ ವಿಶ್ವ ಖೋ ಖೋ ಪಂದ್ಯಾವಳಿಯಲ್ಲಿ ಚಾಂಪಿಯನ್ ಕಿರೀಟ ಧರಿಸಿದ ಭಾರತೀಯ ತಂಡವನ್ನು ಪ್ರತಿನಿಧಿಸಿ, ಗೆಲುವಿಗೆ ಕಾರಣವಾದ ಇವರಿಂದ ಕುರುಬೂರು ಹೆಸರು ದೇಶಾದ್ಯಂತ ಮತ್ತಷ್ಟು ಪಸರಿಸಿದೆ. ಬಿ.ಚೈತ್ರಾ ಅಂತಾರಾಷ್ಟ್ರೀಯ ಖೋ ಖೋದಲ್ಲಿ ಸಾಧನೆ ಮಾಡಿದ ಬೆನ್ನಲ್ಲೇ ರಾಷ್ಟ್ರೀಯ ಮಟ್ಟದಲ್ಲಿ ಈಗಾಗಲೇ ಸಾಧನೆಗೈದ ಅನೇಕ ಆಟಗಾರ್ತಿಯರು ಕುರುಬೂರು ಗ್ರಾಮದವರೇ ಎಂಬುದು ಬೆಳಕಿಗೆ ಬಂದಿದೆ.

ಈ ಗ್ರಾಮದ ಬರೋಬ್ಬರಿ 30 ಆಟಗಾರ್ತಿಯರು ಕಳೆದ ಕೆಲವು ವರ್ಷಗಳಿಂದ ರಾಷ್ಟ್ರೀಯ ಖೋ ಖೋ ಪಂದ್ಯಾವಳಿಯಲ್ಲಿ ರಾಜ್ಯವನ್ನು ಪ್ರತಿನಿಧಿಸಿದ್ದಾರೆ. 2023ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಮಹಿಳಾ ಖೋ ಖೋ ತಂಡದ 15 ಆಟಗಾರ್ತಿಯರ ಪೈಕಿ 13 ಮಂದಿ ಕುರುಬೂರು ಗ್ರಾಮದವರೇ ಆಗಿದ್ದರು. ಇದು ಕುರುಬೂರು ಗ್ರಾಮ ಕ್ರೀಡಾಕ್ಷೇತ್ರಕ್ಕೆ ನೀಡಿರುವ ಮಹತ್ವದ ಕೊಡುಗೆಗೆ ಸಾಕ್ಷಿಯಾಗಿದೆ.


ಅಂದ ಹಾಗೆ ಭಾರತೀಯ ಮಹಿಳಾ ತಂಡಕ್ಕೆ ಕುರುಬೂರಿನಿಂದ ಮೊಟ್ಟ ಮೊದಲು ಆಯ್ಕೆಯಾದ ಆಟಗಾರ್ತಿ ಎಂ. ವೀಣಾ. 2016ರಲ್ಲಿ ಭಾರತೀಯ ಮಹಿಳಾ ತಂಡದಲ್ಲಿ ಇವರು ಒಬ್ಬರಾಗಿದ್ದರು. ದಕ್ಷಿಣ ಏಷ್ಯಾ ಕ್ರೀಡಾಕೂಟದ 51 ರಾಷ್ಟ್ರೀಯ ಪಂದ್ಯಾವಳಿಗಳಲ್ಲಿ ವೀಣಾ, ದೇಶ ಹಾಗೂ ರಾಜ್ಯವನ್ನು ಪ್ರತಿನಿಧಿಸಿದ್ದಾರೆ. 2017ರಲ್ಲಿ ಕರ್ನಾಟಕ ಒಲಿಂಪಿಕ್ ಅಸೋಸಿಯೇಷನ್ ನೀಡುವ 'ಕ್ರೀಡಾರತ್ನ' ಮತ್ತು 2019ರಲ್ಲಿ ಖೋ ಖೋ ಫೆಡರೇಷನ್ ಆಫ್ ಇಂಡಿಯಾ ಕೊಡಮಾಡುವ 'ಝಾನ್ಸಿ ರಾಣಿ ಲಕ್ಷ್ಮೀ ಬಾಯಿ' ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿರುವ ಸಾಧಕಿ. ಗ್ರಾಮದ ಖೋ ಖೋ ಆಟಗಾರರಿಗೆ ಸ್ಫೂರ್ತಿಯಾಗಿರುವ ವೀಣಾ ಪ್ರಸ್ತುತ ಮೈಸೂರಿನ ಸರಸ್ವತಿಪುರಂ ಅಂಚೆ ಕಚೇರಿಯಲ್ಲಿ ಪೋಸ್ಟ್ ವುಮೆನ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ.

ಕುರುಬೂರು ಗ್ರಾಮದ ಮತ್ತೋರ್ವ ಆಟಗಾರ್ತಿ ಅಮೂಲ್ಯ ಅವರದ್ದು ಮತ್ತೊಂದು ರೀತಿಯ ಹೆಮ್ಮೆಯ ಸಾಧನೆ. ಖೋ ಖೋ ವಿಶ್ವಕಪ್ 2025ರ ಅಧಿಕಾರಿಗಳ ತಂಡದಲ್ಲಿದ್ದ ಕರ್ನಾಟಕದ ಏಕೈಕ ಮಹಿಳಾ ರೆಫ್ರಿ ಎಂಬ ಸಾಧನೆ ಇವರದ್ದು. ಕಳೆದ 16 ವರ್ಷಗಳಿಂದ ವೃತ್ತಿಪರ ಖೋ ಖೋ ಆಡುತ್ತಿರುವ ಇವರು, 2018ರಲ್ಲಿ ರಾಷ್ಟ್ರೀಯ ಖೋ ಖೋ ರೆಫ್ರಿ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಬಳಿಕ ಪಂಜಾಬ್, ವಾರಂಗಲ್ ಮತ್ತು ದೆಹಲಿಯಲ್ಲಿನ ಕಾರ್ಯಾಗಾರಗಳಲ್ಲಿ ಅರ್ಹ ಖೋ ಖೋ ರೆಫ್ರಿ ಎಂದು ಪ್ರಮಾಣೀಕರಿಸಲ್ಪಟ್ಟರು. ಅಮೂಲ್ಯ ಅವರು ಪ್ರಸ್ತುತ ತಿ.ನರಸೀಪುರದ ವಿದ್ಯೋದಯ ಬಾಲಕಿಯರ ಪ್ರೌಢಶಾಲೆಯಲ್ಲಿ ದೈಹಿಕ ಶಿಕ್ಷಣ ಶಿಕ್ಷಕಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಉತ್ಸಾಹಿ ಖೋ ಖೋ ಆಟಗಾರರಿಗೆ ಮಾರ್ಗದರ್ಶನವನ್ನೂ ನೀಡುತ್ತಿದ್ದಾರೆ. ಇವರು 5 ವರ್ಷಗಳ ಕಾಲ ಮೈಸೂರು ವಿವಿ ಮತ್ತು ಒಂದು ವರ್ಷ ದಾವಣಗೆರೆ ವಿವಿಯನ್ನು ಪ್ರತಿನಿಧಿಸಿದ್ದಾರೆ.

ಸದ್ಯ ಕುರುಬೂರು ಗ್ರಾಮದ ಬಿ. ಚೈತ್ರಾ ಎಲ್. ಮೋನಿಕಾ, ಎಸ್. ವಿನುತಾ, ಕೆ.ಆರ್. ತೇಜಸ್ವಿನಿ, ಕೆಎಂ. ನಿಸರ್ಗ, ಎಸ್. ಮೇಘನಾ ಸೇರಿದಂತೆ ಆರು ಆಟ ಗಾರ್ತಿಯರು ರಾಷ್ಟ್ರೀಯ ಖೋ ಖೋ ಕ್ರೀಡೆಯಲ್ಲಿ ತಮ್ಮದೇ ಆದ ಛಾಪು ಮೂಡಿ ಸುತ್ತಿದ್ದಾರೆ. ಕುರುಬೂರಿನ ಈ ಆಟಗಾರ್ತಿ ಯರು ಕಳೆದ ಜನವರಿ 28ರಿಂದ ಫೆ.2 ರವರೆಗೆ ಉತ್ತರಖಂಡದಲ್ಲಿ ನಡೆದ 38ನೇ ರಾಷ್ಟ್ರೀಯ ಖೋ ಖೋ ಕ್ರೀಡಾಕೂಟದಲ್ಲಿ ಕರ್ನಾಟಕ ಮಹಿಳಾ ತಂಡದಲ್ಲಿ ಆಡಿರುವುದು ಹೆಮ್ಮೆಯ ಸಂಗತಿ.

ಲೆಕ್ಕಕ್ಕೂ ಕ್ರೀಡೆಗೂ ಎತ್ತಣಿಂದೆತ್ತ ಸಂಬಂಧ !

ಕುರುಬೂರು ಗ್ರಾಮದ ವಿದ್ಯಾರ್ಥಿನಿಯರು ರಾಷ್ಟ್ರೀಯ ಮಟ್ಟದಲ್ಲಿ ಮಿಂಚಲು ಗಣಿತ ಶಿಕ್ಷಕರೊಬ್ಬರು ಕಾರಣ ಎನ್ನುವುದು ಅಚ್ಚರಿಯಾದರೂ ನಿಜ. ಕುರುಬೂರಿನ ವಿದ್ಯಾದರ್ಶಿನಿ ಶಾಲೆಯಲ್ಲಿ ಈ ಹಿಂದೆ ಅಂತಹ ಕ್ರೀಡಾಚಟುವಟಿಕೆಗಳೇನೂ ಇರಲಿಲ್ಲ. 2008ರಲ್ಲಿ ಕೆ.ಮಂಜುನಾಥ್ ಅವರು ಗಣಿತ ಶಿಕ್ಷಕರಾಗಿ ಬಂದ ಮೇಲೆ ಕುರುಬೂರು ಗ್ರಾಮ ಕ್ರೀಡಾಪಟುಗಳ ತವರಾಗಿ ಮಾರ್ಪಟ್ಟಿತು. ಸ್ವತಃ ಖೋ ಖೋ ಆಟಗಾರರಾಗಿದ್ದ ಕೆ.ಮಂಜುನಾಥ್, ತಮ್ಮ ಶಾಲೆಯ ವಿದ್ಯಾರ್ಥಿಗಳಿಗೆ ಖೋ ಖೋ ತರಬೇತಿ ನೀಡಲು ಆರಂಭಿಸಿದರು. ಈ ಗ್ರಾಮದ 40 ವಿದ್ಯಾರ್ಥಿನಿಯರು ಹಾಗೂ 30 ವಿದ್ಯಾರ್ಥಿಗಳು ಸೇರಿದಂತೆ ಒಟ್ಟು 70 ಕ್ರೀಡಾಪಟುಗಳು ಮಂಜುನಾಥ್ ಅವರಿಂದ ಖೋ ಖೋ ಕ್ರೀಡೆಗೆ ಬಳುವಳಿಯಾಗಿದ್ದಾರೆ.



► ನನ್ನ ಶಾಲಾ-ಕಾಲೇಜು ದಿನಗಳಲ್ಲಿ ಖೋ ಖೋ ಅಭ್ಯಾಸ ಮಾಡಲು ಪ್ರೋತ್ಸಾಹ ಸಿಗಲಿಲ್ಲ. ಆದರೆ ಕುರುಬೂರಿನ ವಿದ್ಯಾರ್ಥಿಗಳು ಖೋ ಖೋ ಆಡಲು ಹಾಗೂ ಸಾಧನೆ ಮಾಡಲು ಪೂರಕ ವಾತಾವರಣ ಒದಗಿಸಬೇಕೆಂಬ ನಿಟ್ಟಿನಲ್ಲಿ ಸಾಧ್ಯವಾದಷ್ಟು ಕೆಲಸ ಮಾಡಿದ್ದೇನೆ. ವಿದ್ಯಾರ್ಥಿಗಳು ಕೂಡ ಕಠಿಣ ಅಭ್ಯಾಸ ಮಾಡಿದ್ದಾರೆ. ನಮ್ಮ ಹಳ್ಳಿಯ ಹೆಚ್ಚಿನ ಆಟಗಾರರು ಅಂತಾರಾಷ್ಟ್ರೀಯ ಪಂದ್ಯಾವಳಿಗಳಲ್ಲಿ ಭಾರತೀಯ ಖೋ ಖೋ ತಂಡವನ್ನು ಪ್ರತಿನಿಧಿಸಿರುವುದು ಹೆಮ್ಮೆ ಎನ್ನಿಸುತ್ತದೆ.

- ಕೆ.ಮಂಜುನಾಥ್, *ಗಣಿತ ಶಿಕ್ಷಕ ಹಾಗೂ ಖೋ ಖೋ ತರಬೇತುದಾರ.*

ಕೇವಲ ಕುರುಬೂರು ಮಾತ್ರವಲ್ಲದೆ ಈ ಗ್ರಾಮಕ್ಕೆ ಹೊಂದಿಕೊಂಡಂತಿರುವ ಕೊತ್ತೇಗಾಲ, ಸೀಹಳ್ಳಿ, ಮಾದರಹಳ್ಳಿ, ತೊಟ್ಟವಾಡಿ ಮತ್ತು ಕನ್ನಹಳ್ಳಿ ಗ್ರಾಮಗಳಿಂದಲೂ ಬಾಲಕ-ಬಾಲಕಿಯರು ಕುರುಬೂರಿನ ವಿದ್ಯಾದರ್ಶಿನಿ ಶಾಲಾ ಮೈದಾನಕ್ಕೆ ಬಂದು ಖೋ ಖೋ ತರಬೇತಿ ಪಡೆಯುತ್ತಿರುವುದು ವಿಶೇಷ. ಕುರುಬೂರಿನ ಈ ಶಾಲೆ ಮೈದಾನದಲ್ಲಿ ಬೆಳಗ್ಗೆ 6ರಿಂದ 7.45ರವರೆಗೆ ಖೋ ಖೋ ಅಭ್ಯಾಸ ನಡೆಯುತ್ತದೆ. ಈ ವೇಳೆ ಕುರುಬೂರು ಶಾಲೆಯ ಮಕ್ಕಳು ಮಾತ್ರವಲ್ಲದೆ ಹೊರಗಿನವರೂ ಅಭ್ಯಾಸ ಮಾಡುತ್ತಾರೆ. ಮಧ್ಯಾಹ್ನ 3.30ಕ್ಕೆ ಶಾಲೆಯ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಅಭ್ಯಾಸ ಪ್ರಾರಂಭಿಸಿದರೆ ಸಂಜೆ 4.30ಕ್ಕೆ ಹಿರಿಯ ವಿದ್ಯಾರ್ಥಿಗಳು ಅವರೊಂದಿಗೆ ಸೇರುತ್ತಾರೆ. ಈ ಅಭ್ಯಾಸ ಸಂಜೆ 6.30ರವರೆಗೂ ಮುಂದುವರೆಯುತ್ತದೆ.

ಹಬ್ಬ-ಹರಿದಿನಗಳಾಗಲೀ, ಸರ್ಕಾರಿ ರಜಾದಿನಗಳಾಗಲೀ ಈ ಗ್ರಾಮದ ಆಟಗಾರರು ನಿಯಮಿತವಾಗಿ ಪ್ರತಿದಿನ ಖೋ ಖೋ ಅಭ್ಯಾಸ ನಡೆಸುವುದನ್ನು ರೂಢಿಸಿಕೊಂಡಿದ್ದಾರೆ. ನಂಬಲು ಅಸಾಧ್ಯವಾದ ಸತ್ಯವೆಂದರೆ ಕುರುಬೂರಿನ ಶಾಲೆಯ ಈ ಮೈದಾನದಲ್ಲಿ ಖೋ ಖೋ ಮ್ಯಾಟ್ ಇಲ್ಲದಿದ್ದರೂ ಇಲ್ಲಿ ತರಬೇತಿ ಪಡೆದವರು ರಾಷ್ಟ್ರೀಯ ಮಟ್ಟದಲ್ಲಿ ಮಿಂಚಿದ್ದಾರೆ, ಅಂತಾರಾಷ್ಟ್ರೀಯ ಮಟ್ಟದಲ್ಲೂ ಸಾಧನೆ ಮಾಡಿದ್ದಾರೆ. ಬಿ.ಚೈತ್ರಾ ಮತ್ತು ಮೋನಿಕಾ ಅಂತಾರಾಷ್ಟ್ರೀಯ ಟೂರ್ನಮೆಂಟ್‌ನಲ್ಲಿ ಟೀಂ ಇಂಡಿಯಾ ಜೆರ್ಸಿ ಧರಿಸಿದ್ದು ಸಾಮಾನ್ಯ ಸಾಧನೆಯಲ್ಲ.

ಗಣಿತ ಶಿಕ್ಷಕ ಕೆ.ಮಂಜುನಾಥ್ ತನ್ನ ಪ್ರಿಯವಾದ ಖೋ ಖೋ ಕ್ರೀಡೆಯಲ್ಲಿ ತನ್ನ ವಿದ್ಯಾರ್ಥಿಗಳು ಸಾಧನೆ ಮಾಡಬೇಕು ಎಂಬ ಹಠದೊಂದಿಗೆ 2008ರಲ್ಲಿ ತರಬೇತಿ ನೀಡಲು ಆರಂಭಿಸಿದ್ದರು. ಈ ಶಾಲೆಯ ತಂಡವು ಮೊದಲ 2 ವರ್ಷಗಳ ಕಾಲ ಹೋಬಳಿ ಮಟ್ಟದಲ್ಲಿ ಮೊದಲ 4 ಸ್ಥಾನ ಪಡೆಯದ ಕಾರಣ ರಾಷ್ಟ್ರೀಯ ಪಂದ್ಯಾವಳಿಗೆ ಅರ್ಹತೆ ಪಡೆಯುವುದು ಕಷ್ಟಸಾಧ್ಯವಾಯಿತು. ಆದರೂ ಛಲಬಿಡದೆ 2009ರಲ್ಲಿ ಕುರುಬೂರಿನ ಈ ಶಾಲಾ ತಂಡ ಜಿಲ್ಲಾಮಟ್ಟವನ್ನು ತಲುಪಿದರೂ ವಿಭಾಗೀಯ ಮಟ್ಟದಲ್ಲಿ ಪರಾಭವಗೊಂಡಿತು. ಅದಾದ ಮರು ವರ್ಷವೇ ಅಂದರೆ 2010ರಲ್ಲಿ ಪುಟಿದೆದ್ದ ಕುರುಬೂರಿನ ಖೋ ಖೋ ಆಟಗಾರ್ತಿಯರು, ರಾಜ್ಯ ಹಾಗೂ ರಾಷ್ಟ್ರೀಯ ಮಟ್ಟದ ಪಂದ್ಯಾವಳಿಗಳಿಗೆ ಆಯ್ಕೆಯಾದರು. ನಂತರ ಖೋ ಖೋ ಕ್ರೀಡೆಯಲ್ಲಿ ಕುರುಬೂರಿನ ಆಟಗಾರ್ತಿಯರದ್ದೇ ಕಾರುಬಾರು. ಇವರು ಹಲವಾರು ಪ್ರಶಸ್ತಿಗಳನ್ನು ತಂದುಕೊಟ್ಟಿದ್ದಾರೆ. 30 ಆಟಗಾರ್ತಿಯರು ರಾಷ್ಟ್ರೀಯ ಮಟ್ಟದಲ್ಲಿ ಮಿಂಚುತ್ತಿದ್ದಾರೆ.



❛ ಕುರುಬೂರಿನ ಖೋ ಖೋ ಆಟಗಾರರು ರಾಷ್ಟ್ರೀಯ ಮಟ್ಟದಲ್ಲಿ ಸುದ್ದಿಯಾಗುತ್ತಿರುವುದು ಸಂತೋಷ ತಂದಿದೆ. ಖೋ ಖೋ ಆಟಕ್ಕೆ ಸ್ಫೂರ್ತಿ ಹಾಗೂ ಪ್ರೋತ್ಸಾಹ ನೀಡಿದ ಶಿಕ್ಷಕ ಮಂಜುನಾಥ್ ಅವರಿಗೆ ನಾವು ಕೃತಜ್ಞರಾಗಿರುತ್ತೇವೆ. ಅವರ ಕಾರಣದಿಂದಾಗಿಯೇ ಹಳ್ಳಿಯವರಾದ ನಾವು ರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಲ್ಪಟ್ಟಿದ್ದೇವೆ. ನಮ್ಮ ಎಲ್ಲಾ ಪ್ರಯತ್ನಗಳನ್ನು ಬೆಂಬಲಿಸಿದ ಪೋಷಕರಿಗೂ ಕೃತಜ್ಞತೆ ಸಲ್ಲಿಸುತ್ತೇವೆ.

- ಎಂ.ವೀಣಾ, ರಾಷ್ಟ್ರೀಯ ಖೋ ಖೋ ಆಟಗಾರ್ತಿ, ಕುರುಬೂರು.

ಕ್ರೀಡಾಳುಗಳಿಗೆ ಹಳ್ಳಿ ಊಟವೇ ಮೃಷ್ಟಾನ್ನ

ಕ್ರೀಡಾಪಟುಗಳೆಂದರೆ ಫಿಟ್ನೆಸ್‌ಗಾಗಿ ವಿಶೇಷ ಆಹಾರ ಸೇವಿಸುವುದು ಸಹಜ. ಆದರೆ ರೈತರು, ಮಧ್ಯಮ ಹಾಗೂ ಕೆಳ ಮಧ್ಯಮ ವರ್ಗಕ್ಕೆ ಸೇರಿದವರೇ ಹೆಚ್ಚಾಗಿರುವ ಕುರುಬೂರಿನ ಈ ಕ್ರೀಡಾಪಟುಗಳಿಗೆ ಯಾವುದೇ ರೀತಿಯ ವಿಶೇಷ ಆಹಾರ ಸೌಲಭ್ಯವಿಲ್ಲ. ಅವರಿಗೆ ವಿಶೇಷ ಖಾದ್ಯ ಸವಿಯುವ ಆಸೆಯೂ ಇಲ್ಲ. ಈ ಕ್ರೀಡಾಪಟುಗಳು ರಾಗಿ ಮುದ್ದೆ, ಚಪಾತಿ, ತರಕಾರಿಯನ್ನು ನಿಯಮಿತವಾಗಿ ಸೇವಿಸುತ್ತಾರೆ. ರಾಷ್ಟ್ರೀಯ ಮಟ್ಟದ ಪಂದ್ಯಾವಳಿಗಳಲ್ಲಿ ಭಾಗವಹಿಸುವ ಆಟಗಾರ್ತಿಯರ ಆಹಾರವೂ ಈ ಹಳ್ಳಿ ಊಟವೇ ಆಗಿದೆ. ಇದುವೇ ಇವರ ಫಿಟ್ನೆಸ್‌ನ ರಹಸ್ಯವೂ ಆಗಿದೆ ಎನ್ನಬಹುದು.





❛ ನಾವು ಯಾವುದೇ ಕ್ರೀಡೆಯಲ್ಲಿ ಕಿಂಚಿತ್ತೂ ಸಾಧನೆ ಮಾಡಿರಲಿಲ್ಲ. ಕೆ.ಮಂಜುನಾಥ್ ಸರ್ ನಮ್ಮ ಶಾಲೆಗೆ ಬಂದದ್ದು ನಮಗೆ ವರದಾನವಾಯಿತು. ಒಂದು ದಿನವೂ ತಪ್ಪದೇ ನಿಯಮಿತವಾಗಿ ಅಭ್ಯಾಸ ಮಾಡಲು ಅವರು ನಮ್ಮನ್ನು ಪ್ರೋತ್ಸಾಹಿಸಿದರು. ಅವರ ಪ್ರೋತ್ಸಾಹ ಹಾಗೂ ಶ್ರಮದಿಂದಾಗಿಯೇ ನಮ್ಮ ಹಳ್ಳಿಯ ಅನೇಕ ಆಟಗಾರರು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟವನ್ನು ತಲುಪಿದ್ದೇವೆ.

- ಅಮೂಲ್ಯ, ಖೋ ಖೋ ಕ್ರೀಡೆಯ ರೆಫ್ರಿ



❛ ಅಂತಾರಾಷ್ಟ್ರೀಯ ಮಟ್ಟದ ಪಂದ್ಯಾವಳಿಗೆ ಭಾರತ ತಂಡದ ಆಟಗಾರ್ತಿಯಾಗಿ ಆಯ್ಕೆಯಾಗುವುದು ಬಹಳ ಕಷ್ಟಕರವಾದದ್ದು. ರಾಷ್ಟ್ರೀಯ ಮಹಿಳಾ ಶಿಬಿರದಲ್ಲಿ ಮೂರು ಬಾರಿ ಭಾಗವಹಿಸಿದ ನಂತರ ವಿಶ್ವಕಪ್‌ಗಾಗಿ ಭಾರತೀಯ ತಂಡಕ್ಕೆ ಆಯ್ಕೆಯಾಗುವ ನನ್ನ ಕನಸು ನನಸಾಯಿತು. ಎಲ್ಲಾ ಆಟಗಾರರಂತೆ ನಾನೂ ಕೂಡ ಮಂಜುನಾಥ್ ಸರ್ ಅವರ ಪ್ರೋತ್ಸಾಹಕ್ಕಾಗಿ ಕೃತಜ್ಞತೆ ಸಲ್ಲಿಸುತ್ತೇನೆ. ಮುಂದಿನ ದಿನಗಳಲ್ಲಿ ಈ ಕ್ರೀಡೆಗೆ ಹೆಚ್ಚಿನ ಮನ್ನಣೆ ಸಿಗಲಿ ಎಂದು ಆಶಿಸುತ್ತೇನೆ.

- ಬಿ.ಚೈತ್ರಾ, ಖೋ ಖೋ ವಿಶ್ವಕಪ್ ವಿಜೇತ ಭಾರತೀಯ ತಂಡದ ಆಟಗಾರ್ತಿ.







❛ ನಮ್ಮ ಹಿರಿಯ ಆಟಗಾರ್ತಿಯೊಬ್ಬರು ವಿಶ್ವಕಪ್ ಪಂದ್ಯಾವಳಿಯಲ್ಲಿ ಭಾರತವನ್ನು ಪ್ರತಿನಿಧಿಸಿದ್ದು, ಸಂತೋಷದ ಸಂಗತಿ. ಅವರ ಹಾದಿ ಅನುಸರಿಸಲು ನಮಗೆ ಸ್ಫೂರ್ತಿ ಸಿಕ್ಕಿದೆ. ಫಿಟ್ನೆಸ್‌ಗಾಗಿ ಶಾಲೆಯಲ್ಲಿ ಖೋ ಖೋವನ್ನು ಪ್ರಾರಂಭಿಸಲಾಯಿತು. ಆದರೆ ಈಗ ಸೀನಿಯರ್, ಜೂನಿಯರ್ ಮತ್ತು ಸಬ್‌ಜೂನಿಯರ್ ಹಂತಗಳಲ್ಲಿ ರಾಜ್ಯವನ್ನು ಪ್ರತಿನಿಧಿಸುವ ಆಟಗಾರರೊಂದಿಗೆ ನಾವು ವೃತ್ತಿಪರವಾಗಿ ಆಡುತ್ತಿದ್ದೇವೆ.

- ಆರ್.ಅರ್ಪಿತಾ, ಮೈಸೂರು ವಿವಿ ಖೋ ಖೋ ಆಟಗಾರ್ತಿ

ಅಸ್ವಸ್ಥರ 'ಚಿಗುರು'



■ ಮೋಹನ್ ಕಾಯಕ

ಐವರಿಂದ ಆರಂಭಗೊಂಡ ಆಶ್ರಮದಲ್ಲಿ ಈಗ ಐವತ್ತು ಮಂದಿ...! ಮಾನಸಿಕ ಅಸ್ವಸ್ಥ ಹಾಗೂ ನಿರ್ಗತಿಕರಿಗೆ ಆಶ್ರಯ ನೀಡಿ, ಅವರನ್ನು ಪ್ರೀತಿಯ ಹಾರೈಕೆಯೊಂದಿಗೆ ಜೋಪಾನ ಮಾಡುತ್ತಿದೆ. ಮೈಸೂರಿನ ಬೆಳವಾಡಿಯ ಚಾಮುಂಡೇಶ್ವರಿ ನಗರದ 'ಚಿಗುರು' ಎಸ್. ಸುಷ್ಮಾ ಇದರ ಸಾರಥಿ.

2014ರ ಜೂನ್ 2 ರಿಂದ ಆರಂಭಗೊಂಡ ಸುಷ್ಮಾ ಅವರ 'ಚಿಗುರು' ಆಶ್ರಮದಲ್ಲೀಗ ಸುಮಾರು 50 ಮಂದಿ ಆಶ್ರಯ ಪಡೆದಿದ್ದಾರೆ. ಊಟ, ಉಪಚಾರ, ಸಣ್ಣಪುಟ್ಟ ಆಟೋಟಗಳ ಜೊತೆಗೆ ದಿನೇ ದಿನೆ ಜನ ಮನ್ನಣೆ ಪಡೆಯುತ್ತಿರುವ ಚಿಗುರು ಆಶ್ರಮ, ತನ್ನ ಎರಡನೇ ಶಾಖೆಯನ್ನು ದೊಡ್ಡಕಾನ್ಯದಲ್ಲಿ ಆರಂಭಿಸಿದೆ.

ಮಂಡ್ಯ ಜಿಲ್ಲೆ ಕೆ.ಆರ್.ಪೇಟೆ ತಾಲೂಕಿನ ಕ್ಯಾಚಮನಹಳ್ಳಿಯ ನಿವಾಸಿ ಸತೀಶ್ ಮತ್ತು ಶಶಿಕಲಾ ದಂಪತಿ ಪುತ್ರಿಯಾದ ಎಸ್.ಸುಷ್ಮಾ, ಆರಂಭಿಸಿರುವ ಚಿಗುರು ಆಶ್ರಮ ಹಲವರ ಪಾಲಿಗೆ ಸಂಜೀವಿನಿಯಾಗಿದೆ. ದಾನಿಗಳ ಸಹಕಾರದಿಂದ ಹಲವಾರು ಅಡೆ-ತಡೆಗಳ ನಡುವೆ ಮುನ್ನಡೆಯುತ್ತಿರುವ ಈ ಆಶ್ರಮದ ಉಳಿವಿಗೆ ಗಟ್ಟಿಯಾಗಿ ನಿಂತಿದ್ದಾರೆ. ಸೇವಾ ಮನೋಭಾವನೆ ಇದ್ದರೆ ಸಾಲದು, ನೊಂದವರ ಕಷ್ಟಕ್ಕೆ ಮರುಗಬೇಕು ಎಂಬುದನ್ನು ತಮ್ಮ ಸೇವೆಯ ಮೂಲಕ ಸಮಾಜಕ್ಕೆ ತಿಳಿಸಿದ್ದಾರೆ.



❝ ಹೆಣ್ಣಿನಲ್ಲಿ ಸಹಿಸಿಕೊಳ್ಳುವ ಗುಣ, ಮಾನಸಿಕವಾಗಿ ಆರೋಗ್ಯವಾಗಿರಬೇಕು... ಇತ್ತೀಚಿನ ದಿನಗಳಲ್ಲಿ ಶಾಲಾ-ಕಾಲೇಜು ಯುವತಿಯರ ಜೀವನ ಶೈಲಿ ಬದಲಾಗುತ್ತಿದೆ. ಮುಖ್ಯವಾಗಿ ಹೆಣ್ಣಿನಲ್ಲಿ ಸಹಿಸಿಕೊಳ್ಳುವ ಗುಣ ಇರಬೇಕು. ಎಂತಹ ಸಂದರ್ಭ ಎದುರಾದರೂ ಹೆದರದೆ ಮುನ್ನಡೆಯುವ ಮಾನಸಿಕ ಬಲ ಹೊಂದಿರಬೇಕು. ಆದರೆ ಕೆಲ ಹೆಣ್ಣು ಮಕ್ಕಳು, ಮಹಿಳೆಯರು ತಮಗೆ ನೀಡಿರುವ ಸ್ವತಂತ್ರವನ್ನು ದುರುಪಯೋಗ ಮಾಡಿಕೊಳ್ಳುವುದಲ್ಲದೆ, ಸಾಮಾಜಿಕ ತಾಲತಾಣಗಳ ವ್ಯಸನಕ್ಕೆ ತುತ್ತಾಗಿ ಒಬ್ಬಂಟಿಯಾಗಿರುವುದು ವಿಷಾದನೀಯ.

- ಎಸ್.ಸುಷ್ಮಾ ರವಿಕುಮಾರ್, *ಚಿಗುರು ಆಶ್ರಮ*

ಎಂಎಸ್‌ಡಬ್ಲ್ಯು ಪದವೀಧರೆಯಾಗಿರುವ ಸುಷ್ಮಾ, ಆರಂಭದಲ್ಲಿ ರಸ್ತೆ ಬದಿಯಲ್ಲಿ ಮಲಗುತ್ತಿದ್ದ ಮಾನಸಿಕ ಅಸ್ವಸ್ಥ ಮಹಿಳೆಯರನ್ನು ಕರೆದುಕೊಂಡು ಬಂದು ಹಾರೈಕೆ ಆರಂಭಿಸಿದರು. ಹತ್ತು ವರ್ಷದ ನಂತರ ಮೈಸೂರು ನಗರ ಹಾಗೂ ಜಿಲ್ಲೆಯಲ್ಲಿ ಯಾರೇ ಮಾನಸಿಕ ಅಸ್ವಸ್ಥರು ಸಿಕ್ಕರೂ ಪೊಲೀಸರೇ ಕರೆದುಕೊಂಡು 'ಚಿಗುರು' ಆಶ್ರಮಕ್ಕೆ ಬಿಟ್ಟುಹೋಗುವ ಹಂತಕ್ಕೆ ಸಂಸ್ಥೆ ಈಗ ಬೆಳೆದಿದೆ. ಅಲ್ಲದೆ ಸ್ವತಃ ದಾನಿಯೊಬ್ಬರು ಆಶ್ರಮದ ಎರಡನೇ ಶಾಖೆ ಆರಂಭಿಸಲು ತಮ್ಮ ಸ್ವಂತ ಕಟ್ಟಡವನ್ನು ನೀಡಿರುವುದು ಮತ್ತೊಂದು ಗರಿಮೆಯಾಗಿದೆ.

'ಮೈಸೂರು ಮಿತ್ರ'ನೊಂದಿಗೆ ತಮ್ಮ ಚಿಗುರು ಆಶ್ರಮ, ಮಾನಸಿಕ ಅಸ್ವಸ್ಥರಿಗೆ ಆಶ್ರಯ ನೀಡಿರುವ ಕುರಿತು ಕಳೆದ ಹತ್ತು ವರ್ಷಗಳ ಅನುಭವ ಹಂಚಿಕೊಂಡಿರುವ ಸುಷ್ಮಾ, ಆರಂಭದಲ್ಲಿ ತಮಗೆ ಬೆಂಬಲ ನೀಡಿ, ನೈತಿಕ ಸ್ಥೈರ್ಯ ತುಂಬಿದ ದಾನಿಗಳನ್ನು ಸ್ಮರಿಸಿದರು. ವೈಯಕ್ತಿಕವಾಗಿ ಯಾವುದೇ ಬಂಡವಾಳ ಹೂಡಿಕೆ ಮಾಡಿಲ್ಲ. ಸೇವಾ ಮನೋಭಾವದಿಂದ ಆಶ್ರಮ ಆರಂಭಿಸಿದೆ. ದಾನಿಗಳ ಸಹಕಾರದಿಂದ ಹತ್ತು ವರ್ಷಗಳು ನಡೆದುಕೊಂಡು ಬಂದಿದೆ. ಸೈಕಲ್ ಪ್ಯೂರ್ ಅಗರಬತ್ತೀಸ್ ಸಂಸ್ಥೆಯ ಆರ್ಥಿಕ ಸಹಕಾರವೂ ಇದೆ. ಎನ್‌ಜಿಎಸ್ ಚಾರಿಟೆಬಲ್ ಟ್ರಸ್ಟ್, ವಿಷ್ಣು ಸಮಾಜ ಸೇವಾ ಟ್ರಸ್ಟ್, ರೋಟರಿ ಮಿಡ್‌ಟೌನ್, ರೋಟರಿ ಐವರಿ ಸಿಟಿ, ರೋಟರಿ ಸೆಂಟ್ರಲ್, ರೋಟರಿ ಅಲ್ಟ್ರಾಟೆಕ್ ಇನ್ನಿತರೆ ಸಂಸ್ಥೆಗಳ ಸಹಕಾರ ಹಾಗೂ ದಾನಿಗಳಿಂದಲೇ ಈ ಆಶ್ರಮ ನಡೆಯುತ್ತಿದ್ದು, ಸೇವೆ ನೀಡುವ ಕೆಲಸ ನಮ್ಮದಾಗಿದೆ.



ಮೊದಲಿನಿಂದಲೂ ನನಗೆ ಆಶ್ರಮ ಮಾಡಬೇಕು ಎಂಬ ಆಸಕ್ತಿ ಇತ್ತು. ನಾನು ಕುವೆಂಪು ನಗರದ ಬಿಸಿಎಂ ಹಾಸ್ಟೆಲ್‌ನಲ್ಲಿ ಓದುವಾಗ ಹಾಸ್ಟೆಲ್ ಹೊರಗಡೆ ಒಬ್ಬ ಅಜ್ಜಿ ಕುಳಿತುಕೊಳ್ಳುತ್ತಿದ್ದರು. ನಾನು ಊಟ ಮಾಡುವಾಗ ಅವರಿಗೂ ನನ್ನ ಊಟ ಕೊಡುತ್ತಿದ್ದೆ. ಅವರು ಎಲ್ಲಿ ಮಲಗುತ್ತಾರೆ, ಮನೆ ಇಲ್ಲದೆ ಹೇಗಿರುತ್ತಾರೆ ಎಂದು ಯೋಚನೆ ಮಾಡುತ್ತಿದ್ದೆ. ಈ ಯೋಚನೆಗಳೇ ನನಗೆ ಚಿಗುರು ಆಶ್ರಮ ತೆರೆಯಲು ಪ್ರೇರಣೆಯಾಯ್ತು. ಆಶ್ರಮ ಆರಂಭಿಸಿ, ಹತ್ತು ವರ್ಷವಾಗಿದೆ. ಚಿಕ್ಕದಾಗಿ ಶುರುವಾಗಿ ಈಗ ಎರಡು ಶಾಖೆಗಳಾಗಿವೆ ಎಂದು ಹರ್ಷ ವ್ಯಕ್ತಪಡಿಸಿದರು.

ಮಿಕ್ಕಿದ್ದೆಲ್ಲಾ ನಾವ್ ನೋಡ್ಕೋತಿವಿ...


ಒಂದನೇ ಪುಟದಿಂದ

ಏನು ಮಾಡಿದೆ ಎಂದರು. ನಾನು ಗಣೇಶ್‌ಗೂ ಏನು ಮಾಡಿಲ್ಲ, ಮಲ್ಲಿಗೆಗೂ ಏನೂ ಮಾಡಿಲ್ಲ ಎಂದೆ. ಏನೆ ಹೇಳಿದರೂ ಅವರು ನಂಬಲಿಲ್ಲ. ಗಣೇಶನ ತಿತಿಮತಿ ಪಾರ್ಕ್‌ನಲ್ಲಿ ಹೊಡೆದು ಹಾಕಿದ್ದೀಯಾ, ಮಲ್ಲಿಗೆಯನ್ನು ಬೆಟ್ಟದಪುರದ ಬಳಿ ಸಾಯಿಸಿ, ಬಿಸಾಡಿದ್ದೀಯಾ ಎಂದು ಅವರೇ ಹೇಳುತ್ತಿದ್ದರು. ಸಾರ್ ನಾನು ಏನೂ ಮಾಡಿಲ್ಲ. ನಾನು ಎರಡು ಮಕ್ಕಳ ತಂದೆ. ಇಂತಹ ಗತಿಗೆಟ್ಟ ಕೆಲಸ ಮಾಡೋನಲ್ಲ, ಜೈಲಿಗೆ ಹೋದರೆ ನನ್ನ ಮಕ್ಕಳ ಗತಿ ಯೇನು ಎಂದು ಹೇಳಿದೆ. ಆದರೆ ಅವರು ಸುಮ್ಮನೆ ಇರು ಮಾಡೋದೆಲ್ಲಾ ಮಾಡಿ ಈಗ ನಾಟಕ ಮಾಡ್ತಿದ್ದೀಯಾ ಅಂದರು. ಅವರು ಜೋರು ಮಾಡೋದನ್ನು ನೋಡಿದ ಮೇಲೆ ಏನು ಮಾತನಾಡಿದರೂ ಪ್ರಯೋಜನವಿಲ್ಲ ಎಂದು ಸುಮ್ಮನಾದೆ. ಆಮೇಲೆ ಪೊಲೀಸರನ್ನು ಕರೆಸಿ ಇವನು ಬಾಯಿ ಬಿಡಲ್ಲ, ಲಾಕ್ ಮಾಡಿ ಎಂದರು.

ಆಮೇಲೆ ಪೊಲೀಸರು ಒಂದು ರೂಂಗೆ ಕರೆದುಕೊಂಡು ಹೋಗಿ ಬಟ್ಟೆ ಬಿಚ್ಚಿಸಿ, ಕೈಗಳನ್ನು ಕಟ್ಟಿ ಹಾಕಿ, ಚೆನ್ನಾಗಿ ಹೊಡೆದರು. ಕರೆಂಟ್ ಶಾಕ್ ಕೊಟ್ಟರು. ಬೆರಳಿಗೆ ಹಗ್ಗ ಕಟ್ಟಿ ಎಳೆದರು. ಹೀಗೆ, ಬಹಳ ಚಿತ್ರಹಿಂಸೆ ಕೊಟ್ಟು ಅವರು ಹೇಳಿದ್ದನ್ನು ಬಲವಂತವಾಗಿ ಒಪ್ಪಿಕೊಳ್ಳುವ ತನಕ ಬಿಡಲಿಲ್ಲ. ನೋವು ತಾಳಲಾಗದೆ ಅವರು ಹೇಳಿದ್ದನ್ನೆಲ್ಲಾ ಒಪ್ಪಿ ಕೊಂಡ ಮೇಲೆ ಅವರಿಗೆ ಖುಷಿ ಆಯಿತು. ನನಗೆ ಕಟ್ಟಿದ್ದ ಹಗ್ಗವನ್ನು ಬಿಚ್ಚಿ ನೆಲದ ಮೇಲೆ ಕೂರಿಸಿ, ತುಂಬಾ ಸಂತಸಪಟ್ಟರು. ಶೇಕ್ ಹ್ಯಾಂಡ್ ಮಾಡಿಕೊಂಡರು. ನಾನು ನೋವಿನಲ್ಲಿ ನರಳುತ್ತಿದ್ದರೆ ಅವರಿಗೆ ಸಂತೋಷವೋ ಸಂತೋಷ. ಆಮೇಲೆ ನನಗೆ ಬಟ್ಟೆ ಹಾಕಿಸಿದರು. ನನಗೆ ಎದ್ದು ನಿಲ್ಲೋದಕ್ಕೂ ಆಗುತ್ತಿರಲಿಲ್ಲ. ಇಬ್ಬರು ಪೊಲೀಸರು ಹಿಡಿದುಕೊಂಡು ಆ ಕಡೆ ಈ ಕಡೆ ಓಡಾಡಿಸುತ್ತಿದ್ದರು. ಆದರೂ ನಡೆಯೋದಕ್ಕೆ ಆಗುತ್ತಿರಲಿಲ್ಲ. ಹೊರಗೆ ಯಾರಿಗೂ ಕಾಣದಂತೆ ಓಡಾಡಿಸಿದರು. ಆಸ್ಪತ್ರೆಗೆ ಹೋಗಬೇಕಾ ಎಂದು ಕೇಳಿದರು. ನಾನೇ ಬೇಡ ಎಂದೆ. ಅಲ್ಲಿಂದ ಬೆಟ್ಟದಪುರಕ್ಕೆ ಕರೆದುಕೊಂಡು ಹೋದರು. ಮೊದಲ ಬಾರಿ ಏನೆಲ್ಲಾ ಮಾಡಿದರೋ ಅದನ್ನೆಲ್ಲಾ ಮತ್ತೆ ಮಾಡಿಸಿದರು. ಎಲ್ಲಾ ಜಾಗಕ್ಕೆ ಕರೆದುಕೊಂಡು ಹೋದರು. ಮಲ್ಲಿಗೆಯನ್ನು ಕರೆದುಕೊಂಡು ಬಂದು ಇಲ್ಲಿ ಹೊಡೆದೆ. ಗಣೇಶನ ತಿತಿಮತಿ ಪಾರ್ಕ್‌ನಲ್ಲಿ ಹೊಡೆದು ಹಾಕಿದೆ. ನಮಗೆ ತಿತಿಮತಿ ಕೇಸ್ ಬೇಡ, ಮಲ್ಲಿಗೆ ಕೇಸ್ ಸಾಕು ಎಂದು ನನ್ನ ಫಿಟ್ ಮಾಡಿದರು.

2022ರಲ್ಲೇ ಅತ್ತೆಯ ಡಿಎನ್‌ಎ ಟೆಸ್ಟ್ ಮಾಡಿದ್ದರು. ಅದು ಮ್ಯಾಚಿಂಗ್ ಆಗಿಲ್ಲ. ಡಿಎನ್‌ಎ ಟೆಸ್ಟ್ ಆದ ಮೇಲೆ ನಮ್ಮ ಅತ್ತೆಯವರನ್ನು ಬೆಟ್ಟದಪುರಕ್ಕೆ ಕರೆಸಿ, ಈ ರಿಪೋರ್ಟ್ ಹೇಳ್ತಾ ಇದೆ. ಸಿಕ್ಕಿರುವ ಕಳೇಬರ ನಿಮ್ಮ ಮಗಳದ್ದೇ ಅಂತ ಎಂದು ಹೇಳಿ ಹೆದರಿಸಿ, ಬಲವಂತವಾಗಿ ಒಪ್ಪಿಸುವ ಪ್ರಯತ್ನವಾಯಿತು. ಆಗ ಸಹಜವಾಗಿ ನಮ್ಮ ಅತ್ತೆಗೆ ನನ್ನ ಮೇಲೆ ಸಣ್ಣ ಸಂಶಯ ಬಂದಿರಬೇಕು. ಬಳಿಕ ಅವರಿಂದ ಹೆಬ್ಬೆಟ್ಟು ಪಡೆದಿದ್ದರು. ಸರ್ಕಲ್ ಇನ್ಸ್‌ಪೆಕ್ಟರ್ ನಿಂಗೆ ಒಳ್ಳೇದ್ ಮಾಡ್ತೀನಿ ಕಣೋ, ಹೋಗಿ ಸ್ವಲ್ಪ ದಿನ ಇರು, ಮಕ್ಕಳ ಎಜುಕೇಷನ್ ಏನೇ ಇದ್ರು ನಾವು ನೋಡಿಕೊಳ್ತೀವಿ ಅಂದ್ರು. ಆಮೇಲೆ ಒಬ್ಬರೂ ತಿರುಗಿ ನೋಡಿಲ್ಲ.

ನನ್ನನ್ನು ಫಿಟ್ ಮಾಡಿ, ನ್ಯಾಯಾಧೀಶರ ಮುಂದೆ ಕರೆದುಕೊಂಡು ಹೋದರು. ನೀನೇನಾದ್ರೂ ಸತ್ಯ ಹೇಳಿದರೆ ನಾವು ಏನ್ ಮಾಡಬೇಕೋ ಮಾಡ್ತೀವಿ ಎಂದು ಹೆದರಿಸಿದ್ದರು. ನಾವ್ರ ಏನ್ ಹೇಳಿಕೊಟ್ಟಿದ್ದೇವೋ ಅಷ್ಟು ಮಾತ್ರ ಹೇಳು ಎಂದರು. ನಾನು ಅದೇ ರೀತಿ ಹೇಳಿದೆ. ಜೈಲಿಗೆ ಹಾಕಿದರು. ಜೈಲಿಗೋದಾಗ ಒಂದೂವರೆ ತಿಂಗಳು ಒಂದೇ ಸಮನೆ ಅತ್ತಿದ್ದೇನೆ. ಮಾಡದ ತಪ್ಪಿಗೆ ಅನ್ಯಾಯವಾಗಿ ಜೈಲಿಗೆ ಹಾಕಿದರಲ್ಲ ಎಂದು ಕೊರಗಿದ್ದೇನೆ. ಅಲ್ಲಿದ್ದವರೆಲ್ಲಾ ನನಗೆ ಧೈರ್ಯ ತುಂಬಿದರು. ಜೈಲಿಗೆ ಬಂದ ಮೇಲೆ ಕಣ್ಣೀರು ಹಾಕಿದರೆ ಪ್ರಯೋಜನವಿಲ್ಲ, ಅನುಭವಿಸಲೇಬೇಕು. ಬೇಗ ಜಾಮೀನಿನ ಮೇಲೆ ಹೊರಗೆ ಹೋಗೋದನ್ನು ನೋಡು ಎಂದರು. ಆದರೆ ಯಾವಾಗ ಹೋಗುತ್ತೇನೋ ಏನೋ, ನನ್ನ ಜೀವನ ಮುಗಿಯಿತು ಎಂದುಕೊಂಡಿದ್ದೆ. ನನಗೆ ಪೊಲೀಸ್, ಕೋರ್ಟ್ ಏನೂ ಗೊತ್ತಿರಲಿಲ್ಲ. ಪೊಲೀಸರೇ ಲಾಯರ್ ಇಟ್ಟಿದ್ದರು. ಏನು



ಮಲ್ಲಿಗೆ ಮತ್ತು ಗಣೇಶ್

ನಡೆಯುತ್ತಿದೆ ಅನ್ನೋದೂ ಗೊತ್ತಿರಲಿಲ್ಲ.

ಇದೇ ಯೋಚನೆಯಲ್ಲಿ ನನ್ನ ಮಗ ಓದಿನ ಕಡೆ ಗಮನ ಕೊಡಲಾಗದೆ ಪರೀಕ್ಷೆಯಲ್ಲಿ ಫೇಲ್ ಆಗಿದ್ದರಿಂದ ಶಾಲೆಯನ್ನೇ ಬಿಟ್ಟ. ಮಗನ ವಿದ್ಯಾಭ್ಯಾಸವೂ ಹಾಳಾಯ್ತು. ನಾನು ಜೈಲಿನಲ್ಲಿದ್ದಾಗ ಕೆಲವರು ಬೈಯೋರಂತೆ. ಪಾಪ ಮಾಡಿದ್ದಕ್ಕೆ ನಿಮ್ಮಪ್ಪ ಹೋಗಿ ಜೈಲಿನಲ್ಲಿ ಕೂತಿರೋದು ಎನ್ನುತ್ತಿದ್ದರಂತೆ. ಇದರಿಂದ ಮಕ್ಕಳು ಮುಖ ಎತ್ತಿ ನಡೆಯಲಾಗದೆ ತುಂಬಾ ನೋವು ಅನುಭವಿಸಿದರು. ಜೈಲಿಗೆ ನೋಡಲು ಮಕ್ಕಳು ಬಂದಾಗ ನೀವು ದೊಡ್ಡವರಾಗಿದ್ದೀರಿ, ನಾನು ಸತ್ತು ಹೋಗುತ್ತೇನೆ ಚೆನ್ನಾಗಿರಿ, ನನ್ನಿಂದ ನಿಮ್ಮ ಜೀವನ ಹಾಳಾಗೋದು ಬೇಡ ಎಂದು ಹೇಳಿದ್ದೆ. ಆಗ ಮಗಳು ತುಂಬಾ ಧೈರ್ಯ ತುಂಬಿದಳು. ನೀನು ಹೊರಗೆ ಬಂದು ಸತ್ಯ ಬಯಲು ಮಾಡಬೇಕು ಎಂದು ಸಮಾಧಾನ ಮಾಡಿದಳು. ಇಲ್ಲ ಅಂದಿದ್ದರೆ ನಾನು ಸತ್ತು ಹೋಗುತ್ತಿದೆ. ಜೈಲಿನಲ್ಲಿದ್ದಾಗಲೇ ಮಲ್ಲಿಗೆ, ಗಣೇಶನ ಜೊತೆ ಇರುವುದು ಗೊತ್ತಾಗಿತ್ತು. ಆದರೆ ಅದರ ಬಗ್ಗೆ ಏನೂ ಹೇಳಬೇಡಿ. ನಾನು ಹೊರಗೆ ಬಂದ ಮೇಲೆ ನೋಡಿಕೊಳ್ಳೋಣ ಎಂದಿದ್ದೆ.

ವಿಚಾರಣೆಗೆ ನನ್ನನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಹೋಗಿದ್ದಾಗ ಅಲ್ಲಿಗೆ ಬಂದಿದ್ದ ನಮ್ಮ ತಂದೆಗೆ ಯಾರೋ ಪೊಲೀಸರೊಬ್ಬರು ದೇವರಂತೆ ಸಿಕ್ಕಿದ್ದಾರೆ. ಅವರು ವಕೀಲರಾದ ಪಾಂಡು ಪೂಜಾರಿ ಅವರ ಮೊಬೈಲ್ ನಂಬರ್ ಕೊಟ್ಟಿದ್ದರಂತೆ. ನಮ್ಮ ತಂದೆ ಅವರನ್ನು ಭೇಟಿಯಾಗಿ ಎಲ್ಲಾ ವಿಷಯ ತಿಳಿಸಿದ್ದಾರೆ. ಅವರು ಮನೆಯವರನ್ನೆಲ್ಲಾ ಕರೆಸಿ ಮಾತನಾಡಿದ್ದಾರೆ. ಇದು ಪಕ್ಕಾ ಸುಳ್ಳು ಕೇಸ್ ಎಂದು ಮನವರಿಕೆಯಾದ ಮೇಲೆ ಸಹಾಯಕ್ಕೆ ಮುಂದಾಗಿದ್ದಾರೆ. ಫೀಸ್ ಕೂಡ ಪಡೆಯದೆ ಸ್ನೇಹಿತರ ಮೂಲಕ ಹೈಕೋರ್ಟ್‌ನಲ್ಲಿ ಬೇಲ್ ಕೊಡಿಸಿದರು. ಹಾಗಾಗಿ ಎರಡು ವರ್ಷದ ಬಳಿಕ ಜೈಲಿಂದ ಹೊರಬಂದೆ.

ನಾನು ಜೈಲಿಂದ ಹೊರಗೆ ಬರೋದು ಮಕ್ಕಳಿಗೆ ಗೊತ್ತಿರಲಿಲ್ಲ. ಜೈಲಿಂದ ನಾನು ತಂದೆ ಊರು ಪಿರಿಯಾಪಟ್ಟಣ ತಾಲೂಕಿನ ಬೇಗೂರಿಗೆ ಹೋಗಿದ್ದೆ. ಮಕ್ಕಳು ಅಲ್ಲಿಗೆ ಬಂದು ನನ್ನನ್ನು ನೋಡಿ ತುಂಬಾ ಖುಷಿಪಟ್ಟರು. ನಾಲ್ಕು ತಿಂಗಳು ಅಲ್ಲೇ ಇದ್ದೆ. ಆಮೇಲೆ ಮಲ್ಲಿಗೆ-ಗಣೇಶನ ಹುಡುಕದಿದ್ದರೆ ಮಾಡದ ತಪ್ಪಿಗೆ ಇನ್ನೂ ಶಿಕ್ಷೆ ಅನುಭವಿಸಬೇಕಾಗುತ್ತದೆ ಎಂದು ಎಲ್ಲಾ ಕಡೆ ವಿಚಾರಿಸಲು ಶುರು ಮಾಡಿದೆ. ಜೈಲಿಂದ ಬಂದು ಆರು ತಿಂಗಳಾದ ಮೇಲೆ ಮಲ್ಲಿಗೆ ಬದುಕಿದ್ದಾಳೆ ಎಂಬುದು ಬಯಲಾಯ್ತು. ಏಪ್ರಿಲ್ 1 ರಂದು ಮಡಿಕೇರಿಯ ಹೋಟೆಲ್‌ನಲ್ಲಿ ಮಲ್ಲಿಗೆ ಮತ್ತು ಗಣೇಶ ತಿಂಡಿ ತಿನ್ನುತ್ತಿರುವುದನ್ನು ಸ್ನೇಹಿತರೊಬ್ಬರು ನೋಡಿ ಫೋನ್ ಮಾಡಿ ಹೇಳಿದರು. ಅವರಿಬ್ಬರೂ ಹೋಟೆಲ್‌ನಲ್ಲಿ ಇರುವುದನ್ನು ವಿಡಿಯೋ ಮಾಡಿಕೊಂಡರು. ತಕ್ಷಣ ವಕೀಲರಾದ ಪಾಂಡು ಪೂಜಾರಿ ಅವರಿಗೆ ತಿಳಿಸಿದೆ. ಅವರು ಪೊಲೀಸರ ಬಳಿ ವಿಚಾರಿಸಿ, ನ್ಯಾಯಾಲಯದ ಗಮನಕ್ಕೆ ತಂದರು.


ಆದರೆ ಈ ಐದು ವರ್ಷ ನಾನು ಮತ್ತು ನಮ್ಮ ಮನೆಯವರು ಅನುಭವಿಸಿದ ನರಕ ಯಾತನೆ ಯಾರಿಗೂ ಬೇಡ. ನಿಜಕ್ಕೂ ನರಕದ ಅನುಭವವಾಗಿದೆ. ಬದುಕೋಕೂ ಆಗದೆ, ಸಾಯೋಕು ಆಗದೆ ದಿನ ಕಳೆದಿದ್ದೇವೆ. ಪೊಲೀಸರು ಹೀಗೆಲ್ಲಾ ಮಾಡ್ತಾರಾ ಅಂತ ಭಯವಾಗುತ್ತದೆ. ನಮ್ಮ ಕುಟುಂಬಕ್ಕೆ ಅನ್ಯಾಯವಾಗಿದೆ. ಜೊತೆಗೆ ನ್ಯಾಯಾಲಯಕ್ಕೂ ವಂಚಿಸಿದ್ದಾರೆ. ಏಪ್ರಿಲ್ 17ಕ್ಕೆ ವಿಚಾರಣೆ ಇದೆ. ನ್ಯಾಯ ಸಿಗಬೇಕು. ಮತ್ತೆ ಈ ರೀತಿಯ ಘಟನೆಗಳು ನಡೆಯಬಾರದು. ಪಾಪದವರು ಪೊಲೀಸರಿಗೆ ಬಲಿಯಾಗಬಾರದು.

ನಿರೂಪಣೆ: ಎಸ್.ಬಿ.ದೇವರಾಜ










Promotional Feature

ಯಶಸ್ವಿ ಉದ್ಯಮಿ ಕೆ.ಬಿ.ಲಿಂಗರಾಜು ಯಶೋಗಾಥೆ

ಸೂಕ್ಷ್ಮ, ಸಣ್ಣ-ಮಧ್ಯಮ ಕೈಗಾರಿಕೆಗಳ ಪ್ರತಿನಿಧಿಸುವ ಎಂಸಿಸಿಐ ಸಾರಥಿಯಾಗಿ ಸಮರ್ಥ ಕಾರ್ಯನಿರ್ವಹಣೆ



ರೈತ ಕುಟುಂಬದಲ್ಲಿ ಜನಿಸಿದ ಆ ಯುವಕನಲ್ಲಿ ಉದ್ಯಮ ಆರಂಭಿಸಬೇಕೆಂಬ ಛಲ ಮೂಡಿತ್ತು. ಈ ನಿಟ್ಟಿನಲ್ಲಿ ಎದುರಾದ ಸವಾಲುಗಳನ್ನು ಸಮರ್ಥವಾಗಿ ನಿಭಾಯಿಸಿದ ಆ ಯುವಕ ಇದೀಗ ಯಶಸ್ವಿ ಹಿರಿಯ ಉದ್ಯಮಿಯಾಗಿದ್ದಾರೆ. ಹೌದು, ಅವರೇ ಮೈಸೂರಿನ ಹಂಚ್ಯಾ-ಕೊಪ್ಪಲಿನ ಹಿರಿಯ ಉದ್ಯಮಿ ಕೆ.ಬಿ.ಲಿಂಗರಾಜು.

ಈಗ 'ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ (ಎಂಸಿಸಿಐ)' ಅಧ್ಯಕ್ಷರೂ ಆಗಿ ಮಹತ್ವದ ಜವಾಬ್ದಾರಿಯನ್ನು ಅತ್ಯಂತ ಸಮರ್ಥವಾಗಿ ನಿರ್ವಹಿಸುತ್ತಿದ್ದಾರೆ. ಎಂಸಿಸಿಐ ಅಡಿಯಲ್ಲಿ ಬರುವ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಹಂತದ ಕೈಗಾರಿಕೋದ್ಯಮಗಳು ಹಾಗೂ ವಾಣಿಜ್ಯ ಸಂಸ್ಥೆಗಳ ಶ್ರೇಯೋಭಿವೃದ್ಧಿಗೆ ಅತ್ಯಂತ ಕ್ರಿಯಾಶೀಲರಾಗಿ ತೊಡಗಿಸಿಕೊಂಡಿದ್ದಾರೆ ಕೆ.ಬಿ.ಲಿಂಗರಾಜು.

ಜನಪರ ಹೋರಾಟ, ಸಮಾಜ ಸೇವೆ ಮೂಲಕ ಮೈಸೂರಿನ ಮಾದರಿ ವ್ಯಕ್ತಿಯಾಗಿ, ಸಂಘಟನೆ ಚತುರತೆಯ ಶಕ್ತಿಯಾಗಿ ತಮ್ಮ ವ್ಯಾಪ್ತಿಯ ಉದ್ಯಮ ಮತ್ತು ಸಂಸ್ಥೆಗಳನ್ನು ಮುನ್ನಡೆಯುತ್ತಿದ್ದಾರೆ. ಕೈಗಾರಿಕಾ ಕ್ಷೇತ್ರ ವಿಸ್ತಾರವಾಗಿ ಬೆಳೆಯುವ ಮೂಲಕ ನಿರುದ್ಯೋಗ ಸಮಸ್ಯೆ ನಿವಾರಣೆಯಾಗಬೇಕೆಂಬ ಆಶಯ ಹೊಂದಿರುವ ಅವರು ಎಂಸಿಸಿಐ ಸಾರಥಿಯಾಗಿ ಸಮರ್ಥವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಅವರು ಹಲವು ವಿಷಯಗಳ ಕುರಿತು ತಮ್ಮ ಅನಿಸಿಕೆ-ಅಭಿಪ್ರಾಯ ಹಂಚಿಕೊಂಡಿದ್ದಾರೆ.

* **ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ (ಎಂಸಿಸಿಐ) ಬಗ್ಗೆ ಹೇಳುವಿರಾ?**

ಕೆ.ಬಿ.ಲಿಂಗರಾಜು: ಸಣ್ಣ, ಅತಿಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ಹಾಗೂ ವಾಣಿಜ್ಯ ಸಂಸ್ಥೆಗಳನ್ನು ನಮ್ಮ ಸಂಸ್ಥೆ ಪ್ರತಿನಿಧಿಸುತ್ತದೆ. ನಮ್ಮ ಸಂಸ್ಥೆ ಇಡೀ ಮೈಸೂರು ಜಿಲ್ಲೆಯ ವ್ಯಾಪ್ತಿಯನ್ನು ಒಳಗೊಂಡಿದೆ. 1,600 ಉದ್ದಿಮೆಗಳ ಮಾಲೀಕರು ನಮ್ಮ ಸಂಸ್ಥೆಯ ಸದಸ್ಯತ್ವ ಹೊಂದಿದ್ದಾರೆ. ಅಲ್ಲದೆ, 35 ಸಂಘ-ಸಂಸ್ಥೆಗಳು ನಮ್ಮ ಸಂಸ್ಥೆಯ ಅಂಗ ಸಂಸ್ಥೆಗಳಾಗಿ ಕಾರ್ಯನಿರ್ವಹಿಸುತ್ತಿವೆ. ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ (ಎಫ್‌ಕೆಸಿಸಿಐ) ಅಂಗಸಂಸ್ಥೆಯಾಗಿ ಎಂಸಿಸಿಐ ತನ್ನ ಸದಸ್ಯತ್ವ ಹೊಂದಿರುವ ಉದ್ದಿಮೆಗಳ ಹಿತಾಸಕ್ತಿಗಳಿಗೆ ಅನುಗುಣವಾಗಿ ಕೆಲಸ ಮಾಡುತ್ತಿದೆ. ಎಂಸಿಸಿಐ ಸ್ಥಾಪನೆಯಾಗಿ 60ಕ್ಕೂ ಹೆಚ್ಚು ವರ್ಷಗಳಾಗಿವೆ.

* **ಸಣ್ಣ, ಅತಿಸಣ್ಣ, ಮಧ್ಯಮ ಕೈಗಾರಿಕೆ ಬೆಳವಣಿಗೆಗೆ ಸರ್ಕಾರದ ಮುಂದೆ ನಿಮ್ಮ ಬೇಡಿಕೆಗಳೇನು? ಸರ್ಕಾರ ಯಾವೆಲ್ಲ ಬೇಡಿಕೆಗಳಿಗೆ ಸ್ಪಂದಿಸಿದೆ?**

ಕೆ.ಬಿ.ಲಿಂಗರಾಜು: ಈ ವಿಧದ ಕೈಗಾರಿಕೆಗಳು, ವಾಣಿಜ್ಯ ಸಂಸ್ಥೆಗಳು ಉಳಿದು ಬೆಳೆಯಲು ಸರ್ಕಾರಗಳ ಮುಂದೆ ಅನೇಕ ಬೇಡಿಕೆಗಳನ್ನು ಸಲ್ಲಿಸುತ್ತಲೇ ಬರಲಾಗುತ್ತಿದೆ. 2 ಕೋಟಿ ಬಂಡವಾಳದ ಮಿತಿ ಹೊಂದಿರುವ ಕೈಗಾರಿಕೆಗಳನ್ನು ಸಣ್ಣ ಕೈಗಾರಿಕೆ ಎಂದು ವರ್ಗೀಕರಿಸಲಾಗಿತ್ತು. ಇದೀಗ ಅದು 5 ಕೋಟಿ ರೂ.ಗೆ ಹೆಚ್ಚಳಗೊಂಡಿದೆ. ಪರಿಣಾಮ 2 ಕೋಟಿ ರೂ. ಬಂಡವಾಳ ತೊಡಗಿಸುವ ಉದ್ದಿಮೆಗಳಿಗೆ ಸರ್ಕಾರದ ಪ್ರಯೋಜನಗಳು ಬಹುತೇಕ ಇಲ್ಲವಾಗುತ್ತಿವೆ. ಸದ್ಯ ಸಿಗುತ್ತಿರುವ ಸರ್ಕಾರಗಳ ಅನೇಕ ಸೌಲಭ್ಯಗಳು ಸಣ್ಣ ಉದ್ದಿಮೆಗಳ ಕೈತಪ್ಪುವಂತಾಗಿದೆ.

* **ಮೈಸೂರು ಕೈಗಾರಿಕಾ ಪಟ್ಟಣ ಪ್ರಾಧಿಕಾರ ರಚನೆ ಬಗ್ಗೆ ಏನು ಹೇಳುವಿರಿ?**

ಕೆ.ಬಿ.ಲಿಂಗರಾಜು: ಕೈಗಾರಿಕಾ ಪಟ್ಟಣ ಪ್ರಾಧಿಕಾರ (ಟೌನ್‌ಶಿಪ್) ರಚಿಸಲು 2003ರಲ್ಲಿ ಗೆಜೆಟ್ ಅಧಿಸೂಚನೆ ಆಗಿದೆ. ಆದಾಗ್ಯೂ ಪ್ರಾಧಿಕಾರ ರಚನೆಯಾಗಿಲ್ಲ. ಕೆಐಎಡಿಬಿ ಹಾಗೂ ಪಾಲಿಕೆ ಸೇರಿದಂತೆ ಸ್ಥಳೀಯ ಸಂಸ್ಥೆಗಳಿಗೆ ತೆರಿಗೆ ಪಾವತಿ ಮಾಡಲಾಗುತ್ತಿದೆ. ಇದನ್ನು ತಪ್ಪಿಸಲು ಮೈಸೂರು ಕೈಗಾರಿಕಾ ಪಟ್ಟಣ ಪ್ರಾಧಿಕಾರ ಸ್ಥಾಪನೆಯೊಂದೇ ಪರಿಹಾರ. ಪ್ರಾಧಿಕಾರ ರಚನೆಗೆ ಸರ್ಕಾರ ಶೀಘ್ರ ಕ್ರಮ ವಹಿಸಬೇಕು.

* **ನಿಮ್ಮ ಸಂಘದ ವ್ಯಾಪ್ತಿಯ ಉದ್ದಿಮೆಗಳಿಗೆ ಮೂಲಭೂತ ಸೌಲಭ್ಯ ಸಮರ್ಪಕವಾಗಿ ದೊರಕುತ್ತಿದೆಯೇ?**

ಕೆ.ಬಿ.ಲಿಂಗರಾಜು: ಹೆಚ್ಚು ಪ್ರಮಾಣದ ತೆರಿಗೆ ಪಾವತಿ ಮಾಡುತ್ತಿದ್ದೇವೆ. ಆದರೆ ಸ್ಥಳೀಯ ಸಂಸ್ಥೆಗಳು ಹಾಗೂ ಕೆಐಎಡಿಬಿಯಿಂದ ಮೂಲಭೂತ ಸೌಲಭ್ಯಗಳು ಸಮರ್ಪಕವಾಗಿ ದೊರೆಯುತ್ತಿಲ್ಲ. ಉದಾಹರಣೆಗೆ ಹೆಬ್ಬಾಳು ಕೈಗಾರಿಕಾ ಪ್ರದೇಶದ ಮೂರು ಹಂತಗಳ ಅಭಿವೃದ್ಧಿ ಸಂಬಂಧ 8 ಕೋಟಿ ರೂ. ವೆಚ್ಚದ ಡಿಪಿಆರ್ ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಆದರೆ ತಾಂತ್ರಿಕ ಸಮಸ್ಯೆ ಕಾರಣಕ್ಕೆ ಸರ್ಕಾರ ಅನುಮೋದಿಸಿಲ್ಲ. ಸರ್ಕಾರ ಡಿಪಿಆರ್ ವಾಪಸ್ ಕಳುಹಿಸಿ ವರ್ಷವಾದರೂ ಸರಿಪಡಿಸುವ ಗೋಜಿಗೆ ಸಂಬಂಧಿಸಿದವರು ಪ್ರಯತ್ನಿಸಿದಂತೆ ಕಾಣುತ್ತಿಲ್ಲ. ಜೊತೆಗೆ ಹೆಬ್ಬಾಳು ಎರಡನೇ ಹಂತಕ್ಕೆ ಇನ್ಫೋಸಿಸ್‌ಗೆ ಬರುವ ನಗರ ಸಾರಿಗೆ ಬಸ್‌ಗಳನ್ನು ವಿಸ್ತರಿಸಬೇಕೆಂದು ಮನವಿ ಮಾಡಲಾಗಿದೆ. ಆದರೆ ಇದಿನ್ನೂ ಈಡೇರಿಲ್ಲ. ಇಲ್ಲಿಗೆ ಇನ್ಫೋಸಿಸ್‌ನಿಂದ ಕೇವಲ ಒಂದು ಕಿ.ಮೀ. ಅಂತರವಿದೆ. ಹಾಗಾಗಿ ಇದನ್ನು ಮಾಡುವುದು ಕಷ್ಟವೇನಲ್ಲ. ಇದು ಇಲ್ಲಿನ ಕಾರ್ಮಿಕರಿಗೆ ಅನುಕೂಲವಾಗಲಿದೆ. ಮೊನ್ನೆ ಸಾರಿಗೆ ಸಚಿವ ರಾಮಲಿಂಗ ರೆಡ್ಡಿಯವರಿಗೆ ಈ ಸಂಬಂಧ ಮನವಿ ಮಾಡಿದ್ದು, ಅವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ.

* **ಸಣ್ಣ-ಮಧ್ಯಮ ಉದ್ದಿಮೆಗಳಿಗೆ ಬ್ಯಾಂಕ್ ಸಾಲ ನೀಡುವ ಕ್ರಮದಲ್ಲಿ ಸರಳೀಕರಣ ಆಗುವ ಅಗತ್ಯವಿದೆಯೇ?**

ಕೆ.ಬಿ.ಲಿಂಗರಾಜು: ಈ ಹಿಂದೆ ಸಣ್ಣ ಕೈಗಾರಿಕೆಗಳಿಗೆ ಬ್ಯಾಂಕ್ ಸಾಲ ಸೌಲಭ್ಯ ಸರಳವಾಗಿತ್ತು. ಈಗ ಸಾಲ ಕೊಡುವ ವ್ಯವಸ್ಥೆ ಬದಲಾಗಿದೆ. ಅದರ ಅರ್ಹತೆಯ ರೀತಿಯಲ್ಲಿ ಮರುಚಿಂತನೆಯಾಗಬೇಕಿದೆ. ಕಾರಣ ಸಿಬಿಲ್ ಸ್ಕೋರ್ ಆಧಾರದಲ್ಲಿ ಸಾಲಸೌಲಭ್ಯ ನೀಡುವ ವ್ಯವಸ್ಥೆ ಇದೆ. ಆದರೆ ಕೋವಿಡ್ ಕಾರಣದಿಂದ ಉದ್ದಿಮೆಗಳಿಗೆ ಅನಾನುಕೂಲ ಉಂಟಾಗಿ ಸಿಬಿಲ್ ಸ್ಕೋರ್ ಕಾಯ್ದುಕೊಳ್ಳಲು ಸಾಧ್ಯವಾಗಿಲ್ಲ. ಹಾಗಾಗಿ ಸಿಬಿಲ್ ಸ್ಕೋರ್ ವಿಧಾನ ಕೈಬಿಡಬೇಕೆಂಬುದು ನಮ್ಮ ಒತ್ತಾಯವಾಗಿದೆ.

* **ಮೈಸೂರು ಜಿಲ್ಲೆಯಲ್ಲಿ ಬೃಹತ್ ಕೈಗಾರಿಕೆಗಳ ಸ್ಥಾಪನೆ ಅಗತ್ಯವಿದೆಯೇ?**

ಕೆ.ಬಿ.ಲಿಂಗರಾಜು: ಇನ್ವೆಸ್ಟ್ ಕರ್ನಾಟಕ ಸಮಾವೇಶದಲ್ಲಿ ಪಾಲ್ಗೊಂಡಿದ್ದೆ. ಬೃಹತ್ ಕೈಗಾರಿಕೆ ಆರಂಭಿಸಲು ಅಂದಾಜು 100 ಎಕರೆ ಭೂಮಿ ಬೇಕೆಂಬ ಬೇಡಿಕೆಗಳು ಕೇಳಿ ಬಂದವು. ಈ ಕೈಗಾರಿಕೆಗಳಿಗೆ ಭೂಮಿ ಕಲ್ಪಿಸಿದರೆ ಸ್ಥಳೀಯವಾಗಿ ನಿರುದ್ಯೋಗ ನಿವಾರಣೆಗೆ ಅನುಕೂಲವಾಗಲಿದೆ. ಗ್ರಾಮೀಣ ಪ್ರದೇಶದ ಯುವ ಜನರು ಉದ್ಯೋಗಿಗಳಾಗಿ ಬದುಕು ರೂಪಿಸಿಕೊಳ್ಳಲು ಪೂರಕವಾದ ವಾತಾವರಣ ನಿರ್ಮಾಣವಾಗುತ್ತದೆ.

ಮೈಸೂರು ವ್ಯಾಪ್ತಿಯಲ್ಲಿ ಬೃಹತ್ ಕೈಗಾರಿಕೆಗಳನ್ನು ಸ್ಥಾಪಿಸಲು ಅನುಕೂಲ ಮಾಡಿಕೊಡುವಂತೆ ಮುಖ್ಯಮಂತ್ರಿಗಳಿಗೆ ಮನವಿ ಮಾಡಿದ್ದೇವೆ. ಬೃಹತ್ ಕೈಗಾರಿಕೆಗಳ ಸ್ಥಾಪನೆಯಿಂದ ಸಣ್ಣ ಕೈಗಾರಿಕೆಗಳ ಮೇಲೆ ಯಾವುದೇ ವ್ಯತಿರಿಕ್ತ ಪರಿಣಾಮ ಉಂಟಾಗುವುದಿಲ್ಲ. ಬದಲಿಗೆ ಬೃಹತ್ ಕೈಗಾರಿಕೆಗಳಿಗೆ ಅಗತ್ಯವಾದ ಬಿಡಿಭಾಗ, ಸರಕು-ಸಲಕರಣೆ ಉತ್ಪಾದಿಸಿ ಪೂರೈಸಲು ಸಣ್ಣ ಕೈಗಾರಿಕೆಗಳಿಗೆ ಅವಕಾಶವಾಗಲಿದೆ.

* **ಅಂದಿನ ಮೈಸೂರು ಸಂಸ್ಥಾನದಲ್ಲಿ ಮಹಾರಾಜರು ಕೈಗಾರಿಕಾ ಕ್ಷೇತ್ರಕ್ಕೆ ನೀಡಿದ ಕೊಡುಗೆ ಬಗ್ಗೆ ಏನು ಹೇಳುವಿರಿ?**

ಕೆ.ಬಿ.ಲಿಂಗರಾಜು: ಮಹಾರಾಜರ ಕೊಡುಗೆ ಅಪಾರವಾಗಿದೆ. ಅವರ ದೂರದೃಷ್ಟಿ ಆಡಳಿತದಲ್ಲಿ ಮೈಸೂರು ಅಂತಾರಾಷ್ಟ್ರೀಯ ಮಟ್ಟದ ಉದ್ದಿಮೆಗಳ ಸ್ಥಾಪನೆಗೆ ವೇದಿಕೆಯಾಯಿತು. ಎಂಸಿಸಿಐ ಸ್ಥಾಪನೆಯಾಗಿ 60ಕ್ಕೂ ಹೆಚ್ಚು ವರ್ಷಗಳಾಗಿವೆ. ಪ್ರಸಿದ್ಧ ಐಡಿಯಲ್ ಜಾವಾ ಮೋಟಾರ್ ಸೈಕಲ್ ಕಂಪನಿ ಸಂಸ್ಥಾಪಕ ಎಫ್.ಕೆ.ಇರಾನಿ, ಶಾಸಕರಾಗಿದ್ದ ಜಯದೇವರಾಜ ಅರಸು, ಬಿ.ಸಿ.ಲಿಂಗಯ್ಯ ಮತ್ತು ಕೊಪ್ಪಲು ಬಸವಯ್ಯ ಸೇರಿದಂತೆ ಅಂದಿನ ಉದ್ಯಮಿಗಳು ಮೈಸೂರು ವಾಣಿಜ್ಯ ಮತ್ತು ಕೈಗಾರಿಕೆ ಸಂಸ್ಥೆ ಸ್ಥಾಪನೆ ಮಾಡಿದರು.

ಆರಂಭದಲ್ಲಿ ಪ್ರಭಾ ಚಿತ್ರಮಂದಿರದ ಮಾಲೀಕ ವಾಸುದೇವಮೂರ್ತಿ ಅವರ ಕಚೇರಿಯಲ್ಲಿ ಸಂಸ್ಥೆ ಕಾರ್ಯಾರಂಭ ಮಾಡಿತು. ನಂತರ ಕಚೇರಿಯನ್ನು ದಸರಾ ವಸ್ತು ಪ್ರದರ್ಶನದ ಆವರಣಕ್ಕೆ ಸ್ಥಳಾಂತರಿಸಲಾಯಿತು. ಇದೀಗ ಮೈಸೂರಿನ ದೇವರಾಜ ಅರಸು ರಸ್ತೆಯಲ್ಲಿ ಸ್ವಂತ ಕಟ್ಟಡದಲ್ಲಿ ಸಂಸ್ಥೆಯ ಕಚೇರಿ ಕಾರ್ಯನಿರ್ವಹಣೆ ಮಾಡುತ್ತಿದೆ.

* **ತಾವು ಒಬ್ಬ ಕೈಗಾರಿಕೋದ್ಯಮಿ ಜಿಗೆ. ಸಣ್ಣ ಕೈಗಾರಿಕೆ ಮತ್ತು ವಾಣಿಜ್ಯ ಸಂಸ್ಥೆಗಳ ಪ್ರತಿನಿಧಿಸುವ ಸಂಸ್ಥೆಯ ಅಧ್ಯಕ್ಷರಾಗಿ ನಿಮ್ಮ ಮುಂದಿನ ಯೋಜನೆಗಳೇನು?**

ಕೆ.ಬಿ.ಲಿಂಗರಾಜು: ಎಂಸಿಸಿಐ ಸಂಸ್ಥೆ ಹೆಬ್ಬಾಳದಲ್ಲಿ ಒಂದು ಎಕರೆ ಭೂಮಿ ಹೊಂದಿದ್ದು, ಇಲ್ಲಿ ಸಂಶೋಧನಾ ಮತ್ತು ತರಬೇತಿ ಕೇಂದ್ರ ಆರಂಭಕ್ಕೆ ಯೋಜನೆ ರೂಪಿಸಲಾಗಿದೆ. ವರುಣ ವ್ಯಾಪ್ತಿಯಲ್ಲಿ ಜಿಟಿಟಿಸಿ (ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ) ಸ್ಥಾಪನೆ ಮಾಡಲಾಗಿದೆ. ಅದೇ ಮಾದರಿಯಲ್ಲಿ ನಮ್ಮ ಉದ್ದೇಶಿತ ಕೇಂದ್ರ ಕಾರ್ಯ ನಿರ್ವಹಿಸಬೇಕೆಂಬ ಉದ್ದೇಶ ಹೊಂದಲಾಗಿದೆ. ಇಂತಹ ಒಂದು ಕೇಂದ್ರದಿಂದ ನವೋದ್ಯಮಿಗಳಿಗೆ ಅನುಕೂಲವಾಗಲಿದೆ. ಸರ್ಕಾರದ ಯೋಜನೆಗಳು ಅನುಷ್ಠಾನ ಹಂತದಲ್ಲಿ ಉದ್ದಿಮೆಗಳ ಸ್ನೇಹಿಯಾಗಬೇಕು. ಅತಿಯಾದ ಷರತ್ತುಗಳನ್ನು ವಿಧಿಸಿ ಯೋಜನೆ ಉದ್ದೇಶವೇ ಈಡೇರದಂತೆ ಮಾಡಬಾರದು. ಪ್ರಸ್ತುತದಲ್ಲಿ ಇದೇ ಹೆಚ್ಚು ಆಗುತ್ತಿದ್ದು, ದೇವರು ವರ ಕೊಟ್ಟರೂ ಪೂಜಾರಿ ಕೊಡುವುದಿಲ್ಲ ಎಂಬ ಗಾದೆ ಮಾತಿನಂತೆ ಸರ್ಕಾರ ಕೊಟ್ಟರೂ ಯೋಜನೆ ಅನುಷ್ಠಾನಗೊಳಿಸುವ ವಿವಿಧ ಹಂತದಲ್ಲಿ ಸೂಕ್ತ ಕ್ರಮ ಆಗುತ್ತಿಲ್ಲ.

ದೇವಾಲಯದ ಜೀರ್ಣೋದ್ಧಾರ, ಹೆಬ್ಬಾಳು ಕೆರೆ ಅಭಿವೃದ್ಧಿಗೂ ಕೈಜೋಡಣೆ

ಹೆಬ್ಬಾಳಿನಲ್ಲಿರುವ ಮುಜರಾಯಿ ಇಲಾಖೆಗೆ ಸೇರಿದ ಲಕ್ಷ್ಮೀಕಾಂತಸ್ವಾಮಿ ದೇವಾಲಯ ಇಂದು ಇನ್ಫೋಸಿಸ್ ಸಂಸ್ಥೆ ಆಶ್ರಯದಲ್ಲಿ ಜೀರ್ಣೋದ್ಧಾರಗೊಂಡಿದೆ. ಈ ಕಾರ್ಯಕ್ಕೂ ಕೆ.ಬಿ.ಲಿಂಗರಾಜು ಅವರ ಶ್ರಮವೂ ಸಾಕಷ್ಟಿದೆ. ಅಲ್ಲದೆ, ಹೆಬ್ಬಾಳು ಕೆರೆಯನ್ನು ಇನ್ಫೋಸಿಸ್‌ನಿಂದ ಅಭಿವೃದ್ಧಿಗೊಳಿಸಲೂ ಮಾಜಿ ಎಂಎಲ್‌ಸಿ ಡಿ.ಮಾದೇಗೌಡ ಮತ್ತು ಗುಂಡಪ್ಪಗೌಡ ಅವರ ಜೊತೆಗೂಡಿ ಕೈಜೋಡಿಸಿದರು.

ಸಂದ ಪ್ರಶಸ್ತಿ ಪುರಸ್ಕಾರಗಳು

* ಎಫ್‌ಕೆಸಿಸಿಐ ಮತ್ತು ಆರ್‌ಡಿಸಿಸಿಐನ ರಾಜ್ಯಮಟ್ಟದ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಗಳ ಸಮ್ಮೇಳನ ಪ್ರಶಸ್ತಿ – 2023
* ಐಕೆ ಅಚೀವರ್ಸ್ ಆಫ್ ಕರ್ನಾಟಕ – 2023 ಪ್ರಶಸ್ತಿ
* ಕರ್ನಾಟಕ ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆಯಿಂದ ಆದರ್ಶ ಪುರುಷ ಪ್ರಶಸ್ತಿ – 2024
* ಅರಿವು ಸಂಸ್ಥೆಯಿಂದ ಅರಿವು ಸೇವಾ ರತ್ನ ಪ್ರಶಸ್ತಿ – 2024
* ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ ವತಿಯಿಂದ ಚಾಣಕ್ಯ ಸೇವಾ ರತ್ನ ಪ್ರಶಸ್ತಿ – 2024
* ಕರ್ನಾಟಕ ಸೇನಾ ಪಡೆ ವತಿಯಿಂದ ಕರ್ನಾಟಕ ಸುವರ್ಣ ಸಂಭ್ರಮ ಸೇವಾ ಪ್ರಶಸ್ತಿ –2024
* ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮೈಸೂರು ವತಿಯಿಂದ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ–2024
* ಸುವರ್ಣ ಕರ್ನಾಟಕ ಕಾರ್ಮಿಕರ ವೇದಿಕೆ ವತಿಯಿಂದ 'ಹೆಮ್ಮೆಯ ಕರ್ನಾಟಕ ರತ್ನ – 2024 ಪ್ರಶಸ್ತಿ
* ಅರಸು ಜಾಗೃತಿ ಅಕಾಡೆಮಿ ಮತ್ತು ಅರಸು ಪತ್ರಿಕೆ ವತಿಯಿಂದ ಧ್ವನಿ ಕೊಟ್ಟ ಧಣಿ ಪ್ರಶಸ್ತಿ – 2019
* ದಿ ಆಯರ್ನವರ್ಸ್ ಎಕ್ಸ್‌ಪ್ರೆಸ್; ಇನ್‌ಸ್ಪಿರಿಂಗ್ ಲೀಡರ್ಸ್ ಅವಾರ್ಡ್ – 2023
* 'ಏಷ್ಯಾನೆಟ್–ಸುವರ್ಣ ನ್ಯೂಸ್' ಮತ್ತು 'ಕನ್ನಡ ಪ್ರಭ' ವತಿಯಿಂದ ಸುವರ್ಣ ಕನ್ನಡಿಗ ಪ್ರಶಸ್ತಿ–2025

ಇನ್ನೂ ಹಲವು ಪ್ರಶಸ್ತಿ ಪುರಸ್ಕಾರಗಳಿಗೆ ಕೆ.ಬಿ.ಲಿಂಗರಾಜು ಭಾಜನರಾಗಿದ್ದಾರೆ.

ಸ್ಫೂರ್ತಿ ಹಾಗೂ ಮಾರ್ಗದರ್ಶನ

* ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ ಮಾಜಿ ಅಧ್ಯಕ್ಷರಾದ ಸುಧಾಕರ್ ಎಸ್. ಶೆಟ್ಟಿ ಇವರ ಮಾರ್ಗದರ್ಶನ.
* ವರ್ಷಾ ಅಸೋಸಿಯೇಟ್ಸ್‌ನ ಬಿ. ಕುಮಾರ್ ಇವರ ಮಾರ್ಗದರ್ಶನ.
* ಎ.ಆರ್. ವೇಣುಗೋಪಾಲ್ ರವರ ಆರ್ಥಿಕ ಸಹಾಯ ಮತ್ತು ದೂರದೃಷ್ಟಿ ಚಿಂತನೆಯಿಂದ ಸಣ್ಣ ಸಂಸ್ಥೆಯಲ್ಲಿ ಮುಖಂಡನಾಗಿ ಬೆಳವಣಿಗೆ ಹಾಗೂ ಯಶಸ್ವಿ ಉದ್ಯಮಿಯಾಗಲು ಕಾರಣೀಭೂತರು.

ಉದ್ಯೋಗದಾತರಾಗಿಯೂ ಕೊಡುಗೆ

1958ರಲ್ಲಿ ಮೈಸೂರಿನ ಹಂಚ್ಯಾ-ಕೊಪ್ಪಲಿನಲ್ಲಿ ಭೈರಪ್ಪ ಮತ್ತು ಲಕ್ಷ್ಮಮ್ಮ ದಂಪತಿ ಪುತ್ರರಾಗಿ ಕೆ.ಬಿ.ಲಿಂಗರಾಜು ಜನಿಸಿದರು. ಬಾಲ್ಯದಿಂದಲೇ ಸಮಾಜ ಸೇವೆ ಮೂಲಕ ಇವರು ಗುರುತಿಸಿಕೊಂಡರು. ಇಟ್ಟಿಗೆ ತಯಾರಿಕಾ ಕಾರ್ಖಾನೆಯ ಮೂಲಕ ಒಬ್ಬ ಉದ್ಯಮಿಯಾಗಿ ಬೆಳೆದರು. ಆ ಬಳಿಕ ಕೈಗಾರಿಕೋದ್ಯಮಿಗಳ ಸಮಸ್ಯೆಗಳ ವಿರುದ್ಧ ಹೋರಾಟದಲ್ಲಿ ಧುಮುಕಿದ ಇವರು ಒಬ್ಬ ನಾಯಕನಾಗಿ ಹೊರಹೊಮ್ಮಿದರು.

ವಿದ್ಯಾಭ್ಯಾಸ ಬಳಿಕ ವಿಧಾನ ಪರಿಷತ್ ಮಾಜಿ ಸದಸ್ಯ ಡಿ.ಮಾದೇಗೌಡ ಅವರ ಬೆಂಬಲದಿಂದ ಲಿಂಗರಾಜು ಅವರು ಇಟ್ಟಿಗೆ ತಯಾರಿಕಾ ಕಾರ್ಖಾನೆ ಆರಂಭ ಮಾಡಿದರು. ಆ ಬಳಿಕ ಪೈಪ್ ತಯಾರಿಕಾ ಕಾರ್ಖಾನೆ ಹಾಗೂ ಮುಳ್ಳುತಂತಿ, ಚೈನ್‌ಲಿಂಕ್ ಫೆನ್ಸಿಂಗ್ ಸೇರಿದಂತೆ ನಾನಾ ಕಾರ್ಖಾನೆಗಳನ್ನು ಸ್ಥಾಪಿಸಿದರು. ಇದೀಗ ಅವರ ಪುತ್ರನಾಗಿ ಕಾಂಕ್ರೀಟ್ ಬ್ಲಾಕ್, ಸಿಮೆಂಟ್ ಇಟ್ಟಿಗೆ ತಯಾರಿಕೆ ಕಾರ್ಖಾನೆಯನ್ನು ಪ್ರಾರಂಭಿಸಿದ್ದಾರೆ. ಪುತ್ರ ಕಿರಣ್ ರಾಜ್ ತಮ್ಮ ತಂದೆ ವಹಿಸಿದ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿಭಾಯಿಸುತ್ತಿದ್ದಾರೆ. ಒಟ್ಟಾರೆ ಲಿಂಗರಾಜು ಅವರು ಯಶಸ್ವಿ ಉದ್ಯಮಿ ಆಗಿ ಉದ್ಯೋಗದಾತರಾಗಿಯೂ ತಮ್ಮದೇ ಆದ ವಿಶಿಷ್ಟ ಕೊಡುಗೆಯನ್ನು ಸಮಾಜಕ್ಕೆ ನೀಡುತ್ತಿದ್ದಾರೆ.



46
ಮೈಸೂರು ಮಿತ್ರ
ನಿಮ್ಮ ಮೆಚ್ಚಿನ ಕನ್ನಡ ದಿನಪತ್ರಿಕೆ
46 ನೇ ವರ್ಷಕ್ಕೆ
ಪಾದಾರ್ಪಣೆ ಮಾಡುತ್ತಿರುವ ಕನ್ನಡ ದಿನಪತ್ರಿಕೆ
ಮೈಸೂರು ಮಿತ್ರನಿಗೆ
ಶುಭಾಶಯಗಳು
ಶುಭಕೋರುವವರು:
ಮಂಜೇಗೌಡ.ಸಿ.ಎನ್
ಶಾಸಕರು, ಕರ್ನಾಟಕ ವಿಧಾನ ಪರಿಷತ್
ಮೈಸೂರು-ಚಾಮರಾಜನಗರ ಜಿಲ್ಲೆ

ಮೈಸೂರ ಮೊದಲ ಮಹಿಳಾ ಕೊರಿಯರ್

ಜೀವನಕ್ಕಿಂತ ಮಗು, ಬ್ಯಾಗ್ ಭಾರ ಹೊರೆ ಅಲ್ಲ ಅನ್ನಿಸುತ್ತಿದೆ!



● ಎಂ.ಟಿ.ಯೋಗೇಶ್ ಕುಮಾರ್

ಅನಾರೋಗ್ಯದಿಂದ ಬಳಲುತ್ತಿದ್ದ ಹೆತ್ತಮ್ಮನ ರಕ್ಷಣೆಗೆ ಮಾಡಿದ ಸಾಲದ ಸುಳಿಗೆ ಸಿಲುಕಿದ ಮಗಳು, ಒಂದೂವರೆ ವರ್ಷದ ಮಗುವಿನೊಂದಿಗೆ ಬೆನ್ನಿನ ಮೇಲೆ ಭಾರದ ಬ್ಯಾಗ್ ಹೊತ್ತು, ಮನೆ ಮನೆಗೆ ಕೊರಿ ಯರ್ ತಲುಪಿಸುವ ಕಾಯಕ ಮಾಡುವ ಮೂಲಕ ಸಂಕಷ್ಟಕ್ಕೆ ಸವಾಲೊಡ್ಡಿ ನಿಂತಿದ್ದಾರೆ.

ಸಾಂಸ್ಕೃತಿಕ ನಗರಿ ಮೈಸೂರಿನ ಮೊದಲ 'ಮಹಿಳಾ ಕೊರಿಯರ್' ಹೆಗ್ಗಳಿಕೆಗೂ ಪಾತ್ರವಾಗಿರುವ ಮೈಸೂರಿನ ಸುಣ್ಣದ ಕೇರಿ, 6ನೇ ಕ್ರಾಸ್ ನಿವಾಸಿ ಅನು, ಜೀವನದ ಸವಾಲುಗಳ ಎದುರಿಸಲು ಕಷ್ಟಕರ ವೃತ್ತಿಯನ್ನು ನಿಭಾಯಿಸಿ, ಕರುಳ ಕುಡಿಯ ರಕ್ಷಣೆಯೊಂದಿಗೆ ತಾಯಿಯ ಸಾಲ ತೀರಿಸಲು ಶ್ರಮಿಸುತ್ತಿದ್ದಾರೆ.

ಎರಡು ವರ್ಷದ ಹಿಂದೆ ಅನಾರೋಗ್ಯಕ್ಕೆ ತುತ್ತಾದ ತಾಯಿಗೆ ಕೈ ಸಾಲ, ಖಾಸಗಿ ಬ್ಯಾಂಕ್‌ನಲ್ಲಿ ಸಾಲ ಮಾಡಿ ಚಿಕಿತ್ಸೆ ಕೊಡಿಸಿದರೂ, ಉಳಿಸಿಕೊಳ್ಳಲು ಆಗಲಿಲ್ಲ. ಪತಿಯ ಅಸಹಕಾರದಿಂದಾಗಿ ತಾಯಿಗಾಗಿ ಮಾಡಿದ ಸಾಲ ತೀರಿಸಲು ಇದೀಗ ಸಹೋದರನೊಂದಿಗೆ ಸುಣ್ಣದಕೇರಿಯ ತಮ್ಮ ನಿವಾಸದಲ್ಲಿ ವಾಸಿಸುತ್ತಿರುವ ಅನುಗೆ ಖಾಸಗಿ ಕೊರಿಯರ್ ಕಂಪನಿಗಳ ಆಡಳಿತ ವರ್ಗ ಹಾಗೂ ಸಿಬ್ಬಂದಿ ಮಾನವೀಯ ನೆಲೆಗಟ್ಟಿನಲ್ಲಿ ಕೆಲಸ ನೀಡಿ, ಸಂಕಷ್ಟದಲ್ಲಿ ವೇಳೆ ನೆರವಿಗೆ ನಿಂತಿದ್ದಾರೆ.



ಅನಿವಾರ್ಯವಾದ ಉದ್ಯೋಗ: ಅನು ಅವರಿಗೆ ಉದ್ಯೋಗದ ಅವಶ್ಯಕತೆ ಇತ್ತು. ಆದರೆ, ಚಿಕ್ಕ ಮಗು ಪಾಲನೆಯೊಂದಿಗೆ ಉದ್ಯೋಗ ಮಾಡಲು ಎಲ್ಲೂ ಅವಕಾಶ ಸಿಗದ ಕಾರಣ ಕಂಗೆಟ್ಟಿದ್ದರು. ಈ ಸಂದರ್ಭದಲ್ಲಿ ಕೊರಿಯರ್ ಸಂಸ್ಥೆಯೊಂದು ಕಳೆದ ಆರು ತಿಂಗಳ ಹಿಂದೆ ಕರೆದು ಉದ್ಯೋಗ ನೀಡಿದೆ. ಜೊತೆಗೆ ಮಗುವನ್ನು ಜೊತೆಯಲ್ಲೇ ಕರೆದುಕೊಂಡು ಹೋಗಲು ಅವಕಾಶವನ್ನು ನೀಡಿದೆ. ಇದರಿಂದ ಮಂಡಿಮೊಹಲ್ಲಾ ಮಾರ್ಗದ ವಿವಿಧ ಬಡಾವಣೆಗಳ ಮನೆಗಳಿಗೆ ಕೊರಿಯರ್ (ಪಾರ್ಸೆಲ್) ತಲುಪಿಸುವ ಜವಾಬ್ದಾರಿ ಅನು ಅವರಿಗೆ ನೀಡಿದ್ದಾರೆ. ಅನು ಅವರ ಕಷ್ಟಕ್ಕೆ ನೆರವಾಗುವ ನಿಟ್ಟಿನಲ್ಲಿ ಮತ್ತೊಂದು ಕೊರಿಯರ್ ಸಂಸ್ಥೆಯೂ ತನ್ನ ಕೊರಿಯರ್ ತಲುಪಿಸುವ ಕೆಲಸವನ್ನು ವಹಿಸಿದೆ. ಇದರಿಂದ ಅನು ಅವರಿಗೆ ಸ್ವಲ್ಪಮಟ್ಟಿಗೆ ನೆರವಾಗಿದೆ.

ಜೀವನದ ಮುಂದೆ ಕೆಲಸ ಕಷ್ಟ ಎನಿಸಲಿಲ್ಲ: ಅಮ್ಮನನ್ನು ಬದುಕಿಸಿಕೊಳ್ಳಲು ಮಾಡಿದ ಸಾಲ ತೀರಿಸಲೇಬೇಕಾದ ಅನಿವಾರ್ಯತೆಯಲ್ಲಿ ಸಿಲುಕಿದ ನನಗೆ ಉದ್ಯೋಗದ ಅವಶ್ಯಕತೆ ಇತ್ತು. ಇಂತಹ ಸಂಕಷ್ಟ ಪರಿಸ್ಥಿತಿಯಲ್ಲಿ ಇ-ಕಾಮ್ ಎಕ್ಸ್‌ಪ್ರೆಸ್ ಸಂಸ್ಥೆ ನನಗೆ ಕೊರಿಯರ್ ತಲುಪಿಸುವ ಕೆಲಸ ನೀಡಿತು. ಒಂದೂವರೆ ವರ್ಷದ ಮಗ ಶ್ರೀವತ್ಸನನ್ನು ಜೊತೆಗಿಟ್ಟುಕೊಂಡು ವೃತ್ತಿ ಮಾಡಲು ಸಂಸ್ಥೆ ಅನುಮತಿಸಿತು. ಆರು ತಿಂಗಳ ಹಿಂದೆ ಕೊರಿಯರ್ ಸೇವೆ ಆರಂಭಿಸಿದೆ. ನನ್ನ ಪರಿಸ್ಥಿತಿ ಕಂಡು ಮತ್ತೊಂದು ಡೆಲಿವರಿ ಕಂಪನಿಯೂ ಅವರ ಕೊರಿಯರ್ ತಲುಪಿಸುವ ಕೆಲಸವನ್ನು ನೀಡಿತು. ನನಗೆ ಮಂಡಿ ಮೊಹಲ್ಲಾದ ರೂಟ್ ನೀಡಲಾಗಿದೆ. ಇದರಿಂದ ಮಿಷನ್ ಆಸ್ಪತ್ರೆ, ಬಂಬೂಬಜಾರ್, ಸುನ್ನಿಚೌಕ, ಸುಲ್ತಾನ್ ಪಾರ್ಕ್, ಕೈಲಾಸಪುರಂ, ತಿಲಕ್‌ನಗರ ಸೇರಿದಂತೆ ವಿವಿಧ ಬಡಾವಣೆಗಳ ವ್ಯಾಪ್ತಿ ಕೊರಿಯರ್ ತಲುಪಿಸುತ್ತಿದ್ದೇನೆ. ಎರಡೂ ಸಂಸ್ಥೆಗಳಿಂದ ಕೊರಿಯರ್ ಮೂಲಕ ಬಂದ ದಿನಕ್ಕೆ 40–50 ವಸ್ತುಗಳನ್ನು ತಲುಪಿಸುತ್ತಿದ್ದೇನೆ. ಒಂದು ಪಾರ್ಸೆಲ್ ತಲುಪಿಸಿದರೆ 14 ಅಥವಾ 15 ರೂ. ಸಿಗುತ್ತದೆ. ದಿನದಕ್ಕೆ 300 ರಿಂದ 500 ರೂ.ವರೆಗೆ ದುಡಿಯುತ್ತಿದ್ದೇನೆ.

ದೊಡ್ಡ ಬ್ಯಾಗ್‌ನಲ್ಲಿ ಕೊರಿಯರ್ ತುಂಬಿಕೊಂಡು ಹತ್ತಾರು ಕಿ.ಮೀ ದೂರ ಕ್ರಮಿಸುವುದಕ್ಕೆ ನನಗೆ ಅಂತಹ ಕಷ್ಟ ಎನಿಸುತ್ತಿಲ್ಲ. ಜೀವನವೇ ಕಷ್ಟವಾಗಿ ಪರಿಣಮಿಸಿರುವಾಗ ಭಾರ ಹೊತ್ತು ಕೊರಿಯರ್ ಸಾಗಿಸುವುದು ಕಷ್ಟ ಎನಿಸುತ್ತಿಲ್ಲ. ಮಾಡಿದ ಸಾಲ ತೀರಿಸಲು ಮಗು ಸಾಕಲು ಕೆಲಸ ಬೇಕಾಗಿತ್ತು. ಮಗುವನ್ನು ಪ್ಲೇ ಹೋಮ್‌ಗೆ ಸೇರಿಸಲು ಎರಡು ವರ್ಷ ಆಗಿರಬೇಕು ಎಂಬ ನಿಯಮವಿದೆ. ಈ ಕಾರಣದಿಂದ ಬಿಸಿಲಿನಲ್ಲೂ ಮಗುವಿನೊಂದಿಗೆ ಕೊರಿಯರ್ ತಲುಪಿಸುವ ಕೆಲಸ ಮಾಡುತ್ತಿದ್ದೇನೆ ಎಂದು ಅಳಲು ತೋಡಿಕೊಂಡರು.




ನಾನು ಎಸ್‌ಎಸ್‌ಎಲ್‌ಸಿವರೆಗೆ ಶಿಕ್ಷಣ ಪಡೆದಿದ್ದು, ಟೈಲರಿಂಗ್ ಕಲಿತಿದ್ದೇನೆ. ಈ ಹಿಂದೆ ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡುತ್ತಿದ್ದೆ. ಆದರೆ, ಮಗುವಿನ ಆರೈಕೆ ಕಷ್ಟವಾಗುತ್ತಿತ್ತು. ಅಲ್ಲದೆ, ಅದರಿಂದ ಸಾಲ ತೀರಿಸಲು ಸಾಧ್ಯವಾಗುತ್ತಿರಲಿಲ್ಲ. ಈ ಹಿನ್ನೆಲೆಯಲ್ಲಿ ಮಗನನ್ನು ನೋಡಿಕೊಳ್ಳುವುದರೊಂದಿಗೆ ಕೆಲಸ ಮಾಡಲೇಬೇಕಾಗಿತ್ತು. ಕೌಟುಂಬಿಕ ಸಮಸ್ಯೆಯಿಂದ ತವರು ಮನೆಯಲ್ಲಿಯೇ ಇರುವ ನನಗೆ ನೆರವಾಗಿದ್ದು ಕೊರಿಯರ್ ಸಂಸ್ಥೆ. ತಾಯಿ ಬದುಕಿದ್ದ ವೇಳೆ ಮನೆಯ ಮೇಲೆ ಖಾಸಗಿ ಬ್ಯಾಂಕ್‌ನಲ್ಲಿ ಸಾಲ ಪಡೆದಿದ್ದರು. ಕಳೆದ ಒಂದು ವರ್ಷದಿಂದ ಪ್ರತಿ ತಿಂಗಳು ಬ್ಯಾಂಕ್‌ಗೆ 15 ಸಾವಿರ ರೂ. ಸಾಲ ಕಟ್ಟುತ್ತಿದ್ದೆ. ಮೂರು ತಿಂಗಳಿಂದ ಇಎಂಐ ಕಟ್ಟದೇ ಇರುವುದರಿಂದ ಬ್ಯಾಂಕಿನ ಸಿಬ್ಬಂದಿ ಎರಡು ಬಾರಿ ಮನೆ ಗೋಡೆ ಮೇಲೆ ನೋಟಿಸ್ ಅಂಟಿಸಿ ಹೋಗಿದ್ದಾರೆ. ಅಲ್ಲದೆ, ಹರಾಜು ಹಾಕುವುದಾಗಿ ಹೆದರಿಸುತ್ತಿದ್ದಾರೆ. ಈಗ ಮತ್ತೊಂದು ಸಂಕಷ್ಟ ಎದುರಾಗಿದೆ.

ನೆರವಿನ ಹಸ್ತದ ನಿರೀಕ್ಷೆ: ಒಂದು ಕಡೆ ಒಂದೂವರೆ ವರ್ಷದ ಮಗನ ಭವಿಷ್ಯ ರೂಪಿಸಬೇಕಾದ ಅನಿವಾರ್ಯತೆ, ಮತ್ತೊಂದು ಕಡೆ ಸಾಲ ತೀರಿಸುವ, ಮಗದೊಂದು ಕಡೆ ಹರಾಜು ಪ್ರಕ್ರಿಯೆಯಿಂದ ಮನೆ ಉಳಿಸಿಕೊಳ್ಳುವ ಸವಾಲು ನನ್ನ ಮುಂದೆ ಇದ್ದು, ನೆರವಿನ ಹಸ್ತದ ನಿರೀಕ್ಷೆಯಲ್ಲಿದ್ದೇನೆ ಎಂದರು.

ಚಾಮುಂಡಿಬೆಟ್ಟ

ಅಸ್ಮಿತೆ ಅಳಿವಿನ ಆತಂಕ



● ಬಾಪುಲಿಂಗರಾಜ್ ಅರಸ್

ಸಾಂಸ್ಕೃತಿಕ ನಗರಿ ಮೈಸೂರಿಗೆ ಚಾಮುಂಡಿಬೆಟ್ಟ ಮುಕುಟಮಣಿ ಇದ್ದಂತೆ. ಮೈಸೂರನ್ನು ಸಂಪರ್ಕಿಸುವ ಯಾವುದೇ ರಸ್ತೆಯಲ್ಲಿ ಸಾಗುವ ವೇಳೆ ಚಾಮುಂಡಿಬೆಟ್ಟದ ದರ್ಶನವಾಯಿತೆಂದರೆ ನಾವು ಮೈಸೂರು ನಗರವನ್ನು ತಲುಪುತ್ತಿದ್ದೇವೆ ಎಂಬ ಭರವಸೆ; ವಿಶ್ವಾಸ. ಚಾಮುಂಡಿಬೆಟ್ಟ ಮೈಸೂರಿನ ಹೆಗ್ಗುರುತಾಗಿದೆ.

ಪೌರಾಣಿಕ ಹಿನ್ನೆಲೆ ಇರುವ ಚಾಮುಂಡಿಬೆಟ್ಟ ನಾಡದೇವತೆ ತಾಯಿ ಚಾಮುಂಡೇಶ್ವರಿಯ ಭಕ್ತರಿಗೆ ಧಾರ್ಮಿಕ ಶ್ರದ್ಧಾ ಭಕ್ತಿಯ ನೆಲೆ ಬೀಡು. ಹಸಿರಿನಿಂದ ಕಂಗೊಳಿಸುವ ಚಾಮುಂಡಿಬೆಟ್ಟ ಇತ್ತೀಚಿಗೆ ಹಲವು ಭೌಗೋಳಿಕ ಸವಾಲುಗಳನ್ನು ಎದುರಿಸುತ್ತಿದೆ. ಇದಕ್ಕೆ ಪರಿಹಾರ ಸೂತ್ರ ರೂಪಿಸದಿದ್ದರೆ ಕಳೆಗುಂದುವ ಇಲ್ಲ ತನ್ನ ಅಸ್ತಿತ್ವ ಕಳೆದುಕೊಳ್ಳುವ ಆತಂಕ ಎದುರಾಗಿದೆ.

ಚಾಮುಂಡಿಬೆಟ್ಟದ ಸಮಸ್ಯೆಗಳನ್ನು ಅರಿಯುವ ಮುನ್ನ ಸ್ಥಳ ಮಹಿಮೆ, ಪೌರಾಣಿಕ, ಭೌಗೋಳಿಕ ಹಾಗೂ ಧಾರ್ಮಿಕ ಹಿನ್ನೆಲೆ ಅರಿಯುವುದು ಅತ್ಯವಶ್ಯ ಮೈಸೂರು ನಗರಕ್ಕೆ ಹೊಂದಿಕೊಂಡಂತೆ ಆಗ್ನೇಯಕ್ಕೆ ಪೂರ್ವಾಭಿಮುಖ ವಾಗಿರುವ ಚಾಮುಂಡಿಬೆಟ್ಟ ಸಮುದ್ರ ಮಟ್ಟದಿಂದ 3,486 ಅಡಿ ಎತ್ತರದಲ್ಲಿದೆ.

ಪ್ರಾಚೀನ ಹಿಂದೂ ಧರ್ಮಗ್ರಂಥ ಸ್ಕಂದ ಪುರಾಣದಲ್ಲಿ ಚಾಮುಂಡಿ ಬೆಟ್ಟದ ಉಲ್ಲೇಖವಿದೆ. ಚಾಮುಂಡೇಶ್ವರಿ ದೇವಾಲಯಕ್ಕೂ ಮೊದಲು ಇಲ್ಲಿ ಮಹಾಬಲೇಶ್ವರ ದೇವಾಲಯವಿತ್ತು. ಇದರಿಂದ ಈ ಬೆಟ್ಟವನ್ನು 'ಮಹಾಬಲಾದ್ರಿ' ಎಂಬ ಹೆಸರಿನಿಂದ ಕರೆಯಲಾಗುತ್ತಿತ್ತು. ಮಹಾಬಲೇಶ್ವರ ದೇವಸ್ಥಾನ ಹೊಯ್ಸಳ ರಾಜ ವಿಷ್ಣುವರ್ಧನನ ಕಾಲಕ್ಕೂ ಮೊದಲೇ ನಿರ್ಮಾಣವಾಗಿದೆ. 1128 ರಲ್ಲಿ ಮಬ್ಬಳದ ತೀರ್ಥಕ್ಕೆ ದತ್ತಿ ನೀಡಲಾಗಿತ್ತು ಎಂದು ಇಲ್ಲಿರುವ ಶಾಸನ ಸಾರಿ ಹೇಳುತ್ತದೆ.

ಹತ್ತನೆ ಶತಮಾನದಲ್ಲೇ ಈ ಬೆಟ್ಟವನ್ನು ಪುಣ್ಯ ಕ್ಷೇತ್ರ ಎಂದು ಜನರು ನಂಬಿದ್ದರು. ಇಲ್ಲಿನ ಶಾಸನಗಳಲ್ಲಿ ಇದನ್ನು 'ಮಬ್ಬೇಲದ ತೀರ್ಥ' ಅಥವಾ 'ಮಬ್ಬಳದ ತೀರ್ಥ' ಎಂದು ಕರೆಯಲಾಗುತ್ತಿತ್ತು. ಚಾಮುಂಡೇಶ್ವರಿ ದೇವಿ ಆರಾಧಕರಾಗಿದ್ದ ಮೈಸೂರು ಮಹಾರಾಜರು ದೇವಸ್ಥಾನಕ್ಕೆ ಗೋಪುರ, ಬೆಟ್ಟಕ್ಕೆ 1008 ಮೆಟ್ಟಿಲು ನಿರ್ಮಾಣ ಮಾಡಿದರು.

ಇಂತಹ ಧಾರ್ಮಿಕ ಕ್ಷೇತ್ರದಲ್ಲಿ ಇತ್ತೀಚೆಗೆ ಕೆಲವು ಅಹಿತಕರ ಘಟನೆಗಳು ನಡೆಯುತ್ತಿವೆ. ಪ್ರತಿ ವರ್ಷದಂತೆ ಈ ಬಾರಿ ಕೂಡ ಕಾಡ್ಗಿಚ್ಚು ಉಂಟಾಗಿತ್ತು. ಚಾಮುಂಡಿಬೆಟ್ಟ ಹಾಸಿದ್ದ ಹಸಿರು ಹೊದಿಕೆಯ 35 ಎಕರೆ ಪ್ರದೇಶ ಬೆಂಕಿಗಾಹುತಿಯಾಯಿತು. ಒಂದು ಗಿಡ ಮರ ಬೆಳೆಯಲು ಹಲವು ವರ್ಷಗಳೇ ಬೇಕು. ಆದರೆ ಬೆಂಕಿಯ ಕೆನ್ನಾಲಿಗೆಗೆ ಕೆಲವೇ ಗಂಟೆಯಲ್ಲಿ ಹಸಿರಿನಿಂದ ಕಂಗೊಳಿಸುತ್ತಿದ್ದ ಗಿಡ ಮರಗಳು ಸುಟ್ಟು ಕರಕಲಾದವು.

ಚಾಮುಂಡಿಬೆಟ್ಟಕ್ಕೆ ಪ್ರತಿ ದಿನ ಸಾವಿರಾರು ಭಕ್ತರು ಬರುತ್ತಾರೆ. ನೈಸರ್ಗಿಕ ಹಾಗೂ ಮಾನವ ದುಷ್ಕೃತ್ಯದಿಂದ ಹಾಗಾಗ ಕಾಡ್ಗಿಚ್ಚಾಗುತ್ತದೆ. ಬೆಟ್ಟದ ಕಿರು ಅರಣ್ಯದಲ್ಲಿರುವ ಚಿರತೆ ಸೇರಿದಂತೆ ಹಲವು ಪ್ರಾಣಿಗಳು ನಗರಕ್ಕೆ ಆಗಾಗ ಬಂದು ಹೋಗುತ್ತವೆ. ಚಾಮುಂಡಿಬೆಟ್ಟದ ತಪ್ಪಲಿನ ನಿರ್ಜನ ಪ್ರದೇಶದಲ್ಲಿ ಕೊಲೆ, ಸುಲಿಗೆ, ಅತ್ಯಾಚಾರ, ಜೂಜಾಟ ಸೇರಿದಂತೆ ಹಲವು ಅಪರಾಧ ಕೃತ್ಯಗಳು ಜರುಗುತ್ತವೆ. ಬೆಟ್ಟದ ಮೇಲಿನ ಜನರು ಕುಡಿಯುವ ನೀರಿಲ್ಲದೆ ಪರಿತಪ್ಪಿಸುತ್ತಾರೆ. ಇಂತಹ ಸೂಕ್ಷ್ಮ ಪ್ರದೇಶದಲ್ಲಿ ಹಲವು ಸವಾಲುಗಳಿದ್ದು, ಇದಕ್ಕೆ ಪರಿಹಾರ ರೂಪಿಸುವುದು ಸರ್ಕಾರದ ಮೊದಲ ಆದ್ಯತೆಯಾಗಿದೆ.

ಚಾಮುಂಡಿಬೆಟ್ಟದ ಅಭಿವೃದ್ಧಿಗಾಗಿ 'ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ' ರಚನೆ ಮಾಡಲಾಗಿದ್ದು, ಆರಂಭದಲ್ಲೇ ಪ್ರಾಧಿಕಾರಕ್ಕೆ ಹಲವು ಸವಾಲು ಎದುರಾಗಿದೆ.

ಅಗ್ನಿ ಶಾಮಕ ಠಾಣೆಗಾಗಿ ಪ್ರಸ್ತಾವನೆ: ಇತ್ತೀಚೆಗೆ ಚಾಮುಂಡಿ ಬೆಟ್ಟಕ್ಕೆ ಬೆಂಕಿ ಬಿದ್ದ ಸಂದರ್ಭದಲ್ಲಿ ಸುಮಾರು 5 ಅಗ್ನಿ ಶಾಮಕ ವಾಹನಗಳಲ್ಲಿ ತೆರಳಿದ ಸಿಬ್ಬಂದಿ ಕಾಡ್ಗಿಚ್ಚು ನಂದಿಸಲು ಹರಸಾಹಸಪಟ್ಟರು. ಕಾಡ್ಗಿಚ್ಚಿನ ಆರಂಭದಲ್ಲೇ ಬೆಂಕಿ ನಂದಿಸಿದ್ದರೆ ಪ್ರಾಯಶಃ ಇಷ್ಟೊಂದು ದೊಡ್ಡ ಅನಾಹುತ ಆಗುತ್ತಿರಲಿಲ್ಲ. ಅರಣ್ಯ ಇಲಾಖೆಯವರು ಕಾಡ್ಗಿಚ್ಚು ಸಂಭವಿಸದಂತೆ ಬೆಂಕಿ ರೇಖೆ ಹಾಕಿದರೂ ಅಗ್ನಿ ಅನಾಹುತ ತಪ್ಪಿಸಲು ಸಾಧ್ಯವಾಗಲಿಲ್ಲ.

ಈ ಹಿನ್ನೆಲೆಯಲ್ಲಿ ಬೆಂಕಿ ಅನಾಹುತ ತಪ್ಪಿಸಲು ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ಅಗ್ನಿಶಾಮಕ ಠಾಣೆ ಹಾಗೂ ಬೆಟ್ಟದ ಮೇಲೆ ಅಗ್ನಿ ಶಾಮಕ ಮೊಬೈಲ್ ಸ್ಕ್ವಾಡ್ ತೆರೆಯುವುದು ಅಗತ್ಯವಾಗಿದೆ. ಈ ಹಿನ್ನೆಲೆಯಲ್ಲಿ ಅಗ್ನಿಶಾಮಕ ಇಲಾಖೆ ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆಯಂತೆ.

ಮೈಸೂರಿನಲ್ಲಿ ಪ್ರಸ್ತುತ ಮೂರು ಅಗ್ನಿಶಾಮಕ ಠಾಣೆಗಳಿವೆ. ಬೆಂಕಿ ಬಿದ್ದ ಸಂದರ್ಭದಲ್ಲಿ 15 ಕಿಲೋ ಮೀಟರ್ ದೂರದ ಚಾಮುಂಡಿಬೆಟ್ಟಕ್ಕೆ ಹೋಗುವಷ್ಟರಲ್ಲಿ ಅಗ್ನಿ ಕೆನ್ನಾಲಿಗೆ ಬೆಟ್ಟದ ಕಾಡಿಗೆ ಸಂಪೂರ್ಣವಾಗಿ ಆವರಿಸಿರುತ್ತದೆ. ಆದ ಕಾರಣ ಬೆಟ್ಟದಲ್ಲಿ ಉಂಟಾಗುವ ಕಾಡ್ಗಿಚ್ಚು ತಡೆಗಟ್ಟಲು ಅಲ್ಲಿಗೆ ಪ್ರತ್ಯೇಕವಾದ ಅಗ್ನಿಶಾಮಕ ಠಾಣೆ ತೆರೆಯುವುದು ಅತ್ಯವಶ್ಯ ಎಂದು ಹೇಳಿದ್ದಾರೆ.

ಸೀಡ್ ಬಾಲ್‌ನಿಂದ ಹಸಿರು ವೃದ್ಧಿ: ಚಾಮುಂಡಿಬೆಟ್ಟದಲ್ಲಿ 1,516 ಎಕರೆ ಅರಣ್ಯ ಪ್ರದೇಶವಿದ್ದು, 17 ಚದರ ಕಿಲೋ ಮೀಟರ್‌ನಿಂದ ಸುತ್ತುವರೆದಿದೆ. ಆಗಾಗ ಸಂಭವಿಸುವ ಕಾಡ್ಗಿಚ್ಚಿನಿಂದ ಹಸಿರು ನಾಶವಾಗುತ್ತಿದೆ. ಇಂತಹ ಸ್ಥಳಗಳಲ್ಲಿ ಅರಣ್ಯ ಇಲಾಖೆ ಸೀಡ್ ಬಾಲ್‌ನಿಂದ ಗಿಡ–ಮರ ಬೆಳೆಸಿ, ಹಸಿರು ವೃದ್ಧಿಸಬಹುದು.

ಬೆಂಕಿ ಅನಾಹುತ ಸಂಭವಿಸದಂತೆ ರಸ್ತೆ ಸನಿಹದಲ್ಲಿ ಬೆಂಕಿ ರೇಖೆ ಹಾಕಿಸಬೇಕು. ಪುಂಡ–ಪೋಕರಿಗಳು ಸಿಗರೇಟ್, ಮದ್ಯ ಎಸೆದು ವಿಕೃತಿ ಮೆರೆಯುವುದನ್ನು ತಡೆಗಟ್ಟಲು ಫಾರೆಸ್ಟ್ ವಾಚರ್‌ಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ನಿಯೋಜನೆ ಮಾಡಬೇಕು.

ಅಪರಾಧ ಕೃತ್ಯಕ್ಕೆ ಕಡಿವಾಣ ಅಗತ್ಯ: ಚಾಮುಂಡಿಬೆಟ್ಟದ ತಪ್ಪಲಲ್ಲಿ ಕೊಲೆ, ಸುಲಿಗೆ, ಅತ್ಯಾಚಾರ ಸೇರಿದಂತೆ ಹಲವು ಅಪರಾಧ ಕೃತ್ಯಗಳು ಈಗಾಗಲೇ ಸಂಭವಿಸಿವೆ. ಯುವ ಜೋಡಿಗಳು ಬೆಟ್ಟದ ಮೇಲಿನ ನಿರ್ಜನ ಪ್ರದೇಶದಲ್ಲಿ ಏಕಾಂತದಲ್ಲಿರುತ್ತಾರೆ. ಕೆಲವು ಅಪರಾಧಿಗಳು ಅವರ ಮೇಲೆ ದಾಳಿ ಮಾಡಿ ಸುಲಿಗೆ ಮಾಡಿರುವ ಬಹಳಷ್ಟು ನಿದರ್ಶನಗಳಿವೆ. ಈ ಹಿನ್ನೆಲೆಯಲ್ಲಿ ಚಾಮುಂಡಿಬೆಟ್ಟದ ಸುತ್ತ ಗಸ್ತು ತಿರುಗಲು ಪ್ರತ್ಯೇಕ ಸಿಬ್ಬಂದಿ ನಿಯೋಜನೆ ಮಾಡಬೇಕು.

ಚಾಮುಂಡಿಬೆಟ್ಟ ಕೃಷ್ಣರಾಜ ಪೊಲೀಸ್ ಠಾಣೆ ವ್ಯಾಪ್ತಿಗೆ ಸೇರಿದ್ದು, ಇದರ ಉಪ ಠಾಣೆ ಬೆಟ್ಟದ ಮೇಲಿದೆ. ಆದರೆ ಅಲ್ಲಿರುವ ಸಿಬ್ಬಂದಿ ತೀರಾ ಕಡಿಮೆ. ಚಾಮುಂಡಿಬೆಟ್ಟಕ್ಕಾಗಿಯೇ ಪ್ರತ್ಯೇಕ ಪೊಲೀಸ್ ಠಾಣೆ ತೆರೆದು ಹೆಚ್ಚಿನ ಪೊಲೀಸ್ ಸಿಬ್ಬಂದಿ ನಿಯೋಜನೆ ಮಾಡುವುದು ಅತ್ಯಗತ್ಯ.

ಆಷಾಢ ಶುಕ್ರವಾರದಂತೆ ಉಚಿತ ಬಸ್ : ಆಷಾಢ ಮಾಸದಲ್ಲಿ ಚಾಮುಂಡಿಬೆಟ್ಟಕ್ಕೆ ಲಕ್ಷಾಂತರ ಭಕ್ತರು ಆಗಮಿಸುತ್ತಾರೆ. ಈ ವೇಳೆ ವಾಹನ ದಟ್ಟಣೆ ತಡೆಗಟ್ಟಲು ಖಾಸಗಿ ವಾಹನಗಳು ಬೆಟ್ಟ ಪ್ರವೇಶಿಸದಂತೆ ನಿರ್ಬಂಧಿಸಲಾಗುತ್ತದೆ. ಆಷಾಢ ಮಾಸದ ನಂತರ ಪ್ರತಿ ಶನಿವಾರ, ಭಾನುವಾರ ಕೂಡ ಹೆಚ್ಚು ಭಕ್ತರು ಬರುವ ಕಾರಣ ವಾಹನ ದಟ್ಟಣೆ ಹೆಚ್ಚಿರುತ್ತದೆ. ಇದರಿಂದ ಟ್ರಾಫಿಕ್ ಜಾಮ್ ಆಗುವುದು ಸಹಜವಾಗಿದೆ. ಬೆಟ್ಟದ ಮೇಲೆ ವಾಹನ ನಿಲುಗಡೆಗೆ ತೀವ್ರ ತೊಂದರೆ ಕೂಡ ಆಗಲಿದೆ. ಈ ಹಿನ್ನೆಲೆಯಲ್ಲಿ ಆಷಾಢ ಶುಕ್ರವಾರ ದಂತೆ ಪ್ರತಿ ಶನಿವಾರ ಮತ್ತು ಭಾನುವಾರ ಖಾಸಗಿ ವಾಹನ ನಿರ್ಬಂಧಿಸಿ ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಉಚಿತ ಪ್ರಯಾಣದ ವ್ಯವಸ್ಥೆ ಮಾಡುವುದು ಒಳಿತು.

ಕಾಂಕ್ರಿಟ್ ಕಾಡು: ಚಾಮುಂಡಿಬೆಟ್ಟದ ಮೇಲೆ ಕಟ್ಟಡಗಳ ನಿರ್ಮಾಣ ಮಾಡುವ ಕಾರ್ಯ ಆಗಾಗ ನಡೆದಾಗ ಅದನ್ನು ಅರ್ಧಕ್ಕೆ ನಿಲ್ಲಿಸುವುದು ಮಾಮೂಲಾಗಿದೆ. ಈ ಹಿನ್ನೆಲೆಯಲ್ಲಿ ಬೆಟ್ಟದ ಮೇಲೆ ಹಾಗೂ ತಾವರೆಕಟ್ಟೆಯಲ್ಲಿ ಹೊಸ ಕಟ್ಟಡ ನಿರ್ಮಾಣಕ್ಕೆ ಅವಕಾಶ ನೀಡಬಾರದು. ಚಾಮುಂಡಿಬೆಟ್ಟದ ಸುತ್ತ ಅಪಾರ್ಟ್‌ಮೆಂಟ್ ಸೇರಿದಂತೆ ಎತ್ತರದ ಕಟ್ಟಡಗಳು ನಿರ್ಮಾಣವಾಗುತ್ತಿವೆ. ಇದರಿಂದ ಬೆಟ್ಟಕ್ಕೆ ಹಾನಿ, ಅಪಚಾರವಾಗುವ ಪರಿಸ್ಥಿತಿ ಎದುರಾಗುತ್ತಿದೆ. ಈ ಹಿನ್ನೆಲೆಯಲ್ಲಿ ಬೆಟ್ಟದ ಸುತ್ತ ಕಾಂಕ್ರಿಟ್ ಕಾಡು ನಿರ್ಮಾಣಕ್ಕೆ ಅವಕಾಶ ನೀಡದೆ ಬೆಟ್ಟದ ಅಸ್ಮಿತೆ ಕಾಪಾಡುವುದು ಅಗತ್ಯವಾಗಿದೆ.

ಕುಡಿಯುವ ನೀರಿನ ಹಾಹಾಕಾರ ತಪ್ಪಿಸಿ: ಸಮುದ್ರ ಪಕ್ಕದಲ್ಲೆ ಇದ್ದರೂ ಉಪ್ಪಿಗೆ ಬರ ಎಂಬಂತೆ ಚಾಮುಂಡಿಬೆಟ್ಟ ಮೈಸೂರು ನಗರಕ್ಕೆ ಹೊಂದಿಕೊಂಡಿದ್ದರೂ, ಕೆಆರ್‌ಎಸ್ ಅಣೆಕಟ್ಟೆ ಕೆಲವೇ ಕಿಲೋಮೀಟರ್ ದೂರದಲ್ಲಿದ್ದರೂ ಈ ತನಕ ಸಮರ್ಪಕ ಕುಡಿಯುವ ನೀರು ಸರಬರಾಜು ಆಗುತ್ತಿಲ್ಲ. ಪ್ರತಿ ವರ್ಷದ ದಸರಾ ಉದ್ಘಾಟನೆ ವೇಳೆ ಸ್ಥಳೀಯ ಶಾಸಕ ಜಿ.ಟಿ.ದೇವೇಗೌಡರು ಸಮರ್ಪಕ ಕುಡಿಯುವ ನೀರಿನ ವ್ಯವಸ್ಥೆ ಮಾಡುವಂತೆ ಸರ್ಕಾರಕ್ಕೆ ಮನವಿ ಮಾಡುತ್ತಲೇ ಬಂದಿದ್ದಾರೆ. ಆದರೆ ಈವರೆಗೆ ಇದು ಸಾಕಾರಗೊಂಡಿಲ್ಲ.


ಬೆಟ್ಟದ ಪರಂಪರೆಗೆ ಧಕ್ಕೆ ಆಗಬಾರದು: ಕೇಂದ್ರ ಸರ್ಕಾರದ 'ಪ್ರಸಾದ' ಯೋಜನೆಯಲ್ಲಿ ಚಾಮುಂಡಿಬೆಟ್ಟವನ್ನು ಅಭಿವೃದ್ಧಿ ಮಾಡಲು ಯೋಜಿಸಲಾಗಿದೆ. ಆದರೆ ಯಾವುದೇ ಯೋಜನೆ ಕೈಗೆತ್ತಿಕೊಂಡರು ಬೆಟ್ಟದ ಪಾರಂಪರಿಕ ಸೌಂದರ್ಯಕ್ಕೆ ಧಕ್ಕೆಯಾಗಬಾರದು.



ನಕ್ಕು ಬಿಡಿ


ಗುಂಡ: ಯಾಕೋ ಪರೀಕ್ಷೆ ಬರಿಯೋದು ಬಿಟ್ಟು ಡ್ಯಾನ್ಸ್ ಮಾಡ್ತಾ ಇದ್ದಿಯಾ?

ಚೋಟು: ನನ್ನ ಟೀಚರ್ ಹೇಳಿದ್ರು ಗಣಿತ ಪರೀಕ್ಷೆಯಲ್ಲಿ ಪ್ರತಿ ಸ್ಟೆಪ್‌ಗೂ ಮಾರ್ಕ್ಸ್ ಇದೆ ಅಂತ.


46 ನೇ ವರ್ಷಕ್ಕೆ
ಪಾದಾರ್ಪಣೆ ಮಾಡುತ್ತಿರುವ ಕನ್ನಡ ದಿನಪತ್ರಿಕೆ
ಮೈಸೂರು ಮಿತ್ರನಿಗೆ
ಶುಭಾಶಯಗಳು
ಬೂಕನಕೆರೆ ವಿಜೇಂದ್ರ
ಅಭಿವೃದ್ಧಿ ಅಧಿಕಾರಿ (ನಿವೃತ್ತ),
ಭಾರತೀಯ ಜೀವ ವಿಮಾ ನಿಗಮ,
ಮೈಸೂರು
94480 26186


ಮೈಸೂರು ಮಿತ್ರ
ನಿಮ್ಮ ಮೆಚ್ಚಿನ ಕನ್ನಡ ದಿನಪತ್ರಿಕೆ
46 ನೇ ವರ್ಷಕ್ಕೆ
ಪಾದಾರ್ಪಣೆ ಮಾಡುತ್ತಿರುವ ಕನ್ನಡ ದಿನಪತ್ರಿಕೆ
ಮೈಸೂರು ಮಿತ್ರನಿಗೆ
ಶುಭಾಶಯಗಳು
ವಿ. ಶೈಲೇಂದ್ರ
ಮಾಜಿ ಉಪ ಮಹಾಪೌರರು
ಹಾಗೂ ಅಧ್ಯಕ್ಷರು,
ಮೈಸೂರು ನಗರ
ಬಿಜೆಪಿ ಎಸ್.ಸಿ.ಮೋರ್ಚಾ


ಮೈಸೂರು ಮಿತ್ರ
ನಿಮ್ಮ ಮೆಚ್ಚಿನ ಕನ್ನಡ ದಿನಪತ್ರಿಕೆ
46 ನೇ ವರ್ಷಕ್ಕೆ
ಪಾದಾರ್ಪಣೆ ಮಾಡುತ್ತಿರುವ ಕನ್ನಡ ದಿನಪತ್ರಿಕೆ
ಮೈಸೂರು ಮಿತ್ರನಿಗೆ
ಶುಭಾಶಯಗಳು
ನಮ್ರತಾ ರಮೇಶ್
ಮಾಜಿ ನಗರ ಪಾಲಿಕೆ ಸದಸ್ಯರು
ಅರ್ಪಿತಾ ರಮೇಶ್
ಎಂ.ರಮೇಶ್
ಜೆಡಿಎಸ್ ಮುಖಂಡರು


ಮೈಸೂರು ಮಿತ್ರ
46
46 ನೇ ವರ್ಷಕ್ಕೆ
ಪಾದಾರ್ಪಣೆ ಮಾಡುತ್ತಿರುವ ಪ್ರಾದೇಶಿಕ ದಿನಪತ್ರಿಕೆ
ಮೈಸೂರು ಮಿತ್ರನಿಗೆ
ಶುಭಾಶಯಗಳು
ಸಿ.ಬಸವೇಗೌಡ
ಮಾಜಿ ಅಧ್ಯಕ್ಷರು, ಮೈಸೂರು ನಗರಾಭಿವೃದ್ಧಿ
ಪ್ರಾಧಿಕಾರ/ಮೈಸೂರು-ಚಾಮರಾಜನಗರ
ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್

ಬಹುಮುಖ ಪ್ರತಿಭೆ ಮೈಸೂರಿನ ಎಂ. ಸುಮಾ



● ಎಸ್.ಪಿ.ನಂಜಪ್ಪ

ವಿದೇಶದಿಂದ ಭಾರತಕ್ಕೆ ಬಂದ ನಂತರ ಮಕ್ಕಳು, ಮೊಮ್ಮಕ್ಕಳೊಂದಿಗೆ ಆರಾಮಗಾಗಿ ಕಾಲಕಳೆಯಬಹುದಿತ್ತು. ಆದರೆ, ಯಾವುದಾ ರೊಂದು ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲೇಬೇಕೆಂಬ ಛಲದಿಂದ ಚಿತ್ರಕಲೆ, ಜಾನಪದ ಗಾಯನ, ರಂಗಭೂಮಿ ಚಟುವಟಿಕೆಗಳಲ್ಲಿ ಹವ್ಯಾಸ ಬೆಳೆಸಿಕೊಂಡಿದ್ದೆ. ಅದು ಮತ್ತೊಂದು ಯಶಸ್ಸು ತಂದು ಕೊಟ್ಟಿತು. ಮೈಸೂರಿನ ಸರಸ್ವತಿಪುರಂ ನಿವಾಸಿ, ಜಾನಪದ ಕಲಾವಿದೆ ಸುಮಾ.ಎಂ. ಪ್ರಶಾಂತ್ ಯಶೋಗಾಥೆಯಿದು.

ಪತಿ ಭಾನು ಪ್ರಶಾಂತ್, ಮಲೇಷಿಯಾ, ಸಿಂಗಾಪುರದಲ್ಲಿ ವಿವಿಧ ಕಂಪನಿಗಳಲ್ಲಿ 2000 ಇಸವಿಯವರೆಗೂ ಇಂಜಿನಿಯರ್ ಆಗಿ ಕೆಲಸ ನಿರ್ವಹಿಸಿದ್ದರು. ಆ ವೇಳೆ ನನಗೆ ಈ ಕಲೆಗಳನ್ನು ಕಲಿಯಬೇಕೆಂಬ ಆಸೆ ಇದ್ದರೂ ಸಾಧ್ಯವಾಗಲಿಲ್ಲ ಎನ್ನುತ್ತಾರೆ.

ಅಲ್ಲಿಂದ 2000 ಇಸವಿಯಲ್ಲಿ ಮೈಸೂರಿಗೆ ಬಂದೆವು. ಬಿ.ಕಾಂ ಪದವಿ ಮುಗಿಸಿದ್ದ ನನಗೆ ಯಾವುದಾದರು ವಿಷಯದಲ್ಲಿ ಚಿಕ್ಕ ಮಕ್ಕಳಿಗೆ ಪಾಠ ಹೇಳಿಕೊಡುವ ಹಂಬಲವಿತ್ತು. ಈ ಹಿನ್ನಲೆಯಲ್ಲಿ ನರ್ಸರಿ ಶಿಕ್ಷಕ ತರಬೇತಿ ಪಡೆದು, ಭಾರತೀಯ ವಿದ್ಯಾಭವನದಲ್ಲಿ 2004–2013 ರವರೆಗೂ ನರ್ಸರಿ ಶಿಕ್ಷಕಿಯಾಗಿ ಕೆಲಸ ನಿರ್ವಹಿಸಿದ್ದೆ. ಈ ವೇಳೆ ಸಾಕಷ್ಟು ಹೆಸರು ಬಂತು. ನಂತರ ಹವ್ಯಾಸವಾಗಿದ್ದ ಚಿತ್ರಕಲೆಯಲ್ಲಿ 2014ರಿಂದ ಪೂರ್ಣಪ್ರಮಾಣದಲ್ಲಿ ತೊಡಗಿಸಿಕೊಂಡೆ. ಮೈಸೂರು–ಬೆಂಗಳೂರಿನ ಯಾವುದೇ ಸ್ಥಳದಲ್ಲಿ ಹೊಸ ಚಿತ್ರಕಲೆಗಳ ಕಲಿಕಾ ಶಿಬಿರಗಳನ್ನು ಆಯೋಜಿಸಿದ್ದರೂ ತಪ್ಪದೇ ಪಾಲ್ಗೊಂಡು ಚಿತ್ರಕಲೆ ಕಲಿತೆ. ಕಳೆದ 20 ವರ್ಷಗಳಿಂದ ಚಿತ್ರಕಲೆ, ಜನಪದ, ರಂಗಭೂಮಿಯಲ್ಲಿ ತೊಡಗಿಸಿಕೊಂಡಿದ್ದೇನೆ. ದೂರದರ್ಶನದಲ್ಲಿ 2023ರ ಆ.28ರಂದು ನನ್ನ ನೇತೃತ್ವದಲ್ಲಿ ಜಾನಪದ ಗಾಯನ ಮೂಡಿಬಂತು. ಮೈಸೂರು ಆಕಾಶವಾಣಿಯಲ್ಲಿ 'ಹಾದಿಯಲ್ಲಿ ಕಂಡ ಮುಖ' ಹಾಗೂ 'ಮಹಿಳಾ ರಂಗ' ಶೀರ್ಷಿಕೆಯಡಿ ಹಲವು ಕಾರ್ಯಕ್ರಮಗಳು ಪ್ರಸಾರವಾಗಿವೆ.

> ನಾನು ಗಂಜೀಫಾ ಕಲೆ ತರಬೇತಿ ಪಡೆಯಲು ಅನೇಕ ವರ್ಷಗಳಿಂದ ಹಾತೊರೆಯುತ್ತಿದ್ದೆ. ಅದು ಸಾಧ್ಯವಾಗಿರಲಿಲ್ಲ. ಇದೀಗ ಸುವರ್ಣಾವಕಾಶ ಒದಗಿ ಬಂತು. ಹೆಸರಾಂತ ಕಲಾವಿದರಾದ ಗಂಜೀಫಾ ರಘುಪತಿ ಭಟ್ ನೇತೃತ್ವದಲ್ಲಿ ಕಳೆದ ಅಕ್ಟೋಬರ್ ತಿಂಗಳಿಂದ ಆರಂಭವಾಗಿರುವ ತರಬೇತಿ ಶಿಬಿರದಲ್ಲಿ ಭಾಗವಹಿಸಿ, ಕಲಿಕೆ ಮುಂದುವರೆಸಿದ್ದೇನೆ.
>
> - ಸುಮಾ ಎಂ.ಪ್ರಶಾಂತ್

ಈಗ ಸುಮಾ ಅವರು ತಮ್ಮ ಮನೆಯಲ್ಲಿ ಬುಡಕಟ್ಟು ಸಮುದಾಯದ ಬದುಕನ್ನು ಅನಾವರಣಗೊಳಿಸುವ ಚಿತ್ರಕಲೆ ಬಿಡಿಸಿದ್ದಾರೆ. ಈ ಕಲೆ ಸೇರಿದಂತೆ ಒಟ್ಟು 18ಕ್ಕೂ ಹೆಚ್ಚು ವಿವಿಧ ಅಪರೂಪದ ಚಿತ್ರಕಲೆಗಳು ಅವರ ಕೈಯಿಂದ ಮೂಡಿವೆ. ಮನೆಗೆ ಬರುವ ಅತಿಥಿಗಳನ್ನು ಕೈಬೀಸಿ ಕರೆಯುತ್ತಿವೆ.

ಚಿತ್ರಕಲೆ ಮೂಲಕ ಭಾರತೀಯ ಪರಂಪರೆ, ಸನಾತನ ಧರ್ಮ ಪ್ರಚಾರ ಹಾಗೂ ಪೂರ್ವ ಪ್ರಾಥಮಿಕ, ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೆ ಗಂಜೀಫಾ ಚಿತ್ರ ಕಲೆ ಮೂಲಕ ಶಿಕ್ಷಣ ಪರಿಚಯಿಸುವುದು ಸಾಧ್ಯವಿದೆ. ಇದು ರಾಷ್ಟ್ರೀಯ ಶಿಕ್ಷಣ ನೀತಿಗೂ ಪೂರಕವಾಗಿದೆ. ಗಂಜೀಫಾ ಕಾರ್ಡ್‌ಗಳು, ವರ್ಲಿಆರ್ಟ್, ಬುಡುಕಟ್ಟು ಚಿತ್ರಕಲೆ ಸೇರಿದಂತೆ ಇತರೆ ಚಿತ್ರಕಲೆಗಳು ಈಗಾಗಲೇ ಅಪಾರ ಮೆಚ್ಚುಗೆಗೆ ಪಾತ್ರವಾಗಿವೆ.

ಒಡಿಸ್ಸಾದ ಒಡಿಯಾ ಆರ್ಟ್, ಮಧ್ಯಪ್ರದೇಶದ ಗೊಂಡಾ ಆರ್ಟ್, ಮಹಾರಾಷ್ಟ್ರದ ವರ್ಲಿ ಆರ್ಟ್, ಆಂಧ್ರಪ್ರದೇಶದ ಕಲನಾಕರಿ ಆರ್ಟ್, ತೆಲಂಗಾಣದ ಚೆರಿಯಲ್ ಆರ್ಟ್, ಕೇರಳ ನ್ಯಾಚುರಲ್ ಆರ್ಟ್, ರಾಜಸ್ತಾನದ ಪಹಡಿ ಪೇಂಟಿಂಗ್, ಪಶ್ಚಿಮ ಬಂಗಾಳ, ಕಾಳಿಘಾಟ್



ಪೇಯಿಟಿಂಗ್, ವಾರಾಣಸಿಯ ಬನಾರಸ್ ಪೇಂಟಿಂಗ್, ಬಾಂಗ್ಲಾದ ಜಮಿನಿರಾಯ್ ಪೇಂಟಿಂಗ್, ಕರ್ನಾಟಕದ ಚಿತ್ತಾರ ಆರ್ಟ್, ಮೈಸೂರ್ ಪೇಂಟಿಂಗ್, ತಂಜಾವೂರಿನ ಪೇಂಟಿಂಗ್, ರಿಚಿವಾಯ್ ಪೇಂಟಿಂಗ್, ಬೆನತ್ ಪೇಂಟಿಂಗ್, ಗಂಜೀಫಾ ಪೇಂಟಿಂಗ್‌ನಲ್ಲೂ ಪ್ರಾವೀಣ್ಯತೆ ಮೆರೆದಿದ್ದಾರೆ.


ಅಲ್ಲದೇ ಸುಮಾ ಎಂ.ಪ್ರಶಾಂತ್, ಹಿರಿಯ ಕಲಾವಿದ ಗಂಜೀಫಾ ರಘುಪತಿ ಭಟ್ ಅವರ ನೇತೃತ್ವದಲ್ಲಿ ಬೆಂಗಳೂರಿನ ಕೆಎಸ್‌ಎಚ್‌ಡಿಸಿ ವತಿಯಿಂದ ಆಯೋಜಿಸಿದ್ದ ಕರಕುಶಲ ವಸ್ತುಗಳ ಕೌಶಲ್ಯ ಅಭಿವೃದ್ಧಿ ಅಡಿಯಲ್ಲಿ ಗಂಜೀಫಾ ಕಲೆ ಕಲಿಕಾ ಶಿಬಿರದಲ್ಲಿ ತರಬೇತಿ ಪಡೆಯುತ್ತಿದ್ದಾರೆ. ಜಾನಪದ ಗಾಯಕಿಯಾಗಿ, ಲಘು ಶಾಸ್ತ್ರೀಯ ಸಂಗೀತವನ್ನು ಅಭ್ಯಾಸ ಮಾಡಿದ್ದಾರೆ. ಟೆರಾಕೋಟಾ ಕಲೆ, ಮಣಿಪುರಿ ಗೊಂಬೆ ತಯಾರಿಕೆಯಲ್ಲೂ ತಮ್ಮ ಕೈಚಳಕ ತೋರಿದ್ದಾರೆ. ಜೊತೆಗೆ ಕೆಲ ವಾದ್ಯಗಳ ನುಡಿಸುತ್ತಾರೆ. ಅಲ್ಲದೆ, ಹಲವು ವರ್ಷಗಳಿಂದ ಅಮೂಲ್ಯವಾದ ಸ್ಟ್ಯಾಂಪ್ ಮತ್ತು ನಾಣ್ಯ ಸಂಗ್ರಹದಲ್ಲೂ ಇವರು ಎತ್ತಿದ ಕೈ.


ಇಸ್ಪೀಟ್ ಆಟವನ್ನು ಹೋಲುವ ಗಂಜೀಫಾ ಎಲೆಗಳ ಆಟ ಭಾರತದ ಒಂದು ಪ್ರಾಚೀನ ಕ್ರೀಡೆ. ಮೂಲತಃ ಇದು ಪರ್ಷಿಯಾದಿಂದ ಬಂದು ಭಾರತದಲ್ಲಿ ಜನಪ್ರಿಯತೆ ಪಡೆದಿದೆ. ಭಾರತದಲ್ಲಿ ಮುಖ್ಯವಾಗಿ ಎರಡು ಬಗೆಯ ಗಂಜೀಫಾ ಎಲೆಗಳಿದ್ದು, ಅವುಗಳೆಂದರೆ ಮೊಘಲ್ ಗಂಜೀಫಾ ಮತ್ತು ದಶಾವತಾರ ಗಂಜೀಫಾ. ಇವೆಲ್ಲವುಗಳಿಗಿಂತ ಭಿನ್ನವಾದುದೆಂದರೆ ಮೈಸೂರಿನ ಗಂಜೀಫಾ ಎಲೆಗಳು. ಇವು ಬೇರೆ ರಾಜ್ಯಗಳ ಗಂಜೀಫಾ ಕಲೆಗಿಂತ ಭಿನ್ನವಾಗಿವೆ. ಮುಮ್ಮಡಿ ಕೃಷ್ಣರಾಜ ಒಡೆಯರು ಇದನ್ನು ರಚಿಸಿ, ಪೋಷಿಸಿದರು. ಒಂದು ಕಾಲಕ್ಕೆ ಮೈಸೂರು ಗಂಜೀಫಾ ಎಲೆಗಳ ತಯಾರಿಕೆಯ ಕೇಂದ್ರವಾಗಿತ್ತು. ಅಲ್ಲದೆ, ಅನೇಕ ರೀತಿಯ ಸಂಕೀರ್ಣ ಗಂಜೀಫಾ ಆಟಗಳನ್ನು ಅಭಿವೃದ್ಧಿಗೊಳಿಸಿದ್ದ ಕೀರ್ತಿಗೆ ಗಜೀಫಾ ರಘುಪತಿ ಭಟ್ ಪಾತ್ರರಾಗಿದ್ದಾರೆ.

ಹೆಚ್ಚು ಬಳಕೆಯಲ್ಲಿರುವ ದಶಾವತಾರೀ ಗಂಜೀಫಾ ಆಟದಲ್ಲಿ ಮತ್ಸ್ಯ, ಕೂರ್ಮ, ವರಾಹ, ನರಸಿಂಹ, ವಾಮನ, ಪರಶುರಾಮ, ರಾಮ, ಕೃಷ್ಣ ಬುದ್ಧ ಮತ್ತು ಕಲ್ಕಿ–ಈ ಹತ್ತು ಅವತಾರಗಳಿಗೆ ಪ್ರತಿಯೊಂದಕ್ಕೂ, ರಾಜಾ, ವಜೀರ್ ಮತ್ತು ಎಕ್ಕಾದಿಂದ ಹತ್ತು ಈ ಪ್ರಕಾರ 12 ಎಲೆಗಳನ್ನು ಸೇರಿಸಿ ಒಟ್ಟು 120 ಎಲೆಗಳನ್ನು ಉಪಯೋಗಿಸುತ್ತಾರೆ.

ರಂಗಭೂಮಿ, ಜಾನಪದ ಸಂಗೀತ, ಶಾಸ್ತ್ರೀಯ ಸಂಗೀತ ಸೇರಿದಂತೆ ಇತರೆ ಕಲೆಗಳ ಕಲಿಕೆಯಲ್ಲೂ ಮುಂದಿದ್ದಾರಲ್ಲದೆ, ಇವರು ಕಲಾ ಚಟುವಟಿಕೆಗಳಿಗೆ ಪತಿ ಬಾನು ಪ್ರಶಾಂತ್ ಸಾಥ್ ನೀಡುತ್ತಿದ್ದಾರೆ. ಪತಿ, ಸಿಂಗಾಪುರ, ಮಲೇಷಿಯ ಸೇರಿದಂತೆ ಜಗತ್ತಿನ ಬೇರೆಬೇರೆ ರಾಷ್ಟ್ರಗಳಲ್ಲಿ ಇಂಜಿನಿಯರ್ ಆಗಿ ಕೆಲಸ ನಿರ್ವಹಿಸಿದ್ದು, ಅಲ್ಲೇ ಸುಮಾ ಪ್ರಶಾಂತ್ ಕಲಿತ ಕಲೆ, ಇಂದು ದೂರದರ್ಶನ, ಸಂಘ–ಸಂಸ್ಥೆಗಳ ಏರ್ಪಡಿಸುವ ಕಾರ್ಯಕ್ರಮಗಳಲ್ಲಿ ಪ್ರಸಾರವಾಗುತ್ತಿವೆ.


ಮೈಸೂರು ಮಿತ್ರ
ನಿಮ್ಮ ಮೆಚ್ಚಿನ ಕನ್ನಡ ದಿನಪತ್ರಿಕೆ
46 ನೇ
ವಾರ್ಷಿಕೋತ್ಸವ ಆಚರಿಸಿಕೊಳ್ಳುತ್ತಿರುವ ನಮ್ಮೆಲ್ಲರ ಅಚ್ಚುಮೆಚ್ಚಿನ
ಮೈಸೂರು ಮಿತ್ರನಿಗೆ
ವಾರ್ಷಿಕೋತ್ಸವದ ಶುಭಾಶಯಗಳು
ಹೆಚ್.ಎನ್.ವೆಂಕಟೇಶ್
ಗೌರವ ಸಂಪಾದಕರು,
ಲಾ ಗೈಡ್
ಕನ್ನಡ ಕಾನೂನು ಮಾಸ ಪತ್ರಿಕೆ


ಮೈಸೂರು ಮಿತ್ರ
46
46ನೇ ವರ್ಷದ ಹುಟ್ಟುಹಬ್ಬವನ್ನು
ಆಚರಿಸಿಕೊಳ್ಳುತ್ತಿರುವ ನಮ್ಮೆಲ್ಲರ
ಅಚ್ಚುಮೆಚ್ಚಿನ
ಮೈಸೂರು ಮಿತ್ರನಿಗೆ ಹುಟ್ಟುಹಬ್ಬದ
ಶುಭಾಶಯಗಳು
ಹುಯಿಲಾಳು ರಾಮಸ್ವಾಮಿ
ಡಾ|| ಬಿ.ಆರ್.ಅಂಬೇಡ್ಕರ್ ಫೆಲೋಶಿಪ್ ಪ್ರಶಸ್ತಿ ವಿಜೇತರು ಹಾಗೂ ಮಾಜಿ ಗ್ರಾಮ ಪಂಚಾಯಿತಿ ಸದಸ್ಯರು.
ಅಧ್ಯಕ್ಷರು, ಶ್ರೀ ಮನೆ ಮಂಚಮ್ಮ, ದೇವಸ್ಥಾನ ಸೇವಾ ಟ್ರಸ್ಟ್ (ರಿ.), ಹಾಗೂ ಜಿಲ್ಲಾ ಕನ್ನಡ ರಾಜ್ಯೋತ್ಸವ,
ಪ್ರಶಸ್ತಿ ಪುರಸ್ಕೃತರು, ಅತ್ಯುತ್ತಮ ರಂಗಭೂಮಿ ಕಲಾವಿದರು, ಮೈಸೂರು ತಾ||, ಮೊ 9880845910


ಮೈಸೂರು ಮಿತ್ರ
ನಿಮ್ಮ ಮೆಚ್ಚಿನ ಕನ್ನಡ ದಿನಪತ್ರಿಕೆ
46 ನೇ ವರ್ಷಕ್ಕೆ
ಪಾದಾರ್ಪಣೆ ಮಾಡುತ್ತಿರುವ ಕನ್ನಡ ದಿನಪತ್ರಿಕೆ
ಮೈಸೂರು ಮಿತ್ರನಿಗೆ
ಶುಭಾಶಯಗಳು
ಡಾ. ನರಸಿಂಹೇಗೌಡ ಎಸ್.ಎ.
ವ್ಯವಸ್ಥಾಪಕ ನಿರ್ದೇಶಕರು
ಚಿರು ಪ್ರಾಪರ್ಟೀಸ್,
ಬಿಲ್ಡರ್ಸ್ ಮತ್ತು ಡೆವಲಪರ್ಸ್
ಪ್ರೈವೇಟ್ ಲಿಮಿಟೆಡ್, ಮೈಸೂರು


ಮೈಸೂರು ಮಿತ್ರ
46
46 ನೇ ವರ್ಷಕ್ಕೆ
ಪಾದಾರ್ಪಣೆ ಮಾಡುತ್ತಿರುವ ಕನ್ನಡ ದಿನಪತ್ರಿಕೆ
ಮೈಸೂರು ಮಿತ್ರನಿಗೆ
ಶುಭಾಶಯಗಳು
ಲಯನ್ ಡಾ. ಎನ್.ಕೃಷ್ಣೇಗೌಡ
ಎಂಜೆಎಫ್ ಮತ್ತು ಬಹು ಮಂಡಳಿ ಅಧ್ಯಕ್ಷರು
ಬಹು ಜಿಲ್ಲೆ 317
(ಕರ್ನಾಟಕ, ಗೋವಾ ಮತ್ತು ಆಂಧ್ರಪ್ರದೇಶದ
ಕೆಲ ಭಾಗವನ್ನು ಒಳಗೊಂಡಂತೆ)
ವಕೀಲರು ಮತ್ತು ಲೆಕ್ಕ ಪರಿಶೋಧಕರು
ಸಿಂಡಿಕೇಟ್ ಸದಸ್ಯರು
ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯ,
ಬೆಳಗಾವಿ

ಅರಣ್ಯ ಸಂರಕ್ಷಕಿ ಕೊಡಗಿನ ಪಿ.ಎ.ಸೀಮಾ



...ಎಂ.ಟಿ.ಯೋಗೇಶ್ ಕುಮಾರ್

ಅತ್ಯಮೂಲ್ಯ ವನ್ಯಜೀವಿ ಸಂಪತ್ತುವುಳ್ಳ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಸಂರಕ್ಷಣೆ ಈಗ ಕೊಡಗಿನ ಕುವರಿ ಪಿ.ಎ.ಸೀಮಾ ಹೆಗಲೇರಿದೆ. ಹಲವಾರು ಕಾರ್ಯಕ್ರಮ ರೂಪಿಸಿ ಮಾನವ-ವನ್ಯಜೀವಿ ಸಂಘರ್ಷ ತಡೆಗೆ ಪಣ ತೊಟ್ಟಿದ್ದಾರೆ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕಿ ಪಿ.ಎ.ಸೀಮಾ.

ಈ ಬಾರಿಯ ವಿಶ್ವ ಮಹಿಳಾ ದಿನಾಚರಣೆ ವೇಳೆ 'ಮೈಸೂರು ಮಿತ್ರ' ನೊಂದಿಗೆ ಮುಕ್ತವಾಗಿ ಮಾತನಾಡಿದ 2017ನೇ ಬ್ಯಾಚ್‌ನ ಐಎಫ್‌ಎಸ್ ಅಧಿಕಾರಿ ಪಿ.ಎ.ಸೀಮಾ, ಈಗಾಗಲೇ ಮೈಸೂರು, ಮಂಡ್ಯ, ಕೊಡಗು ಹಾಗೂ ಆನೆ ಕಾರ್ಯಪಡೆ(ಇಟಿಎಫ್)ಯಲ್ಲಿ ಡಿಸಿಎಫ್ ಆಗಿ ಸಾಕಷ್ಟು ಅನುಭವವಾಗಿದೆ. ಈಗ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ ಸಂರಕ್ಷಣೆ ಮಹಾ ಹೊಣೆ ಸವಾಲು ಎದುರಾಗಿದೆ.

ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಮೊದಲ ಮಹಿಳಾ ಅಧಿಕಾರಿ ಎಂಬುದು ಹೆಮ್ಮೆಯ ಸಂಗತಿ. ಈ ಹೆಗ್ಗಳಿಕೆಗೆ ತಕ್ಕಂತೆ ಸೇವೆ ಸಲ್ಲಿಸುವ ಗುರಿ ನನ್ನದಾಗಿದೆ.

ನಾನು, ಕೊಡಗು ಜಿಲ್ಲೆಯ ನಾಪೋಕ್ಲು ಗ್ರಾಮದ ನಿವಾಸಿ. ನನಗೆ ಮೊದಲಿನಿಂದ ಅರಣ್ಯ ಸಂಪತ್ತಿನ ಸಂರಕ್ಷಣೆ ಬಗ್ಗೆ ಒಲವು ಇತ್ತು. ನಾಪೋಕ್ಲಿನಲ್ಲೇ ಪಿಯುಸಿ ಮುಗಿಸಿ, ಪೊನ್ನಂಪೇಟೆಯಲ್ಲಿ ಬಿಎಸ್ಸಿ, ಎಂಎಸ್ಸಿ ಮಾಡಿದ ನಂತರ ಐಎಫ್‌ಎಸ್ ಪರೀಕ್ಷೆಗೆ ಸಿದ್ಧತೆ ಮಾಡಿಕೊಂಡಿದ್ದೆ. ಹಾಗಾಗಿ 2017ನೇ ಬ್ಯಾಚ್ ಅಧಿಕಾರಿಯಾಗಿ ಆಯ್ಕೆಯಾಗಿ, ಅರಣ್ಯ ಇಲಾಖೆಯಲ್ಲಿ ಖುಷಿಯಿಂದ ಸೇವೆಸಲ್ಲಿಸುತ್ತಿದ್ದೇನೆ.

ಸಿಬ್ಬಂದಿ, ವನ್ಯಸಂಪತ್ತಿನ ಹಿತ ಮುಖ್ಯ: ನಾಗರಹೊಳೆ ಅಭಯಾರಣ್ಯ ರಾಜ್ಯ ಮಾತ್ರವಲ್ಲದೆ ದೇಶದ ಗಮನ ಸೆಳೆದ ಹುಲಿ ಸಂರಕ್ಷಿತ ಪ್ರದೇಶ. ಇಲ್ಲಿನ ವನ್ಯ ಸಂಪತ್ತಿನ ಸಂರಕ್ಷಣೆಯೊಂದಿಗೆ ಫೀಲ್ಡ್ ಸ್ಟಾಫ್(ಮುಂಚೂಣಿ ಸಿಬ್ಬಂದಿ)ಗಳ ಹಿತಕಾಯುವುದು ನಮ್ಮ ಮೊದಲ ಆದ್ಯತೆ. ನಮ್ಮ ಅರಣ್ಯ ವ್ಯಾಪ್ತಿಯಲ್ಲಿ 54 ಕಳ್ಳಬೇಟೆ ತಡೆ ಶಿಬಿರಗಳಿವೆ. ಅಲ್ಲದೆ, ಗುತ್ತಿಗೆ ಆಧಾರದಲ್ಲಿ 350ಕ್ಕೂ ಹೆಚ್ಚು ವಾಚರ್‌ಗಳು ಕಾರ್ಯನಿರ್ವಹಿಸುತ್ತಿದ್ದಾರೆ. ಸಿಬ್ಬಂದಿಯ ಹಿತ ಕಾಪಾಡಲು ಕಾರ್ಯಕ್ರಮ ರೂಪಿಸಲಾಗಿದೆ. ವನ್ಯಜೀವಿಗಳ ಸಾಂದ್ರತೆ ಹೆಚ್ಚಿಸಲು ಬದ್ಧವಾಗಿರುವುದಾಗಿ ವಿಶ್ವಾಸ ವ್ಯಕ್ತಪಡಿಸಿದರು.

ಸವಾಲುಗಳಿವೆ: ಸಾಮಾಜಿಕ ಅರಣ್ಯ ಪ್ರದೇಶಕ್ಕಿಂತ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಕೆಲಸ ಮಾಡುವ ವೇಳೆ ಹಲವಾರು ಸವಾಲುಗಳು ಎದುರಾಗುತ್ತವೆ. ಅಭಯಾರಣ್ಯಗಳಲ್ಲಿ ಪ್ರಾಣಿಗಳ ಸುರಕ್ಷತೆ, ಅಕ್ರಮ ನುಸುಳುವಿಕೆ, ಕಳ್ಳ ಬೇಟೆ ತಡೆ, ಮಾನವ-ಪ್ರಾಣಿ ಸಂಘರ್ಷ ತಡೆ, ಪ್ರಾಣಿಗಳ ಸಾಂದ್ರತೆ ಹೆಚ್ಚಿಸುವುದರೊಂದಿಗೆ, ಕಾಡ್ಗಿಚ್ಚು ತಡೆಗಾಗಿ ಕಾರ್ಯನಿರ್ವಹಿಸುವ ಸವಾಲುಗಳಿರುತ್ತವೆ. ಈ ಎಲ್ಲಾ ಸವಾಲುಗಳನ್ನು ಹಿಮ್ಮೆಟ್ಟಿ ಕಾರ್ಯನಿರ್ವಹಿಸಲು ಮುಂಚೂಣಿ ಸಿಬ್ಬಂದಿ ಸೇರಿದಂತೆ ಅಧಿಕಾರಿಗಳು ಬೆಂಬಲ ನೀಡುತ್ತಿದ್ದಾರೆ. ಅರಣ್ಯ ಇಲಾಖೆಯಲ್ಲಿ ಕಾರ್ಯನಿರ್ವಹಿಸುವ ಮಹಿಳಾ ಅಧಿಕಾರಿಗಳಿಗೆ ಭದ್ರತೆ ಮತ್ತು ಸುರಕ್ಷತೆಗೆ ಯಾವುದೇ ಕೊರತೆಯಿಲ್ಲ. ನಾಗರಹೊಳೆ ನಿರ್ದೇಶಕಿಯಾಗಿ ಕಾರ್ಯನಿರ್ವಹಿಸಲು ಹಿರಿಯ ಅಧಿಕಾರಿಗಳಿಂದ, ಇಲಾಖೆಯ ಎಲ್ಲಾ ಸಿಬ್ಬಂದಿ ಬೆಂಬಲ ನೀಡುತ್ತಿದ್ದಾರೆ. ಅಲ್ಲದೆ, ಅರಣ್ಯ ಇಲಾಖೆಯಲ್ಲಿ ಕೆಲಸ ಮಾಡಲು ಕಷ್ಟ ಎಂದು ಯಾರಿಗೂ ಅನ್ನಿಸುವುದಿಲ್ಲ. ಆರಂಭದಲ್ಲಿ ಕೆಲವರಿಗೆ ಕಷ್ಟ ಎನಿಸಬಹುದು. ನಾನು ಫಾರೆಸ್ಟ್ರೀ ಕಾಲೇಜಿನಲ್ಲಿ ಓದಿದ್ದರಿಂದ ಫೀಲ್ಡ್ ವರ್ಕ್ ನನಗೆ ಕಷ್ಟವಾಗಲಿಲ್ಲ. ಹಾಗಾಗಿ ಮಹಿಳಾ ಅಧಿಕಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸಲು ಪೂರಕ ವಾತಾವರಣವಿದೆ.




> ಅರಣ್ಯಾಧಿಕಾರಿಯಾಗಿ ಸೇವೆ ಸಲ್ಲಿಸಲು ನಮ್ಮ ಕುಟುಂಬದ ಬೆಂಬಲ ಸಂಪೂರ್ಣ ಇದೆ. ಕುಟುಂಬದಲ್ಲಿ ಮೊದಲ ಅಧಿಕಾರಿಯಾಗಿರುವ ನನಗೆ ತಾಯಿ ಕಮಲ, ತಂದೆ ಆನಂದ್ ತುಂಬಾನೇ ಬೆಂಬಲ ನೀಡಿದರು. ವೈವಾಹಿಕ ಜೀವನದ ಬಳಿಕ ಪತಿ ರಂಜನ್, ಮಕ್ಕಳಾದ ದೇಸ್ನ ಗೌರಮ್ಮ, ದೇವ್ ಗಣಪತಿ ಸಾಥ್ ನೀಡಿದ್ದಾರೆ. ಫೀಲ್ಡ್‌ಗೆ ಭೇಟಿ ನೀಡಿದಾಗ ಮನೆಗೆ ಹೋಗುವುದು ತಡವಾಗುತ್ತದೆ. ಇದನ್ನು ಮಕ್ಕಳಾದಿಯಾಗಿ ಎಲ್ಲರೂ ಅರ್ಥ ಮಾಡಿಕೊಂಡು ಸಹಕರಿಸುತ್ತಿದ್ದಾರೆ.
>
> **– ಸೀಮಾ, ನಿರ್ದೇಶಕರು, ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ**


ಈ ಹಿಂದೆ ಅರಣ್ಯ ಇಲಾಖೆಯಲ್ಲಿ ಮಹಿಳಾ ಸಿಬ್ಬಂದಿ ಅತೀ ವಿರಳ. ಇತ್ತೀಚಿನ ವರ್ಷಗಳಲ್ಲಿ ಅರಣ್ಯ ಇಲಾಖೆಗೆ ಸೇರುವ ಮಹಿಳೆಯರ ಸಂಖ್ಯೆ ಹೆಚ್ಚಾಗುತ್ತಿದೆ. ಹಿಂಜರಿಕೆಯಿಲ್ಲದೆ, ಸಮಾನತೆಯಿಂದ ಕೆಲಸ ಮಾಡುವ ಮೂಲಕ ನಮ್ಮನ್ನು ನಾವು ಹಾಗೂ ನಮ್ಮ ಸಾಮರ್ಥ್ಯವನ್ನು ಸಾಬೀತು ಪಡಿಸಿಕೊಳ್ಳಲು ಸಹಕಾರಿಯಾಗುತ್ತದೆ. ಪ್ರಕೃತಿ ಮಡಿಲಿನೊಂದಿಗೆ ಕೆಲಸ ಮಾಡಲು ಬದ್ಧವಾಗಿದ್ದೇವೆ ಎಂಬುದನ್ನು ಸಾಬೀತುಪಡಿಸಲು ಇದೊಂದು ಅವಕಾಶವಾಗಿದೆ.


ಸುಧಾರಣೆ ಕಂಡಿದೆ: ಮಹಿಳಾ ಅಧಿಕಾರಿ ಎಂದು ಸುಮ್ಮನೆ ಕೂರದೆ ಏನನ್ನಾದರೂ ಸಾಧಿಸಬೇಕು ಎಂಬ ಛಲವಿದೆ. ಹೊಸ ಹೊಸ ಕಾರ್ಯಕ್ರಮಗಳನ್ನು ಜಾರಿಗೆ ತರಬೇಕೆಂಬ ಆಲೋಚನೆಯಿದೆ. ಮೊದಲ ಹಂತದಲ್ಲಿ ಫೀಲ್ಡ್ ಸ್ಟಾಫ್ ಹಿತ ಕಾಯಲು ಹಾಗೂ ಕ್ಯಾಂಪ್‌ಗಳ ಸುಸ್ಥಿತಿ ಕಾಪಾಡಲು ಕ್ರಮ ಕೈಗೊಳ್ಳಲಾಗಿದೆ. ಸಂಘಟಿತ ಕಾರ್ಯನಿರ್ವಹಣೆಯಿಂದ ಕಳೆದ 3-4 ತಿಂಗಳಿಂದ ನಾಗರಹೊಳೆ ಭಾಗದಲ್ಲಿ ಮಾನವ-ಪ್ರಾಣಿ ಸಂಘರ್ಷದ ಪ್ರಕರಣ ಕಡಿಮೆಯಾಗಿವೆ.








46
ಮೈಸೂರು ಮಿತ್ರ
ನಿಮ್ಮ ಮೆಚ್ಚಿನ ಕನ್ನಡ ದಿನಪತ್ರಿಕೆ
46
ನೇ ವರ್ಷಕ್ಕೆ
ಪಾದಾರ್ಪಣೆ ಮಾಡುತ್ತಿರುವ ಕನ್ನಡ ದಿನಪತ್ರಿಕೆ
"ಮೈಸೂರು ಮಿತ್ರನಿಗೆ"
ಹಾರ್ದಿಕ ಶುಭಾಶಯಗಳು
ಪತ್ರಿಕೆಯ ಕೀರ್ತಿ ಇಮ್ಮಡಿಗೊಳ್ಳಲಿ ಪತ್ರಿಕೆ
ಸಂಸ್ಥಾಪಕ, ಸಂಪಾದಕರಾದ
ಡಾ.ಕೆ.ಬಿ.ಗಣಪತಿ ಅವರು ಹಾಗೂ
ಅವರ ಕುಟುಂಬವರ್ಗ, ಸಿಬ್ಬಂದಿವರ್ಗಕ್ಕೂ
ನಮ್ಮ ಶುಭಹಾರೈಕೆಗಳು.
ಎಲ್.ಆರ್. ಮಹದೇವಸ್ವಾಮಿ ಎಂ.ಬಿ.ಎ.
ಅಧ್ಯಕ್ಷರು, ಭಾರತೀಯ ಜನತಾ ಪಾರ್ಟಿ ಮೈಸೂರು ಜಿಲ್ಲೆ
ಮಾಜಿ ಅಧ್ಯಕ್ಷರು, ಕರ್ನಾಟಕ ಮೃಗಾಲಯ ಪ್ರಾಧಿಕಾರ



46
ಮೈಸೂರು ಮಿತ್ರ
ನಿಮ್ಮ ಮೆಚ್ಚಿನ ಕನ್ನಡ ದಿನಪತ್ರಿಕೆ
46 ನೇ ವರ್ಷಕ್ಕೆ
ಪಾದಾರ್ಪಣೆ ಮಾಡುತ್ತಿರುವ ಕನ್ನಡ ದಿನಪತ್ರಿಕೆ
ಮೈಸೂರು ಮಿತ್ರನಿಗೆ
ಶುಭಾಶಯಗಳು
ರವಿ
ಮಂಚೇಗೌಡನ ಕೊಪ್ಪಲು
ಅಧ್ಯಕ್ಷರು, ಇಂದಿರಾ ಗಾಂಧಿ ಬ್ಲಾಕ್
ಕಾಂಗ್ರೆಸ್ ಸಮಿತಿ, ಚಾಮರಾಜ ಕ್ಷೇತ್ರ,
ಮೈಸೂರು



46
ಮೈಸೂರು ಮಿತ್ರ
ನಿಮ್ಮ ಮೆಚ್ಚಿನ ಕನ್ನಡ ದಿನಪತ್ರಿಕೆ
46 ನೇ ವರ್ಷಕ್ಕೆ
ಪಾದಾರ್ಪಣೆ ಮಾಡುತ್ತಿರುವ ಕನ್ನಡ ದಿನಪತ್ರಿಕೆ
ಮೈಸೂರು ಮಿತ್ರನಿಗೆ
ಶುಭಾಶಯಗಳು
ಆರ್.ಲಿಂಗಪ್ಪ
ಬಿ.ಎ., ಎಲ್‌ಎಲ್‌ಬಿ
ಮಾಜಿ ಮಹಾಪೌರರು,
ಮೈಸೂರು ಮಹಾನಗರ ಪಾಲಿಕೆ,
ಮೈಸೂರು



ಮೈಸೂರು, ಮಂಡ್ಯ, ಕೊಡಗು, ಹಾಸನ ಮತ್ತು ಚಾಮರಾಜನಗರ
ಜಿಲ್ಲೆಗಳಲ್ಲಿ ಅತೀ ಹೆಚ್ಚು ಪ್ರಸರಣ ಹೊಂದಿರುವ
46
ಮೈಸೂರು ಮಿತ್ರ
ನಿಮ್ಮ ಮೆಚ್ಚಿನ ಕನ್ನಡ ದಿನಪತ್ರಿಕೆ
46 ನೇ ವರ್ಷಕ್ಕೆ
ಪಾದಾರ್ಪಣೆ ಮಾಡುತ್ತಿರುವ ಕನ್ನಡ ದಿನಪತ್ರಿಕೆ
ಮೈಸೂರು ಮಿತ್ರನಿಗೆ
ಶುಭಾಶಯಗಳು
ಸಂದೇಶ್ ಸ್ವಾಮಿ
ಮೈಸೂರು ಮಹಾನಗರ ಪಾಲಿಕೆಯ
ಮಾಜಿ ಮಹಾಪೌರರು


46
ಮೈಸೂರು ಮಿತ್ರ
ನಿಮ್ಮ ಮೆಚ್ಚಿನ ಕನ್ನಡ ದಿನಪತ್ರಿಕೆ
46 ನೇ
ವಾರ್ಷಿಕೋತ್ಸವ ಆಚರಿಸಿಕೊಳ್ಳುತ್ತಿರುವ ನಮ್ಮೆಲ್ಲರ ಅಚ್ಚುಮೆಚ್ಚಿನ
ಮೈಸೂರು ಮಿತ್ರನಿಗೆ
ವಾರ್ಷಿಕೋತ್ಸವದ ಶುಭಾಶಯಗಳು
ಎನ್.ಆರ್.ರವಿಚಂದ್ರೇಗೌಡ
ವಕೀಲರು ಹಾಗೂ
ಜನತಾದಳ, (ಜಾತ್ಯಾತೀತ)
ರಾಜ್ಯ ವಕ್ತಾರರು


46
ಮೈಸೂರು, ಮಂಡ್ಯ, ಕೊಡಗು, ಹಾಸನ ಮತ್ತು ಚಾಮರಾಜನಗರ
ಜಿಲ್ಲೆಗಳಲ್ಲಿ ಅತೀ ಹೆಚ್ಚು ಪ್ರಸರಣ ಹೊಂದಿರುವ ಅಚ್ಚುಮೆಚ್ಚಿನ
ಮೈಸೂರು ಮಿತ್ರನಿಗೆ
46 ನೇ
ವಾರ್ಷಿಕೋತ್ಸವದ ಶುಭಾಶಯಗಳು
ಸಿ.ಪ್ರಕಾಶ್
ಸಾಮಾಜಿಕ ನ್ಯಾಯ ಸಮಿತಿ
ಅಧ್ಯಕ್ಷರು, ತಿ.ನರಸೀಪುರ, ಪುರಸಭೆ


46 ನೇ
46
ವಾರ್ಷಿಕೋತ್ಸವ ಆಚರಿಸಿಕೊಳ್ಳುತ್ತಿರುವ
ನಮ್ಮೆಲ್ಲರ ಅಚ್ಚುಮೆಚ್ಚಿನ
ಮೈಸೂರು ಮಿತ್ರನಿಗೆ
ಅಭಿನಂದನೆಗಳು
ಎಸ್.ಕೆ.ಕಿರಣ್
ಪುರಸಭಾ ಸದಸ್ಯರು,
ತಿ.ನರಸೀಪುರ
ಹಾಗೂ ತಾಲೂಕು
ವೀರಶೈವ ಮಹಾಸಭಾದ ಉಪಾಧ್ಯಕ್ಷರು


46
ಮೈಸೂರು ಮಿತ್ರ
ನಿಮ್ಮ ಮೆಚ್ಚಿನ ಕನ್ನಡ ದಿನಪತ್ರಿಕೆ
46 ನೇ ವರ್ಷಕ್ಕೆ
ಪಾದಾರ್ಪಣೆ ಮಾಡುತ್ತಿರುವ ಪ್ರಾದೇಶಿಕ ದಿನಪತ್ರಿಕೆ
ಮೈಸೂರು ಮಿತ್ರನಿಗೆ
ಶುಭಾಶಯಗಳು
ಎಸ್.ಬಿ.ಎಂ.ಮಂಜು
ಮಾಜಿ ಕಾರ್ಪೋರೇಟರ್
ಹಾಗೂ ಹಿರಿಯ ಸಹಕಾರಿಗಳು


ಮೈಸೂರು ಮಿತ್ರ
46
ಈ ಸುಸಂದರ್ಭದಲ್ಲಿ
ಮೈಸೂರು ಮಿತ್ರ ಪತ್ರಿಕಾ ರಂಗದಲ್ಲಿ
ಇನ್ನೂ ಹೆಚ್ಚು ಹೆಚ್ಚು ಪ್ರಕಾಶಿಸಲೆಂದು
ನಮ್ಮ ಮಿತ್ರನಿಗೆ ಶುಭ ಹಾರೈಸುತ್ತೇನೆ.
ಉಮ್ಮತ್ತೂರು ಇಂದುಶೇಖರ್
ವಕೀಲರು
ನಿಕಟಪೂರ್ವ ಅಧ್ಯಕ್ಷರು,
ಜಿಲ್ಲಾ ವಕೀಲರ ಸಂಘ
ಚಾಮರಾಜನಗರ
ಮೊ: 9880820462


ಮೈಸೂರು ಮಿತ್ರ ನಿಗೆ
46
46ನೇ ವರ್ಷದ ವಾರ್ಷಿಕೋತ್ಸವದ
ಹೃದಯಪೂರ್ವಕ ಅಭಿನಂದನೆಗಳು
ಶುಭಕೋರುವವರು
ಗಡ್ಡಮಹೇಶ್
ಅಧ್ಯಕ್ಷರು, ನಗರ ಯೋಜನಾ ಪ್ರಾಧಿಕಾರ, ಕೆ.ಆರ್. ನಗರ ಮತ್ತು ನಿರ್ದೇಶಕರು


ಜನಪ್ರಿಯ
ಸುದ್ದಿ ಪ್ರಸಾರಕನಾಗಿರುವ ನಮ್ಮ
ಮೈಸೂರು ಮಿತ್ರ ನಿಗೆ
46
46ನೇ ವರ್ಷದ ವಾರ್ಷಿಕೋತ್ಸವದ
ಹೃದಯಪೂರ್ವಕ ಅಭಿನಂದನೆಗಳು
ಶುಭ ಕೋರುವವರು
ಜಿ.ಎಸ್. ವೆಂಕಟೇಶ್
ಯುವ ಕಾಂಗ್ರೆಸ್ ಮುಖಂಡರು
ಕೆ. ಆರ್.ನಗರ ವಿಧಾನ ಸಭಾಕ್ಷೇತ್ರ, ಗಂಧನಹಳ್ಳಿ

46 ಮೈಸೂರು ಮಿತ್ರ
ಮೈಸೂರು ಮಿತ್ರ
ವಾರ್ಷಿಕ ವಿಶೇಷಾಂಕ 2025
16.4.2025
ಬುಧವಾರ

ನಕ್ಕು ಬಿಡಿ

ಭಿಕ್ಷುಕ: ಅಮ್ಮಾ ಒಂದು ರೊಟ್ಟಿ ಕೊಡಿ
ಮಹಿಳೆ: ರೊಟ್ಟಿ ಇನ್ನೂ ಮಾಡಿಲ್ಲ ಆಮೇಲೆ ಬಾ
ಭಿಕ್ಷುಕ: ಮೊಬೈಲ್ ನಂಬರ್ ತಗೊಳಿ. ರೆಡಿ ಆದ ಮೇಲೆ ಮಿಸ್ಡ್ ಕಾಲ್ ಕೊಡಿ.
ಮಹಿಳೆ: ಮಿಸ್ಡ್ ಕಾಲ್ ಯಾಕೆ? ಫೋಟೋ ತೆಗೆದು ವಾಟ್ಸಪ್‌ಲಿ ಕಳೀಸ್ತೀನಿ. ಡೌನ್ಲೋಡ್ ಮಾಡಿಕೊಂಡು ತಿನ್ನು.

(ಹೆಂಡತಿ ಇಂಗ್ಲಿಷ್ ಪೇಪರ್ ಓದುತ್ತಾ)
ಹೆಂಡತಿ: ರೀ ಕನ್ನಡದಲ್ಲಿ ಏನೆಲ್ಲಾ ಫಿಲಂ ಮಾಡ್ತಾರೆ ಅರ್ಥನೇ ಆಗಲ್ಲ.
ಗಂಡ: ಯಾವುದಮ್ಮಾ ಆ ಚಿತ್ರ?
ಹೆಂಡತಿ: ಅದ್ಯಾವುದೋ 'ಬೀಡಿ ಸೇದಿ ಬಂದ' ಅಂತೆ
ಗಂಡ: ಅದು 'ಬೀಡಿ ಸೇದಿ ಬಂದ' ಅಲ್ಲ ಕಣೆ... 'ಬಿಡಿಸದ ಬಂಧ'

ಗಂಡ: ಲೇ ನಿನಗೆ ಈ ಹಬ್ಬಕ್ಕೆ ಯಾವ ಬಟ್ಟೆ ತರಲೆ? ಸೀರೆನಾ ಅಥವಾ ಚೂಡಿದಾರನಾ?
ಹೆಂಡತಿ: ನಿಮಗೆ ಬಟ್ಟೆ ಒಗೆಯೋದಕ್ಕೆ ಯಾವುದು ಸುಲಭಾನೋ ಅದನ್ನೇ ತನ್ನಿ ರೀ.

(ಗಂಡ– ಹೆಂಡತಿ ದಾರೀಲಿ ಹೋಗುತ್ತಿರುವಾವ ಒಂದು ಕತ್ತೆ ಎದುರು ಬಂತು)
ಹೆಂಡತಿ: ರೀ ನಿಮ್ಮ ಸಂಬಂಧಿಕರು ಬಂದ್ರು ನೋಡಿ.
ಗಂಡ: ಏನ್ ಮಾವ ಚೆನ್ನಾಗಿದ್ದಿರಾ? ಮಗಳನ್ನ ನೋಡೊದಕ್ಕೆ ಬಂದ್ರಾ

ಹೆಂಡತಿ: ರೀ ಏನ್ ಮಾಡ್ತಾ ಇದ್ದಿರಾ?
ಗಂಡ: ನೊಣ ಹೊಡಿತಾ ಇದ್ದೀನಿ
ಹೆಂಡತಿ: ನೊಣಗಳು ಸಿಕ್ಕಿದ್ವಾ?
ಗಂಡ : ಹ್ಞೂ.. 3 ನೊಣಗಳನ್ನು ಸಾಯಿಸಿದ್ದೀನಿ ಅದರಲ್ಲಿ 3 ಗಂಡು, 2 ಹೆಣ್ಣು
ಹೆಂಡತಿ: ನೊಣಗಳನ್ನು 3 ಗಂಡು, 2 ಹೆಣ್ಣು ಎಂದು ಹೇಗ್ ಹೇಳ್ತಿರಾ?
ಗಂಡ: ಸಿಂಪಲ್ ಕಣೆ, 3 ಗಂಡು ನೊಣ ಬಿಯರ್ ಬಾಟಲ್ ಮೇಲೆ ಕೂತಿದ್ರೆ 2 ಹೆಣ್ಣು ನೊಣ ಮೊಬೈಲ್ ಫೋನ್ ಮೇಲೆ ಕೂತಿದ್ವು..

ಹುಡುಗಿ: ಯಾಕೋ ಹಾಗೆ ನೋಡ್ತಾ ಇದಿಯಾ ನಿಂಗೆ ಅಕ್ಕ ತಂಗಿ ಯಾರು ಇಲ್ವಾ..?
ಹುಡುಗ: ಇರೋದಕ್ಕೆ ನೋಡ್ತಿರೋದು.
ಹುಡುಗಿ: ಯಾಕೆ?
ಹುಡುಗ: ನನ್ ತಂಗಿಗೆ ಒಳ್ಳೆ ಅತ್ತಿಗೆ ಬೇಕಂತೆ...

ಕಾಲಗರ್ಭದಲ್ಲಿ ಮರೆಯಾದ ಮತ್ತೊಂದು ಪಾರಂಪರಿಕ ನಿರ್ಮಾಣ

'ದಿ ಪ್ಯಾಲೇಸ್ ಮೋಟಾರ್ ಗ್ಯಾರೇಜ್'ನ ಗತವೈಭವ



ಆರ್.ಮುನಿರಾವ್ ಮಾನೆ
ನಿವೃತ್ತ ನೌಕರ,
ಕ.ರಾ.ರ.ಸಾ. ಸಂಸ್ಥೆ, ಮೈಸೂರು,
ಮೊ: 8694988437

ವಿಶ್ವವಿಖ್ಯಾತ ಮೈಸೂರು ಅರಮನೆಯನ್ನೂ ಒಳಗೊಂಡಂತೆ, ವಿಶಾಲವಾದ ರಾಜಬೀದಿಗಳಿಂದ, ಸುಂದರವಾದ ಉದ್ಯಾನ ನಗರವೆಂದೇ ಪ್ರಸಿದ್ಧಿ ಪಡೆದಿರುವ ಮೈಸೂರು ನಗರ, ಅನೇಕ ಪಾರಂಪರಿಕ ಕಟ್ಟಡಗಳ ತಾಣ. ಅಂತಹ ಪಾರಂಪರಿಕ ಕಟ್ಟಡಗಳ ಪೈಕಿ 'ದಿ ಮೈಸೂರ್ ಪ್ಯಾಲೇಸ್ ಮೋಟಾರ್ ಗ್ಯಾರೇಜ್' ಕೂಡ ಒಂದು ಎಂಬುದನ್ನು ಬಹುತೇಕರು ಮರೆತಿರಬಹುದು. ಆದರೆ ಅದರ ಸೌಂದರ್ಯವನ್ನು ಸ್ವತಃ ನೋಡಿ ಕಣ್ತುಂಬಿಕೊಂಡಿರುವವರು ಯಾರೂ ಮರೆಯುವುದಕ್ಕೆ ಸಾಧ್ಯವಿಲ್ಲ. ಆ ದಿನ ಮಾನಗಳಲ್ಲಿ ಅರಮನೆಯ ಸುಪರ್ದಿಗೆ ಬರುವ ಎಲ್ಲಾ ಮೋಟಾರು-ಕಾರುಗಳ ವ್ಯವಸ್ಥಿತ ನಿರ್ವಹಣೆಗೆಂದು ತಮ್ಮದೇ ಆದ ಪ್ರತ್ಯೇಕ ಮೋಟಾರು ಗ್ಯಾರೇಜ್‌ನ ಅವಶ್ಯಕತೆಯನ್ನು ಮಹಾರಾಜರು ಮನಗಂಡಿದ್ದರು.

ಗ್ಯಾರೇಜ್ ಕಟ್ಟಡ: ಹತ್ತನೆಯ ಚಾಮರಾಜ ಒಡೆಯರ್‌ರವರ ಕಾಲದಲ್ಲಿ ಕಟ್ಟಿಸಿರಬಹುದಾದ ಈ ಭವ್ಯ ಕಟ್ಟಡವು ಇದ್ದದ್ದು, ಮೈಸೂರಿನ ನಜರ್‌ಬಾದ್ ಮೊಹಲ್ಲಾದಲ್ಲಿ. ಈ ಕಟ್ಟಡದ ದಕ್ಷಿಣಕ್ಕೆ ಸರ್ ಮಿರ್ಜಾ ಇಸ್ಮಾಯಿಲ್ ರೋಡ್ (ರೋಡಿನ ಇನ್ನೊಂದು ಪಾರ್ಶ್ವದಲ್ಲಿ ಹುಜೂರ್ ಪಾಳ್ಯೇಗಾರ್‌ರವರ ನಿವಾಸ) ಇದೆ. ಪಶ್ಚಿಮಕ್ಕೆ ಬ್ಯಾಂಡ್ ಬಂಗಲೆ ಇತ್ತು (ಈಗಲೂ ಇದೆ, ಪಾರಂಪರಿಕ ಕಟ್ಟಡವಾದ ಇದನ್ನು ಇತ್ತೀಚೆಗೆ ನವೀಕರಿಸಲಾಗಿದ್ದು, ಸದ್ಯದಲ್ಲೇ ಬ್ಯಾಂಡ್‌ಗೆ ಸಂಬಂಧಿಸಿದ ಪರಿಕರಗಳು ಮುಂಚಿನಂತೆ ಮತ್ತೆ ಬಂದು ಸೇರಲಿದ್ದು, ಬ್ಯಾಂಡ್ ಮ್ಯೂಸಿಯಂ ಆಗಿ ಪರಿವರ್ತಿತವಾಗಿ ಸಾರ್ವಜನಿಕ ವೀಕ್ಷಣೆಗೆ ಬಿಡಲಾಗುತ್ತದೆ ಎಂಬ ಸುದ್ದಿ ಚಾಲ್ತಿಯಲ್ಲಿದೆ.) ಮೋಟಾರು ಗ್ಯಾರೇಜಿನ ಉತ್ತರಕ್ಕೆ ಬ್ಯಾಂಡ್ ಬಂಗಲೆಯ ನಿವಾಸಗಳೂ, ಪೂರ್ವಕ್ಕೆ ಪ್ಯಾಲೇಸ್ ಉನ್ನತಾಧಿಕಾರಿಗಳ ನಿವಾಸ ಸ್ಥಾನವೂ ಇತ್ತು.

ಆಗ ಕಟ್ಟಡದ ದಕ್ಷಿಣಕ್ಕಿದ್ದ ಪ್ರವೇಶ ದ್ವಾರದಲ್ಲಿ 'ದಿ ಪ್ಯಾಲೇಸ್ ಮೋಟಾರ್ ಗ್ಯಾರೇಜ್' ಅರ್ಧಚಂದ್ರಾಕೃತಿಯ ಸುಂದರವಾದ ಕಬ್ಬಿಣದ ಬೋರ್ಡ್ (ಗ್ರಿಲ್) ಒಂದು ಸಾರ್ವಜನಿಕರ ಗಮನ ಸೆಳೆಯುತ್ತಿತ್ತು. ಗ್ಯಾರೇಜಿನ ಒಳ ಆವರಣದ ಮಧ್ಯ ಭಾಗದಲ್ಲಿ ಪೂರ್ವ-ಪಶ್ಚಿಮವಾಗಿ ಎತ್ತರವಾದ (ಎರಡು ಅಂತಸ್ತಿಗೆ ಬಾಕಗುವಷ್ಟು ಎತ್ತರದ) ಕಂಬಗಳುಳ್ಳ ವಿಶಾಲವಾದ ಹಜಾರವು ಇತ್ತು. ಈ ಹಜಾರಕ್ಕೆ ದಕ್ಷಿಣದಿಂದ ಕಾರುಗಳು ಪ್ರವೇಶಿಸಲು 5 ಬೃಹತ್ ಬಾಗಿಲುಗಳು ಇದ್ದವು. ಈ ಐದೂ ಬಾಗಿಲುಗಳ ಕೆಳಗಿನ ಅರ್ಧ ಭಾಗವನ್ನು ಮರದ ಹಲಗೆಗಳಿಂದಲೂ, ಮೇಲಿನ ಅರ್ಧ ಭಾಗ ಗಾಜಿನಿಂದಲೂ ಮುಚ್ಚಲಾಗಿತ್ತು. ಅದರ ಸೌಂದರ್ಯಕ್ಕೆ ಪೂರಕವಾಗಿ ಬಾಗಿಲುಗಳ ಹಿಂದೆ (ಜನರ ಕಣ್ಣೆಸರಿಂದ ತಪ್ಪಿಸಿಕೊಳ್ಳಲೋ ಎಂಬಂತೆ) ವಿಶೇಷವಾದ ಪರದೆಯನ್ನೂ ಸಹ ಇಳಿಬಿಡಲಾಗುತ್ತಿತ್ತು. ಈ ಹಜಾರದ ಹಿಂದೆಯೂ ಸಹ ಐದು ಬೃಹತ್ ಬಾಗಿಲುಗಳು ಇದ್ದವು. ಹಜಾರದ ಹಿಂದೆ ಮತ್ತು ಮುಂದೆ ಮೇಲ್ಭಾಗದಲ್ಲಿ ವೃತ್ತಾಕಾರದ ದೊಡ್ಡ ಗಾತ್ರದ ವೆಂಟಿಲೇಟರ್‌ಗಳು ಇದ್ದವು. ಈ ಕಟ್ಟಡದ ದಕ್ಷಿಣಾಭಿಮುಖವಾಗಿ ಇದ್ದ ಪ್ರವೇಶ ದ್ವಾರಗಳನ್ನು ಮಳೆ ಮತ್ತು ಬಿಸಿಲಿನ ಹೊಡೆತಗಳಿಂದ ರಕ್ಷಿಸಲು ಮುಂಭಾಗದಲ್ಲಿ ಸುಮಾರು ಹತ್ತು ಅಡಿಗಳಷ್ಟು ಖಾಲಿ ಜಾಗವನ್ನು ಹೆಂಚಿನ ಮೇಲ್ಛಾವಣಿಯು ಆವರಿಸಿಕೊಂಡಿತ್ತು. ಮಧ್ಯ ಭಾಗದ ವಿಶಾಲವಾದ ಹಜಾರದ ಒಳಗಡೆ ಒಂದು ಸಾಲಿನಲ್ಲಿ ಎರಡರಂತೆ ಒಟ್ಟು ಹತ್ತು ಕಾರುಗಳು ನಿಲ್ಲುವಷ್ಟು ಸ್ಥಳಾವಕಾಶವಿತ್ತು. ಇಲ್ಲಿ ಮಹಾರಾಜರು ಬಳಸುತ್ತಿದ್ದ ವಿದೇಶಿ ನಿರ್ಮಿತ ವೈಭವೋಪೇತ ಕಾರುಗಳು ನಿಲ್ಲುತ್ತಿದ್ದವು. ಆ ವೈಶಿಷ್ಟ್ಯಪೂರ್ಣ ಕಾರುಗಳನ್ನು ಕಣ್ತುಂಬ ನೋಡಿ ಸವಿಯುವುದೇ ಒಂದು ಮಹದಾನಂದ.

(ನಾನು ಆಗ ಪ್ರೈಮರಿ ಶಾಲೆಯಲ್ಲಿ ಓದುತ್ತಿದ್ದು, ನನ್ನ ತಂದೆಯವರು ಈ ಗ್ಯಾರೇಜಿನಲ್ಲಿ ಫಿಟ್ಟರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದುದರಿಂದ ಕಾರುಗಳ ವೈಭವವನ್ನು ನಾನು ಸ್ವತಃ ಕಣ್ಣಾರೆ ನೋಡುವ ಅವಕಾಶವಿರುತ್ತಿತ್ತು.)

ಪಾರಂಪರಿಕ ಕಟ್ಟಡಗಳ ಮಹತ್ವವನ್ನು ಅರಿಯದ ಹಲವು ಮಂದಿಯಿಂದ ಕೆಲವು ಕಡೆ ವಂಚನೆಯಾಗಿರಬಹುದು. ಆದರೆ ಮೈಸೂರಿನಲ್ಲಿ ಮಹಾರಾಜರ ಕಾಲದಲ್ಲಿ ನಿರ್ಮಾಣವಾಗಿರುವ ಯಾವ ಕಟ್ಟಡವೂ ಅದರ ಸೌಂದರ್ಯದಿಂದ ವಂಚಿತವಾಗಿಲ್ಲ ಎಂಬುದು ಒಂದು ಕಟು ವಾಸ್ತವ.

ಮಧ್ಯ ಭಾಗದ ಹಜಾರದ ಕಟ್ಟಡಕ್ಕೆ ಹೊಂದಿಕೊಂಡಂತೆ ಎರಡೂ ಕಡೆ ದಕ್ಷಿಣೋತ್ತರವಾಗಿ ಅಷ್ಟೇ ಎತ್ತರದ ಕಟ್ಟಡವಿತ್ತು. ಪಶ್ಚಿಮಕ್ಕೆ ಒಂದು ಮಹಡಿ ಕಟ್ಟಡವಿದ್ದು, ಅದಕ್ಕೆ ಹಿಂಭಾಗದಿಂದ ಮೇಲಂತಸ್ತಿಗೆ ಹೋಗಲು ಮೆಟ್ಟಿಲುಗಳಿದ್ದವು ಹಾಗೂ ಈ ಕಟ್ಟಡವು ಆಗ ಚಾಲಕ ಸಿಬ್ಬಂದಿಗಳ ಡ್ರೆಸ್ಸಿಂಗ್ ರೂಮ್ ಆಗಿ ಬಳಸಲ್ಪಡುತ್ತಿತ್ತು. ಪೂರ್ವಕ್ಕೆ ಇದ್ದ ಎತ್ತರವಾದ ಇನ್ನೊಂದು ಕೊಠಡಿಯು ಗ್ಯಾರೇಜಿನ ಕಚೇರಿಯಾಗಿ ಬಳಕೆಯಲ್ಲಿತ್ತು.

ಕಾರ್ಯಾಗಾರ: ಮುಖ್ಯ ಹಜಾರದ ಕಟ್ಟಡದ ಪಶ್ಚಿಮಕ್ಕೆ ಸ್ವಲ್ಪ ಹಿಂದೆ ಉದ್ದಕ್ಕೂ ಸಾಲಾಗಿ ಮೋಟಾರು ಕಾರುಗಳ ದುರಸ್ತಿಗಾಗಿ ಒಂದು ಕಾರ್ಯಾಗಾರವಿತ್ತು. ಈ ಕಾರ್ಯಾಗಾರದಲ್ಲಿ ಮೂರು ಪಿಟ್‌ಗಳು, ಒಂದು ಹೆವ್ವಿ ಲೇತ್‌ಮೆಷಿನ್, ಒಂದು ಡ್ರಿಲ್ಲಿಂಗ್ ಮೆಷಿನ್, ಒಂದು ಗ್ರೈಂಡಿಂಗ್ ಮೆಷಿನ್, ಒಂದು ಏರ್ ಕಂಪ್ರೆಸ್ಸರ್, ಆರ್ಕ್ ವೆಲ್ಡಿಂಗ್ ಮತ್ತು ಗ್ಯಾಸ್ ವೆಲ್ಡಿಂಗ್ ಮೆಷಿನ್ ಮುಂತಾದ ದುರಸ್ತಿಗೆ ಅವಶ್ಯವಾದ ಎಲ್ಲಾ ಯಂತ್ರೋಪಕರಣಗಳೂ ಇದ್ದವು. ಇವಲ್ಲದೆ ಸಣ್ಣಪುಟ್ಟ ಉಪಕರಣಗಳೂ ಸೇರಿದಂತೆ ಎಲ್ಲಾ ಉಪಕರಣಗಳೂ ಶ್ರೇಷ್ಠ ದರ್ಜೆಯಿಂದ ಕೂಡಿದ್ದು ಸಂಪೂರ್ಣವಾಗಿ ಆಗ ಇಂಗ್ಲೆಂಡಿನಿಂದಲೇ ತರಿಸಲ್ಪಟ್ಟಿತ್ತು.

ಕಾರ್ಯಾಗಾರದ ಉತ್ತರಕ್ಕೆ ಮತ್ತು ಪೂರ್ವಕ್ಕೆ ಉದ್ದಕ್ಕೂ ಸಾಲು ಸಾಲಾಗಿ ಒಟ್ಟಾರೆ ಇಪ್ಪತ್ತು ಮೋಟಾರು ಕಾರುಗಳ ಶೆಡ್‌ಗಳು ಅಸ್ತಿತ್ವದಲ್ಲಿದ್ದವು. ಇವುಗಳ ಪೈಕಿ ಕಾರ್ಪೆಂಟರಿ ಸೆಕ್ಷನ್, ಹವಾನಿಯಂತ್ರಿತ ಪೇಂಟಿಂಗ್ ಸೆಕ್ಷನ್, ಬ್ಲಾಕ್ಸ್ಮಿತಿ ಸೆಕ್ಷನ್, ಟೈರ್ ಸೆಕ್ಷನ್, ಎಲೆಕ್ಟ್ರಿಕಲ್-ಸೆಕ್ಷನ್‌ಗಳಿದ್ದವು.

ಮುಖ್ಯ ಕಟ್ಟಡದ ಹಿಂಭಾಗದ ಆವರಣದಲ್ಲಿ ಎರಡು ವಾಶಿಂಗ್ ರ್‍ಯಾಂಪ್‌ಗಳು, ಒಂದು ಪೆಟ್ರೋಲ್ ಬಂಕ್ ಸಹ ಇತ್ತು. ಪೆಟ್ರೋಲ್ ಬಂಕ್‌ನ ಅವಿಭಾಜ್ಯ ಅಂಗವಾದ ಅಂಡರ್‌ಗ್ರೌಂಡ್ ಟ್ಯಾಂಕರ್ ಎಲ್ಲಾ ಕಡೆ ಕಬ್ಬಿಣ ನಿರ್ಮಿತವಾಗಿರುವುದು ಸರ್ವೇಸಾಮಾನ್ಯ. ಆದರೆ ಇಲ್ಲಿ ಹೀಗೊಂದು ಗಾಳಿಮಾತು. ಅದೇನೆಂದರೆ (ಕಬ್ಬಿಣವು ತುಕ್ಕು ಹಿಡಿಯುವುದರಿಂದ ಸುದೀರ್ಘ ಬಾಳಿಕೆ ಬಾರದು. ಆದ್ದರಿಂದ 'ಸುಮಾರು ಕಾಲು ಇಂಚು ದಪ್ಪನಾಗಿ ಇರಬಹುದಾದ ಸಂಪೂರ್ಣವಾಗಿ ತಾಮ್ರದಿಂದಲೇ ಇಂಗ್ಲೆಂಡಿನಲ್ಲಿ ನಿರ್ಮಾಣವಾದ ಅಂಡರ್‌ಗ್ರೌಂಡ್ ಟ್ಯಾಂಕರ್ ಅನ್ನು ತರಿಸಿ ಭೂಮಿಯ ಒಳಗಡೆ ಅಳವಡಿಸಲಾಗಿತ್ತು' ಎಂಬ ಸುದ್ದಿ!?) ಪ್ರತಿಯೊಂದೂ ಶ್ರೇಷ್ಠ ಗುಣಮಟ್ಟದ ಪದಾರ್ಥಗಳಿಗೇ ಹೆಚ್ಚು ಮಹತ್ವ ಕೊಡುತ್ತಿದ್ದ ಮಹಾರಾಜರ ಸಂಕಲ್ಪದ ಹಿನ್ನೆಲೆಯಲ್ಲಿ ಪರ್ಯಾಲೋಚಿಸಿದಾಗ 'ಈ ಗಾಳಿ ಮಾತು' ನಿಜದ್ದಿರಲೂಬಹುದು. ಆದರೆ ಇದರ ಬಗ್ಗೆ ಹೆಚ್ಚು ಸಂಶೋಧನೆಗಳಾಗಬೇಕಷ್ಟೆ.


ಮುಖ್ಯ ಕಟ್ಟಡದ ಸುತ್ತಲೂ ಇದ್ದ ಜಾಗವನ್ನು ವ್ಯವಸ್ಥಿತವಾಗಿ ಡಾಂಬರೀಕರಣಗೊಳಿಸಲಾಗಿದ್ದು, ಮೋಟಾರು ಕಾರುಗಳ ಚಾಲನೆ ಹಾಗೂ ಪರಿಶೀಲನೆಗೆ ಬಳಕೆಯಾಗುತ್ತಿತ್ತು. ಇಲ್ಲಿ 'ಮೋಟಾರು ಕಾರುಗಳ ದುರಸ್ತಿ, ಪರೀಕ್ಷೆಗಳಿಗೆ ಯಾವ ಕುಂದು-ಕೊರತೆಯೂ ಇಲ್ಲದೆ ಕಾರ್ಯಾಗಾರವು ಸಂಪೂರ್ಣವಾಗಿ ಸುಸಜ್ಜಿತವಾಗಿತ್ತು ಎಂಬುದರಲ್ಲಿ ಎರಡು ಮಾತಿಲ್ಲ.

ಗ್ಯಾರೇಜ್‌ನ ವಾಹನಗಳ ಸಂಸ್ಕೃತಿ: ಪ್ಯಾಲೇಸ್ ಮೋಟಾರು ಗ್ಯಾರೇಜಿನ ಎಲ್ಲಾ ಕಾರುಗಳ ನೇಮ್-ಪ್ಲೇಟ್‌ಗಳ ಪಕ್ಕದಲ್ಲಿ ಶ್ರೀಮನ್ ಮಹಾರಾಜರ ರಾಜಮುದ್ರೆಯಾದ ಗಂಡಭೇರುಂಡ ಚಿತ್ರದ ಚಿಹ್ನೆಯು ಪ್ರದರ್ಶಿತವಾಗುತ್ತಿದ್ದುದು ಸರ್ವೇಸಾಮಾನ್ಯ. ಆರ್‌ಟಿಓನಿಂದ ನೀಡಿದ್ದ ಅಧಿಕೃತ ಸಂಖ್ಯೆಗಳನ್ನು ಎಲ್ಲಾ ಮೋಟಾರು ಕಾರುಗಳಿಗೆ ಇರುವಂತೆ ಪ್ಯಾಲೇಸ್ ಗ್ಯಾರೇಜಿನ ವಾಹನಗಳ ನೇಮ್-ಪ್ಲೇಟ್‌ಗಳಲ್ಲೂ ಸಹ ಪ್ರದರ್ಶಿಸಲಾಗುತ್ತಿತ್ತು. 'ಆದರೆ ಮಹಾರಾಜರು ಬಳಸುತ್ತಿದ್ದ ಕಾರುಗಳ ನೇಮ್ ಪ್ಲೇಟ್‌ಗಳಲ್ಲಿ ಮಾತ್ರ ಅಧಿಕೃತ ಸಂಖ್ಯೆಗಳ ಪ್ರದರ್ಶನದಿಂದ ವಿನಾಯಿತಿ ನೀಡಲಾಗುತ್ತಿತ್ತು' ಎಂದು ನಮಗೆ ತಿಳಿದು ಬರುತ್ತದೆ. ಮಹಾರಾಜರು ಕಾರಿನಲ್ಲಿ ಹೊರಟರೆಂದರೆ, ಕಾರಿನ ಮುಂಭಾಗದ ಬಾನೆಟ್ ಮೇಲೆ ಮಹಾರಾಜರ ಅಧಿಕೃತ (ಕೆಂಪು ಬಣ್ಣದ ಬಾವುಟದ ಮಧ್ಯೆ ರಾಜ ಲಾಂಛನದಿಂದ ಕೂಡಿದ್ದ) ಬಾವುಟವನ್ನು ಹಾರಿಸಲಾಗುತ್ತಿತ್ತು. ಕಾರಿನೊಳಗೆ ಮಹಾರಾಜರು ಇಲ್ಲದಿದ್ದಾಗ ಬಾವುಟದಿಂದ ಕೂಡಿದ್ದ ಫ್ಲಾಗ್ ಸ್ಟಾಫ್ ಅನ್ನು ಕವಚದಿಂದ ಸದಾ ಮುಚ್ಚಿಡಲಾಗುತ್ತಿತ್ತು. ಈ ಹಿಂದೆ ಮಹಾರಾಜರು ಅರಮನೆಯಿಂದ ಮೋಟಾರು-ಕಾರಿನಲ್ಲಿ ಚಾಮುಂಡಿಬೆಟ್ಟಕ್ಕೆ ಹೋಗುವಾಗ ದಾರಿಯಲ್ಲಿ ಸಿಗುವ ಎಂಎಆರ್‌ಪಿ (ಈಗ ಕೆಎಆರ್‌ಪಿ ಆಗಿದೆ.) ಕಟ್ಟಡದ ಎದುರಿನಲ್ಲಿ ಅಂಗರಕ್ಷಕ ಅಶ್ವಪಡೆಯವರು ಶಿಸ್ತುಬದ್ಧವಾಗಿ ನಿಂತು ತುತ್ತೂರಿ ಊದುವುದರ ಮೂಲಕ ಮಹಾರಾಜರಿಗೆ ಗೌರವ ಸಲ್ಲಿಸುತ್ತಿದ್ದುದು ಈಗ ಇತಿಹಾಸ.

ಗ್ಯಾರೇಜಿನ ಕಾರುಗಳಲ್ಲಿ ಅತಿಥಿ ಸತ್ಕಾರ: ವಿದೇಶಗಳಿಂದ ಅಥವಾ ನಮ್ಮ ದೇಶದ ಸರ್ವೋಚ್ಚ ಗಣ್ಯರು (ಪ್ರಧಾನಿ ಅಥವಾ ರಾಷ್ಟ್ರಪತಿಯಂಥ) ಮೈಸೂರಿಗೆ ಭೇಟಿ ಇತ್ತಾಗ, ಅವರನ್ನು ತುಂಬು ಗೌರವದಿಂದ ಸುಂದರವಾದ ಓಪನ್-ಟಾಪ್ ಉಳ್ಳ ವಿದೇಶೀ ಕಾರುಗಳಲ್ಲಿ ಕುಳ್ಳಿರಿಸಿ, ನಗರದ ರಾಜಬೀದಿಗಳಲ್ಲಿ ಮೆರವಣಿಗೆಯಲ್ಲಿ ಕರೆತರಲಾಗುತ್ತಿತ್ತು. ಹೀಗೆ ಕರೆತರುವಾಗ ಮಹಾರಾಜರು ಕುಳಿತಿರುವ ಕಡೆ ಮಹಾರಾಜರ ಅಧಿಕೃತ ಬಾವುಟವನ್ನೂ, (ಕಾರಿನ ಮುಂದಿನ ಮಡ್‌ಗಾರ್ಡ್‌ನ ಮೇಲಿರುವ ಫ್ಲಾಗ್ ಸ್ಟಾಫ್‌ಗೆ) ಬೇರೆ ಯಾವುದೇ ಉನ್ನತಾಧಿಕಾರಿಗಳು ಕುಳಿತ ಕಡೆ ಅವರಿಗೆ ಸಂಬಂಧಿಸಿದ ಅಧಿಕೃತ ಬಾವುಟವನ್ನೂ (ಕಾರಿನ ಇನ್ನೊಂದು ಪಾರ್ಶ್ವದ ಮಡ್‌ಗಾರ್ಡ್ ಫ್ಲಾಗ್ ಸ್ಟಾಫ್‌ಗೆ) ಬಳಸಲಾಗುತ್ತಿತ್ತು. ಅಂತಹ ಎರಡು ಸಂದರ್ಭಗಳನ್ನು ಇಲ್ಲಿ ಉಲ್ಲೇಖಿಸಬಹುದು;

ಎ. ಭಾರತಕ್ಕೆ ಸ್ವಾತಂತ್ರ್ಯ ಬಂದ ಹೊಸತರಲ್ಲಿ ಭಾರತದ ಉಕ್ಕಿನ ಮನುಷ್ಯರೆಂದೇ ಪ್ರಸಿದ್ಧರಾದ ಶ್ರೀ ಸರ್ದಾರ್ ವಲ್ಲಭಭಾಯಿ ಪಟೇಲರು ಕೇಂದ್ರ ಗೃಹ ಮಂತ್ರಿಯಾಗಿ ಒಮ್ಮೆ ಮೈಸೂರಿಗೆ ಭೇಟಿ ಇತ್ತ ಸಂದರ್ಭ. ಅವರನ್ನು ವಿಶ್ವವಿಖ್ಯಾತ ರೋಲ್ಸ್-ರಾಯ್ಸ್ ಓಪನ್ ಟಾಪ್ ಕಾರಿನಲ್ಲಿ ಕುಳ್ಳಿರಿಸಿ, ಮೈಸೂರು ನಗರದ ರಾಜಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ಈ ಛಾಯಾಚಿತ್ರದಲ್ಲಿ ಮುಂದೆ ಚಾಲಕ ಶ್ರೀ ಡಾಕೋಜಿರಾವ್ ಅವರ ಪಕ್ಕದಲ್ಲಿ ಆರ್ಕಾಟ್ ರಾಮಸ್ವಾಮಿಯವರೂ, ಹಿಂಭಾಗದಲ್ಲಿ ಶ್ರೀ ಸರ್ದಾರ್ ಪಟೇಲರು, ಅವರ ಧರ್ಮಪತ್ನಿ ಮತ್ತು ಪಟೇಲರ ಕಾರ್ಯದರ್ಶಿಯವರನ್ನು ನೋಡಬಹುದಾಗಿತ್ತು.


ಬಿ. ಭಾರತದ ಪ್ರಪ್ರಥಮ ಪ್ರಧಾನಿ ಶ್ರೀ ಜವಾಹರಲಾಲ ನೆಹರು ತಮ್ಮ ಮಗಳು ಶ್ರೀಮತಿ ಇಂದಿರಾಗಾಂಧಿಯವರ ಜೊತೆಯಲ್ಲಿ ಮೈಸೂರಿಗೆ ಪ್ರಥಮ ಬಾರಿಗೆ ಭೇಟಿ ಇತ್ತ ಸಂದರ್ಭ. ಅವರನ್ನು (ಅಂದಿನ ವಿಖ್ಯಾತ) ಓಪನ್ ಡೈಮ್ಲರ್ ಕಾರಿನಲ್ಲಿ ಕುಳ್ಳಿರಿಸಿ, ಮೈಸೂರಿನ ರಾಜಬೀದಿಗಳಲ್ಲಿ ಮೆರವಣಿಗೆ ಮಾಡಿದರು. ಈ ಛಾಯಾಚಿತ್ರದಲ್ಲಿ ಕಾರಿನ ಚಾಲಕ ಶ್ರೀ ಡಾಕೋಜಿ ರಾವ್, ಹಿಂಭಾಗದ ಆಸನದಲ್ಲಿ ಒಂದು ಕಡೆ ಜವಾಹರಲಾಲ್ ನೆಹರು, ಇನ್ನೊಂದು ಕಡೆ ಶ್ರೀ ಜಯಚಾಮ ರಾಜೇಂದ್ರ ಒಡೆಯರ್, ಮಧ್ಯದಲ್ಲಿ ಶ್ರೀಮತಿ ಇಂದಿರಾಗಾಂಧಿ ಆಸೀನರಾಗಿದ್ದನ್ನು ನೋಡಬಹುದಾಗಿತ್ತು.




ಹಿಸ್ಪಾನೋ ಸೂಯಿಜಾ–ಹೆಚ್ 6ಬಿ, 1925, ಫ್ರಾನ್ಸ್




ಡಿಲಾಹೆ–175, 1950, ಫ್ರಾನ್ಸ್



ಆಸ್ಟಿನ್ ಕಾರ್, (ಕನ್ವರ್ಟಿಬಲ್ ಟಾಪ್) ಇಂಗ್ಲೆಂಡ್



ಡೈಮ್ಲರ್ (ಓಪನ್ ಟಾಪ್), ಇಂಗ್ಲೆಂಡ್



ರೋಲ್ಸ್‌ರಾಯ್ಸ್–40/50 ಸಿಲ್ವರ್ ಘೋಸ್ಟ್, 1911, ಇಂಗ್ಲೆಂಡ್ (ರೀಕಂಡಿಶನ್ಡ್)



ಬೆಂಟ್ಲಿ– ಎಂ.ಕೆ. ಘೋರ್ತ್, 1949, ಇಂಗ್ಲೆಂಡ್

ಕೆಲವು ವಿಶಿಷ್ಟ ವಾಹನಗಳು

ಎ. ರೋಲ್ಸ್ ರಾಯ್ಸ್ :– ಇಂಗ್ಲೆಂಡಿನ ರೋಲ್ಸ್ ರಾಯ್ಸ್ ಕಂಪನಿಯು ಪ್ರಪಂಚದಲ್ಲೇ ಅತ್ಯಂತ ಸುಂದರ ಕಾರುಗಳನ್ನು ಉತ್ಪಾದಿಸುವ ಒಂದು ಪ್ರಖ್ಯಾತ ಸಂಸ್ಥೆ. ವೈಭವಪೂರಿತವಾದ ಈ ಕಾರುಗಳಿಗೆ ಪ್ರಪಂಚದ ಅನೇಕ ರಾಜಮಹಾರಾಜರಿಂದ ಮತ್ತು ಆಗರ್ಭ ಶ್ರೀಮಂತರಿಂದ ಬಹಳ ಬೇಡಿಕೆ ಇದೆ.

1911ರಲ್ಲಿ ಮೈಸೂರಿನ ಮಹಾರಾಜರ ಅವಶ್ಯಕತೆಗಳಿಗೆ ತಕ್ಕಂತೆ (ಕಸ್ಟಮ್ ಬಿಲ್ಟ್ ಕಾರ್) ವಿಶೇಷವಾಗಿ ತಯಾರಿಸಲ್ಪಟ್ಟ 'ರೋಲ್ಸ್ ರಾಯ್ಸ್ 40/50 ಸಿಲ್ವರ್ ಘೋಸ್ಟ್' (ಕ್ರ.ಸಂ–4ರಲ್ಲಿದೆ) ಎಂಬ ಹೆಸರಿನ (ವಿಕ್ಟೋರಿಯಾ ಸಾಮ್ರಾಜ್ಞಿಯು ಬಳಸುತ್ತಿದ್ದ ಕೋಚ್ ಮಾದರಿಯಲ್ಲಿ ತಯಾರಾದ) ಈ ವಾಹನವನ್ನು ಶ್ರೀ ಜಯಚಾಮರಾಜ ಒಡೆಯರ್‌ರವರು ವಿಶೇಷವಾಗಿ ನಗರದಲ್ಲಿ ಮೆರವಣಿಗೆಗಾಗಿ ಮತ್ತು ಕಾಡಿನಲ್ಲಿ ಬೇಟೆಗಾಗಿ ಬಳಸುತ್ತಿದ್ದರು. ಈ ಕಾರಿನ ಹಿಂದೆ ಮಹಾರಾಜರ ಅಂಗರಕ್ಷಕರು ಗೌರವಾರ್ಥ ನಿಲ್ಲಲು ಸ್ಥಳಾವಕಾಶವಿತ್ತು. ಸದ್ಯಕ್ಕೆ ಈ ಕಾರು ಅಮೇರಿಕಾದ ಒಂದು ಪ್ರತಿಷ್ಠಿತ ಕಾರ್ ಮ್ಯೂಸಿಯಂನಲ್ಲಿದೆ.

ಬಿ. ಡೈಮ್ಲರ್ ಡಬಲ್ ಸಿಕ್ಸ್ : 1949ರಲ್ಲಿ ಇಂಗ್ಲೆಂಡಿನಲ್ಲಿ ಮೈಸೂರಿನ ಮಹಾರಾಜರಿಗಾಗಿ ತಯಾರಾದ (ಕಸ್ಟಂ ಬಿಲ್ಟ್ ಕಾರ್) ಈ ಕಾರಿಗೆ (ಕ್ರ.ಸಂ–4ರಲ್ಲಿದೆ) ಹಲವು ವಿಶೇಷತೆಗಳಿದ್ದವು. ಈ ಕಾರನ್ನು ಶ್ರೀಮನ್ ಮಹಾರಾಜ ಶ್ರೀ ಜಯಚಾಮರಾಜ ಒಡೆಯರ್ ಬಳಸುತ್ತಿದ್ದರು. ಇದರಲ್ಲಿ ಚಾಲಕನ ಆಸನದ ಹಿಂಭಾಗದಲ್ಲಿ ಒಂದು ಬೃಹತ್ ಕನ್ನಡಿಯೊಂದನ್ನು ಹುದುಗಿಸಲಾಗಿತ್ತು. ಇದಕ್ಕೆ ಸಂಬಂಧಿಸಿದ ಹ್ಯಾಂಡಲ್ ಒಂದನ್ನು ತಿರುಗಿಸಿದಾಗ ಮರೆಯಲ್ಲಿ ಹುದುಗಿಸಲಾಗಿದ್ದ ಈ ಕನ್ನಡಿಯು ಮೇಲಕ್ಕೇರಿ ಮೇಲ್ಛಾವಣಿಗೆ ಬಂದು ಕೂಡಿಕೊಳ್ಳುತ್ತಿತ್ತು. ಆಗ ಹಿಂದೆ ಮಹಾರಾಜರು ಕುಳಿತುಕೊಳ್ಳುತ್ತಿದ್ದ ಭಾಗವು ಚಾಲಕನ ಕ್ಯಾಬಿನ್‌ನಿಂದ ಸಂಪೂರ್ಣವಾಗಿ ಬೇರ್ಪಟ್ಟು, ಡ್ರೆಸ್ಸಿಂಗ್ ರೂಮ್ ಆಗಿ ಪರಿವರ್ತಿತವಾಗುತ್ತಿದ್ದುದು ಆ ದಿನಗಳಲ್ಲಿ ನಿಜಕ್ಕೂ ಒಂದು ಸೋಜಿಗ. ಈ ಕಾರಿಗೆ ಎರಡು ಪ್ರತ್ಯೇಕ ಸ್ಪೇರ್-ವ್ಹೀಲ್‌ಗಳನ್ನು ಮುಂಭಾಗದ ಮಡ್ ಗಾರ್ಡ್‌ಗಳಿಗೆ ಹೊಂದಿಕೊಂಡಂತೆ ಕವಚದೊಳಗೆ ಹುದುಗಿಸುವುದರ ಜೊತೆಗೆ, ಫ್ರಂಟ್ ಮತ್ತು ಬ್ಯಾಕ್‌ನ ಎರಡೂ ಆಕ್ಸಲ್‌ಗಳಿಗೆ ಎರಡೆರಡು ಪ್ರತ್ಯೇಕ ಆಟೋಮ್ಯಾಟಿಕ್ ಜಾಕ್‌ಗಳನ್ನೂ ಸಹ ಶಾಶ್ವತವಾಗಿ ಅಳವಡಿಸಲಾಗಿತ್ತು. (1950ರಲ್ಲೇ) ವಿದ್ಯುತ್ ಚಾಲಿತ ಕಿಟಕಿ ಗಾಜಿನ ಮುಚ್ಚಳಗಳೂ, ಪ್ರೀ ಸೆಲೆಕ್ಟಿವ್ ಗೇರ್‌ಗಳೂ ಮತ್ತು ಹಿಂದೆ ಅಗತ್ಯಕ್ಕೆ ತಕ್ಕಂತೆ ಹೆಚ್ಚುವರಿ ಆಸನಗಳನ್ನು ಬಳಸಿಕೊಳ್ಳುವ ವ್ಯವಸ್ಥೆಯೂ ಇದರಲ್ಲಿ ಇತ್ತು. 8 ಸಿಲಿಂಡರ್ ಎಂಜಿನ್ ಮತ್ತು 36 ಅಶ್ವಶಕ್ತಿಯುಳ್ಳ ಈ ಕಾರು ಒಂದು ಮೈಲಿ ಕ್ರಮಿಸಲು ಸುಮಾರು ಒಂದು ಲೀಟರ್‌ನಷ್ಟು ಪೆಟ್ರೋಲ್ ಕುಡಿಯುತ್ತಿತ್ತು ಸದ್ಯಕ್ಕೆ ಇದು ಧರ್ಮಸ್ಥಳದ ಕಾರ್ ಮ್ಯೂಸಿಯಂನಲ್ಲಿದೆ.

ಸಿ. ಬೆಂಟ್ಲಿ: 1949ರಲ್ಲಿ ಇಂಗ್ಲೆಂಡಿನಲ್ಲಿ ತಯಾರಾದ ಬೆಂಟ್ಲಿ–ಎಂ.ಕೆ.ಘೋರ್ತ್ ಹೆಸರಿನ ಈ ಕಾರನ್ನು ಶ್ರೀಮನ್ ಮಹಾರಾಜರಾದ ಶ್ರೀ ಜಯಚಾಮರಾಜ ಒಡೆಯರ್ ಬಳಸುತ್ತಿದ್ದರು. ಕೆಂಪು ಮತ್ತು ಹಳದಿ ಬಣ್ಣದಿಂದ ಕೂಡಿದ ಈ ಕಾರು (ನಾನು ಚಿಕ್ಕಂದಿನಲ್ಲಿ ನೋಡಿದ್ದೇನೆ) ನಂತರದ ದಿನಮಾನಗಳಲ್ಲಿ ಬೇರೆಯವರಿಗೆ ಹಸ್ತಾಂತರವಾಗಿದ್ದು, ಇತ್ತೀಚೆಗೆ ಸದರಿ ಕಾರನ್ನು ಪುನರ್ ನವೀಕರಿಸಲಾಗಿದ್ದು, ಇದೀಗ ಭಾರತದಲ್ಲಿ ಪೂನಾವಾಲರವರ ಬಳಿ ಇದೆ ಎಂದು ತಿಳಿದು ಬರುತ್ತದೆ.

ಡಿ. ಹಿಸ್ಪಾನೋ ಸುಯಿಜಾ ಹೆಚ್ 6ಬಿ: 1925ರಲ್ಲಿ ಫ್ರಾನ್ಸ್‌ನಲ್ಲಿ ತಯಾರಾದ ಈ ಕಾರು ಪ್ಯಾಲೇಸ್ ಗ್ಯಾರೇಜಿನ ಪ್ರಾರಂಭದ ದಿನಮಾನಗಳಲ್ಲಿ ಇತ್ತು. ನೀಲಿ ಮತ್ತು ಕಪ್ಪು ಬಣ್ಣದ ಈ ಕನ್ವರ್ಟಿಬಲ್ ಟಾಪ್ ಕಾರನ್ನು ಮೈಸೂರು ಮಹಾರಾಜರು ಬಳಸುತ್ತಿದ್ದರೆಂದು ತಿಳಿದು ಬರುತ್ತದೆ.

ಇ. ಲಿಂಕನ್ ಟೈಫರ್: 1938ರಲ್ಲಿ ಅಮೆರಿಕಾದಲ್ಲಿ ತಯಾರಾದ ಈ ಕಾರು (ಕ್ರ.ಸಂಖ್ಯೆ 11ರಲ್ಲಿದೆ) ಪ್ಯಾಲೆಸ್ ಮೋಟಾರು ಕಾರುಗಳ ಪೈಕಿ ಒಂದು. ಭಾರತಕ್ಕೆ ಅಮದು ಮಾಡಿಕೊಂಡ ಕೇವಲ ನಾಲ್ಕು ಕಾರುಗಳ ಪೈಕಿ ಈ ಒಂದು ಕಾರ್ ಮಾತ್ರ ಅದೃಷ್ಟವಶಾತ್ ಉಳಿದುಕೊಂಡಿದ್ದು, ಸದ್ಯಕ್ಕೆ ಈ ಕಾರು ಧರ್ಮಸ್ಥಳದ ಕಾರ್ ಮ್ಯೂಸಿಯಂನಲ್ಲಿದೆ.

ಎಫ್. ಚೆವರ್ಲೆಟ್ : 1939ರಲ್ಲಿ ಅಮೇರಿಕಾದಲ್ಲಿ ತಯಾರಾದ ಈ ಕಾರು (ಕ್ರ.ಸಂಖ್ಯೆ 9ರಲ್ಲಿದೆ) ಆರು ಸಿಲಿಂಡರ್‌ಗಳನ್ನು ಹೊಂದಿದ್ದು, 29.4 ಅಶ್ವಶಕ್ತಿಯುಳ್ಳದ್ದಾಗಿತ್ತು. ಮೈಸೂರು ಮಹಾರಾಜರ ಕುಟುಂಬದ ಸದಸ್ಯರು ಬಳಸುತ್ತಿದ್ದ ಈ ಮೋಟಾರು ಕಾರು ನಂತರದಲ್ಲಿ (ಗ್ಯಾರೇಜ್ ಮುಚ್ಚಲ್ಪಟ್ಟಾಗ) ಶ್ರೀ ಎಂ.ಎಸ್.ವೆಂಕಟೇಶ್ ಮೂರ್ತಿ (ಹವ್ಯಾಸಿ ಕಾರ್ ಸಂಗ್ರಹಕಾರರು)ಯವರ ಸುಪರ್ದಿಯಲ್ಲಿತ್ತು ಎಂದು ತಿಳಿದು ಬರುತ್ತದೆ.

ಜಿ. ಡಿಲಾಹೆ 175 : 1950ರಲ್ಲಿ ಫ್ರಾನ್ಸ್‌ನಲ್ಲಿ ನಿರ್ಮಿತವಾದ ಈ ಕಾರನ್ನು ಮೊಟ್ಟಮೊದಲ ಬಾರಿಗೆ ಶ್ರೀ ಜಯಚಾಮರಾಜ ಒಡೆಯರ್ ತರಿಸಿಕೊಂಡಿದ್ದರಾದರೂ, ನಂತರ ನಮ್ಮ ದೇಶದ ಬೇರೊಂದು ಸಂಸ್ಥಾನದ ಮಹಾರಾಜರಿಗೆ ಉಡುಗೊರೆಯಾಗಿ ನೀಡಿದರೆಂದು ತಿಳಿದು ಬರುತ್ತದೆ. ವಿಶೇಷವೆಂದರೆ ಈ ಕಾರು ಮಾತ್ರ ಪ್ಯಾಲೇಸ್ ಮೋಟಾರು ಗ್ಯಾರೇಜ್ ತಲುಪಲೇ ಇಲ್ಲ.


ಹೆಚ್. ಮಕ್ಕಳ ವಿದ್ಯುತ್ ಚಾಲಿತ ಕಾರು : ನಾನು ಕಂಡಂತೆ (ಆಗ ನಾನು ಪ್ರೈಮರಿ ಶಾಲೆಯಲ್ಲಿ ಓದುತ್ತಿದ್ದೆ) ಅರಮನೆಯಿಂದ ಮಕ್ಕಳು ಓಡಿಸಬಹುದಾದ ಬ್ಯಾಟರಿ ಚಾಲಿತ ಕಾರ್ ಒಂದು ದುರಸ್ತಿಗಾಗಿ ಗ್ಯಾರೇಜಿಗೆ ಬಂದದ್ದು ನೋಡಿದ ನೆನಪು ಇನ್ನೂ ಇದೆ. ಬಹುಶಃ ಶ್ರೀ ಜಯಚಾಮರಾಜ ಒಡೆಯರವರು ತಮ್ಮ ಪುತ್ರ (ಬಾಲಕರಾಗಿದ್ದ) ಶ್ರೀಕಂಠದತ್ತರಿಗೆ ಅರಮನೆಯಲ್ಲಿ ಆಟವಾಡಲು ಈ ಕಾರನ್ನು ವಿದೇಶದಿಂದ ತರಿಸಿರಬಹುದೇ?

ಸಿಬ್ಬಂದಿ ವರ್ಗ : 1954ರಲ್ಲಿ ಸರಿ ಸುಮಾರು 34 ಮಂದಿ ಗ್ಯಾರೇಜ್ ಸಿಬ್ಬಂದಿ ಇದ್ದರು. ನಮ್ಮ ತಂದೆಯವರು ಪ್ಯಾಲೇಸ್ ಮೋಟಾರ್ ಗ್ಯಾರೇಜಿನಲ್ಲಿ (1951–64) ಕೆಲಸಕ್ಕಿದ್ದಾಗ 'ತೆಗೆಸಿಕೊಂಡ ಗ್ರೂಪ್ ಫೋಟೋದಿಂದ ನಮಗೆ ತಿಳಿದು ಬರುತ್ತದೆ.) ಆ ಪೈಕಿ ಪ್ರಮುಖವಾಗಿ ಶ್ರೀ ಲಾರೆನ್ಸ್ (ಫೋರ್ ಮನ್), ಶ್ರೀ ಸಿಮ್ನಳ್ಳಿ (ಸೂಪರಿಂಟೆಂಡೆಂಟ್), ಮಹಾರಾಜರ ಕಾರ್ ಚಾಲಕರಾಗಿ ಕ್ರಮವಾಗಿ ಕಾರಿಯಪ್ಪ ಮತ್ತು ಡಾಕೋಜಿರಾವ್ (ಶ್ರೀ ನಾಲ್ವಡಿ ಕೃಷ್ಣರಾಜರ ಅವಧಿ), ಲಕ್ಷ್ಮಣ್ ರಾವ್, ಟಿ.ಸುಬ್ಬರಾವ್ ಮತ್ತು ಧರಣಿಪಾಲನ್ (ಶ್ರೀ ಜಯಚಾಮರಾಜ ಒಡೆಯರ ಅವಧಿ) ಇದ್ದರು.

ಉಪಸಂಹಾರ : 1973ರಲ್ಲಿ ಆಗಿನ ಕೇಂದ್ರ ಸರ್ಕಾರವು ಪ್ರಮುಖವಾಗಿ 1947ರಿಂದ ಅಂದಿನವರೆಗೆ ಭಾರತದ ಎಲ್ಲಾ ಸಂಸ್ಥಾನದ ಮಹಾರಾಜರಿಗೆ ಗೌರವ ಪೂರಕವಾಗಿ ನೀಡುತ್ತಿದ್ದ ರಾಜಧನವನ್ನು ನಿಲ್ಲಿಸಿತು. ನಂತರದ ಐತಿಹಾಸಿಕ ಬೆಳವಣಿಗೆಯ ಆ ಕಾಲಘಟ್ಟದಲ್ಲಿ ಶ್ರೀಮನ್ ಮಹಾರಾಜ ಶ್ರೀ ಜಯಚಾಮರಾಜ ಒಡೆಯರ್‌ರವರು ಬದುಕಿನ ಸಂಧ್ಯಾಕಾಲದಲ್ಲಿದ್ದಾಗ, ಮೈಸೂರು ಪ್ಯಾಲೇಸ್ ಗ್ಯಾರೇಜ್ ಕಟ್ಟಡವು ಟಿವಿಎಸ್ ಕಂಪನಿಗೆ ಮಾರಾಟವಾಯಿತೆಂದು ತಿಳಿದುಬರುತ್ತದೆ.

ನಂತರದ ಬೆಳವಣಿಗೆಯಲ್ಲಿ ದುರದೃಷ್ಟವಶಾತ್ ಮೂಲ ಪಾರಂಪರಿಕ ಕಟ್ಟಡವನ್ನು ಅದರ ಗುರುತೂ ಸಿಗದಂತೆ ಯಾವುದೇ ಮುಲಾಜಿಲ್ಲದೆ ಕೆಡವಲಾಯಿತು. ಇಂತಹ ಒಂದು ಅಪೂರ್ವವಾದ ಪಾರಂಪರಿಕ ಕಟ್ಟಡವು ಕಾಲಗರ್ಭದಲ್ಲಿ ತನ್ನ ಅಸ್ತಿತ್ವವನ್ನೇ ಸಂಪೂರ್ಣವಾಗಿ ಕಳೆದುಕೊಂಡಿದ್ದು ಮಾತ್ರ ವಿಧಿಯ ವಿಪರ್ಯಾಸ.

ಒಂದು ವೇಳೆ ಈ ಪಾರಂಪರಿಕ ಕಟ್ಟಡವನ್ನು ಅಂದು ಉಳಿಸಿಕೊಂಡಿದ್ದೇ ಆಗಿದ್ದಲ್ಲಿ, ಇಂದು ಅದನ್ನು ಐತಿಹಾಸಿಕವಾದ ಕಾರ್-ಮ್ಯೂಸಿಯಂ ಆಗಿ ಮಾರ್ಪಡಿಸಲು ಅವಕಾಶವಿರುತ್ತಿತ್ತು. ವಿಶ್ವವಿಖ್ಯಾತ ಮೈಸೂರು ಅರಮನೆ, ಜಗನ್ಮೋಹನ ಪ್ಯಾಲೇಸ್‌ಗಳ ಸಾಲಿನಲ್ಲಿ ಮೈಸೂರು ಪ್ಯಾಲೇಸ್ ಗ್ಯಾರೇಜ್ ಕೂಡ ಒಂದಾಗಿ ಸೇರುತ್ತಿತ್ತು. ಇದರಿಂದ ಮೈಸೂರಿಗೆ ಖಂಡಿತ ಮತ್ತೊಂದು ಪ್ರವಾಸೀ ಗರಿ ಮೂಡುತ್ತಿದ್ದುದರಲ್ಲಿ ಯಾವುದೇ ಸಂಶಯವಿಲ್ಲ.



ಲಿಂಕನ್ ಟೆಫರ್, 1938, ಯುಎಸ್‌ಎ


ಗ್ಯಾರೇಜಿನ ವಾಹನಗಳು: ಪ್ಯಾಲೇಸ್ ರೇಸ್ ಮೋಟಾರ್ ಗ್ಯಾರೇಜಿನಲ್ಲಿ (ನನ್ನ ತಿಳುವಳಿಕೆಗೆ ಬಂದಂತೆ) ಇದ್ದ ವಾಹನಗಳಿವು

ಕ್ರ.ಸಂ. ಸಂಖ್ಯೆ	ವಾಹನದ ಹೆಸರು	ತಯಾರಿಕೆ	ಟಿಪ್ಪಣಿ
1	ಡೈಮ್ಲರ್	ಇಂಗ್ಲೆಂಡ್	1/4 ಭಾಗ ಓಪನ್ ಟಾಪ್
2	ಡೈಮ್ಲರ್	ಇಂಗ್ಲೆಂಡ್	ಪೂರ್ಣ ಓಪನ್ ಟಾಪ್
3	ಡೈಮ್ಲರ್	ಇಂಗ್ಲೆಂಡ್	ಪೂರ್ಣ ಓಪನ್ ಟಾಪ್
4	ಡೈಮ್ಲರ್– ಡಬಲ್ ಸಿಕ್ಸ್	ಇಂಗ್ಲೆಂಡ್	ಪೂರ್ಣ ಕ್ಲೋಸ್ ಟಾಪ್
5	ಬೆಂಟ್ಲಿ	ಇಂಗ್ಲೆಂಡ್	ಪೂರ್ಣ ಕ್ಲೋಸ್ ಟಾಪ್ (ಹಳದಿ–ಕೆಂಪು ಬಣ್ಣ)
6	ಬೆಂಟ್ಲಿ	ಇಂಗ್ಲೆಂಡ್	ಪೂರ್ಣ ಕ್ಲೋಸ್ ಟಾಪ್ (ತಿಳಿ ನೀಲಿ ಬಣ್ಣ)
7	ಆಸ್ಟಿನ್	ಇಂಗ್ಲೆಂಡ್	ಕನ್ವರ್ಟಿಬಲ್ ಟಾಪ್
8	ರೋಲ್ಸ್ ರಾಯ್	ಇಂಗ್ಲೆಂಡ್	ಬ್ಯಾಕ್ ಓಪನ್ ಟಾಪ್ ಶೆಲ್ಟರ್
9	ಚೆವರ್ಲೆಟ್	ಅಮೇರಿಕಾ	ಕ್ಲೋಸ್ ಟಾಪ್
10	ಕ್ಯಾಡಿಲ್ಯಾಕ್	ಅಮೇರಿಕಾ	ಕ್ಲೋಸ್ ಟಾಪ್
11	ಲಿಂಕನ್ ಟೈಫರ್	ಅಮೇರಿಕಾ	ಕ್ಲೋಸ್ ಟಾಪ್
12	ಫೋರ್ಡ್ ಟ್ರಕ್	ಅಮೇರಿಕಾ	ಲಾರಿ
13	ಬೆಡ್ ಫೋರ್ಡ್ ವ್ಯಾನ್	ಕೆನಡಾ	ಕ್ಲೋಸ್ ಟಾಪ್ ಹಾರ್ಸ್ ವ್ಯಾನ್
14	ಬೆಡ್ ಫೋರ್ಡ್ ವ್ಯಾನ್	ಕೆನಡಾ	ವೈರ್‌ಲೆಸ್ ಆಪರೇಷನ್‌ಗಾಗಿ
15	ಡಿಲಾಹೆ	ಫ್ರಾನ್ಸ್	ಕ್ಲೋಸ್ ಟಾಪ್
16	ಕೆಮೆರ	ಬಹುಶಃ ಇಂಗ್ಲೆಂಡ್	ಅರಮನೆ ಝೂ ಮುಂತಾದ ಸ್ಥಳಗಳಿಗೆ ಹಾಲು ಪೂರೈಸಲು


ಮೈಸೂರು ಮಿತ್ರ
ಸ್ಥಾಪನೆ: 1980
46
ಅತ್ಯುತ್ತಮ ಪತ್ರಿಕೋದ್ಯಮ
ನಮ್ಮ ಮೈಸೂರು ಮಿತ್ರನಿಗೆ
ಹುಟ್ಟುಹಬ್ಬದ ಶುಭಾಶಯಗಳು
ಶುಭಕೋರುವವರು
ಪಿ.ಪ್ರಶಾಂತ್ ಗೌಡ
ಮಾಜಿ ಸದಸ್ಯರು, ಮೈಸೂರು ಮಹಾನಗರ ಪಾಲಿಕೆ
ಮ್ಯಾನೇಜಿಂಗ್ ಡೈರೆಕ್ಟರ್, ಕನುಷಿ ಗ್ರೂಪ್
ಅಧ್ಯಕ್ಷರು, ಮೈಸೂರು ಟ್ರೇಡರ್ಸ್ ಸುರಕ್ಷಾ ಕ್ಷೇಮಾಭಿವೃದ್ಧಿ ಸಂಘ
ಕಲ್ಪವೃಕ್ಷ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ.
ಪಿರಿಯಾಪಟ್ಟಣ
ಪಿ.ಜಿ.ಜನಸ್ಪಂದನಾ ಫೌಂಡೇಶನ್, ಮೈಸೂರು


46
ವಸಂತದ
ಹೊಸ್ತಿಲಿನಲ್ಲಿರುವ
ಮೈಸೂರು ಮಿತ್ರನಿಗೆ
ಹಾರ್ದಿಕ
ಶುಭಾಶಯಗಳು
ಸಿ ನರೇಂದ್ರ
ಕೆಪಿಸಿಸಿ ಪ್ರಧಾನ ಕಾರ್ಯದರ್ಶಿಗಳು
ಹಾಗೂ ಅಧ್ಯಕ್ಷರು,
ನಾಗವಾಲ ಗ್ರಾಮ ಪಂಚಾಯಿತಿ


ಮೈಸೂರು ಮಿತ್ರ
ಸ್ಥಾಪನೆ: 1980
46
ಅತ್ಯುತ್ತಮ ಪತ್ರಿಕೋದ್ಯಮ
ಮೈಸೂರು, ಮಂಡ್ಯ, ಕೊಡಗು,
ಹಾಸನ ಮತ್ತು ಚಾಮರಾಜನಗರ
ಸೇರಿದಂತೆ ಐದು ಜಿಲ್ಲೆಗಳಲ್ಲಿ
ಹೆಚ್ಚು ಪ್ರಸರಣ ಹೊಂದಿರುವ
ನಮ್ಮೆಲ್ಲರ ಅಚ್ಚುಮೆಚ್ಚಿನ
ಮೈಸೂರು ಮಿತ್ರನಿಗೆ
46ನೇ ವರ್ಷದ ವಾರ್ಷಿಕೋತ್ಸವದ ಶುಭಾಶಯಗಳು
ಕೆ.ಮರೀಗೌಡ
ಅಧ್ಯಕ್ಷರು, ನಗರಾಭಿವೃದ್ಧಿ ಪ್ರಾಧಿಕಾರ
ಹಾಗೂ ಕೆ.ಪಿ.ಸಿ.ಸಿ ಸದಸ್ಯರು



ಮೈಸೂರು ಮಿತ್ರ
46
ಅತ್ಯುತ್ತಮ ಪತ್ರಿಕೋದ್ಯಮ
'ಮೈಸೂರು ಮಿತ್ರ'
ಜನಸಾಮಾನ್ಯರ
ಬದುಕಿನಲ್ಲಿ ನಡೆಯತಕ್ಕಂತಹ
ಎಲ್ಲಾ ಕಷ್ಟ ಸುಖಗಳ
ಬಗ್ಗೆ ಸ್ಪಂದಿಸುತ್ತಾ,
ನ್ಯಾಯವಾಗಿ ವರದಿ ಮಾಡುತ್ತಾ
ಮೈಸೂರಿನ ಹಿರಿಮೆಯನ್ನು
ಹೆಚ್ಚು ಮಾಡಿದೆ.
'ಮೈಸೂರು ಮಿತ್ರ'
ಹೆಚ್ಚು ಪ್ರಜ್ವಲಿಸಲಿ ಎಂದು
ಹೃದಯದಿಂದ ಹಾರೈಸುತ್ತೇನೆ.
ರವೀಂದ್ರ ಶ್ರೀಕಂಠಯ್ಯ




ಮೈಸೂರು ಮಿತ್ರ
46
ಅತ್ಯುತ್ತಮ ಪತ್ರಿಕೋದ್ಯಮ
ಮೈಸೂರು ಕೊಡಗು ಮಂಡ್ಯ ಚಾಮರಾಜನಗರ ಹಾಸನ
ರಾಜ್ಯ ರಾಜಧಾನಿಯಲ್ಲೂ ಬೆಳಗಿನ ವೇಳೆಯಲ್ಲಿ ಸಮಗ್ರ
ತಾಜಾ ನೈಜ ಸುದ್ದಿಯನ್ನು ವರದಿ ನೀಡುವ ನಮ್ಮ ನಿಮ್ಮೆಲ್ಲರ
ಆತ್ಮೀಯ ನೆಚ್ಚಿನ ಮಿತ್ರ ಮೈಸೂರು ಮಿತ್ರ ಬೆಳಗಿನ
ದಿನಪತ್ರಿಕೆಗೆ 46ನೇ ವಾರ್ಷಿಕೋತ್ಸವದ
ಶುಭಾಶಯಗಳು
ಶುಭ ಕೋರುವರು
ಸಮಸ್ತ ಬಿಜೆಪಿ ಕಾರ್ಯಕರ್ತರು, ಮೈಸೂರು




46
ಮೈಸೂರು ಮಿತ್ರ
ನಿಮ್ಮ ಮೆಚ್ಚಿನ ಕನ್ನಡ ದಿನಪತ್ರಿಕೆ
46ನೇ ವಸಂತಕ್ಕೆ ಕಾಲಿಡುತ್ತಿರುವ
'ಮೈಸೂರು ಮಿತ್ರ'ನಿಗೆ
ಹೃತ್ಪೂರ್ವಕ ಅಭಿನಂದನೆಗಳು
ಶುಭ ಹಾರೈಸುವವರು
ಶ್ರೀ ಕೆ.ಹರೀಶ್‌ಗೌಡ
ಶಾಸಕರು
ಚಾಮರಾಜ ವಿಧಾನಸಭಾ ಕ್ಷೇತ್ರ



ಮೈಸೂರು ಮಿತ್ರ
ಬೆಳಗಿನ ದಿನಪತ್ರಿಕೆ
ಪತ್ರಿಕಾ ಮಾಧ್ಯಮದಲ್ಲಿ
ಪ್ರಕಾಶಿಸುತ್ತಿರುವ ನಮ್ಮ
ಮೈಸೂರು ಮಿತ್ರನಿಗೆ
46 ನೇ
ವಾರ್ಷಿಕೋತ್ಸವದ
ಶುಭಾಶಯಗಳು
ಶುಭಕೋರುವವರು
ಎ.ಆರ್.ಕೃಷ್ಣಮೂರ್ತಿ
ಶಾಸಕರು
ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರ
ಚಾಮರಾಜನಗರ ಜಿಲ್ಲೆ


ಬೆಳಗಿನ ದಿನಪತ್ರಿಕೆ
ಮೈಸೂರು ಮಿತ್ರನಿಗೆ
46ನೇ ವಾರ್ಷಿಕೋತ್ಸವದ
ಶುಭಾಶಯಗಳು
ಶುಭಕೋರುವವರು
ಸಿ.ಪುಟ್ಟರಂಗಶೆಟ್ಟಿ
ಮಾಜಿ ಸಚಿವರು, ಹಾಲಿ ಶಾಸಕರು
ಹಾಗೂ ಅಧ್ಯಕ್ಷರು,
ಎಂಎಸ್ಐಎಲ್ ಚಾಮರಾಜನಗರ



46 ನೇ ವರ್ಷಕ್ಕೆ
ಪಾದಾರ್ಪಣೆ ಮಾಡುತ್ತಿರುವ ಕನ್ನಡ ದಿನಪತ್ರಿಕೆ
ಮೈಸೂರು ಮಿತ್ರನಿಗೆ
ಶುಭಾಶಯಗಳು
ಕೆ.ವಿ. ಶ್ರೀಧರ
ನಿರ್ದೇಶಕರು, ರಾಜ್ಯ ಒಕ್ಕಲಿಗರ ಸಂಘ,
ಮಾಜಿ ಸದಸ್ಯರು, ಮೈಸೂರು ಮಹಾನಗರ ಪಾಲಿಕೆ
ನಿರ್ದೇಶಕರು, ಪಿಎಲ್‌ಡಿ ಬ್ಯಾಂಕ್, ಮೈಸೂರು



ಮೈಸೂರು ಮಿತ್ರನಿಗೆ
46ನೇ ವಾರ್ಷಿಕೋತ್ಸವದ ಶುಭಕಾಮನೆಗಳು
ಶುಭ ಕೋರುವವರು
ಹೆಚ್.ಎಂ. ಗಣೇಶ್ ಪ್ರಸಾದ್
ಶಾಸಕರು, ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರ


ಮೈಸೂರು ಮಿತ್ರನಿಗೆ
46ನೇ ವರ್ಷದ ವಾರ್ಷಿಕೋತ್ಸವದ ಶುಭಾಶಯಗಳು
46
NIRVANA
yoga shala
Nirvana Yoga Shala
FOUNDER
Shashi Guruji
contact:
Mob: 8050658555 / 9019140645/
Ph: Ph:+91 821 – 4288490,
Email: info@mysoreyoga.in


46
ಮೈಸೂರು ಮಿತ್ರ
ನಿಮ್ಮ ಮೆಚ್ಚಿನ ಕನ್ನಡ ದಿನಪತ್ರಿಕೆ
46 ನೇ ವರ್ಷಕ್ಕೆ
ಪಾದಾರ್ಪಣೆ ಮಾಡುತ್ತಿರುವ ಕನ್ನಡ ದಿನಪತ್ರಿಕೆ
ಮೈಸೂರು ಮಿತ್ರನಿಗೆ
ಶುಭಾಶಯಗಳು
ತನ್ವೀರ್ ಸೇಠ್
ಶಾಸಕರು, ನರಸಿಂಹರಾಜ
ವಿಧಾನಸಭಾ ಕ್ಷೇತ್ರ
ಮೈಸೂರು



46
46 ನೇ ವರ್ಷಕ್ಕೆ
ಪಾದಾರ್ಪಣೆ ಮಾಡುತ್ತಿರುವ ಕನ್ನಡ ದಿನಪತ್ರಿಕೆ
ಮೈಸೂರು ಮಿತ್ರನಿಗೆ
ಶುಭಾಶಯಗಳು
ಕೆ.ಎಸ್.ಮಹೇಶ್
ಮಾಜಿ ಉಪಾಧ್ಯಕ್ಷರು,
ಜಿಲ್ಲಾ ಪಂಚಾಯತ್
ಚಾಮರಾಜನಗರ ಜಿಲ್ಲೆ,
ಕಬ್ಬಳ್ಳಿ, ಗುಂಡ್ಲುಪೇಟೆ ತಾಲೂಕು,
ಮೊ: 9448602888


ಮೈಸೂರು ಮಿತ್ರ ಪ್ರಾದೇಶಿಕ ದಿನಪತ್ರಿಕೆಗೆ
46 ನೇ
ವಾರ್ಷಿಕೋತ್ಸವದ ಶುಭಾಶಯಗಳು
46
ಎನ್.ಮಲ್ಲೇಶ್
ಉಪಾಧ್ಯಕ್ಷರು, ಬಿಜೆಪಿ,
ಹಾಗೂ ಜಿಲ್ಲಾ ಉಪಾಧ್ಯಕ್ಷರು,
ಮೈಸೂರು ಮತ್ತು ಚಾಮರಾಜನಗರ
ಜಿಲ್ಲಾ ನಾಯಕರ ಸಮಾಜ, ಗುಂಡ್ಲುಪೇಟೆ
ಮೊ: 9620689444


46
ಮೈಸೂರು ಮಿತ್ರ
ನಿಮ್ಮ ಮೆಚ್ಚಿನ ಕನ್ನಡ ದಿನಪತ್ರಿಕೆ
46 ನೇ ವರ್ಷಕ್ಕೆ
ಪಾದಾರ್ಪಣೆ ಮಾಡುತ್ತಿರುವ ಕನ್ನಡ ದಿನಪತ್ರಿಕೆ
ಮೈಸೂರು ಮಿತ್ರನಿಗೆ
ಶುಭಾಶಯಗಳು
ಹೆಚ್.ಎಸ್.ನಂಜುಂಡ ಪ್ರಸಾದ್
ಅಧ್ಯಕ್ಷರು,
ಚಾಮರಾಜನಗರ ಜಿಲ್ಲಾ ಸಹಕಾರ ಒಕ್ಕೂಟ
ನಿರ್ದೇಶಕರು, ಚಾಮುಲ್ ಹಾಲಹಳ್ಳಿ,
ಗುಂಡ್ಲುಪೇಟೆ ತಾಲೂಕು
ಮೊ.9448402400


46
46 ನೇ ವರ್ಷಕ್ಕೆ
ಪಾದಾರ್ಪಣೆ ಮಾಡುತ್ತಿರುವ ಕನ್ನಡ ದಿನಪತ್ರಿಕೆ
ಮೈಸೂರು ಮಿತ್ರನಿಗೆ
ಶುಭಾಶಯಗಳು
ರಘು.ಎಸ್
ಕ್ವಾರಿ ಉದ್ಯಮಿಗಳು ಮತ್ತು ಮಾಲೀಕರು,
ರಾಕ್ಲೈನ್ಸ್ ಟಿಪ್ಪರ್, ಗುಂಡ್ಲುಪೇಟೆ.
ಮೊ : 9900478897


46
ಮೈಸೂರು ಮಿತ್ರ
ನಿಮ್ಮ ಮೆಚ್ಚಿನ ಕನ್ನಡ ದಿನಪತ್ರಿಕೆ
46 ನೇ ವರ್ಷಕ್ಕೆ
ಪಾದಾರ್ಪಣೆ ಮಾಡುತ್ತಿರುವ ಕನ್ನಡ ದಿನಪತ್ರಿಕೆ
ಮೈಸೂರು ಮಿತ್ರನಿಗೆ
ಶುಭಾಶಯಗಳು
ಜಿ.ಎಲ್. ರಾಜು
ಮಾಜಿ ಉಪಾಧ್ಯಕ್ಷರು, ಪುರಸಭೆ,
ಅಧ್ಯಕ್ಷರು, ತಾಲೂಕು ಕುರುಬರ ಸಂಘ,
ಮಾಲೀಕರು,
ಕನಕ ಸೂಪರ್ ಮಾರ್ಕೆಟ್ ಮತ್ತು
ಕನಕ ಪ್ರಾವಿಷನ್ ಸ್ಟೋರ್, ಗುಂಡ್ಲುಪೇಟೆ.
ಮೊ.9448602860


46
ಮೈಸೂರು ಮಿತ್ರನಿಗೆ
46 ನೇ
ವಾರ್ಷಿಕೋತ್ಸವದ
ಶುಭಾಶಯಗಳು
ಟಿ.ಪಿ. ನಾಗರಾಜು
ಮಾಲೀಕರು
ಪರಮದೇವ್ ಸ್ಟೋನ್ ಕ್ರಷರ್ಸ್
ತೆರಕಣಾಂಬಿ, ಗುಂಡ್ಲುಪೇಟೆ ತಾಲ್ಲೂಕು
ಮೊ: 9482072189/ 6362528230


Sandesh The Prince
A Unit of Hotel Sandesh Pvt. Ltd.
Mysore
Sandesh Water Edge
Kabini
Hearty Congratulations and
Best Wishes For
ಮೈಸೂರು ಮಿತ್ರ
46th
ANNIVERSARY
Sandesh Nagaraj
Ex Member of Legislative Council
Senior Congress Leader
Presidential Award Winning Film Producer
Founder and Chairman of Sandesh Group of Hotels
N. Sandesh
Director - Sandesh Group of Hotels
Youth Congress Leader
Film Producer